
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಜೂನ್ 26, 2013 ಪುಟ 20 ರೂ. 14/-



ನಾಟಕಕಾರ
ಕೆ.ವೈ.ಎನ್
ಸಂದರ್ಶನ



ಹಿಟ್ಲರ್ ಬಂದ

ಟ್ಕಾ ನಿಷೇಧ
ಅಡಿಕೆ
ಳೆಗಾರರ
ವಣೆ



ಮೇಲುಕೋಟೆ
ನಾರಾಯಣನಿಗೆ
ನಾಮ
ತೀಡಿದ
ಅರ್ಚಕ

ಮಂಗಳೂರು
ಡಾ.ಭಂಡಾರಿ
ಕ್ರಿಕೆಟ್ ಬೆಟ್ಟಿಂಗ್
ಬಾವಿಗೆ ಬಿದ್ದರೆ?




ತನ್ವೀರ್
ಇಜ್ಜತ್ ಕಾ
ಲಫಡಾ

ಚಿತ್ರದುರ್ಗ
ಪೊಲೀಸ್ ಮಲ್ಲಿ
ಮಾನಭಂಗ



ಪೇಜಾವರರಿಂದ ಸಹಪಂಕ್ತಿ ಭೋಜನ ನಿರಾಕರಣೆ ಜಾತಿವಿನಾಶದ ಕಡೆಯ ಕಾರ್ಯಕ್ರಮಕ್ಕೂ ತಿಲಾಂಜಲಿ


ಅಂಚಿನಿಂದ



ಇದೇನೂ ಹೊಸ ಸಂಗತಿಯಲ್ಲ, ಪೇಜಾವರರು ಇದನ್ನು ಹಿಂದೆಯೂ ಹೇಳಿದ್ದಾರೆ. ಉಡುಪಿಯ ಕೃಷ್ಣ ದೇವಸ್ಥಾನದಲ್ಲಿ ಬ್ರಾಹ್ಮಣರಿಗೆ ಪ್ರತ್ಯೇಕ ಪಂಕ್ತಿಯಲ್ಲಿ ಊಟ ಹಾಕುವುದನ್ನು ಅವರೇನೂ ಮುಚ್ಚಿಟ್ಟಿಲ್ಲ. ಇದರ ಬಗ್ಗೆ ವಾದವಿವಾದಗಳು ಹಿಂದೆಯೂ ಸಾಕಷ್ಟಾಗಿದೆ. ಸಿಪಿಎಂ ಪಕ್ಷವು ಪಂಕ್ತಿಭೇದವನ್ನು ವಿರೋಧಿಸಿ ಕೃಷ್ಣ ದೇವಸ್ಥಾನಕ್ಕೆ ಮುತ್ತಿಗೆ ಹಾಕಿದ ಕಾರ್ಯಕ್ರಮವೂ ಸಹ ಕಳೆದ ವರ್ಷ ನಡೆಯಿತು. ಈ ಸಾರಿ ಅದನ್ನು ಹೇಳಿರುವ ಸಂದರ್ಭ ಬೇರೆಯಾಗಿದೆ. ಜೊತೆಗೆ ಈ ರೀತಿ ಬ್ರಾಹ್ಮಣರಿಗೆ ಪ್ರತ್ಯೇಕ ಪಂಕ್ತಿಯಲ್ಲಿ ಊಟ ಹಾಕುವುದು ಧರ್ಮಸ್ಥಳದಲ್ಲೂ ನಡೆಯುತ್ತಿದೆ ಎಂದು ಬಹಿರಂಗವಾಗಿ ನುಡಿದಿದ್ದಾರೆ. ಧರ್ಮಸ್ಥಳದಲ್ಲಿ ಬ್ರಾಹ್ಮಣರಿಗೆ ಪ್ರತ್ಯೇಕ ಊಟ ಇರುವುದೂ ಹೊಸ ವಿಚಾರವೇನಲ್ಲ. ಆದರೆ ಅದು ರಹಸ್ಯವಾಗಿ ನಡೆಯುತ್ತದೆ ಅಷ್ಟೇ. ಪೇಜಾವರರು 11.06.2013ರಂದು ಕರೆದ ಪತ್ರಿಕಾಗೋಷ್ಠಿಯಲ್ಲಿ ಅದನ್ನು ಅಧಿಕೃತವಾಗಿ ಸಾರ್ವಜನಿಕಗೊಳಿಸಿದ್ದಾರೆ.

ಕೃಷ್ಣ ದೇವಸ್ಥಾನದಲ್ಲೋ, ಧರ್ಮಸ್ಥಳದಲ್ಲೋ ಎಲ್ಲರಿಗೂ ಪ್ರವೇಶ ನೀಡದಿದ್ದರೆ ಅಥವಾ ಜೊತೆಯಲ್ಲೇ ಊಟ ಹಾಕದಿದ್ದರೆ ಅದು ದೇಶದ ಇವತ್ತಿನ ಅತೀ ದೊಡ್ಡ ಸಮಸ್ಯೆಯಾಗಿ ನಮ್ಮನ್ನೇನೂ ಕಾಡಬೇಕಿಲ್ಲ. ಪಂಕ್ತಿಭೇದ ಮಾಡುತ್ತಾರೆಂದು ಗೊತ್ತಿದ್ದೂ ಅಲ್ಲಿಗೆ ಹೋಗುವವರು ಅನುಭವಿಸಿಕೊಳ್ಳಲಿ ಎಂದುಕೊಂಡು ಸುಮ್ಮನಿರಬಹುದು. ಆದರೆ ಇದಕ್ಕೆ ಬೇರೊಂದು ಆಯಾಮವಿದೆ. ಪಂಕ್ತಿಭೇದವನ್ನು ತಾವೇಕೆ ಅನುಸರಿಸುತ್ತೇವೆ ಎಂಬುದಕ್ಕೆ ಪೇಜಾವರರು ನೀಡಿರುವ ಸಮರ್ಥನೆಯ ಧಾಟಿಯಲ್ಲಿ ಒಂದು ಪ್ರಮುಖ ಅಂಶವಿದೆ. ಮಾಧ್ವ ಮತಾವಲಂಬಿಗಳು ಇಂಟರ್‌ನೆಟ್ ಲೋಕದಲ್ಲಿ ಸಾಕಷ್ಟು ಕ್ರಿಯಾಶೀಲರಿರುವುದರಿಂದ ಪೇಜಾವರರ ಬೆಂಬಲಕ್ಕೆ ನಿಂತು ಅಂತರ್ಜಾಲ ಕಹಳೆಯನ್ನು ಮೊಳಗಿಸಿದ್ದಾರೆ. ಅದರಲ್ಲಿ ಅವರ ಒಂದು ಪ್ರಶ್ನೆಯೇನೆಂದರೆ, ಇದೇ ರೀತಿಯಲ್ಲಿ ಬ್ರಾಹ್ಮಣರಿಗೆ ಪ್ರತ್ಯೇಕ ಭೋಜನ ವ್ಯವಸ್ಥೆ ಧರ್ಮಸ್ಥಳದಲ್ಲೂ, ಶೃಂಗೇರಿಯಲ್ಲೂ ಇದೆ; ಆದರೆ ಎಲ್ಲರೂ ಏಕೆ ಪೇಜಾವರರನ್ನು ಮಾತ್ರ ಗುರಿಯಾಗಿಸಿಕೊಳ್ಳುತ್ತಾರೆ ಎಂದು.

ಶೃಂಗೇರಿಯಲ್ಲಿ ಇದನ್ನು ಬಹಿರಂಗವಾಗಿಯೇ ಮಾಡುತ್ತಾ ಬಂದಿದ್ದಾರೆ. ಅದೂ ಖಂಡನೀಯವೇ. ಜೈನರಾದ ಮಾತ್ರಕ್ಕೆ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ ಮಾಡುವ ಪಂಕ್ತಿಭೇದವೂ ವಿರೋಧಕ್ಕೆ ಅರ್ಹವೇ. ಎಲ್ಲರೂ ಪುರೋಹಿತಶಾಹಿ ಪರಂಪರೆಯ ಬೇರೆಬೇರೆ ತುಂಡುಗಳೇ ಆಗಿದ್ದಾರೆ. ಆದರೆ ಪೇಜಾವರರನ್ನು ಹೆಚ್ಚಾಗಿ ಗುರಿ ಮಾಡಲು ಕಾರಣಗಳಿವೆ. ಅವರು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಈ ದೇಶದ ರಾಜಕೀಯ ಪಕ್ಷವೊಂದರ ಮತ್ತು 'ಸಾಂಸ್ಕೃತಿಕ ಸಂಘಟನೆ'ಯೆಂದು ಹೇಳಿಕೊಳ್ಳುವ ಕೋಮುವಾದಿ ಪರಿವಾರವೊಂದರ ಗುರುಗಳು. ನೀವು ಬಿಜೆಪಿ ಮತ್ತು ಆರೆಸ್ಸೆಸ್‌ನ ಗುರುವರ್ಯರು ಹೌದೇ ಎಂದು ನಾವೇನೂ ಪೇಜಾವರರನ್ನು ಸ್ಪಷ್ಟೀಕರಣ ಕೇಳಬೇಕಾದ್ದಿಲ್ಲ. ಮೊನ್ನೆ ಬಿಜೆಪಿಯ ವಿವಿಧ ಹುದ್ದೆಗಳಿಗೆ ರಾಜೀನಾಮೆ ನೀಡಿದ ಅಡ್ವಾಣಿಯವರಿಗೆ ಪತ್ರಿಕೆಗಳ ಮೂಲಕ ಇದೇ ಪೇಜಾವರರು ಬುದ್ಧಿ ಹೇಳಿದ್ದಾರೆ.



ಚಡ್ಡಿ ನಾಯಕರೊಂದಿಗೆ ಪೇಜಾವರ ಸ್ವಾಮಿ

ಹಿಂದೂತ್ವವೆನ್ನುವ ತಾತ್ವಿಕತೆಯನ್ನು ಆರೆಸ್ಸೆಸ್, ಬಿಜೆಪಿ ಮತ್ತು ಪೇಜಾವರರು ಸಮಾನವಾಗಿ ಉಸಿರಾಡುತ್ತಾರೆ. ರಾಮಮಂದಿರ, ಗುಜರಾತ್ ಹತ್ಯಾಕಾಂಡ, ದನಗಳನ್ನು ತಿನ್ನುವ ಆಹಾರ ಸಂಸ್ಕೃತಿ, ರಾಷ್ಟ್ರೀಯ ಸಂಸ್ಕೃತಿ, ಜಾತಿ ಪದ್ಧತಿ ಮತ್ತು ಜಾತಿವ್ಯವಸ್ಥೆಯನ್ನು ಹೋಗಲಾಡಿಸುವುದು ಎಲ್ಲಾ ವಿಚಾರದಲ್ಲೂ ಎಲ್ಲರದ್ದೂ ಒಂದೇ ನಿಲುವು. ಹಾಗಾಗಿ ಪೇಜಾವರರು ಏನನ್ನು ಪ್ರತಿಪಾದಿಸುತ್ತಾರೋ ಅದು ಆರೆಸ್ಸೆಸ್ ಎಂಬ ಪ್ರಜಾತಂತ್ರ ವಿರೋಧಿ ಸಂಘಟನೆಗೂ, ಸಂವಿಧಾನ ಬದ್ಧವಾಗಿಯೇ ಅಸ್ತಿತ್ವಕ್ಕೆ ಬಂದಿರುವ ಬಿಜೆಪಿಗೂ ಪೂಜನೀಯವಾದುದು. ಆದ್ದರಿಂದಲೇ ಅವರ ನುಡಿಮುತ್ತುಗಳ ಕುರಿತು ಸಾರ್ವಜನಿಕ ಚರ್ಚೆ ನಡೆಯುವುದು ಅಗತ್ಯ, ಅನಿವಾರ್ಯ.

ಸಹಪಂಕ್ತಿ ಭೋಜನದ ಸಂಗತಿಗೂ ಈ ಕಾರಣದಿಂದಲೇ ಮಹತ್ವ ಬಂದಿದೆ. ಹಿಂದೂ ಧರ್ಮದ ಶ್ರದ್ಧಾಳುಗಳೆಂದು ಯಾರ್‍ಯಾರಿದ್ದಾರೋ ಅವರಲ್ಲಿ 'ಜಾತಿ ಪದ್ಧತಿ ಕೆಟ್ಟದು ಅಲ್ಲವೇ?' ಎಂದು ಕೇಳಿದರೆ ಅವರ ಉತ್ತರಗಳು ಒಂದೇ ಇರುತ್ತವೆ. 'ಜಾತಿ ವ್ಯವಸ್ಥೆ ಎನ್ನುವುದು ಒಂದು ಕಾರ್ಯವಿಭಜನೆ; ಅದನ್ನು ನಮ್ಮ ಪೂರ್ವಿಕರು ಸುಖಾಸುಮ್ಮನೆ ಮಾಡಿದ್ದಲ್ಲ; ಸಮಾಜದಲ್ಲಿ ಸಾಮರಸ್ಯ ಕಾಪಾಡಲಿಕ್ಕಾಗಿ ಮಾಡಿಕೊಂಡು ಬಂದಿದ್ದು; ಐದು ಬೆರಳುಗಳು ಒಂದೇ ಸಮನೆ ಇರುವುದಿಲ್ಲ' ಇತ್ಯಾದಿ. ಅದರ ಜೊತೆಗೇ 'ಆದರೂ ತುಂಬಾ ಮೇಲುಕೀಳು ಮಾಡುವುದು ಸರಿಯಲ್ಲ, ಅದು ಕಾಲಾಂತರದಲ್ಲಿ ಬಂದು ಸೇರಿಕೊಂಡಿದ್ದು, ಅದನ್ನು ಬದಲಿಸಬೇಕು' ಎಂದೂ ಸೇರಿಸುತ್ತಾರೆ. ಸಾಮಾನ್ಯವಾಗಿ ಈ ವಿಚಾರದಲ್ಲಿ ಗಾಂಧೀಜಿಯವರಿಂದ ಹಿಡಿದು ಪೇಜಾವರರ ತನಕ ಒಂದೇ ಉತ್ತರ. ಹಾಗೆಯೇ ವರ್ಗದ ವಿಚಾರಕ್ಕೂ ಸಹ. ಇವರೆಲ್ಲರ ಪ್ರಕಾರ ಶ್ರೀಮಂತರೆಂದರೆ 'ಪುಣ್ಯವಂತರು'. ಪುಣ್ಯವಂತರು ಉಳಿದ ಪಾಪಿಗಳಿಗೆ ಅಷ್ಟೋ ಇಷ್ಟೋ ಸಹಾಯ ಮಾಡಿದರೆ ಅದು ಅವರ ಸದ್ಗುಣ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಕಥೆಗಳಲ್ಲಿ ಶ್ರೀಮಂತರ ಪಾತ್ರ ಚಿತ್ರಣದ ಸಂದರ್ಭದಲ್ಲಿ 'ಅವರು ತುಂಬಾ ಪುಣ್ಯವಂತರಾಗಿದ್ದರು' ಎಂದೇ ವಿವರಿಸುತ್ತಾರೆ. ಇದನ್ನು ಲಂಕೇಶರು ಒಂದು ಮರೆಯುವ ಮುನ್ನದಲ್ಲಿ ಕಾಣಿಸಿದ್ದಾರೆ.

ಇರಲಿ, ಅದೇ ರೀತಿ ಜಾತಿವಿನಾಶದ ವಿಚಾರದಲ್ಲೂ ಸಹಪಂಕ್ತಿ ಭೋಜನವು ಈ ಶ್ರದ್ಧಾಳುಗಳ ಒಂದು ಮುಖ್ಯ ಕಾರ್ಯಕ್ರಮ. ಎದುರ್ಕಳ ಕೆ.ಶಂಕರನಾರಾಯಣ ಭಟ್ಟ ಎಂಬುವವರು 'ಹಿಂದೂ ಧರ್ಮದ ಪರಿಚಯ' ಎಂಬ ದೊಡ್ಡ ಪುಸ್ತಕವೊಂದನ್ನು ಬರೆದಿದ್ದಾರೆ. ಬಹಳ ಸಮಾಧಾನದಲ್ಲಿ ಹಿಂದೂ ಧರ್ಮದ ಕುರಿತು ವಿವರಗಳನ್ನು ದಾಖಲಿಸಿರುವ ಅವರು ಜಾತಿಪದ್ಧತಿಯ ಕುರಿತು ಮೇಲೆ ಹೇಳಿದಂತಹ ಮಾತುಗಳನ್ನೇ ಬರೆದಿದ್ದಾರೆ. ಆ ನಂತರ ಜಾತಿ ತಾರತಮ್ಯವನ್ನು ನಿವಾರಿಸಲು ಇರುವ ಉಪಾಯವನ್ನೂ ಹೇಳುತ್ತಾರೆ. 'ದಲಿತ ಶೂದ್ರಾದಿಗಳಿಗೆ ಸ್ವಚ್ಛತೆಯ ಪಾಠ ಹೇಳಿಕೊಟ್ಟು' ಬ್ರಾಹ್ಮಣರ ಜೊತೆ ಊಟಕ್ಕೆ ಕೂರಿಸಬೇಕಂತೆ. ಆ ಮೂಲಕ ನಿಧಾನಕ್ಕೆ ಅವರೂ ಬದಲಾಗುತ್ತಾರೆಂಬುದು ಇವರ ಅನಿಸಿಕೆ. ಇದೇ ಮಾತನ್ನು ಆರೆಸ್ಸೆಸ್ ವಟುಗಳೂ ಸಹ ಹೇಳುತ್ತಾರೆ. ಆರೆಸ್ಸೆಸ್‌ನಲ್ಲಿನ ಜಾತಿವಾದ ಮತ್ತು ಬ್ರಾಹ್ಮಣ ಶ್ರೇಷ್ಠತೆಯ ಕುರಿತ ತಕರಾರನ್ನು ನಾವು ಮುಂದಿಟ್ಟರೆ, 'ಹಾಗೇನೂ ಇಲ್ಲ, ಸಂಘದಲ್ಲಿ ಎಲ್ಲರೂ ಒಟ್ಟಿಗೆಯೇ ಊಟ ಮಾಡುತ್ತೇವೆ. ಸಹಪಂಕ್ತಿ ಭೋಜನ ಇತ್ಯಾದಿಗಳ ಮೂಲಕ ಸಾಂಸ್ಕೃತಿಕ ತಾರತಮ್ಯವನ್ನು ಹೋಗಲಾಡಿಸಬಹುದು' ಎಂದುಲಿಯುತ್ತಾರೆ. ಓಟಿನ ರಾಜಕಾರಣ ಮಾಡುವ ಬಿಜೆಪಿ ಪಕ್ಷವು ಅದನ್ನು ಬಹಿರಂಗವಾಗಿ ಹೇಳುವುದಿಲ್ಲವಾದರೂ, ಇಡೀ ಪರಿವಾರದ ಭಾಗವಾಗಿ ಅದಕ್ಕಿಂತ ಭಿನ್ನವಾದ ಕಾರ್ಯಕ್ರಮವೇನೂ ಅದಕ್ಕಿದ್ದಂತಿಲ್ಲ.

ದಲಿತರೊಬ್ಬರ ಮನೆಯಲ್ಲಿ ಊಟ ಮಾಡುತ್ತೀರಾ ಎಂಬ ಸವಾಲನ್ನು ಪೇಜಾವರರಿಗೆ ಬೆಂಗಳೂರಿನ ಪ್ರಗತಿಪರರು ಎಸೆದಾಗ ಅದನ್ನು ಸ್ವೀಕರಿಸಿರಲಿಲ್ಲ. ಆದರೆ ತಾವೇ ನಂತರದಲ್ಲಿ ಮೈಸೂರಿನ ದಲಿತ ಕುಟುಂಬಕ್ಕೆ ಹೋಗಿ ಬಂದರು. ಅಲ್ಲಿ ಅವರು ಫಲಾಹಾರದಿಂದಾಚೆಗೆ ಬೇರೆ ಏನನ್ನಾದರೂ ಊಟ ಮಾಡಿದಂತೆ ಕಾಣಲಿಲ್ಲ. ಆದರೆ ಅದು ಒಂದು ರೀತಿಯ ಸಹಪಂಕ್ತಿ ಭೋಜನದ ಸಂದೇಶವನ್ನು ಅವರು ಅದರಿಂದ ರವಾನಿಸಿದಂತಾಗಿ[...] ಜಾತಿವಿನಾಶಕ್ಕೆ ಅಂತರ್ಜಾತಿ ವಿವಾಹ, ಎಲ್ಲಾ ಸಾರ್ವಜ[...] ಸ್ಥಳಗಳಲ್ಲಿ ಎಲ್ಲಾ ರೀತಿಯ ಜಾತಿ ತಾರತಮ್ಯದ ನಿಷೇ[...] ಜಾತಿ ಆಧಾರಿತವಾಗಿ ವೃತ್ತಿಗಳನ್ನು ಹೊಂದುವುದು, ಮ[...] ವ್ಯವಸ್ಥೆಯೂ ಎಲ್ಲಾ ಜಾತಿಗಳಿಗೆ ಒಟ್ಟಿಗೆ ಮಾಡುವುದ[...] ಜಾತಿಸೂಚಕ ಹೆಸರು, ಸಂಕೇತಗಳನ್ನು ಇಲ್ಲವಾಗಿಸುವು[...] ಕನಿಷ್ಠ ಇಷ್ಟು ಕಾರ್ಯಕ್ರಮಗಳನ್ನೂ ಸಹ ಪೇಜಾವರ[...] ಮತ್ತು ಸಂಘಪರಿವಾರ ಅನುಷ್ಠಾನಕ್ಕೆ ತರುವ ಕೆಲಸ ಮಾಡಿ[...] ಇನ್ನು ಶೋಷಿತ ಜಾತಿಗಳಿಗೆ ಸೇರಿದವರ ಸಮಗ್ರ ರಾಜಕೀಯ[...] ಆರ್ಥಿಕ ಅಭಿವೃದ್ಧಿಯ ಮೂಲಕ ನಿಜವಾದ ಬದಲಾವ[...] ಅಂದರೆ ರಾಜಕೀಯ ಅವಕಾಶ, ಸಂಪತ್ತು ಮ[...] ಅಧಿಕಾರದಲ್ಲಿ ಸರಿಯಾದ ಪಾಲನ್ನು ಖಾತರಿಗೊಳಿಸು[...] ನೀತಿಗೆ ಅವರು ಮುಂದಾಗುವ ಸಾಧ್ಯತೆಯಂತೂ ದೂರ[...] ಉಳಿಯಿತು.

ಹಾಗಾಗಿ ಅವರ ಕನಿಷ್ಠ ಮತ್ತು ಗರಿಷ್ಠ ಕಾರ್ಯಕ್ರಮ[...] ಸಹಪಂಕ್ತಿ ಭೋಜನ ಮಾತ್ರವೇ ಆಗಿದೆ. ಈಗ ಪೇಜಾವರ[...] ಪಂಕ್ತಿಭೇದವನ್ನು ಸಮರ್ಥಿಸಿಕೊಳ್ಳುವ ಮೂಲಕ ಅದಕ[...] ತಿಲಾಂಜಲಿ ನೀಡಿದ್ದಾರೆ. ಅದಕ್ಕೆ ಅವರು ನೀಡಿರು[...] ಕಾರಣವಂತೂ ಅಪಾಯಕಾರಿಯಾದುದಾಗಿ[...] 'ಮಾಂಸಾಹಾರಿಯ ಜೊತೆ ಊಟ ಮಾಡುವು[...] ಮಹಾಪಾಪ ಎಂದು ಬಸವಣ್ಣನವರೇ ಹೇಳಿದ್[...] ಎಂಬುದು ಅವರ ಹೇಳಿಕೆ. ಪೇಜಾವರ ಸ್ವಾಮೀಜಿಯಾಗಲಿ[...] 'ಬಡವರು, ದಮನಿತ ಜಾತಿಗಳ ಮಕ್ಕಳು ಖಾಸಗಿ ಶಾಲೆಗ[...] ಬರುವುದರಿಂದ ಸಮುದ್ರಕ್ಕೆ ಕೊಚ್ಚೆ ನೀ[...] ಸೇರಿದಂತಾಗುತ್ತದೆ' ಎಂದು ಹೇಳಿದ ಕುಸ್ಮಾದ ಅ[...] ಶರ್ಮಾನಂತಹವರಾಗಲೀ, ಒಂದು ಸಮುದಾಯ[...] ತನ್ನೊಳಗೆ ಆಡಿಕೊಳ್ಳುವ ಮಾತುಗಳ ಬಹಿರಂಗ ಅಭಿ[...] ಅಷ್ಟೇ ಆಗಿದ್ದಾರೆ. ಎಲ್ಲರಿಗೂ ಗೊತ್ತಾಗದಂತೆ ಬ್ರಾಹ್ಮಣ[...] ಪ್ರತ್ಯೇಕ ಊಟದ ವ್ಯವಸ್ಥೆ ಮಾಡಿರುವ ಧರ್ಮಸ್ಥ[...] ಹೆಗ್ಗಡೆಗಿಂತ ಇವರು ಉತ್ತಮರು. ಆದರೆ ಬಹಿರಂಗ[...] ಇಂತಹದ್ದನ್ನು ಸಮರ್ಥಿಸುವ ಹೇಳಿಕೆ ಬಂದಾಗ ಸುಮ್ಮನಿ[...] ಸಮಾಜದಲ್ಲಿ ಆ ನಿಲುವೇ ಪ್ರಾಧಾನ್ಯತೆಯ[...] ಪಡೆದುಕೊಳ್ಳುತ್ತಾ ಹೋಗುತ್ತದೆ.

ಭಾರತದ ಸಂಸದೀಯ ಪ್ರಜಾತಂತ್ರವು ಎ[...] ರಂಗಗಳಲ್ಲೂ ಈ ಪ್ರಮಾಣದ ತಾರತಮ[...] ಅವಕಾಶವಿರದಂತೆ ಮಾಡಿದೆ. ಓಟಿನ ಹಕ್ಕನ್ನು ಪಡೆದುಕೊ[...] ದೊಡ್ಡ ದೊಡ್ಡ ಜಾತಿಸಮುದಾಯಗಳು ತಮ್ಮ ಪಾಲ[...] ಕೇಳುತ್ತಿವೆ. ಇಡಿ ಇಡಿ ಜಾತಿಸಮುದಾಯಗಳಿಗೆ ಸಮ[...] ಪಾಲಿನ ಪ್ರಶ್ನೆ ಇನ್ನೂ ದೂರವೇ ಉಳಿದಿದೆ. ಪ್ರತಿ ಜಾತಿ[...] ಒಂದು ಸಣ್ಣ ವಿಭಾಗವು ಮೇಲ್ವರ್ಗವಾಗಿ ಬೆಳೆಯ[...] ಯಶಸ್ವಿಯಾಗಿದೆ. ವರ್ಗ ಶ್ರೇಣೀಕರಣ ಮತ್ತು ತಾರತಮ[...] ಅಗಾಧವಾಗಿ ಬೆಳೆಯುತ್ತಿದೆ. ಬಡವರು ಮತ್ತು ಶ್ರೀಮಂ[...] ನಡುವಿನ ತಾರತಮ್ಯಕ್ಕೆ ಶಾಸಕಾಂಗ, ಕಾರ್ಯಾಂಗ ಹಾ[...] ನ್ಯಾಯಾಂಗದ ರಕ್ಷಣೆಯೂ ಇದೆ. ಅದನ್ನು ಇಲ್ಲವಾಗಿಸ[...] ಹೋರಾಟ ನಡೆಯಬೇಕೆಂದರೆ ತಾರತಮ್ಯದ ವಿರು[...] ಶೋಷಣೆಗೊಳಗಾದವರಿಗೆ ಸಿಟ್ಟು ಹೆಚ್ಚಾಗಬೇಕು. ಅ[...] ತಾರತಮ್ಯವನ್ನು ಮಾನ್ಯಗೊಳಿಸುವ, ಅದಕ್ಕೊಂದು ತಾ[...] ಧಾರ್ಮಿಕ ಆಯಾಮ ನೀಡುವ ಮಾ[...] ಪೇಜಾವರರಂಥವರು ಯಥಾಸ್ಥಿತಿ ಕಾಪಾಡಿಕೊಂಡು ಬರ[...] ತಮ್ಮ ಕೊಡುಗೆಯನ್ನು ದಯಪಾಲಿಸುತ್ತಾರೆ. ಅದ[...] ಸಂಘಪರಿವಾರ ಮತ್ತು ಬಿಜೆಪಿಗಳು ಸಂಘಟನಾ[...] ಶಕ್ತಿಯೊಂದಿಗೆ ಪಾಲಿಸಿಕೊಂಡು ಬರುತ್ತಾರೆ. [...] ಅಪಾಯವನ್ನು ಎದುರುಗೊಳ್ಳಬೇಕೆಂದರೆ ಪೇಜಾವರರ[...] ತಾತ್ವಿಕವಾಗಿಯೂ, ಸಂಘಟನಾತ್ಮಕವಾಗಿಯೂ ಎದು[...] ಗೊಳ್ಳಬೇಕಾಗಿದೆ.

ಅನ್ನದಾನ ಶ್ರೇಷ್ಠದಾನ!

ತಮಿಳುನಾಡಿನ ಮೆಟ್ಟುಪಾಳ್ಯಂನ ಶ್ರೀರಂಗನಾಥ ದೇವಸ್ಥಾನದಲ್ಲಿ 3.3.2007ರಲ್ಲಿ ಒಂದು ಘಟನೆ ನಡೆಯಿತು. ಸಾರ್ವತ್ರಿಕ ಅನ್ನದಾನದ ಕಾರ್ಯಕ್ರಮದಲ್ಲಿ ದಂಡಪಾಣಿ, ಪೆರುಮಾಳ್, ಶಿವ ಮತ್ತು ಗೌತಮ್ ಹಾಗೂ ಇನ್ನಿಬ್ಬರು ಸೇರಿದಂತೆ ಒಟ್ಟು ಆರು ಜನ ದಲಿತ ಹುಡುಗರು ಊಟ ಮಾಡಲು ಹೋಗಿದ್ದರು. ಅದನ್ನು ನೋಡಿದ ಸವರ್ಣೀಯ ಹಿಂದೂಗಳು ಅವರೆಲ್ಲರನ್ನೂ ಥಳಿಸಿದ್ದರು. ತೀವ್ರ ವಾಗಿ ಗಾಯಗೊಂಡಿದ್ದ ದಂಡಪಾಣಿ ಮೂರನೆಯ ದಿನ ಅಸುನೀಗಿದ. ಸಿಂಗಾನೆಲ್ಲೂರು ಪೊಲೀಸರು 147, 148 ಮತ್ತು 302 ಸೆಕ್ಷನ್‌ನಡಿಯಲ್ಲಿ ಎಫ್‌ಐಆರ್ (ಅಪರಾಧ ಸಂಖ್ಯೆ 261/2007) ದಾಖಲಿಸಿದರು. ಆರೋಪಿಗಳಲ್ಲಿ ಇಬ್ಬರಿಗೆ ಮಾತ್ರ ಕೋವೈನ ನ್ಯಾಯಾಲಯವು ಏಪ್ರಿಲ್ 2008ರಲ್ಲಿ ಜೀವಾವಧಿ ಶಿಕ್ಷೆ ವಿಧಿಸಿತು.

ಆ ನಂತರವೂ ಆ ದೇವಸ್ಥಾನದಲ್ಲಿ ಸಹಪಂಕ್ತಿ ಭೋಜನ ನಡೆಯುತ್ತಿರುವ ಬಗ್ಗೆ ವರದಿಯಾಗಿಲ್ಲ.

ಆದಿವಾಸಿಗಳು V/s ಉದ್ಯಮಪತಿಗಳ ಕದನ

ಛತ್ತೀಸ್‌ಗಢ, ಒರಿಸ್ಸಾ, ಜಾರ್ಖಂಡ್‌ನಂಥಾ ರಾಜ್ಯಗಳಲ್ಲಿ ಮಾವೋವಾದಿ ಚಳವಳಿ ತೀವ್ರರೂಪ ಪಡೆದಿದೆ. ಮಾವೋವಾದಿ ಸಂಘಟನೆ ತಮ್ಮ ಚಳವಳಿಯನ್ನು ದೇಶದ ವಿವಿಧ ರಾಜ್ಯಗಳಿಗೂ ವಿಸ್ತರಿಸಲು ಹಲವು ಬಾರಿ ಇನ್ನಿಲ್ಲದಂತೆ ಪ್ರಯತ್ನಿಸಿದೆ. ಉದಾಹರಣೆಗೆ ಮಹಾರಾಷ್ಟ್ರ, ಕೇರಳ, ಕರ್ನಾಟಕ, ಪಶ್ಚಿಮ ಬಂಗಾಳ, ಪಂಜಾಬ್ ಮುಂತಾದ ರಾಜ್ಯಗಳಿಗೆ ತಮ್ಮ ಚಳವಳಿಗೆ ಗಟ್ಟಿ ನೆಲೆ ಕಂಡುಕೊಳ್ಳುವಲ್ಲಿ ನಡೆಸಿದ ಪ್ರಯತ್ನಗಳು ವಿಫಲವಾಗಿವೆ. ಹಾಗಾದರೆ ಛತ್ತೀಸ್‌ಗಢದಂಥಾ ಅತ್ಯಂತ ಹಿಂದುಳಿದ ಆದಿವಾಸಿ ಜನಬಾಹುಳ್ಯವಿರುವ ಪ್ರದೇಶದಲ್ಲಿ ಮಾವೋವಾದಿ ಚಳವಳಿ ಗಟ್ಟಿಯಾಗಿ ನೆಲೆಗೊಂಡಿರುವುದಕ್ಕೆ ಹಾಗೂ ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿರುವ ರಾಜ್ಯಗಳಲ್ಲಿ ಮಾವೋವಾದಿಗಳಿಗೆ ಗಟ್ಟಿ ನೆಲೆ ಸಿಗದೇ ಹೋಗಿರುವುದಕ್ಕೆ ಕಾರಣ ಏನಿರಬಹುದು? ಈ ಎರಡೂ ವಿಭಿನ್ನ ಪರಿಸ್ಥಿತಿಗಳಿಗೆ ಕಾರಣ ಮಾತ್ರ ಒಂದೇ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಅದೇನೆಂದರೆ ಆಯಾ ಪ್ರದೇಶಗಳ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳು!

ನಕ್ಸಲೀಯ ಚಳವಳಿಯನ್ನು ಒಂದು ಸಾಮಾಜಿಕ-ಆರ್ಥಿಕ ಸಮಸ್ಯೆಯೆಂದು ಪರಿಗಣಿಸಿ ಅಲ್ಲಿನ ಜನರ ಜೀವನಮಟ್ಟವನ್ನು ಸುಧಾರಿಸುವಂಥಾ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ನಾನಾ ಸಮಿತಿಗಳು ಸರ್ಕಾರಕ್ಕೆ ಶಿಫಾರಸ್ಸು ಮಾಡಿವೆ. ಗದ್ದುಗೆ ಹಿಡಿಯುವ ವಿಭಿನ್ನ ಸರ್ಕಾರಗಳು ಕೂಡ ಮಾವೋವಾದಿ ಚಳವಳಿಯನ್ನು ಸಾಮಾಜಿಕ- ಆರ್ಥಿಕ ಸಮಸ್ಯೆ ಎಂದು ಆಗಾಗ್ಗೆ ಬಾಯಿಮಾತಿನಲ್ಲಿ ಹೇಳುತ್ತವೆ. ಆದರೆ ಆದಿವಾಸಿಗಳ ಹಸಿವಿನ ಸಮಸ್ಯೆಗೆ ಬಂದೂಕಿನ ಶಕ್ತಿಯಿಂದ ಪರಿಹಾರ ಕಂಡುಕೊಳ್ಳುತ್ತಿರುವುದೇ ವಾಸ್ತವ. ಇದರ ಜೊತೆಗೆ ಅಮಾಯಕ ಆದಿವಾಸಿಗಳು ನೆಲೆಸಿರುವ ಪ್ರದೇಶಗಳಲ್ಲಿ ಹೇರಳವಾದ ಖನಿಜ ನಿಕ್ಷೇಪಗಳು ಹುದುಗಿರುವುದರಿಂದ ಭಾರೀ ಉದ್ಯಮಿಗಳು ಆ ಪ್ರದೇಶಗಳಿಗೆ ಹಠಾತ್ ದಾಂಗುಡಿಯಿಟ್ಟಿದ್ದಾರೆ. ಈ ನೆಲದ ಎಲ್ಲಾ ಕಾನೂನುಗಳನ್ನೂ ಗಾಳಿಗೆ ತೂರಿ ಲಕ್ಷಾಂತರ ಕೋಟಿಗಳ ಮೌಲ್ಯದ ಖನಿಜ ನಿಕ್ಷೇಪಗಳನ್ನು ಬಗೆಯುವ ಕಾರ್ಯ ಈಗಾಗಲೇ ಆರಂಭವಾಗಿದೆ. ಪರಿಣಾಮವಾಗಿ ಆದಿವಾಸಿಗಳ ಬದುಕು ಮೂರಾಬಟ್ಟೆಯಾಗಿದೆ. ದಶಕಗಳಿಂದಲೂ ನಕ್ಸಲೀಯ ಸಂಘಟನೆಗಳಡಿಯಲ್ಲಿ ಸಂಘಟಿತರಾಗಿ ಕ್ರಮೇಣ ಜಾಗೃತಗೊಂಡಿರುವ ಈ ಸಮುದಾಯಗಳು ಈ ಕಾರ್ಪೊರೇಟ್ ದಾಳಿಯನ್ನು ವಿರೋಧಿಸಿ ಹೋರಾಟನಿರತರಾಗಿದ್ದಾರೆ.



ನಕ್ಸಲೀಯ ತರಬೇತಿ ಶಿಬಿರದಲ್ಲಿ ಆದಿವಾಸಿಗಳು

ಪೊಲೀಸರ ತರಬೇತಿ ಶಿಬಿರದಲ್ಲಿ ಉದ್ಯಮಿಗಳು/ರಾಜಕಾರಣಿಗಳು

ಹೀಗಾಗಿ ಭಾರೀ ಉದ್ಯಮಪತಿಗಳು-ರಾಜಕಾರಣಿ[...] ಕೂಟಕ್ಕೂ ಆದಿವಾಸಿ-ಮಾವೋವಾದಿ ಬಣಕ್ಕೂ ನಡ[...] ಯುದ್ಧದ ವಾತಾವರಣ ನಿರ್ಮಾಣವಾಗಿದೆ. ಹೀಗೆ ಹ[...] ತಪ್ಪಿದ ಸರ್ಕಾರದ ನೀತಿಯಿಂದಾಗಿ ದಿನೇದಿನೇ ರಕ್ತ[...] ಹೆಚ್ಚಾಗುತ್ತಿದೆ. ಸರ್ಕಾರಿ ಪ್ರಾಯೋಜಿತ ರಕ್ತಪಾತದ ಭಾಗ[...] ಸಲ್ವಾಜುಡುಂ ಎಂಬ ಸಂವಿಧಾನಬಾಹಿರ ಪಡೆಯೊಂ[...] ಆದಿವಾಸಿಗಳ ಬೇಟೆ ಮಾಡಿದ್ದಾಯಿತು. ಈಗ ಆ ಪಡೆಯ[...] ಸುಪ್ರೀಂಕೋರ್ಟ್ ಕಾನೂನುಬಾಹಿರ ಎಂದು ಘೋ[...] ರದ್ದುಪಡಿಸಿದ ನಂತರ, ಸ್ಥಳೀಯ ಸರ್ಕಾರ ಛತ್ತೀಸ್‌ಗ[...] ಉದ್ಯಮಿಗಳು ಹಾಗೂ ರಾಜಕಾರಣಿಗಳ ಕೈಗೆ ಬಂದ[...] ನೀಡಿ, ಇತ್ತೀಚೆಗೆ ರಾಜಧಾನಿ ರಾಂಚಿಯಲ್ಲಿ ಅವರಿಗೆ ವಿ[...] ತರಬೇತಿ ಆಯೋಜಿಸಿದೆ.

ಉದ್ಯಮಿಗಳು ಹಾಗೂ ರಾಜಕಾರಣಿಗಳು ಶಸ್ತ್ರ ತರ[...] ಪಡೆಯುತ್ತಿರುವುದನ್ನು ಈ ಮೇಲಿನ ಚಿತ್ರದಲ್ಲಿ ಕಾಣಬಹು[...] ಇಂಥಾ ಸರ್ಕಾರಿ ನೀತಿಗಳು ಪ್ರಜೆಗಳ ಪರವಾಗಿವೆ ಎ[...] ಹೇಳುವುದು ಕಷ್ಟ. ಆದರೆ ಪ್ರಭುಗಳ ಪರವಾಗಿವೆ ಎ[...] ಯಾವುದೇ ಅನುಮಾನವಿಲ್ಲದೆ ಹೇಳಬಹುದು.

• ದೊಡ್ಡಿಪಾಳ್ಯ ನರಸಿಂಹಮೂ[...]

ಮೋದಿಯನ್ನು ಬೆಳೆಸಿದ್ದು ಅಡ್ವಾಣಿಯೆ ಅಲ್ಲವೆ?



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ನರಹಂತಕ ನರೇಂದ್ರ ಮೋದಿಯನ್ನು ಮುಂದಿಟ್ಟು ತು 2014ರ ಚುನಾವಣೆಯಲ್ಲಿ ಲೋಕಸಭೆಯನ್ನು ಡಿಸಿಕೊಳ್ಳಲು ಬಿಜೆಪಿ ಹೊರಟಿದೆ.

ಅದಿರಲಿ, ಮೊನ್ನೆ ಬಿಜೆಪಿಯಲ್ಲಾಗಿರುವ 'ತಲ್ಲಣ'ಗಳಲ್ಲಿನ ತ್ರಗಳನ್ನು ನೋಡಿ. ಹನ್ನೊಂದು ವರ್ಷಗಳ ಹಿಂದೆ ರಾತಿನಲ್ಲಿ ಅಮಾಯಕರ ಮಾರಣಹೋಮವನ್ನು ದಿ ನಡೆಸಿದಾಗ ಆಗ ಆತನ ರಕ್ಷಣೆಗೆ ನಿಂತದ್ದು ಅಡ್ವಾನಿ. ಅದಕ್ಕೆ ಕಾರಣಗಳೂ ಇದ್ದವು. ಮೊದಲನೆ ಾಗಿ ಮೋದಿ ಎಂಬ ರಾಕ್ಷಸನನ್ನು ಪ್ರೋತ್ಸಾಹಿಸಿ ದ್ದು ಇದೇ ಅಡ್ವಾನಿ ಎಂಬುದು ಒಂದು ಕಾರಣ ದೆ, ಮೋದಿಯ ಬೆಂಬಲವಿಲ್ಲದೆ ತಾನು ಗುಜರಾತಿನ ಂನಗರ ಕ್ಷೇತ್ರದಿಂದ ಲೋಕಸಭಾ ಚುನಾವಣೆಯಲ್ಲಿ ವುದು ಕಷ್ಟ ಮಾತ್ರವಲ್ಲ ಸೋತರೆ ತಾನು ಪ್ರಧಾನಿ ವುದು ಅಸಾಧ್ಯ ಎಂಬುದು ಅಡ್ವಾನಿಗೆ ಗೊತ್ತಿದ್ದರಿಂದ ಮೋದಿಯನ್ನು ಬೆಂಬಲಿಸಿದ್ದರು ಎಂಬುದು ಇನ್ನೊಂದು ಣ.

ಆದರೀಗ ಅಡ್ವಾನಿಯೇ ಸಾಕಿದ ರಣಹದ್ದು ಪ್ರಧಾನಿ ವ ಅವರ ಮಹತ್ವಾಕಾಂಕ್ಷೆಯನ್ನು ಕಬಳಿಸಿ ಹಾಕಿದೆ! ದ್ದುಕ್ಕೊ ಮಹಾರಾಯ ಎಂದು ಹಿರಿಯರು ದ್ದು ಇಂತಹ ಪ್ರಸಂಗಗಳನ್ನು ನೋಡಿಯೇ ುತ್ತದೆ.

ಇನ್ನೊಂದು ವಿಚಿತ್ರದ ಸಂಗತಿ ಯಾವುದೆಂದರೆ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಪಕ್ಷಗಳು 'ಕೋಮುವಾದಿ ಮೋದಿಗಿಂತ ್ಯವಾದಿ ಅಡ್ವಾನಿಯೇ ಬೆಟರ್' ಎಂದು ್ಗರವೆತ್ತುತ್ತಿರುವುದು. ಇವರೆಲ್ಲ ಅಡ್ವಾನಿಯ ್ಯತ ರಥಯಾತ್ರೆಯನ್ನು ಮರೆತಿರುವಂತಿದೆ. ರಲ್ಲೇ ಪ್ರಥಮಬಾರಿಗೆ ಹಿಂದೂತ್ವ ಎಂಬ ುವಾದಿ ಸಿದ್ಧಾಂತವನ್ನು ಮುನ್ನೆಲೆಗೆ ತಂದು ಿಯ ಲಾಭ ಪಡೆದದ್ದು ಇದೇ ಅಡ್ವಾನಿ. ಂತ ಮುಖ್ಯವಾಗಿ ಈತನ ವಿಷಕಾರಿ ರಥ ದಲ್ಲೆಲ್ಲ ಕೋಮುಗಲಭೆಗಳು ನಡೆದು ಯಕರ ರಕ್ತದ ಹೊಳೆಯನ್ನೇ ಹರಿಸಿತ್ತು. ಅಷ್ಟೇ ಇದಾದನಂತರ ಸಂಭವಿಸಿದ ಮುಂಬೈ ಸ್ಫೋಟ ವಲ್ಲದೆ ಆನಂತರ ಈ ದೇಶದ ಅಲ್ಪಸಂಖ್ಯಾತ ಲ್ಮಾನರಲ್ಲಿ ಹಲವರು ಭಯೋತ್ಪಾದಕ ಕೃತ್ಯಗಳಿಗೆ ವಾಗಿದ್ದಕ್ಕೆ ಮೂಲ ಕಾರಣವೂ ಇದೇ ಅಡ್ವಾನಿಯ ರಥಯಾತ್ರೆ. ಇವತ್ತಿಗೂ ಅದರ ಪರಿಣಾಮಗಳು ದೇಶದ ವಿವಿಧ ಕಡೆ ತಲೆದೋರುತ್ತಿದ್ದು ಅದನ್ನು ನಿಗ್ರಹಿಸುವುದೇ ದೊಡ್ಡ ಸಮಸ್ಯೆಯಾಗಿದೆ.

ಆದರೀಗ ಅದೇ ಅಡ್ವಾನಿಯನ್ನು 'ಸೌಮ್ಯವಾದಿ', 'ಜಾತ್ಯತೀತ ಮುಖ' ಎಂದೆಲ್ಲ ಹಲವರು ಕರೆಯುತ್ತಿರುವುದು ಅಚ್ಚರಿ ಮೂಡಿಸುವಂತಿದೆ.

ಇನ್ನು ಮೋದಿಯ ನೇತೃತ್ವದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ಸಾಧ್ಯತೆಗಳಾದರೂ ಎಂತಹವು? ವಾಸ್ತವವಾಗಿ ನಮ್ಮ ದೇಶದ ಸಂವಿಧಾನ ಮಾತ್ರ ಜಾತ್ಯತೀತವಾಗಿಲ್ಲ; ಬಹುಸಂಖ್ಯಾತ ಭಾರತೀಯರು ಜಾತ್ಯತೀತ ಮನೋಭಾವವನ್ನು ಹೊಂದಿರುವವರೇ ಆಗಿದ್ದಾರೆ. ಆ ಕಾರಣಕ್ಕೇ ಕೋಮುವಾದಿ ಬಿಜೆಪಿಗೆ ತಾನೆಂದೂ ಸ್ವತಂತ್ರವಾಗಿ ದೆಹಲಿಯಲ್ಲಿ ಅಧಿಕಾರ ಹಿಡಿಯಲು ಸಾಧ್ಯವಿಲ್ಲ ಎಂದು ಗೊತ್ತಾಗಿದೆ.

ಇನ್ನು ಕೋಮುವಾದವನ್ನು ಹಬ್ಬಿಸಿ ದೇಶದ ಜನರ ಮನಸ್ಸಿನಲ್ಲಿ ವಿಭಜನೆಯನ್ನು ತರುವ ಮೋದಿಯ ಪ್ರಭಾವ ಎಷ್ಟರಮಟ್ಟಿಗಿರುತ್ತದೆ? ಗುಜರಾತ್ ಹೊರತಾಗಿ ಮೋದಿಯ



'ಮೇನಿಯಾ' ಯಾವ ರಾಜ್ಯದಲ್ಲಿ ಬಿಜೆಪಿಗೆ ಜಯವನ್ನು ತರಬಹುದು? ಇಂತಹ ಪ್ರಶ್ನೆಗಳನ್ನು ಇಟ್ಟುಕೊಂಡು ಹೊರಟರೆ ಬಿಜೆಪಿಗೆ ನಿಜವಾಗಲೂ ತನ್ನ ಮತ್ತು ಮೋದಿಯ ಮಿತಿಗಳು ಅರ್ಥವಾಗುತ್ತದೆ. ಉದಾಹರಣೆಗೆ, ಮಹಾರಾಷ್ಟ್ರದಲ್ಲಿ ಈಗಾಗಲೇ ಬಿಜೆಪಿಯನ್ನೂ ಮೀರಿಸುವಂತಹ ಶಿವಸೇನಾ ಇರುವುದರಿಂದ ಅಲ್ಲಿ ಮೋದಿಯ ಚಮತ್ಕಾರ ನಡೆಯುವುದು ಕಷ್ಟ. ಹಾಗೆಯೇ ಈಗತಾನೇ ಕರ್ನಾಟಕದಲ್ಲಿ ಬಿಜೆಪಿ ಎಕ್ಕುಟ್ಟಿ ಹೋಗಿರುವುದರಿಂದ ಮೋದಿಯ ಮುಖ ನೋಡಿ ಇಲ್ಲಿಯ ಜನ ಆ ಪಕ್ಷವನ್ನು ಬೆಂಬಲಿಸುವ ಸಾಧ್ಯತೆಗಳು ಕಡಿಮೆ. ಇನ್ನು ಕೇರಳದಲ್ಲಿ ಬಿಜೆಪಿ ಲೆಕ್ಕಕ್ಕಿರಲಿ, ಆಟಕ್ಕೂ ಇಲ್ಲ. ತಮಿಳುನಾಡಿನಲ್ಲೂ ಅದು ಡಿಎಂಕೆ ಅಥವಾ ಎಐಎಡಿಎಂಕೆ ಪಕ್ಷಗಳನ್ನು ಅವಲಂಬಿಸಬೇಕೇ ಹೊರತು ಅನ್ಯ ದಾರಿ ಇಲ್ಲ. ಆಂಧ್ರದಲ್ಲಿ ಮೆಗಾ ಸ್ಟಾರ್ ಚಿರಂಜೀವಿಯೇ ಮಣ್ಣುಮುಕ್ಕಿರುವಾಗ; ಜಗನ್ ರೆಡ್ಡಿ ಜೈಲಿನಲ್ಲಿದ್ದೂ ಪ್ರಭಾವ ಬೀರುತ್ತಿರುವಾಗ ಮೋದಿಯ ಆಟ ಅಲ್ಲೂ ನಡೆಯುವುದಿಲ್ಲ.

ಮಧ್ಯ ಪ್ರದೇಶದಲ್ಲಿ ಬಿಜೆಪಿ ಅಧಿಕಾರದಲ್ಲಿದೆ ನಿಜ. ಆದರೆ ಅಲ್ಲಿ ಮೋದಿ ಹೀರೋ ಅಲ್ಲ, ಬದಲಾಗಿ ಮೋದಿಗೆ ಹೋಲಿಸಿದರೆ ದಕ್ಷ ಆಡಳಿತವನ್ನು ನೀಡುತ್ತಿರುವ ಬಿಜೆಪಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅಲ್ಲಿಯ ಜನರ ಕಣ್ಣಲ್ಲಿ ಹೀರೋ. ಒರಿಸ್ಸಾ ರಾಜ್ಯವು ನವೀನ್ ಪಟ್ನಾಯಕನ ಪಾಲೆಪಟ್ಟು ಆಗಿರುವುದರಿಂದ ಅಲ್ಲಿಯೂ ಮೋದಿ ಪ್ರಭಾವ ಬೀರುವುದು ಕಡಿಮೆಯೇ. ಹಾಗೆಯೇ ಮತ್ತೊಂದು ಪ್ರಮುಖ ರಾಜ್ಯವಾದ ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಪೈಪೋಟಿ ಏರ್ಪಡುವುದು ಮಮತಾ ಬ್ಯಾನರ್ಜಿಯ ತೃಣಮೂಲ ಮತ್ತು ಎಡಪಕ್ಷಗಳ ನಡುವೆಯೇ ಹೊರತು ಬಿಜೆಪಿ ಅಲ್ಲಿ ಮುಖ್ಯವೇ ಅಲ್ಲ. ಬಿಹಾರದಲ್ಲಂತೂ ಮೋದಿಯ ವಿರುದ್ಧ ಸಂಯುಕ್ತ ಜನತಾದಳದ ನಿತೀಶ್ ಕುಮಾರ್ ಬಂಡೆಗಲ್ಲಿನಂತೆ ನಿಂತಿರುವಾಗ ಮೋದಿಗೆ ಅಲ್ಲಿ ಪ್ರವೇಶ ಸಿಕ್ಕಿದರೇ ಹೆಚ್ಚು.

ಹೆಚ್ಚಿನ ಸಂಖ್ಯೆಯಲ್ಲಿ ಸಂಸತ್ ಸೀಟುಗಳನ್ನು ಹೊಂದಿರುವ ಉತ್ತರ ಪ್ರದೇಶದಲ್ಲಿನ ರಾಜಕೀಯ ಪಕ್ಷಗಳು ಗೆಲುವಿಗಾಗಿ ಅಲ್ಲಿ ಗಣನೀಯವಾಗಿರುವ ಮುಸಲ್ಮಾನರ ಓಟುಗಳನ್ನೇ ನೆಚ್ಚಿರುವಾಗ ಆ ರಾಜ್ಯದಲ್ಲಿ ಈಗ ಅಧಿಕಾರ ಹಿಡಿದಿರುವ ಸಮಾಜವಾದಿ ಪಕ್ಷ ಮೋದಿಯನ್ನು ಮೂಸಿಯೂ ನೋಡುವುದಿಲ್ಲ.

ಇನ್ನು ಬಹುಜನ ಸಮಾಜ ಪಕ್ಷದ ನಾಯಕಿ ಮಾಯಾವತಿ ಗಾಳಿ ತೂರಿದಲ್ಲಿ ಹೋಗುವ ಪ್ರವೃತ್ತಿಯವರಾಗಿದ್ದು ಆಕೆಯನ್ನು ಯಾರೂ ನೆಚ್ಚಿಕೊಂಡು ಕೂರುವಂತಿಲ್ಲ. ಹಾಗೊಮ್ಮೆ ಆಕೆ ಎನ್‌ಡಿಎ ಒಕ್ಕೂಟದ ಭಾಗಿಯಾದರೆ ನಾಳೆ ತಾನೇ ಪ್ರಧಾನಿ ಆಗಬೇಕೆಂದು ಹಠ ಹಿಡಿದು ಮೋದಿಗೇ ಸೆಡ್ಡು ಹೊಡೆದರೂ ಅಚ್ಚರಿ ಇಲ್ಲ! ಪಂಜಾಬ್ ರಾಜ್ಯದಲ್ಲಿ ಅಕಾಲಿ ದಳ ಬಿಜೆಪಿಯೊಂದಿಗೆ ಇದೆಯಾದರೂ ಆ ರಾಜ್ಯದಲ್ಲಿರುವುದು ಕೇವಲ 13 ಲೋಕಸಭಾ ಸೀಟುಗಳು ಮಾತ್ರ.

ಹೀಗೆ ಎತ್ತಿಂದೆತ್ತ ನೋಡಿದರೂ ಮೋದಿಯ ನೇತೃತ್ವದಲ್ಲಿ ಬಿಜೆಪಿ ದೆಹಲಿಯಲ್ಲಿ ಅಧಿಕಾರದ ಗದ್ದುಗೆ ಹಿಡಿಯುವುದು ಅಸಾಧ್ಯದಂತೆ ಕಾಣಿಸುತ್ತದೆ. ಆದರೂ ಚೆಡ್ಡಿಗಳು ಮೋದಿಗೆ ಬಿಜೆಪಿಯಲ್ಲಿ ಸಿಕ್ಕಿರುವ ಪ್ರಮೋಶನ್ ಕಂಡು ಹಿಗ್ಗಿ ಹೀರೇಕಾಯಿಯಾಗುತ್ತಿದ್ದಾರೆ.

ಅವರೆಲ್ಲ ಬ್ಯಾಂಡ್ ಬಜಾಯಿಸಿಕೊಳ್ಳಲಿ ಬಿಡಿ. ಅವರು ಮಾಡುತ್ತಿರುವ ಗದ್ದಲವನ್ನು ಸದ್ಯಕ್ಕೆ ನಿರ್ಲಕ್ಷಿಸೋಣ... •

ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಹಕ್ಕೊತ್ತಾಯಗಳು



ಇದೇ ಜೂನ್ 9, 2013ರಂದು ನಮ್ಮ ಕರ್ನಾಟಕ ು ಸೌಹಾರ್ದ ವೇದಿಕೆಯು ಮಂಗಳೂರಿನಲ್ಲಿ ಒಂದು ನ್ನು ಏರ್ಪಡಿಸಿತ್ತು. ಭ್ರಷ್ಟ ಮತ್ತು ಕೋಮುವಾದಿ ಯನ್ನು ಸೋಲಿಸಿದ್ದಕ್ಕೆ ರಾಜ್ಯದ ಜನತೆಗೆ ದನೆಯನ್ನು ಮತ್ತು ಈಗ ಕಾಂಗ್ರೆಸ್ ಪಕ್ಷದಿಂದ ವ ಹಲವು ಪ್ರಮುಖ ಶಾಸಕ ಮತ್ತು ಮಂತ್ರಿಗಳ ಿ ರಾಜ್ಯದ ಪ್ರಜ್ಞಾವಂತರ, ಪ್ರಗತಿಪರರ ಮತ್ತು ನ್ನು ಆಶಿಸುವ ಜನರ ಪರವಾಗಿ ಹಕ್ಕೊತ್ತಾಯಗಳನ್ನು ವುದು ವೇದಿಕೆಯ ಪ್ರಮುಖ ಉದ್ದೇಶವಾಗಿತ್ತು.

ವತ್ತಿನ ಸಭೆಗೆ ಮೊದಲು ಆಗಮಿಸಿದವರು ಶಾಸಕ .ಲೋಬೋ. ತುಂಬಾ ತಡವಾಗಿ ಬಂದವರು ಗ್ಯ ಮಂತ್ರಿ ಯು.ಟಿ.ಖಾದರ್. ಈ ಮಧ್ಯೆ ಬೇರೆ ್ರಮಗಳಿದ್ದರಿಂದ ನಮ್ಮ ಸಭೆಗೆ ಬರಲಾಗುವುದಿಲ್ಲ ವಿನಯ್ ಕುಮಾರ್ ಸೊರಕೆಗೆ ಹಿರಿಯ ಕಾಂಗ್ರೆಸ್ ಆಸ್ಕರ್ ಫರ್ನಾಂಡಿಸ್ ಅವರು ನಮ್ಮ ವೇದಿಕೆಯ ್ರಮಕ್ಕೆಂದೇ ದೂರದ ಅಸ್ಸಾಂನಿಂದ ಬರುತ್ತಿದ್ದಾರೆಂದು ದ ಕೂಡಲೆ ತಮ್ಮೆಲ್ಲ ಇತರೆ ಕಾರ್ಯಕ್ರಮಗಳನ್ನು ಹಾಜರಾದರು.

ಣು ಮಂತ್ರಿ ಅಭಯಚಂದ್ರ ಜೈನರು ಅದೆಲ್ಲೋ 'ಮೇಶ ಎನಿಸುವಲ್ಲೇ ಬ್ಯುಸಿ ಆಗಿದ್ದರು. ಸಂಸದ ಪ್ರಕಾಶ್ ಹೆಗ್ಗಡೆಯವರು ಹರೀಕೆರೆಯಿಂದ ೂರಿಗೆ ಸರಿಯಾದ ಸಮಯಕ್ಕೆ ಆಗಮಿಸಲು ಮಳೆ ಾಯಿತು. ಬಿ.ಕೆ.ಹರಿಪ್ರಸಾದರನ್ನು ಕಾಂಗ್ರೆಸ್ ಂಡ್ ಮಧ್ಯಪ್ರದೇಶಕ್ಕೆ ಕಳುಹಿಸಿದ್ದರಿಂದ ಅವರು ಬರಲಾಗಲ್ಲ" ಎಂದರು. ಅವತ್ತು ನೂತನ ಶಾಸಕ ದ್ ಮಧ್ವರಾಜ್ ಅವರಿಗೆ ಉಡುಪಿಯಲ್ಲಿ 'ತುಂಬಾ ' ಇತ್ತು. ಆದರೂ ಹಿರಿಯ ಸಚಿವ ರಮಾನಾಥ್ ಸಕ ಮೊಯುದ್ದೀನ್ ಬಾವಾ, ಶಕುಂತಲಾ ಶೆಟ್ಟಿ ಇತರರು ಭಾಗವಹಿಸಿದ್ದರು.

ವತ್ತಿನ ಸಭೆಯಲ್ಲಿ ನಮ್ಮ ಕರ್ನಾಟಕ ಕೋಮು ರ್ದ ವೇದಿಕೆಯು ರಾಜ್ಯದ ಜನರ ಪರವಾಗಿ ದ ಹಕ್ಕೊತ್ತಾಯಗಳು ಹೀಗಿದ್ದವು:

• ಕಾಂಗ್ರೆಸ್ ಸರ್ಕಾರ ತನ್ನ ಜನವಿರೋಧಿ ನವಉದಾರೀಕರಣ ನೀತಿಗಳನ್ನು ಕೈಬಿಟ್ಟು ಮತ್ತೆ ಸಮಾಜವಾದದತ್ತ ಹೊರಳಬೇಕೆಂಬುದು ನಮ್ಮಲ್ಲನೇಕರ ಅಪೇಕ್ಷೆಯಾದರೂ ಅದೊಂದು ಪ್ರತ್ಯೇಕ ಸೈದ್ಧಾಂತಿಕ ಹೋರಾಟದ ವಿಚಾರ. ಆದಾಗ್ಯೂ ಸದ್ಯದ ಪರಿಸ್ಥಿತಿಯಲ್ಲಿ ಸರ್ಕಾರಿ ಇಲಾಖೆಗಳ ಕೋಮುವಾದಿ ನೀತಿಗಳು, ಕಾರ್ಯವೈಖರಿ ಮತ್ತು ಅಧಿಕಾರಿಗಳ ಧೋರಣೆ ಹಾಗೂ ವರ್ತನೆಗಳಲ್ಲಿ ಮೂಲಭೂತ ಪರಿವರ್ತನೆ ತರುವ ಮೂಲಕ ರೈತರು, ದಲಿತರು, ಹಿಂದುಳಿದವರು, ಬಡವರು, ಅಲ್ಪಸಂಖ್ಯಾತರು, ಮಹಿಳೆಯರು, ಮಕ್ಕಳು ಮುಂತಾದ ಶೋಷಿತ ಜನವರ್ಗಗಳ ಸಾಂವಿಧಾನಿಕ ಹಕ್ಕುಗಳನ್ನು ಖಾತರಿಪಡಿಸಿ ಅವರಿಗೆ ನ್ಯಾಯ ದೊರಕಿಸಿಕೊಡಬೇಕು.

• ಸಂಘಪರಿವಾರ ರಾಜ್ಯಾದ್ಯಂತ ವ್ಯಾಪಕವಾಗಿ ಹರಡಿಸಿರುವ ಕೋಮು ವಿಷವನ್ನು ಹೀರಿ ತೆಗೆಯುವ ಕಾರ್ಯವನ್ನು ಸರ್ಕಾರ ತತ್‌ಕ್ಷಣದಿಂದ ಕೈಗೆತ್ತಿಕೊಳ್ಳಬೇಕು. ಮೊಟ್ಟಮೊದಲಿಗೆ ಎಲ್ಲಾ ಕೇಸರೀಮಯವಾಗಿರುವ ಕ್ಷೇತ್ರಗಳ ಶುದ್ಧೀಕರಣ ಆಗಬೇಕು. ಇದಾಗಬೇಕಿದ್ದರೆ ಬ್ಯೂರೋಕ್ರಸಿ, ವಿಶ್ವವಿದ್ಯಾಲಯಗಳ ಸೆನೆಟುಗಳು, ಪೊಲೀಸ್, ಗುಪ್ತದಳ ಇವೇ ಮುಂತಾದ ಆಯಕಟ್ಟಿನ ಖಾತೆ/ಇಲಾಖೆ/ಸಂಸ್ಥೆಗಳೊಳಗೆ ನುಸುಳಿರುವ ಸಂಘಪರಿವಾರ ನಿಷ್ಠರನ್ನು ಗುರುತಿಸಿ ಹೊರಹಾಕಬೇಕು.

• ಚುನಾವಣೋತ್ತರದಲ್ಲಿ ರಾಜ್ಯದಲ್ಲಿ - ಅದರಲ್ಲೂ ವಿಶೇಷವಾಗಿ ಕರಾವಳಿಯಲ್ಲಿ - ಭಯ, ಆತಂಕದ ದಿನಗಳು ಕೊನೆಗೊಳ್ಳುವ ಬದಲು ಇನ್ನಷ್ಟು ಹೆಚ್ಚಾಗಲಿವೆಯೇನೋ ಎಂಬ ಅನುಮಾನಗಳು ಕಾಡಲಾರಂಭಿಸಿವೆ. ಯಾಕೆಂದರೆ ಈಗಾಗಲೆ ಉಡುಪಿ ಜಿಲ್ಲೆಯ ಕಾಪು, ಉಚ್ಚಿಲ, ಕಾರ್ಕಳ ಮತ್ತು ದಕ್ಷಿಣ ಕನ್ನಡದ ಉಳ್ಳಾಲ, ಮಂಗಳೂರುಗಳಿಂದ ಹಲವಾರು ಕೋಮುವಾರು ಘಟನೆಗಳು ವರದಿಯಾಗಿವೆ. ಆದುದರಿಂದ ಹೊಸ ಸರ್ಕಾರ ಕೂಡಲೆ ಕಾರ್ಯಪ್ರವೃತ್ತವಾಗಿ ಶಾಂತಿ, ಸೌಹಾರ್ದ ಕಾಪಾಡುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು. ಕಾನೂನು, ಸುವ್ಯವಸ್ಥೆಯ ಹೊಣೆಗಾರಿಕೆ ಹೊತ್ತಿರುವ ಇಲಾಖೆಗಳಿಗೆ ಸ್ಪಷ್ಟ ಸೂಚನೆ ನೀಡಿ ಅವು ಜನಪರವಾಗಿ, ಸಂವಿಧಾನಪರವಾಗಿ ನಡೆದುಕೊಳ್ಳುವಂತೆ ಹಾಗೂ ದುಷ್ಕರ್ಮಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಠಿಣ ಕಾನೂನು ಕ್ರಮ ಜರುಗಿಸುವಂತೆ ಆದೇಶಿಸಬೇಕು.


• ಸಂಘಪರಿವಾರದ ಪುಂಡುಪೋಕರಿಗಳು ಕಾಯ್ದೆ ಕಾನೂನುಗಳ ಭಯವೇ ಇಲ್ಲದೆ ಕರಾವಳಿಯ ಉದ್ದಗಲಕ್ಕೂ ಹರಿಯಬಿಟ್ಟಿರುವ (ಅ) ನೈತಿಕ ಪೊಲೀಸ್‌ಗಿರಿ, ಜಾನುವಾರು ಮಾರಾಟಗಾರರಿಗೆ ಹಾಗೂ ಸಾಗಾಟಗಾರರಿಗೆ ಕಿರುಕುಳ, 'ಲವ್ ಜಿಹಾದ್' ಮತ್ತು 'ಮತಾಂತರ'ದ ಹೆಸರಿನಲ್ಲಿ ಎಸಗಲಾಗುತ್ತಿರುವ ದೌರ್ಜನ್ಯ ಇವೇ ಮೊದಲಾದ ಸಂವಿಧಾನಬಾಹಿರ ಕೃತ್ಯಗಳನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಅಮಾಯಕ ಯುವಜನರು, ವ್ಯಾಪಾರಿಗಳು, ಮುಸ್ಲಿಂ ಯುವಕರು, ಪಾಸ್ಟರ್‌ಗಳು, ಕ್ರೈಸ್ತ ಅನುಯಾಯಿಗಳು ಮುಂತಾದವರ ವಿರುದ್ಧ ದಾಖಲಿಸಲಾಗಿರುವ ನೂರಾರು ಸುಳ್ಳು ಪ್ರಕರಣಗಳನ್ನು ಹಿಂಪಡೆಯಬೇಕು/ಮರುತನಿಖೆಗೆ ಆದೇಶಿಸಬೇಕು. ಉದಾಹರಣೆಗೆ ಆದಿ ಉಡುಪಿ, ಕಂಬಾಲಪಲ್ಲಿ ಇತ್ಯಾದಿ ಪ್ರಕರಣಗಳನ್ನು ಪುನರ್ ಪರಿಶೀಲಿಸಿ, ಮರುತನಿಖೆ ನಡೆಸಿ ನ್ಯಾಯ ಒದಗಿಸಬೇಕು.

• ಹಿಂದಿನ ಬಿಜೆಪಿ ಸರ್ಕಾರ ಜಾರಿಗೊಳಿಸಲು ಬಯಸಿದ್ದ ಜಾನುವಾರು ಹತ್ಯಾ ನಿಷೇಧ ವಿಧೇಯಕವು ಉದ್ದೇಶದಲ್ಲಿ ಅಲ್ಪಸಂಖ್ಯಾತ, ಹಿಂದುಳಿದ ಹಾಗೂ ದಲಿತ ವರ್ಗಗಳ ವಿರೋಧಿಯಾಗಿದ್ದು ಪರಿಣಾಮದಲ್ಲಿ ರೈತ ವಿರೋಧಿಯೂ ಆಗಿದೆ. ಆದುದರಿಂದ ಹೊಸ ಸರ್ಕಾರ ಈಗ ಈ ವಿಧೇಯಕವನ್ನು ಹಿಂಪಡೆದುಕೊಳ್ಳಬೇಕು ಮತ್ತು 1964ರ ಕಾಯ್ದೆಯನ್ನೇ ಜಾರಿಗೆ ತರಬೇಕು; ಆದರೆ ಅದರಲ್ಲಿರುವಂತಹ ಅಲ್ಪಸಂಖ್ಯಾತರು ಮತ್ತು ರೈತರಿಗೆ ಮಾರಕವಾದ ಕೆಲವು ಅಂಶಗಳನ್ನು ಕೈಬಿಡಬೇಕು. ಸರ್ಕಾರ ಹೆಚ್ಚೆಚ್ಚು ಆಧುನಿಕ ವಧಾಗೃಹಗಳನ್ನು ತೆರೆಯಬೇಕು ಮತ್ತು ಜಾನುವಾರು ಸಾಗಾಟಕ್ಕಾಗಿ ಅಧಿಕೃತ ಸರ್ಕಾರಿ ವಾಹನಗಳನ್ನು ಸಬ್ಸಿಡಿ ದರಗಳಲ್ಲಿ ಒದಗಿಸಬೇಕು.

• ಕೇಸರೀಕರಣಕ್ಕೊಳಗಾದ, ಕಳಪೆ ಗುಣಮಟ್ಟದ ಪ್ರಸಕ್ತ 5, 6, 8, 9ನೆ ತರಗತಿಯ ಪಠ್ಯಪುಸ್ತಕಗಳನ್ನು ಹಿಂದೆಗೆದುಕೊಳ್ಳಬೇಕು. ಎಲ್ಲಾ ಪಠ್ಯಪುಸ್ತಕ ಸಮಿತಿಗಳನ್ನು ಪುನರ್‌ರಚಿಸಿ ಅವುಗಳಿಗೆ ಅತ್ಯುತ್ತಮ ಶಿಕ್ಷಣತಜ್ಞರನ್ನು ನೇಮಿಸಬೇಕು. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 (NCF 2005) ಇದಕ್ಕೆ ಅನುಗುಣವಾದ ಉತ್ತಮ ಪಠ್ಯಪುಸ್ತಕಗಳನ್ನು ರಚಿಸುವ ಕಾರ್ಯವನ್ನು ಅತ್ಯಂತ ತುರ್ತಾಗಿ ಕೈಗೆತ್ತಿಕೊಳ್ಳಬೇಕು. ಇದರ ಜೊತೆಜೊತೆಗೆ ಎಲ್ಲಾ ಖಾಸಗಿ ಮತ್ತು ಸರ್ಕಾರಿ ಶಾಲೆಗಳ ಶಿಕ್ಷಕರಿಗೂ ಸೂಕ್ತ ತರಬೇತಿ ಒದಗಿಸುವ ಕಾರ್ಯ ಆಗಬೇಕು.

• ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಕೊಠಡಿ, ಸಭಾಂಗಣ, ಆವರಣ, ಮೈದಾನಗಳನ್ನು ಆರೆಸ್ಸೆಸ್ ಸಂಘಟನೆಯ ಕಾರ್ಯಕ್ರಮಗಳಿಗೆ ನೀಡುವುದನ್ನು

>>>6



ಭಟ್ಕಳದ ಬೇನೆಗಳಿಗೆ ಮದ್ದಾಗುವನಾ ಎಮ್ಮೆಲ್ಲೆ ವೈದ್ಯ?!

ವೈದ್ಯ ಗೆದ್ದಿದ್ದೇ ತಡ, ಓವರ್ ಸ್ಪೀಡ್‌ನಲ್ಲಿ ಎಮ್ಮೆಲ್ಲೆಗಿರಿ ಅಧಿಕಾರ ಚಲಾಯಿಸಲಾರಂಭಿಸಿ ಬಿಟ್ಟಿದ್ದಾನೆ. ಅಧಿಕಾರಿಗಳ ಸಭೆ ಮೇಲೆ ಸಭೆ ಕರೆದು ಆರ್ಭಟಿಸತೊಡಗಿದ್ದಾನೆ. ತಾನೊಬ್ಬ ಮಹಾನ್ ಜನ ಸೇವಾದುರಂಧರನೆಂಬಂತೆ ಪೋಸು ಕೊಡುತ್ತಿದ್ದಾನೆ. ಆದರವನ ಮಾತುಗಾರಿಕೆಯಲ್ಲಿ ಬರೀ ಹುಂಬತನ-ಪೆದ್ದುತನಗಳೇ ತುಂಬಿಕೊಂಡಿವೆ. ಎಡವಿ ಬೀಳುವ ಮೊದಲೇ ಶಾಸಕ ವೈದ್ಯ ಜನಪರವಾ ಚಿಂತಿಸುವುದು ಕಲಿಯಬೇಕಿದೆ. ಹೊನ್ನಾವರ-ಭಟ್ಕಳ ಕ್ಷೇತ್ರದ ಭಿನ್ನ-ವಿಭಿನ್ನ ಸಮಸ್ಯೆಗಳನ್ನು ಸೀರಿಯಸ್ ಆಗಿ ಅಧ್ಯಯನ ಮಾಡಿ ಪರಿಹಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ.

ಉತ್ತರ ಕನ್ನಡದ ಭಟ್ಕಳ ಕೋಮು ಸೂಕ್ಷ್ಮ ಪ್ರದೇಶವಷ್ಟೇ ಅಲ್ಲ, ಜಾತಿ ಜಗಳದ ಜಗಲಿಯೂ ಹೌದು. ಈ ಜಾತಿ ಜಿದ್ದಾಜಿದ್ದಿಯನ್ನೇ ಬಂಡವಾಳ ಮಾಡಿಕೊಂಡು, ಜತೆಗೊಂದಿಷ್ಟು ಕಳ್ಳ ಕಾಸನ್ನೂ ಹರಿಸಿ ಶಾಸಕನಾದವನು ಮಂಕಾಳು ವೈದ್ಯನೆಂಬ 'ಸಸ್ಪೆನ್ಸ್' ಪುಢಾರಿ. ಹಲವು ಸಮಸ್ಯೆ-ಸಂಕಷ್ಟದಲ್ಲಿ ಬಿದ್ದು ಒದ್ದಾಡುತ್ತಿರುವ ಭಟ್ಕಳ-ಹೊನ್ನಾವರ ವಿಧಾನಸಭಾ ಕ್ಷೇತ್ರದ ಪಕ್ಷೇತರ ಶಾಸಕನಾಗಿ ಆಯ್ಕೆಯಾಗುವುದೆಂದರೆ ಸುಮ್ಮನೆ ಮಾತಲ್ಲ, ಅದಕ್ಕಂಥ ಸಂಪನ್ಮೂಲ-ಸಂಚುಗಾರಿಕೆ-ಸಮಯಸಾಧಕತನ ಬೇಕು; ಅಥವಾ ಜನಪರ ಹೋರಾಟ, ಸೈದ್ಧಾಂತಿಕ ಬದ್ಧತೆ-ಸಮಸ್ಯೆಗಳ ಗ್ರಹಿಸಿ ಪರಿಹರಿಸುವ ಸೂಕ್ಷ್ಮತೆಯ ನಾಯಕತ್ವ ಗುಣ-ಧರ್ಮ ಬೇಕು.

ಇದರಲ್ಲಿ ಮೊದಲನೇ ಕೆಟಗರಿಗೆ ಎಮ್ಮೆಲ್ಲೆ ವೈದ್ಯ ಸೇರಿರುವಾತ. ಸರಿಸುಮಾರು ಒಂದು ದಶಕದ ಹಿಂದೆ ಮುಂಬೈ ಮಹಾನಗರಿಯಿಂದ ಇದ್ದಕ್ಕಿದ್ದಂತೆ ಭಟ್ಕಳಕ್ಕೆ ವೈದ್ಯ ವಕ್ಕರಿಸಿದಾಗ ಆತ ಅಡ್ರೆಸ್ಸೇ ಇಲ್ಲದ ಅಬ್ಬೇಪಾರಿಯಂತಿದ್ದ. ಹೊರನೋಟಕ್ಕೆ ಮತ್ಸ್ಯೋದ್ಯಮಿಯಂತೆ ಪೋಸು ಕೊಡುತ್ತಿದ್ದ ಈ ಮೀನುಗಾರ (ಮೊಗೇರ) ಭೂಪನ ತರಹೇವಾರಿ ನಿಗೂಢ ದಂಧೆಗಳ ಬಗ್ಗೆ ಬಗೆಬಗೆಯ ಸುದ್ದಿಗಳು ಎದ್ದಿದ್ದವು. ಕಳ್ಳಭಟ್ಟಿಯಿಂದ ಹಿಡಿದು ಕಪ್ಪು ಡೀಸೆಲ್ ಡೀಲಿಂಗ್ ಥರದ ದೋ ನಂಬರ್ ಬಿಸಿನೆಸ್‌ಗಳ ಈ ಸರದಾರ ಒಂಥರಾ 'ಡಾನ್' ಇಮೇಜ್ ಬೆಳೆಸಿಕೊಂಡು ಬಿಟ್ಟಿದ್ದ. ಈತನ ಸುತ್ತಲೂ ಸದಾ 'ಸನ್ನದ್ಧ' ಟೀಮೊಂದು ಇರುತ್ತಿತ್ತು.

ವೈದ್ಯ ಯಾವಾಗ ಭಟ್ಕಳದ ಪ್ರತಿಷ್ಠಿತ ಜನತಾ ಕೋ-ಆಪರೇಟಿವ್ ಬ್ಯಾಂಕಿನ ಆಡಳಿತ ಮಂಡಳಿ ಎಲೆಕ್ಷನ್‌ಗೆ ನಿಂತು ಗೆದ್ದನೋ, ಆಗವನ 'ಸಾರ್ವಜನಿಕ ಮುಖ'ದ ಅನಾವರಣ ಆಯ್ತು, ವೈದ್ಯನ ಜಾತಕ ಜಾಲಾಡಲು ಜನ ಬಿದ್ದರು. ಜನತಾ ಬ್ಯಾಂಕಿನ ಡೈರೆಕ್ಟರ್ ಆಗುತ್ತಲೇ ದುಡ್ಡಿನ-ದೌಲತ್ತಿನ 'ಭೂಗತ' ರಾಜಕಾರಣ ಶುರು ಹಚ್ಚಿಕೊಂಡ ವೈದ್ಯ ಜಿಲ್ಲಾ ಪಂಚಾಯ್ತಿ ಮೆಂಬರಿಕೆಯ ಮೇಲೆ ಕಣ್ಣಿಟ್ಟು ಕಾರ್ಯಾಚರಣೆಗೆ ಇಳಿದ. ಕಾಂಗ್ರೆಸ್ ಟಿಕೆಟ್ ಸಿಗದಿದ್ದಾಗ ಮುರುಡೇಶ್ವರ ಕ್ಷೇತ್ರದಲ್ಲಿ ಪಕ್ಷೇತರನಾಗಿ ನಿಂತು ಗೆದ್ದೇ ಬಿಟ್ಟ. ಗೆದ್ದವನೇ 'ದೊರೆ' ದೇಶಪಾಂಡೆ ಮೂಲಕ ಕಾಂಗ್ರೆಸ್ ಸೇರಿಕೊಂಡ ವೈದ್ಯ ಅಲ್ಪಮತದ ಆ ಪಾರ್ಟಿಗೆ ಜಿಪಂನಲ್ಲಿ ಆಧಾರವಾಗಿದ್ದ ದೇಶಪಾಂಡೆಗೇ ಬ್ಲಾಕ್‌ಮೇಲ್ ಮಾಡಿ ಜಿಪಂ ಉಪಾಧ್ಯಕ್ಷನೂ ಆಗಿಹೋದ!!

ಆಗವನ 'ಕೀರ್ತಿ' ಜಿಲ್ಲಾ ಮಟ್ಟಕ್ಕೇರಿತು. ಇದರ ಬೆನ್ನಿಗೇ ಡೀಸೆಲ್ ಕಳ್ಳ ಸಾಗಾಣಿಕೆ ಮಾಫಿಯಾದಲ್ಲಿದ್ದ ಆರೋಪದಲ್ಲಿ ಬರೋಬ್ಬರಿ ಒಂದು ತಿಂಗಳು ಜೈಲಿನಲ್ಲಿ ಒಣ ಮೀನ್ ಪಳ್ದಿ-ಕೊಜನಕ್ಕಿ ಅನ್ನ ಉಂಡು ಬಂದ. ಆಗಾತನಿಗೆ ಕುಖ್ಯಾತಿ ಭರ್ಜರಿಯಾಗಿ ಬಂತು!! ಜಿಪಂ ಸದಸ್ಯನಾದ ಕೆಲವೇ ದಿನದಲ್ಲಿ ಬ್ಯಾಂಕ್ ಉದ್ಯೋಗಿಯಾಗಿದ್ದ ವೈದ್ಯನ ಧರ್ಮಪತ್ನಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡರು. ಇದು ವೈದ್ಯನ 'ರಂಗೀಲಾ' ರಗಳೆಗಳನ್ನು ಪರಿಚಯಿಸಿತ್ತು. ಭಟ್ಕಳದ ಶಾಸಕನಾಗಿದ್ದ 'ಪಿರ್ಕೇಸ್' ಜೆ.ಡಿ. ನಾಯ್ಕನೊಂದಿಗೆ ನಡುಬೀದಿಯಲ್ಲೇ ಕಿತ್ತಾಡುತ್ತಿದ್ದ ವೈದ್ಯ ಜಿಪಂನ ಮಾಸಿಕ ಮೀಟಿಂಗ್‌ಗಳಲ್ಲೂ ಸುಖಾಸುಮ್ಮನೆ ಕಾಲು ಕೆರೆದು ಕಂಡ-ಕಂಡವರ ಮೇಲೆ ಜಗಳಕ್ಕೆ ಬೀಳುತ್ತಿದ್ದ. ಇದು ಕಾಂಗ್ರೆಸ್‌ನಲ್ಲಿ ಆತನನ್ನು ಮೂಲೆಗುಂಪುಮಾಡಿತ್ತು. ಹೀಗಾಗಿ ಕಳೆದ ಬಾರಿಯ ಜಿಪಂ ಎಲೆಕ್ಷನ್‌ನಲ್ಲೂ ಆತನಿಗೆ ಕಾಂಗ್ರೆಸ್ ಟಿಕೆಟ್ ಸಿಗಲಿಲ್ಲ.

ಮತ್ತೆ ವೈದ್ಯ ಪಕ್ಷೇತರನಾಗೇ ಅಖಾಡಕ್ಕೆ ಇಳಿದ. ಕ್ಷೇತ್ರ ಬದಲಿಸಿ ಜಾಲಿಗೆ ಹೋಗಿ ನಿಂತಿದ್ದ. ಅಲ್ಲೂ ಹಣ ನೀರಿನಂತೆ ಹರಿಸಿ ಪುಂಡರ ದಂಡು ಫೀಲ್ಡಿಗೆ ಇಳಿಸಿ ಗೆದ್ದಿದ್ದ. ಎರಡನೇ ಬಾರಿ ಪಕ್ಷೇತರನಾಗಿ ಜಿಪಂಗೆ ಗೆದ್ದ ಬಳಿಕ ಆತನ ಗುರಿ ಶಾಸಕ ಸ್ಥಾನ ಆಗಿಹೋಯ್ತು. ಕಾಂಗ್ರೆಸ್ ರಾಜಕಾರಣದಲ್ಲಿ ಬೆರೆತುಕೊಂಡಿದ್ದ ವೈದ್ಯ ಮತ್ತು ಶಾಸಕ ಜೆ.ಡಿ. ನಾಯ್ಕ ಹಾವು-ಮುಂಗುಸಿಯಂತಾಗಿಹೋದರು. ಕಾಂಗ್ರೆಸ್‌ನ ಅಸೆಂಬ್ಲಿ ಟಿಕೆಟ್‌ಗೆ ಗಾಳ ಹಾಕಿದ್ದ ವೈದ್ಯ ಕ್ಷೇತ್ರದಾದ್ಯಂತ ದಾನ-ಧರ್ಮ, ಮದುವೆ-ಕ್ರೀಡಾಕೂಟ-ಮುಂಜಿ- ಸೋಬನಕ್ಕೆಲ್ಲ ಹಣ ಕೊಡತೊಡಗಿದ. ಜತೆಜತೆಯಾಗಿ ಜಾತಿರಾಜಕಾರಣ ತುಂಬ ನಾಜೂಕಾಗಿ ಮಾಡತೊಡಗಿದ್ದ. ಭಟ್ಕಳ-ಹೊನ್ನಾವರ ಕ್ಷೇತ್ರದಲ್ಲಿದ್ದ 'ಆ್ಯಂಟಿ ನಾಮಧಾರಿ' ಭಾವನೆಗಳನ್ನು ಕೆರಳಿಸಿದ. ದೀವರ (ಈಡಿಗರ) ಏಕಸಾಮ್ಯದ ರಾಜಕಾರಣ ಒಡೆಯಲು ತನ್ನನ್ನು ಬೆಂಬಲಿಸಿ ಎಂದು ಪಿಸುಗುಟ್ಟಿದ.

ಕಾಂಗ್ರೆಸ್‌ನ ಅಸೆಂಬ್ಲಿ ಟಿಕೆಟ್‌ಗೆ ವೈದ್ಯ ಶತಾಯ-ಗತಾಯ ಪ್ರಯತ್ನಿಸಿದ್ದ. ಹೇಳಿಕೇಳಿ ನಾಮಧಾರಿ ಮೀಸಲು ಕ್ಷೇತ್ರವಾದ ಭಟ್ಕಳದಲ್ಲಿ ಮೊಗೇರ ಸಮುದಾಯದ ವೈದ್ಯನಿಗೆ ಕಾಂಗ್ರೆಸ್ ಟಿಕೆಟ್ ಕೊಡುವುದಾದರೂ ಹೇಗೆ? ಎಲ್ಲ ಪಾರ್ಟಿಯವರೂ ಬಹುಸಂಖ್ಯಾತ ದೀವರನ್ನೇ ದೃಷ್ಟಿಯಲ್ಲಿಟ್ಟುಕೊಂಡು ಈ ಕ್ಷೇತ್ರದಲ್ಲಿ ಟಿಕೆಟ್ ಕೊಡುವುದು ಸಂಪ್ರದಾಯದಂತಾಗಿ ಹೋಗಿದೆ. ಅದರಲ್ಲೂ ಕಾಂಗ್ರೆಸ್‌ನ ಸಿಟ್ಟಿಂಗ್ ಎಮ್ಮೆಲ್ಲೆ ಬೇರೆ ಈ ಕ್ಷೇತ್ರದಲ್ಲಿದ್ದ. ಹೀಗಾಗಿ ತನಗೆ ಕಾಂಗ್ರೆಸ್ ಟಿಕೆಟ್ ಸಿಗದಿಲ್ಲವೆಂಬುದು ವೈದ್ಯನಿಗೂ ಗೊತ್ತಿತ್ತು. ಹಾಗಾಗಿ ಆತ ಹಲವು ದಿನದಿಂದ ಹಣ-ಜಾತಿಯ ಗೊಬ್ಬರ-ಬೀಜ ಹಾಕಿ ಕ್ಷೇತ್ರ ಹದಗೊಳಿಸಿಕೊಳ್ಳತೊಡಗಿದ್ದ. ಪಕ್ಷೇತರನಾಗಿ ದೊಡ್ಡ ಅಂತರದಲ್ಲಿ ಗೆದ್ದೂ ಬಿಟ್ಟ. ನಾಮಧಾರಿ ವಿರೋಧಿ ಟ್ರಂಪ್ ಕಾರ್ಡ್ ಎಸೆದು ವೈದ್ಯ ಸಫಲನಾಗಿದ್ದು ಇಡೀ ಜಿಲ್ಲೆಯಲ್ಲಿ ಅಚ್ಚರಿಯ ಅಲೆಗಳನ್ನೆಬ್ಬಿಸಿ ಬಿಟ್ಟಿದೆ.

ವೈದ್ಯ ಗೆದ್ದಿದ್ದೇ ತಡ, ಓವರ್ ಸ್ಪೀಡ್‌ನಲ್ಲಿ ಎಮ್ಮೆಲ್ಲೆಗಿರಿ ಅಧಿಕಾರ ಚಲಾಯಿಸಲಾರಂಭಿಸಿ ಬಿಟ್ಟಿದ್ದಾನೆ. ಅಧಿಕಾರಿಗಳ ಸಭೆ ಮೇಲೆ ಸಭೆ ಕರೆದು ಆರ್ಭಟಿಸತೊಡಗಿದ್ದಾನೆ. ತಾನೊಬ್ಬ ಮಹಾನ್ ಜನ ಸೇವಾದುರಂಧರನೆಂಬಂತೆ ಪೋಸು ಕೊಡುತ್ತಿದ್ದಾನೆ. ಆದರವನ ಮಾತುಗಾರಿಕೆಯಲ್ಲಿ ಬರೀ ಹುಂಬತನ-ಪೆದ್ದುತನಗಳೇ ತುಂಬಿಕೊಂಡಿವೆ. ಕ್ಷೇತ್ರದ ಕಷ್ಟ-ಸುಖದ ಸ್ಪಷ್ಟ ಅರಿವೇ ವೈದ್ಯನಿಗಿಲ್ಲ; ಶಾಸಕಗಿರಿಯ ಒಣ ರುಬಾಬು ತೋರಿಸಿಕೊಳ್ಳುವ ತೆವಲೇ ಮುಖ್ಯ ಎಂಬಂತಿದೆ ಆತನ ನಡೆ-ನುಡಿ-ನರ್ತನ !! ವೈದ್ಯನ ಅವಸರ-ಶಾಸಕತ್ವದ ಠಾಕು-ಠೀಕು ಆತನನ್ನು ಗೆಲ್ಲಿಸಿದವರನ್ನೇ ಚಿಂತೆಗೀಡು ಮಾಡುತ್ತಿದೆ. ಎಡವಿ ಬೀಳುವ ಮೊದಲೇ ಶಾಸಕ ವೈದ್ಯ ಜನಪರವಾಗಿ ಚಿಂತಿಸುವುದು ಕಲಿಯಬೇಕಿದೆ. ಹೊನ್ನಾವರ-ಭಟ್ಕಳ ಕ್ಷೇತ್ರದ ಭಿನ್ನ-ವಿಭಿನ್ನ ಸಮಸ್ಯೆಗಳನ್ನು ಸೀರಿಯಸ್ ಆಗಿ ಅಧ್ಯಯನ ಮಾಡಿ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ. ಶಾಸಕತ್ವದ ಫ್ಲಾಪ್ ಶೋಗಳನ್ನು ಮಾಡೋದು ಬಿಡಬೇಕಿದೆ. ಹಾಗಂತ ಭಟ್ಕಳ ಕ್ಷೇತ್ರದ ಪ್ರಜ್ಞಾವಂತರೇ ಮಾತಾಡಿಕೊಳ್ಳುತ್ತಿದ್ದಾರೆ.

ಈ ಬಾರಿಯ ಭಟ್ಕಳದ ಎಲೆಕ್ಷನ್‌ನಲ್ಲಿ 'ನಾನ್ ನಾಮಧಾರಿ' ಎಂಬ ಫ್ಯಾಕ್ಟರ್ ಚಲಾವಣೆಗೆ ಬಂದಿತ್ತು. ಎಸ್ಸೆಂ ಯಾಹ್ಯಾ ನಂತರ ಈ ಕ್ಷೇತ್ರ ಸತತವಾಗಿ ದೀವರ (ನಾಮಧಾರಿ) ವಶದಲ್ಲಿತ್ತು. ಬಿಜೆಪಿಯ ಶಿವಳ್ಳಿ ಬ್ರಾಹ್ಮಣ ಡಾ. ಚಿತ್ತರಂಜನ್ ಒಂದು ವರ್ಷವೂ ಶಾಸಕನಾಗಿರಲಿಲ್ಲ. ಈ ಅವಧಿ ಬಿಟ್ಟರೆ ಇಲ್ಲಿ ಆಡಿದ್ದು ದೀವರ ಧೀರರೇ. ಕ್ಷೇತ್ರದ ಬಹುಸಂಖ್ಯಾತರೂ ದೀವರೆ. ಅದ್ಯಾಕೋ ಈ ದೀವರ ಕೈಯಿಂದ ಭಟ್ಕಳ ತಪ್ಪಿಸಬೇಕೆಂಬ ಹಠ ಕ್ಷೇತ್ರದ ಇತರರಲ್ಲಿ ಬಂದಿತ್ತು. ಇದಕ್ಕೆ ಹವ್ಯಕರ ಗುರು ರಾಘವೇಶ್ವರ ಭಾರತಿಯಂತವರು- ಆತನ ಬ್ರಾಹ್ಮಣ ಬಂಧುಗಳು ಒಳಗೊಳಗೇ ಪ್ರಚೋದನೆ ನೀಡಿದ್ದರು. ರಗಳೆ ರಾಘವನ ನಾನ್ ಬ್ರಾಹ್ಮಿನ್ ಶಿಷ್ಯೋತ್ತಮ ಮಂಕಾಳು ವೈದ್ಯ ನಾಮಧಾರಿ ವಿರೋಧಿಗಳಿಗೆ ಸೂಟೇಬಲ್ ಆಗಿ ಕಂಡಿದ್ದ.

ಈ ತಂತ್ರಗಾರಿಕೆಗೆ ಬಳಕೆಯಾಗಿದ್ದು 'ಮೀನುಗಾರ' ಎಂಬ ಶಬ್ದ. ಮೀನುಗಾರ ಸಮುದಾಯದ ಮಂಕಾಳು ವೈದ್ಯ ಸಮಸ್ಯೆ ಪರಿಹಾರಕ್ಕೆ ಸಮರ್ಥ ಮಾರ್ಗ ಎಂಬಂತೆ ಎಲೆಕ್ಷನ್ ಅಖಾಡ ಸಿದ್ಧಗೊಂಡಿತ್ತು. ಸ್ವಯಂಘೋಷಿತ ಮೀನುಗಾರ ಮುಖಂಡ ಮಂಕಾಳು ವೈದ್ಯನ ಎದುರು ತನ್ನದೇ ರಕ್ತ ಬಾಂಧವರ ಸಮಸ್ಯೆ ಪರಿಹರಿಸುವ ಸವಾಲು ನಿಂತಿದೆ! ಭಟ್ಕಳದ ಬೆಳಕೆಯಿಂದ ಹೊನ್ನಾವರದ ಕಾಸರಗೋಡು ತುದಿ ತನಕದ ಬಡ ಬೆಸ್ತರು ಸಣ್ಣ ಸೂರು ಕಟ್ಟಿಕೊಳ್ಳಲು ಪರದಾಡುತ್ತಿದ್ದಾರೆ. ಸಿಆರ್‌ಝಡ್ ನಿಯಮ ಈ ಕಡಲ ಮಕ್ಕಳಿಗೆ ತುತ್ತಾಗಿದ್ದರೆ, ಬಲಾಢ್ಯರ ಬಂಗಲೆ-ಐಶಾರಾಮಿ ಹೋಟೆಲು-ರೆಸಾರ್ಟ್‌ಗಳು ಕಡಲ ತಡಿಯಲ್ಲೇ ದೈತ್ಯಾಕಾರವಾಗಿ ತಲೆ ಎತ್ತಿ ನಿಂತಿವೆ. ಸಮುದ್ರ ತೀರದಲ್ಲಿ ಕಾಣುವ ಮತ್ತೊಂದು ಭಯಾನಕ ಸಮಸ್ಯೆ ಎಂದರೆ ಕಡಲ ಕೊರೆತ. ಇದು ರಾಜಕಾರಣಿ-ಗುತ್ತಿಗೆದಾರ-ಇಂಜಿನಿಯರ್‌ಗಳ ಲೂಟಿ ಯೋಜನೆಯಂತಾಗಿ ಹೋಗಿದೆ. ಮಳೆಗಾಲದಲ್ಲಿ ಕೋಟ್ಯಂತರ ರೂ.ಗಳ ಕಲ್ಲು ಸಮುದ್ರಕ್ಕೆ ಹಾಕೋದು ಬಿಟ್ಟರೆ ಶಾಶ್ವತ ಪರಿಹಾರ ಸಾಧ್ಯವೇ ಆಗಿಲ್ಲ. ಹಾಗೆಯೇ ಮೀನುಗಾರರನ್ನು ಮಧ್ಯವರ್ತಿಗಳು ಶೋಷಿಸುತ್ತಿದ್ದಾರೆ. ಮಂಜುಗಡ್ಡೆ ಕಾರ್ಖಾನೆ, ಶೈತ್ಯಾಗಾರ, ಡೀಸೆಲ್- ಕೆರೋಸಿನ್ ಸಮಸ್ಯೆ ಪರಿಹಾರ ಆಗಬೇಕಾಗಿದೆ. ಇದಕ್ಕೆ ರಾಜಕೀಯ ಇಚ್ಛಾಶಕ್ತಿ ಬೇಕು. ಅದನ್ನು ಶಾಸಕ ವೈದ್ಯ ರೂಢಿಸಿಕೊಳ್ಳಬೇಕಾಗಿದೆ.

ಮೀನುಗಾರರ ಕೇರಿಗಳಲ್ಲಿ ಕುಡಿವ ನೀರಿಗೂ ಬೇಸಿಗೆಯಲ್ಲಿ ತತ್ವಾರ ಆಗುತ್ತದೆ. ತಾಲ್ಲೂಕಿನ ಇತರೆಡೆಗೂ ಈ ಸಮಸ್ಯೆ ಭೂತಾಕಾರವಾಗಿ ಬೆಳೆದು ಒಂದು ದಶಕವೇ ಕಳೆದಿದೆ. ಶರಾಬಿ ಹೊಳೆಯಲ್ಲಿ ಹೂಳು ತುಂಬಿ ಹೊಳೆಯ ಇಕ್ಕೆಲದ ಸಾವಿರಾರು ಬಾವಿಗಳು ಕಲುಷಿತಗೊಂಡಿವೆ. ಸಮುದ್ರಕ್ಕೆ ಹೊಂದಿಕೊಂಡಿರುವ ಬಾವಿಗಳಲ್ಲಿ ಉಪ್ಪು ನೀರು ಬೆರೆತಿದೆ. ಬೇಸಿಗೆಯಲ್ಲಿ ನೀರಿಗಾಗಿ ಈ ಏರಿಯಾದಲ್ಲಿ ಏಳುವ ಹಾಹಾಕಾರ ಹೇಳತೀರದು. ಬಾವಿಗೆಲ್ಲ ಬತ್ತಿ ವಾಹನದಲ್ಲಿ ಬರುವ ನೀರಿನ ಟ್ಯಾಂಕ್‌ಗಳಿಗಾಗಿ ಜನ ಕಾಯಬೇಕಾದ ದಯನೀಯ ಪರಿಸ್ಥಿತಿ ಭಟ್ಕಳದಲ್ಲಿದೆ. ಎಲೆಕ್ಷನ್‌ಗೆ ಒಂದು ತಿಂಗಳಿರುವಾಗ ವೈದ್ಯ ಈ ಸಮಸ್ಯೆ ಪರಿಹರಿಸುವ ಮಾತಾಡಿದ್ದರು. ಆದವರಿಗೆ ಮರೆತಿರಲಿಕ್ಕಿಲ್ಲ ತಾನೇ?

ಭಟ್ಕಳ ಕ್ಷೇತ್ರದಾದ್ಯಂತ ಇರುವ ಜ್ವಲಂತ ಸಮಸ್ಯೆ ಯೆಂದರೆ, ಅರಣ್ಯ ಅತಿಕ್ರಮಣದಾರರದು. ಬಡವರು ಜೀವನಾಧಾರಕ್ಕೆ 20-30 ವರ್ಷದಿಂದ ಅರಣ್ಯದಲ್ಲಿ ತೋಟ-ಗದ್ದೆ ಮಾಡಿಕೊಂಡಿದ್ದಾರೆ. ಉಳಿಯಲೊಂದು ಸೂರು ಕಟ್ಟಿಕೊಂಡಿದ್ದಾರೆ. ಇವರಿಗೆ ಅರಣ್ಯ ಕಾನೂನು ತೋರಿಸಿ ಅಧಿಕಾರಿಗಳು ಕಾಡುತ್ತಿದ್ದಾರೆ. ಬಡವನಿಗೆ ಮಾತ್ರ ಅರಣ್ಯ ಕಾನೂನು ಎಂಬಂತಾಗಿದೆ. ಲ್ಯಾಂಡ್ ಮಾಫಿಯಾದ ದಾದಾಗಿರಿಯಲ್ಲಿ ಬಡ ಅತಿಕ್ರಮಣದಾರರು ಹೈರಾಣಾಗಿ ಹೋಗಿದ್ದಾರೆ. ಆದರೆ ಬಲಾಢ್ಯರು ಅರಣ್ಯ ಜಾಗದಲ್ಲೇ ದೊಡ್ಡ-ದೊಡ್ಡ ಮನೆ-ಮಳಿಗೆ ಕಟ್ಟಿಕೊಂಡು ಭೂ ವ್ಯವಹಾರ ಮಾಡುತ್ತಿದ್ದರೂ ಕೇಳುವವರೇ ಇಲ್ಲ. ಆಳುವ ಶಾಸಕ-ಸಂಸದ-ಮಂತ್ರಿಗಳು ಇವರ ಪರವೇ. ಇದು ಲಾಗಾಯ್ತಿನ ಕರ್ಮ.

ಜನಸಾಮಾನ್ಯರ ಪಾಲಿಗೆ ಭಟ್ಕಳ ಸರ್ಕಾರಿ ಆಸ್ಪತ್ರೆ ಸಾಕ್ಷಾತ್ ನರಕದಂತಾಗಿ ಅದ್ಯಾವುದೋ ಕಾಲವಾಗಿ ಹೋಗಿದೆ. ಯಾವ ಮಂತ್ರಿ-ಶಾಸಕನೂ ಜನರ ಗೋಳು ಹೊಯ್ದುಕೊಳ್ಳುತ್ತಿರುವ ಆಸ್ಪತ್ರೆಯನ್ನು ಗಂಭೀರವಾಗಿ ಪರಿಗಣಿಸಿದ್ದೇ ಇಲ್ಲ. 100 ಹಾಸಿಗೆಯ ತಾಲ್ಲೂಕ್ ಆಸ್ಪತ್ರೆ ಬಣ್ಣ ಬಳಿದುಕೊಂಡು ನಿಂತಿದ್ದಷ್ಟೇ. ಅಪಘಾತವಾದರೆ, ರೋಗ ಬಂದರೆ ಮಣಿಪಾಲ-ಕುಂದಾಪುರಕ್ಕೆ ಅಸ್ವಸ್ಥರನ್ನು ಹೊತ್ತುಕೊಂಡು ಹೋಗಬೇಕು. ಜ್ವರ-ಥಂಡಿ ಬಂದರೂ ಈ ಯಮರೂಪಿ ಆಸ್ಪತ್ರೆಯಲ್ಲಿ ಮಾರಣಾಂತಿಕ ಕಾಯಿಲೆ ಆಗುತ್ತದೆ. ಇಲ್ಲಿರುವ ವೈದ್ಯರಿಗೆ-ಸಿಬ್ಬಂದಿಗೆ ಮನುಷ್ಯತ್ವವೇ ಇಲ್ಲ. ಈ ಆಸ್ಪತ್ರೆಯ ರೋಗಕ್ಕೆ ಶಾಸಕರು ವೈದ್ಯರಾಗುವ ಜರೂರತ್ತಿದೆ. ಶಾಸಕನಾಗಿ ತನ್ನನ್ನು ಆಯ್ಕೆ ಮಾಡಿದ ಭಟ್ಕಳಿಗರ ಋಣ ತೀರಿಸಲು ಮೊದಲು ವೈದ್ಯ ಗಬ್ಬೆದ್ದ ಆಸ್ಪತ್ರೆಗೆ ಚಿಕಿತ್ಸೆ ಕೊಡಿಸಬೇಕು.

ಭಟ್ಕಳ ಶಹರವನ್ನು ಒಳಚರಂಡಿ ಸಮಸ್ಯೆ ಸಂಕಷ್ಟಕ್ಕೆ ಸಿಲುಕಿಸಿದೆ. ಕೊಳಚೆ ನಡುಬೀದಿಯಲ್ಲೇ ಹರಿದು ಹೋಗುತ್ತಿದೆ. ಉಳಿದದ್ದು ಶರಾಬಿ ಹೊಳೆ ಪಾಲಾಗುತ್ತಿದೆ. ಶರಾಬಿ ನದಿಯೆಂಬುದು ತಿಪ್ಪೆಗುಂಡಿಯಂತಾಗಿ ಹೋಗಿದೆ. ನಗರೋದ್ಧಾರಕ್ಕೆಂದು ಕೋಟಿ-ಕೋಟಿ ರೂ. ಬಂದರ ಜನರಿಗೇನೂ ಪ್ರಯೋಜನವಾಗಿಲ್ಲ. ನಗರಾಡಳಿತಗಾ ಮತ್ತವರ ನೆತ್ತಿಯ ಮೇಲೆ ನಿಂತು ಪರ್ಸೆಂಟೇಜ್ ಕೀಳು ನಗರಾಭಿವೃದ್ಧಿ ಕೋಶದ ಇಂಜಿನಿಯರ್ ಆರ್.ಪಿ. ನಾ ನಂಥವರ ಕಳ್ಳ ತಿಜೋರಿ ತುಂಬಿಸಿದೆ ಊರೂದ್ಧಾ ದುಡ್ಡು.

ಶಹರವನ್ನು ತೊಂದರೆಗೀಡುಮಾಡಿರುವ ಸಮ ಯೆಂದರೆ, ಪುರಾತತ್ವ ಇಲಾಖೆಯ ಕಾನೂನು. ಇಲ್ಲಿ ಜನರು ತಮ್ಮ ಮನೆ ರಿಪೇರಿಗೂ ಈ ಕಾನೂ ಅಡ್ಡಿಯಾಗಿದೆ. ಇದನ್ನು ಪರಿಹರಿಸುವ ತಾಕತ್ತು ಶಾ ವೈದ್ಯರಿಗಿದೆಯಾ ಎಂಬ ಸಂಶಯ ಜನರದು. ಅಧಿಕಾರಿಗ ಅಂಕುಶ ಇಡುತ್ತಾರಾ ವೈದ್ಯರು? ಅಥವಾ ಅಧಿಕಾರಿಗ ತೋರಿಸಿದ ಅಡ್ಡದಾರಿ ಹಿಡಿದು ಜನರ ಗೋಳಾಡಿಸ್ತಾರ ಇಂಥದೊಂದು ಚರ್ಚೆ ಈಗ ಭಟ್ಕಳದಲ್ಲಿ ನಡೆದಿದೆ. ಇ ಸಮಸ್ಯೆ ಸಾಲಾಗದು ಎಂಬಂತೆ, ಊರನ್ನು ನೈತಿಕ ಅಧಃ ತಳ್ಳುವ ಕಳ್ಳಭಟ್ಟಿ, ಸಾರಾಯಿ ಹಾವಳಿ ಇಡುತ್ತಿದೆ! ದಾ ಗೂಡಂಗಡಿಗಳಲ್ಲಿ ಸಾರಾಯಿ ಯಥೇಚ್ಛವಾಗಿ ಸಿಗುತ್ತಿ ಇದಕ್ಕೆ ಅಬಕಾರಿ-ಪೊಲೀಸ್ ಇಲಾಖೆಯ ಕೃಪೆಯಿ ಅಬಕಾರಿ-ಪೊಲೀಸ್ ಇಲಾಖೆಯ ಹಫ್ತಾ ಹಿಂದಿನ ಶಾಸಕ ಬರುತ್ತಿದ್ದರಿಂದ ಆತ ಇತ್ತ ಕಂಡೂ ಕಾಣದಂತಿದ್ದ. ವೈದ್ಯರಿಗ ಲಿಕ್ಕರ್ ಮಾಫಿಯಾದ ನಿಕಟ ನಂಟಿರುವ ಗುಮಾನಿಗಳ ಇದನ್ನು ಆತ ಸುಳ್ಳು ಮಾಡಿಯಾರಾ? ಖಾತ್ರಿ ಪಡಿಸುವ


ಪ್ರಸಿದ್ಧ ಪ್ರವಾಸಿತಾಣ ಮುರುಡೇಶ್ವರ ಸಮಸ್ಯೆ ಆಗರವಾಗಿದೆ. ಇಲ್ಲಿ ಸಿಆರ್‌ಝಡ್ ಕಾನೂನು ಮುರಿ ಆಳುವವರ ಆಪ್ತ ಸಖ ಆರ್.ಎನ್. ಶೆಟ್ಟಿ ಎಂಬ ದೋ ಉದ್ಯಮಿ ರೆಸಾರ್ಟ್-ಹೋಟೆಲ್-ಲಾಡ್ಜ್‌ಗಳನ್ನು ಕಟ್ಟಿಕೊಂ ದುಡ್ಡು ಮಾಡುತ್ತಿದ್ದಾನೆ. ಬಡ ಬೆಸ್ತರ ಭೂಮಿ-ಸರ್ಕಾ ಭೂಮಿ ನುಂಗಿ ನೊಣೆದಿದ್ದಾನೆ. ಈತನ ಪ್ರವಾಸೋದ್ಯ ದಿಂದ ಕಡಲು-ದಂಡೆ ಕಲುಷಿತವಾಗುತ್ತಿದೆ. ಇದು ತೀ ಹದಗೆಟ್ಟರೆ ಮೀನುಗಾರರ ತುತ್ತಿಗೆ ಸಂಚಕಾರ ಬರುವುದ ಖಂಡಿತ. ಮುರುಡೇಶ್ವರದಲ್ಲಿರುವ ಶಾಸಕ ವೈದ್ಯರ ಮ ಮುಂದಿನ ಕಾರಿಹಳ್ಳ ಅತಿಕ್ರಮಣಗೊಂಡು ರೈತರ ಬದು ದುಸ್ತರವಾಗಿದೆ. ಮಳೆ ನೀರು ಹರಿದು ಹೋಗಲು ಜಾಗ ಇಲ್ಲದಾಗಿದೆ. ಸಣ್ಣ ಮಳೆಗೂ ಮುರುಡೇಶ್ವರ ಮುಳುಗುತ್ತಿ ಇತ್ತ ಶಾಸಕ ವೈದ್ಯ ಗಮನ ಹರಿಸಬೇಕಿದೆ.

ಹೆದ್ದಾರಿ ಅಗಲೀಕರಣ ಸಮಸ್ಯೆ ಜಟಿಲವಾಗುತ್ತಿ ಭಟ್ಕಳದಲ್ಲಿ ಬೈಪಾಸ್ ಬೇಕೆಂಬುದು ವರ್ತಕರ ಒತ್ತಾಯ ಹಾಗೆ ನೋಡಿದರೆ ಜೀವನಕ್ಕೆ ಆಧಾರವಾದ ತುಂ ಭೂಮಿಯೂ ಹೋಗುತ್ತದೆಂಬ ಆತಂಕ ಹಳ್ಳಿಗರದ ಈ ಎರಡರ ನಡುವೆ ಶಾಸಕ ವೈದ್ಯ ಎತ್ತ? ಇದೀ ಜನರ ಕಾಡುವ ಪ್ರಶ್ನೆಯಾಗಿದೆ. ಹೊನ್ನಾವರದ ಹೋಳಿಸಾ ನಲ್ಲಿ ರಸ್ತೆ-ಸುಂಕಗಳು ಬೇಕಾಗಿದೆ. ನೀರಾವರಿ ಯೋಜ ಯಿಂದು ಶರಾವತಿ ನದಿ ದಂಡೆಯ ಜನರ ಕನಸಾಗಿದ ಇದೆಲ್ಲ ಶಾಸಕ ವೈದ್ಯರಿಂದ ಪರಿಹರಿಸಲು ಸಾಧ್ಯವಾ ಅಧಿಕಾರಿಗಳನ್ನು ಜನ ಪರವಾಗಿ ಪಳಗಿಸಿಯಾರಾ? ಸರ್ಕಾರ ಮಟ್ಟದಲ್ಲಿ ಕ್ಷೇತ್ರಾಭಿವೃದ್ಧಿಯ ವಾದ ಮಂಡಿಸುವ ತಾಕ ಆತನಿಗಿದೆಯಾ? ಅಥವಾ ಎಲ್ಲದಕ್ಕೂ ತೇಪೆ ಹಾಕಿ- ತಿ ಸಾರಿಸಿ ಪಲಾಯನ ಮಾಡುವರಾ? 'ಯಥಾಸ್ಥಿ ಕಾಯ್ದುಕೊಂಡು ಚುನಾವಣೆಯಲ್ಲಿ ವ್ಯಯಿಸಿದ ಕೋ ಕಾಸು, ನಿಗೂಢ ಬಿಸಿನೆಸ್‌ಗಳಲ್ಲಾದ 'ಹಾನಿ' ತುಂಬಿಕೊ ವರಾ? ಶಾಸಕ ವೈದ್ಯ ಈ ಎಲ್ಲ ಸವಾಲುಗಳನ್ನು ಸಮರ್ಥ ವಾಗಿ ಎದುರಿಸಿದರೆ ಆತನನ್ನು ನಂಬಿ ಗೆಲ್ಲಿಸಿದ ಮತದಾರ ಗೆಲುವಾಗುತ್ತದೆ. ಆತ ಸಮಸ್ಯೆಗಳನ್ನು ಉದಾಸೀನ ಉಡಾಫೆಯಿಂದ ಕಡೆಗಣಿಸಿದರೆ ಶಿವಾನಂದ ನಾಯ್ಕ, ಜೆ. ನಾಯ್ಕ್‌ರಂತೆ 'ಕ.ಬು' ಸೇರುತ್ತಾನೆ, ಅಷ್ಟೇ!

ಒಟ್ಟಿನಲ್ಲಿ ಶಾಸಕನ ಯೋಗ್ಯತೆ ಮತ್ತು ಗುರಿ ಜನರ ಗೊತ್ತಾಗಲು ತುಂಬ ದಿನವೇನೂ ಬೇಕಿಲ್ಲ, ಕೆಲವೇ ದಿನದ ಶಾಸಕ ವೈದ್ಯ ಎಂಥವನೆಂಬ ಚಿತ್ರಣ ಸಿಗಲಿದೆ!!

● ಶುದ್ಧೋಧ

ಮೇಲುಕೋಟೆ: ನಾರಾಯಣನಿಗೇ ನಾಮ ತೀಡಿದ ಅರ್ಚಕ!



ಅರ್ಚಕ ನರಸರಾಜಭಟ್ಟ

ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿರುವ ...ವಿಖ್ಯಾತ ಮೇಲುಕೋಟೆ ಶ್ರೀ ಚೆಲುವನಾರಾಯಣ ...ಯ ಸನ್ನಿಧಿಗೆ ಬರುವ ಭಕ್ತರ ಸಂಖ್ಯೆ ಹೆಚ್ಚಾದಂತೆ ...ಣಯವೂ ಹೆಚ್ಚಾಗುತ್ತಿದೆ. ಅದೇರೀತಿ ಆರತಿ ತಟ್ಟೆಯ ...ಚಕರ ದುರಾಸೆಯೂ ದುಪ್ಪಟ್ಟಾಗುತ್ತಿದೆ. ದಾನಿಯೊಬ್ಬರು ...ಲುವನಾರಾಯಣಸ್ವಾಮಿಗೆ ಅರ್ಪಿಸಿದ ರತ್ನಾಂಗಿ ...ರಣವನ್ನು ಕರಗಿಸಿದ ವಂಚಕ ಅರ್ಚಕನೊಬ್ಬ ...ಗುಡಿಯ ಪರಮಾತ್ಮನಿಗೇ ಪಂಗನಾಮ ಹಾಕಿರುವ ...ರಣ ಈಗ ಸಾಕಷ್ಟು ಸದ್ದು ಮಾಡುತ್ತಿದೆ. ಅಂತಹ ...ದಾಹಿ ಅರ್ಚಕ ಕೂಟದ ಕಪಿಮುಷ್ಟಿಗೆ ಸಿಲುಕಿರುವ ...ವನಾರಾಯಣನೇ 'ಕಾಪಾಡಿ... ಕಾಪಾಡಿ...' ಎಂದು ...ರೆಯಿಡುವಂತಾಗಿರುವುದು ಹಾಸ್ಯಾಸ್ಪದ!

...ಅರ್ಚಕ ನರಸರಾಜಭಟ್ಟ ಎಂಬಾತನೇ ಚೆಲುವನಾರಾ...ಸ್ವಾಮಿಗೆ ನಾಮ ಹಾಕಿದ ಭೂಪ. 2009ರ ಏಪ್ರಿಲ್ ...ರಂದು ಬೆಂಗಳೂರಿನ ಮುರುಳಿಜಗನ್ನಾಥ ಎಂಬ ...ಒಬ್ಬ ಸ್ವಾಮಿಗೆ ಬರೋಬ್ಬರಿ 1200 ಗ್ರಾಂ ಚಿನ್ನ, ...5 ಗ್ರಾಂ ಬೆಳ್ಳಿ ಹರಳುಗಳನ್ನು ಬಳಸಿ ಮೇಲಾಯ, ...ಯ, ಪಾದಜೋಡಿಸಿದ ರತ್ನಾಂಗಿ ಆಭರಣ ಅರ್ಪಿಸಿದ್ದ ...ಯೇ ಹೇಳಿಕೊಳ್ಳುವಂತೆ ಅದಕ್ಕೆ ತಗುಲಿದ ವೆಚ್ಚ ...ವಾರು 20 ಲಕ್ಷ ರೂಪಾಯಿಯಂತೆ. ಆದರೆ ಅರ್ಚಕ ...ಶಯನ ಕರಾಮತ್ತಿನಿಂದಾಗಿ ಆಭರಣದಲ್ಲಿ ದಿಢೀರ್ ...ಪೇರಾಗಿ 1200 ಗ್ರಾಂ ಇದ್ದ ಚಿನ್ನ 387 ಗ್ರಾಮ್‌ಗೆ ...ಯಾಗಿದ್ದರೆ, ಬೆಳ್ಳಿಯ ಪ್ರಮಾಣ ಚಿನ್ನದ ಲೋಪವನ್ನು ...ತೂಗುವಂತೆ ಹೆಚ್ಚಾಗಿದೆ!

...ದುರಾಸೆಗೆ ಬಿದ್ದ ಅರ್ಚಕ ನರಸರಾಜಭಟ್ಟ ...ವನಾರಾಯಣನಿಗೆ ಹಾಕಬೇಕಾದ ಆ ಆಭರಣವನ್ನು ...ಲಯದ ಕಾರ್ಯನಿರ್ವಹಣಾಧಿಕಾರಿಯ ಗಮನಕ್ಕೂ ...ದಂತೆ ತನ್ನ ಮನೆಯಲ್ಲೆ ಬಚ್ಚಿಟ್ಟುಕೊಂಡಿದ್ದ. ನಿಯಮದ ...ರ ಯಾವುದೇ ಆಭರಣ, ಹಣ ನೀಡಿದರೂ ಅದು ...ಲಯ ಕಾರ್ಯನಿರ್ವಹಣಾಧಿಕಾರಿಯ ಗಮನಕ್ಕೆ ...ಬೇಕು. ಆದರೆ ಸುಮಾರು ನಾಲ್ಕು ತಿಂಗಳು ಕಳೆದರೂ ...ಣ ನಾರಾಯಣನ ಹತ್ತಿರಕ್ಕೂ ಸುಳಿಯದ್ದು ಹಲವರಲ್ಲಿ ...ಮಾನ ಮೂಡಿಸಿತ್ತು, ಸಾಕಷ್ಟು ಮಾಧ್ಯಮಗಳಲ್ಲೂ ...ಯಾಗಿ ಬಿತ್ತರವಾಗಿತ್ತು, ಆಗ ಎಚ್ಚೆತ್ತುಕೊಂಡ ...ನಿರ್ವಹಣಾಧಿಕಾರಿ 2009 ಜುಲೈ 13 ರಂದು ...ರಾಜ ಭಟ್ಟನಾದಿಯಾಗಿ ಎಲ್ಲಾ ಅರ್ಚಕರಿಗೂ ...ಟಿಸ್ ನೀಡಿ 'ತನ್ನ ಗಮನಕ್ಕೆ ಬಾರದೆ ಕೆಲವರು ...ಕೃತ ಆಭರಣ ಮತ್ತು ಹಣವನ್ನು ದೇವಾಲಯದ ...ಲ್ಲಿ ಸ್ವೀಕರಿಸುತ್ತಿರುವುದು ತಿಳಿದುಬಂದಿದ್ದು ಈ ...ಲೇ ಸೂಕ್ತ ರಶೀದಿ ಸಮೇತ ಅದೆಲ್ಲವನ್ನೂ ...ಲಯಕ್ಕೆ ಒಪ್ಪಿಸಬೇಕು, ಇಲ್ಲವಾದಲ್ಲಿ ಶಿಸ್ತು ಕ್ರಮ ...ಳ್ಳಲಾಗುವುದು' ಎಂದು ಫರ್ಮಾನು ಹೊರಡಿಸಿದ್ದರು.

ಬೋಗಸ್ ರಶೀದಿ

...ದೇವಾಲಯದ ಕಾರ್ಯನಿರ್ವಹಣಾಧಿಕಾರಿ ನೋಟಿಸ್ ...ತ್ತಿದ್ದಂತೆಯೇ ಭಟ್ಟ ಭರ್ಜರಿಯಾದ್ದೊಂದು ಪ್ಲ್ಯಾನು ...ಡಿದ. ಮಾರನೇ ದಿನವೇ ಅಂದರೆ 2009 ಜುಲೈ ...ದು ಚೆನ್ನೈನ ವಿಜಯ ಮೆಟಲ್ ವರ್ಕ್ಸ್ ಹೆಸರಿನ ...ಹೆಡ್ (ಜುಲೈ 13ರ ಹೆಸರಿನಲ್ಲಿ)ನಲ್ಲಿ ದಾನಿಯಾದ ...ಳಿ ಜಗನ್ನಾಥ್‌ರವರಿಂದ ಶ್ರೀ ಚೆಲುವನಾರಾಯಣ ...ಗೆ ಬೆಳ್ಳಿಯಂತೆ ಕಾಣುವ ಚಿನ್ನದ ಹರಳುಮಿಶ್ರಿತ ...ಕವಚ ತಯಾರಿಸಿ ಕೊಡಲಾಗಿದೆ ಎಂದು ಬರೆದಿದ್ದ ...ವನ್ನು ಕಾರ್ಯನಿರ್ವಹಣಾಧಿಕಾರಿಗೆ ನೀಡಿ ಅದನ್ನೇ ...ರಶೀದಿ ಎಂದ. ಆದರಲ್ಲಿ ಆಭರಣ ವಿವರ ...ವಿಲ್ಲ, ಮಾತ್ರ ಬರೆಯಲಾಗಿತ್ತೇ ಹೊರತು ಅದು ಅಧಿಕೃತ ರಶೀದಿಯೂ ಆಗಿರಲಿಲ್ಲ, ನಗದು ಬಿಲ್ಲೂ ಆಗಿರಲಿಲ್ಲ, ಅಂತಹ ಯಾವ ಕುರುಹುಗಳೂ ಆ ಲೆಟರ್‌ಹೆಡ್‌ನಲ್ಲಿ ಇರಲಿಲ್ಲ.

ಆಪ್ಪಾದರೂ ಅರ್ಚಕನ ಕುತಂತ್ರ ಫಲಿಸಲಿಲ್ಲ, ರೈತಸಂಘದ ಕೆಲವರು ಖುದ್ದಾಗಿ ದೂರು ನೀಡಿದರು. ಅವರ ದೂರನ್ನು ದಾಖಲಿಸಿಕೊಂಡು ವಿಚಾರಣೆ ನಡೆಸಿದ ಪಾಂಡವಪುರದ ಉಪವಿಭಾಗಾಧಿಕಾರಿಗಳ ನ್ಯಾಯಾಲಯ ನರಸರಾಜಭಟ್ಟ ರತ್ನಾಂಗಿ ಆಭರಣದ ವಿಚಾರದಲ್ಲಿ ನೀಡಿರುವ ಅಷ್ಟೂ ಮಾಹಿತಿ ಸುಳ್ಳೆಂದು ಹೇಳಿತ್ತು. ರತ್ನಾಂಗಿ ಆಭರಣವನ್ನು ಯಾರ ಬಳಿ ತಯಾರು ಮಾಡಿಸಿದ್ದಾರೆ, ಅಧಿಕೃತ ರಶೀದಿ ಎಲ್ಲಿ, ತೆರಿಗೆ ಪಾವತಿ ಬಗ್ಗೆ ಯಾವುದೇ ಸಮರ್ಥ ಉತ್ತರ ನೀಡಿಲ್ಲ ಯಾಕೆ ಎಂಬೆಲ್ಲ ಪ್ರಶ್ನೆಗಳಿಗೆ ಉತ್ತರ ಕೊಡಲಾಗದೆ ಅರ್ಚಕ ಎಡವಿಬಿದ್ದಿದ್ದ. ಅಲ್ಲದೇ ಆತ ದೇವಾಲಯದ ಕಾರ್ಯನಿರ್ವಹಣಾಧಿಕಾರಿಗೆ ನೀಡಿದ್ದ ವಿಜಯ ಮೆಟಲ್ಸ್‌ನವರ ಲೆಟರ್‌ಹೆಡ್ಡನ್ನು ಅಧಿಕೃತ ರಶೀದಿ ಎಂದು ಪರಿಗಣಿಸಲಾಗದು ಎಂದೂ ಸ್ಪಷ್ಟವಾಗಿ ನ್ಯಾಯಾಲಯ ಹೇಳಿತ್ತು. ಅಂದರೆ ಅವೆಲ್ಲವೂ ತನ್ನ ರಕ್ಷಣೆಗೆ ನರಸರಾಜಭಟ್ಟ ಮಾಡಿಕೊಂಡಿದ್ದ ಬೋಗಸ್ ದಾಖಲೆಗಳೆನ್ನುವುದೂ ಸಾಬೀತಾಗಿಹೋಗಿತ್ತು.

ನರಸರಾಜಭಟ್ಟನ ರಕ್ಷಣೆಗೆ ಯತ್ನ

2009ರಿಂದ ಸುದೀರ್ಘ ವಿಚಾರಣೆ ನಡೆಸಿದ ಉಪವಿಭಾಗಾಧಿಕಾರಿಗಳ ನ್ಯಾಯಾಲಯ ವಿಸ್ತೃತ ತನಿಖಾ ವರದಿಯನ್ನು 2013ರ ಮೇ 18 ರಂದು ಮಂಡ್ಯ ಜಿಲ್ಲಾಧಿಕಾರಿ ಬಿ.ಎನ್.ಕೃಷ್ಣಯ್ಯನವರಿಗೆ ಸಲ್ಲಿಸಿ ಅರ್ಚಕನ ಮೇಲೆ ಶಿಸ್ತು ಕ್ರಮ ಜರುಗಿಸುವಂತೆಯೂ ಶಿಫಾರಸ್ಸು ಮಾಡಿತ್ತು. ಧಾರ್ಮಿಕ ದತ್ತಿ ಕಾಯ್ದೆ ನಿಯಮ 50ರ ಪ್ರಕಾರ ಅರ್ಚಕನನ್ನು ಅಮಾನತು ಮಾಡಿ ಉನ್ನತಮಟ್ಟದ ತನಿಖೆಗೆ ಧಾರ್ಮಿಕದತ್ತಿ ಆಯುಕ್ತರಿಗೆ ಶಿಫಾರಸು ಮಾಡುವ ಅವಕಾಶವಿದ್ದರೂ ಡಿಸಿ ಸಾಹೇಬರು ಹಾಗೆ ಮಾಡಲಿಲ್ಲ, ಬದಲಾಗಿ ಅರ್ಚಕನ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಅಧಿಕಾರವನ್ನು ಮೇಲುಕೋಟೆ ದೇವಾಲಯದ ವ್ಯವಸ್ಥಾಪನಾ ಸಮಿತಿಗೆ ಒಪ್ಪಿಸಿ ಸುಮ್ಮನಾಗಿಬಿಟ್ಟರು. ಅಂದಹಾಗೆ, ದೇವಾಲಯದ ಸಮಿತಿಯಲ್ಲಿ ಅರ್ಚಕ ನರಸರಾಜಭಟ್ಟನ ಸಹೋದರಿಯರಾದ ಗೋದಾ ಮತ್ತು ತೇಜಕುಮಾರಿಯರೇ ಡಾಮಿನೆಂಟ್ ಸದಸ್ಯೆಯರು! ಡಿಸಿಯಂತ ಡಿಸಿಯೇ ಈ ರೀತಿ ಅಸಹಾಯಕರಂತೆ ವರ್ತಿಸುವ ಮಟ್ಟಿಗೆ ಅವರ ಕೈಕಟ್ಟಿ ಹಾಕಿದವರ್‍ಯಾರು ಎಂಬುದೇ ಸದ್ಯದ ನಿಗೂಢ ಪ್ರಶ್ನೆ.

ಇತ್ತ ಜಿಲ್ಲಾಧಿಕಾರಿಗಳ ಸೂಚನೆಯಂತೆ ಅಧ್ಯಕ್ಷ ಹಾಡ್ಯ ರಮೇಶ್‌ರಾಜನ ನೇತೃತ್ವದಲ್ಲಿ ಸಭೆ ಸೇರಿದ ದೇವಾಲಯದ ವ್ಯವಸ್ಥಾಪನಾ ಸಮಿತಿ ಅರ್ಚಕನ ವಿರುದ್ಧ ಕ್ರಮ ಜರುಗಿಸುವ ಬದಲು ನರಸರಾಜಭಟ್ಟನಿಗೆ ರಜಾ ನೀಡಿ, ಆ ಜಾಗಕ್ಕೆ ಅವನ ತಮ್ಮನೇ ಆದ ವರದರಾಜಭಟ್ಟನನ್ನು ನೇಮಕ ಮಾಡಿತು. ಅರ್ಚಕ ನರಸರಾಜಭಟ್ಟ ಹಾಗೂ ವರದರಾಜಭಟ್ಟ ವೈಯಕ್ತಿಕ ಒಪ್ಪಂದ ಮಾಡಿಕೊಂಡು ಒಂದೇ ಹುದ್ದೆಯನ್ನು ಹಂಚಿಕೊಂಡಿದ್ದರೇ ಹೊರತು ಎರಡು ಪ್ರತ್ಯೇಕ ಹುದ್ದೆ ಇರಲಿಲ್ಲ. ಹಾಗಾಗಿ ನರಸರಾಜಭಟ್ಟನ ತಪ್ಪಿಗೆ ವರದರಾಜಭಟ್ಟನೂ ಪಾಲುದಾರನಾಗಬೇಕಾಗುತ್ತೆ. ಹಾಗಾಗಿ ವರದರಾಜಭಟ್ಟನ ನೇಮಕ ಕಾನೂನುಬಾಹಿರ ಎಂದು ಪರಿಶಿಷ್ಟಜಾತಿಗೆ ಸೇರಿದ ಸದಸ್ಯ ಮುರುಗನ್ ಸಮಿತಿಗೆ ಲಿಖಿತ ಆಕ್ಷೇಪಣೆ ಸಲ್ಲಿಸಿದ್ದರೂ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಇಂತಹದ್ದೊಂದು ಅಡ್ಜಸ್ಟ್‌ಮೆಂಟ್‌ಗೆ ಬರಲಾಗಿತ್ತು. ಅಲ್ಲದೆ ಈ ಮೊದಲು ತನಿಖೆ ನಡೆಸಿ ಅರ್ಚಕನನ್ನು ತಪ್ಪಿತಸ್ಥನೆಂದು ತೀರ್ಪಿತ್ತ ಉಪವಿಭಾಗಾಧಿಕಾರಿ ನ್ಯಾಯಾಲಯವು ಏಕಪಕ್ಷೀಯ ತೀರ್ಮಾನ ನೀಡಿದೆ ಎಂಬ ಅಭಿಪ್ರಾಯಕ್ಕೆ ಬಂದ ಸಮಿತಿ ಸದಸ್ಯರು ಆದೇಶವನ್ನು ಮರುಪರಿಶೀಲಿಸಿ ತನಿಖೆ ಮಾಡುವಂತೆ ಧಾರ್ಮಿಕ ದತ್ತಿ ಆಯುಕ್ತರಿಗೆ ಶಿಫಾರಸ್ಸನ್ನೂ ಮಾಡಿದ್ದರು. ಸಮಿತಿಯ ಈ ನಿರ್ಧಾರಗಳ ಹಿಂದೆ ಅರ್ಚಕ ನರಸರಾಜಭಟ್ಟನ ಸಹೋದರಿಯರ ಪ್ರಭಾವವಿತ್ತೆನ್ನುವುದನ್ನು ಬಿಡಿಸಿ ಹೇಳಬೇಕಿಲ್ಲ.

ಆಯುಕ್ತರ ಪ್ರಶ್ನಾರ್ಹ ನಡೆ

ಹೀಗೆ ಮೊದಲು ಜಿಲ್ಲಾಧಿಕಾರಿಗಳ ಅಂಗಳದಲ್ಲಿದ್ದ ಚೆಂಡು ನಂತರ ದೇವಾಲಯದ ಸಮಿತಿಯ ಮುಂದೆ ಬಂತು. ಆಮೇಲೆ ಅಲ್ಲಿಂದ ಧಾರ್ಮಿಕ ದತ್ತಿ ಆಯುಕ್ತರ ಅಂಗಳದಲ್ಲಿ ಕಾಣಿಸಿಕೊಂಡಿತು. ನರಸರಾಜಭಟ್ಟನ ಹೇಳಿಕೆ, ಉಪವಿಭಾಗಾಧಿಕಾರಿ ನ್ಯಾಯಾಲಯ ಶಿಫಾರಸ್ಸು ಮಾಡಿದ್ದ ಉನ್ನತಮಟ್ಟದ ತನಿಖೆಯ ಅಂಶ, ಜಿಲ್ಲಾ ಸರ್ಕಾರಿ ವಕೀಲರು ತನಿಖೆ ಅಗತ್ಯ ಎಂದಿರುವ ಅಂಶಗಳನ್ನು ವ್ಯವಸ್ಥಾಪನಾ ಸಮಿತಿ ಗಮನಿಸಿದೆಯೇ? ಮುಖ್ಯವಾಗಿ ದಾನಿಗಳು ಆಭರಣವನ್ನು ಯಾರ ವಶಕ್ಕೆ ನೀಡಿದ್ದರು? ಆಭರಣದ ತೂಕದಲ್ಲಿ ಹೇಗೆ ವ್ಯತ್ಯಾಸವಾಯಿತು? ಯಾರ ಬಳಿ ಇದ್ದಾಗ ವ್ಯತ್ಯಾಸ ಉಂಟಾಯಿತು ಎಂಬ ಬಗ್ಗೆ ತನ್ನ ಅಭಿಪ್ರಾಯವೇನು? ಎಂಬಿತ್ಯಾದಿ ಪ್ರಶ್ನೆಗಳಿಗೆ ದೇವಾಲಯ ವ್ಯವಸ್ಥಾಪನಾ ಸಮಿತಿಯ ವರದಿಯಲ್ಲಿ ಸ್ಪಷ್ಟತೆಗಳು ಇಲ್ಲ, ಈ ಕುರಿತು ತಗಾದೆ ತೆಗೆದ ಧಾರ್ಮಿಕ ದತ್ತಿ ಆಯುಕ್ತರು ಮತ್ತೊಮ್ಮೆ ಚೆಂಡನ್ನು ದೇವಾಲಯ ಸಮಿತಿ ಮತ್ತು ಕಾರ್ಯನಿರ್ವಹಣಾಧಿಕಾರಿಯ ಅಂಗಳಕ್ಕೆ ಚೆಲ್ಲಿದರು. ಅಲ್ಲದೆ ಶಿಸ್ತುಕ್ರಮ ಜರುಗಿಸುವ ಹೊಣೆಯನ್ನೂ ಕಾರ್ಯನಿರ್ವಹಣಾಧಿಕಾರಿಗೆ ವಹಿಸಿ ಕೈತೊಳೆದುಕೊಂಡರು.

ಜಿಲ್ಲಾಧಿಕಾರಿಯಿಂದ ಆಯುಕ್ತರವರೆಗೆ ವಂಚಕನೊಬ್ಬನಿಗೆ ಶಿಕ್ಷೆ ನೀಡಲು ಹೀಗೆ ಮೀನಾಮೇಷ ಎಣಿಸುತ್ತಿರುವುದು ಆರತಿ ತಟ್ಟೆಯ ಅವಾಂತರದ ಹಿಂದೆ ಪ್ರಭಾವಿಗಳ ದಂಡೇ ಇರಬಹುದೆನ್ನುವ ಅನುಮಾನ ಹುಟ್ಟಿಸುತ್ತದೆ.

ಕೊನೆಗೂ ನರಸರಾಜಭಟ್ಟನ ಅಮಾನತು

ಈ ವಿಷಯ ಪದೇಪದೇ ಚರ್ಚೆಗೆ ಬಂದು ಭಕ್ತಾದಿಗಳಲ್ಲಿ ಗೊಂದಲ ಇಮ್ಮಡಿಯಾಗುತ್ತಿದ್ದನ್ನು ಕಂಡ ದೇಗುಲ ವ್ಯವಸ್ಥಾಪನಾ ಸಮಿತಿ ಕೊನೆಗೂ ಒಂದು ದಿಟ್ಟ ನಿರ್ಧಾರ ತೆಗೆದುಕೊಂಡಿತು. ಅಧ್ಯಕ್ಷ ಹಾಡ್ಯ ರಮೇಶ್‌ರಾಜನ ನೇತೃತ್ವದಲ್ಲಿ ಜೂನ್ 10ರಂದು ನಡೆದ ಸಭೆಯಲ್ಲಿ ನರಸರಾಜಭಟ್ಟನನ್ನು ಅಮಾನತು ಮಾಡಿ, ಉಪವಿಭಾಗಾಧಿಕಾರಿಗಳ ನ್ಯಾಯಾಲಯದ ಆದೇಶದಂತೆ ಉನ್ನತಮಟ್ಟದ ತನಿಖೆಗೆ ಧಾರ್ಮಿಕ ದತ್ತಿ ಆಯುಕ್ತರಿಗೆ ಶಿಫಾರಸು ಮಾಡುವ ನಿರ್ಣಯವನ್ನು ಅಂಗೀಕರಿಸಿತು.


ಆದರೆ ಆರೋಪ ಹೊತ್ತ ನರಸರಾಜಭಟ್ಟನ ಜಾಗಕ್ಕೆ ಆತನ ತಮ್ಮ ವರದರಾಜಭಟ್ಟನನ್ನೇ ಅರ್ಚಕನನ್ನಾಗಿ ನೇಮಕ ಮಾಡಿರೋದು ಅನುಮಾನಾಸ್ಪದವಾಗಿದೆ. ಹೀಗಾದರೆ ನರಸರಾಜಭಟ್ಟನ ವಿರುದ್ಧ ನ್ಯಾಯಯುತ ತನಿಖೆ ಸಾಧ್ಯವೇ? ಅಲ್ಲದೆ ಧಾರ್ಮಿಕ ದತ್ತಿ ಇಲಾಖೆಯ ಸುಧಾ, ಕಾರ್ಯನಿರ್ವಾಹಕ ಅಧಿಕಾರಿ ವೇಣುಗೋಪಾಲ್ ಸೇರಿದಂತೆ ಹಲವರು ಅರ್ಚಕ ನರಸರಾಜಭಟ್ಟನ ರಕ್ಷಣೆಗೆ ನಿಂತಿರುವುದರಿಂದ ಈ ಪ್ರಕರಣದಲ್ಲಿ ನ್ಯಾಯಸಿಗಬಲ್ಲದೇ ಎಂಬ ಗೊಂದಲ ಭಕ್ತರಲ್ಲಿ ಮನೆಮಾಡಿರುವುದಂತೂ ಸತ್ಯ.

ಅರ್ಚಕ ನರಸರಾಜಭಟ್ಟನ ಭಾನಗಡಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಉನ್ನತಮಟ್ಟದ ತನಿಖೆಗೆ ಆದೇಶ ನೀಡಬೇಕು, ವಂಚಕ ಅರ್ಚಕನ ಜಾಗಕ್ಕೆ ಆತನ ತಮ್ಮ ವರದರಾಜಭಟ್ಟನನ್ನು ನೇಮಕವನ್ನು ಹಿಂಪಡೆಯಬೇಕು, ದೇಗುಲ ವ್ಯವಸ್ಥಾಪನಾ ಸಮಿತಿಯಿಂದ ಅರ್ಚಕರ ಕುಟುಂಬವನ್ನು ಹೊರಗಿಡಬೇಕು ಎಂಬುದು ಭಕ್ತಾದಿಗಳ ಸದ್ಯದ ಕೂಗು. ವಿಪರ್ಯಾಸ ನೋಡಿ, ಮತಹಾಕಿದ ಜನರನ್ನು ಮಾತ್ರವಲ್ಲ, ಗರ್ಭಗುಡಿಯ ಭಗವಂತನನ್ನೂ ರಕ್ಷಿಸಬೇಕಾದ ಸರ್ಕಾರದ ಹೆಗಲಿಗೆ ಜೋತು ಬಿದ್ದಿದೆ!


● ಎನ್.ನಾಗೇಶ್



ರತ್ನಾಂಗಿ ಧರಿಸಿದ ಚೆಲುವನಾರಾಯಣಸ್ವಾಮಿ



...ದಾನಿ ಜಗನ್ನಾಥರವರಿಗೆ ನೀಡಿರುವ ಆಭರಣ ಸ್ವೀಕೃತಿ ರಶೀದಿ



ರತ್ನಾಂಗಿ ಆಭರಣ

ದಾನಿ ಬಗ್ಗೆಯೇ ಅನುಮಾನ?

ಈ ಪ್ರಕರಣವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಆಭರಣವನ್ನು ದಾನ ಮಾಡಿದ ದಾನಿ ಮುರುಳಿ ಜಗನ್ನಾಥನ ಬಗ್ಗೆಯೇ ಹಲವಾರು ಅನುಮಾನಗಳು ಮೂಡುತ್ತವೆ. ತಾನು ಮಾಡಿಸಿಕೊಟ್ಟ ಆಭರಣವನ್ನು ಅರ್ಚಕ ದುರ್ಬಳಕೆ ಮಾಡಿ ಕೊಂಡಿರುವುದು ಸಾಬೀತಾದರೂ ಮುರುಳಿ ಜಗನ್ನಾಥ್ ಮಾತ್ರ ಅದೇ ಅರ್ಚಕನ ಬೆನ್ನೆಲುಬಾಗಿ ಆತನ ರಕ್ಷಣೆಗೆ ನಿಂತಿದ್ದಾನೆ. ಕಾರ್ಯನಿರ್ವಹಣಾಧಿಕಾರಿ ಎಲ್ಲಾ ಅರ್ಚಕರಿಗೂ ನೋಟಿಸ್ ನೀಡಿದ ಕೂಡಲೇ ಚೆನ್ನೈನ ವಿಜಯ್‌ಮೆಟಲ್ ವರ್ಕ್ಸ್‌ನಿಂದ ಲೆಟರ್‌ಹೆಡ್ ರಿಪೋರ್ಟ್ ಪಡೆಯಲು ಅರ್ಚಕನಿಗೆ ಸಹಾಯ ಮಾಡಿದ್ದೂ ಇದೇ ಜಗನ್ನಾಥ್!

ಅಲ್ಲದೆ 2009ರ ಏಪ್ರಿಲ್ 29ರಂದು ತಾನು ನೀಡಿದ್ದ ಆಭರಣಕ್ಕೆ ನಿಖರವಾದ ಅಳತೆ ತೆಗೆದುಕೊಳ್ಳದೆ ಕೇವಲ ಕಣ್ಣಳತೆಯಲ್ಲಿ ಮಾಡಿಸಿದ್ದರಿಂದ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಯ ಅನುಮತಿಯೊಂದಿಗೆ ಅದನ್ನು ವಾಪಾಸ್ಸು ಪಡೆದು ಸರಿಪಡಿಸಿ ಪುನಃ 2009ರ ಜುಲೈ 14ರಂದು ನೀಡಿದ್ದಾಗಿ ನ್ಯಾಯಾಲಯಕ್ಕೆ ಸುಳ್ಳು ಅಫಿಡವಿಟ್ ನೀಡಿರುವ ದಾನಿಯ ನಡೆಯೇ ನಿಗೂಢವಾಗಿದೆ. ದಾನಿ ಜಗನ್ನಾಥ್ ಹಾಗೂ ಚೆನ್ನೈನ ವಿಜಯ ಮೆಟಲ್‌ವರ್ಕ್ಸ್ ಬಗ್ಗೆ ಗಂಭೀರವಾಗಿ ತನಿಖೆ ನಡೆಸಿದರೆ ಇದೀ ಅವ್ಯವಹಾರ ಬಯಲಾಗಬಹುದು. 'ಬ್ಲ್ಯಾಕ್ ಮನಿ'ಯನ್ನು ವೈಟ್ ಮಾಡಲೂ, ಇಲ್ಲ ಸರ್ಕಾರಕ್ಕೆ ತೆರಿಗೆ ವಂಚಿಸಲೂ ಇಂತಹದ್ದೊಂದು ಧಾರ್ಮಿಕ ಕೂಟ ರಚನೆಯಾಗಿರಬಹುದಾದ ಸಾಧ್ಯತೆಯನ್ನೂ ತಳ್ಳಿ ಹಾಕುವಂತಿಲ್ಲ.

ಮೀಡಿಯಾ ಮಸಾಲ

ಉದಯ ನ್ಯೂಸ್‌ನ RRS?


ನ್ಯೂಸ್ ಚಾನಲ್‌ಗಳಿಗೆ ಹೊಸ ಸುದ್ದಿಗಳ ಹಸಿವು ಯಾವಾಗಲೂ ಇದ್ದಿದ್ದೆ. ಬೇರೆಲ್ಲರಿಗಿಂತ ತಾವೇ ಮೊದಲು ಸುದ್ದಿ ಮಾಡಿಬಿಡಬೇಕು ಎಂಬ ಅಘೋಷಿತ ಪೈಪೋಟಿಯೂ ಸಹಜ ಸಾಮಾನ್ಯ.

ಆದರೆ ಕೆಲವು ಚಾನಲುಗಳಲ್ಲಿ ಹೊಸ ಸೆನ್ಸೇಷನಲ್ ಸುದ್ದಿ ಇರಲಿ ಹಳೇ ಸುದ್ದಿಗಳನ್ನು ತಪ್ಪುತಪ್ಪಾಗಿ ಹಾಕುತ್ತಾ ವೀಕ್ಷಕರು ಮೈಪರಚಿಕೊಳ್ಳುವಂತೆ ಮಾಡುತ್ತಿರುತ್ತಾರೆ.

ಉದಯ ನ್ಯೂಸ್ ಅದರಲ್ಲೊಂದು.

ಮೊನ್ನೆ ಸೋಮವಾರ ಜೂನ್ 10 ರಂದು ನರೇಂದ್ರ ಮೋದಿ ಬಿಜೆಪಿಯ ಚುನಾವಣಾ ಪ್ರಚಾರ ಸಮಿತಿ ಮುಖ್ಯಸ್ಥನಾಗಿ ಆಯ್ಕೆಯಾದಾಗ ಅಡ್ವಾಣಿ ತಿರುಗಿಬಿದ್ದು ರಾಜೀನಾಮೆ ನೀಡಿದರಲ್ಲವೆ. ಆ ಬಿಕ್ಕಟ್ಟು ಬಗೆಹರಿಸಲು ಬಿಜೆಪಿ ಅಧ್ಯಕ್ಷ ರಾಜನಾಥ್ ಸಿಂಗ್ RSS ನಾಯಕ ಮೋಹನ್ ಭಾಗವತ್‌ರನ್ನು ಭೇಟಿಯಾಗಿ ಚರ್ಚಿಸಿದ ಸುದ್ದಿಯನ್ನು ಉದಯ ನ್ಯೂಸ್ ಮಂಗಳವಾರ ಬೆಳಗ್ಗೆ ಪ್ರಸಾರ ಮಾಡಿದ ರೀತಿ ಹೀಗಿತ್ತು.

RSS ಎಂಬುದನ್ನು RRS ಎಂದು ಹೇಳುತ್ತಿದ್ದ ಉದಯ ನ್ಯೂಸ್‌ನ ಸಿಬ್ಬಂದಿಗೆ ಇವೆರಡರ ನಡುವಿನ ವ್ಯತ್ಯಾಸವೂ



ಗಮನಕ್ಕೆ ಬರಲಿಲ್ಲವೆ? ಹಾಗೆಯೇ ಮೋಹನ ಭಾಗವತ್‌ಗೆ ಅವನು ಇವನು ಎಂದು ಹೇಳುವುದು ಅಭಾಸಕಾರಿಯಲ್ಲವೆ?

ಈ ತರದ ಅಕ್ಷರ ದೋಷ, ಕಾಗುಣಿತದ ದೋಷಗಳು ಎಲ್ಲಾ ಟಿವಿ ನ್ಯೂಸ್ ಚಾನಲ್‌ಗಳಲ್ಲೂ ಕಂಡುಬರುತ್ತಿರುತ್ತವೆ. ಇಲ್ಲಿ ಕೆಲಸ ಮಾಡುವವರೆಲ್ಲಾ ಡಿಗ್ರಿ ಓದಿರುವವರೇ ಆಗಿರುತ್ತಾರೆ, ಆದರೂ ಮಾತೃಭಾಷೆ ಕನ್ನಡವನ್ನು ಸರಿಯಾಗಿ ತಿಳಿದಿಲ್ಲ, ಪ್ರಚಲಿತ ವಿದ್ಯಮಾನಗಳ ಅರಿವೂ ಇರುವುದಿಲ್ಲವೆಂದರೆ ಹೇಗೆ?

ಚಾನಲ್ ಲೀಡರ್‌ಗಳು ಇದನ್ನು ಗಮನಿಸಲಿ.

ರಾಜ್ ಟಿವಿಯ ರಾಜೂ ನದಾಫ್ ದುಡುಕಿದ್ದು

ಟಿವಿ ಪತ್ರಕರ್ತನೊಬ್ಬನ ಅತಿರೇಕದ ವರ್ತನೆಯ ಪ್ರಕರಣ ಇದು.

ಬೆಳಗಾಂನ ರಾಜ್ ನ್ಯೂಸ್ ವರದಿಗಾರ ರಾಜೂ ನದಾಫ್ ಅತೀ ಉತ್ಸಾಹದಿಂದ ಒಂದು ಸೆನ್ಸೇಷನಲ್ ನ್ಯೂಸ್ ಮಾಡಲು ಹೋಗಿ ಸಲ್ಲದ ಫಜೀತಿ ಮಾಡಿಕೊಂಡಿದ್ದಾರೆ.

ಬೆಂಗಳೂರಿನಲ್ಲಿ ಹೇಮಾವತಿ ಎಂಬ ಯುವತಿಯನ್ನು ಆಕೆಯ ತಂದೆ-ತಾಯಿ ಗೃಹಬಂಧನದಲ್ಲಿಟ್ಟಿದ್ದ ವಿಚಾರ ದೊಡ್ಡ ಸುದ್ದಿಯಾಗಿತ್ತಲ್ಲವೆ.

ಧಾರವಾಡದ ಸಂಧ್ಯಾ ಎಂಬಾಕೆ ಎಂಬಿಎ ಓದಿ ಗದಗದ ಜೆಟಿ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕಿಯಾಗಿರುವಾಕೆ.... ಈಕೆಗೆ ತಂದೆ ಇಲ್ಲ, ಕೌಟುಂಬಿಕ ವಿಚಾರದ ಕಾರಣ ಆಕೆಯನ್ನು ಗೃಹಬಂಧನದಲ್ಲಿ ಇರಿಸಿದ್ದಾರೆಂದು ಯಾರೋ ನೀಡಿದ ಸುದ್ದಿ ಕೇಳಿ ರಾಜೂ ನದಾಫ್‌ಗೆ ಥ್ರಿಲ್ ಆಯಿತು. ಇದನ್ನೊಂದು ಸೆನ್ಸೇಷನಲ್ ನ್ಯೂಸ್ ಮಾಡುತ್ತೇನೆಂದು ಬೆಳಗಾಂನಿಂದ ಧಾರವಾಡಕ್ಕೆ ಬಂದವನೆ ನೇರ ಹುಡುಗಿಯ ಮನೆಗೆ ಕ್ಯಾಮರಾ ಸಮೇತ ನುಗ್ಗಿ, ಪೊಲೀಸರ ಗತ್ತಿನಲ್ಲಿ ವಿಚಾರಣೆ ನಡೆಸಿ ಶೂಟ್ ಮಾಡಿಕೊಂಡಿದ್ದಾನೆ. ನಂತರ ಸಂಧ್ಯಾರನ್ನು ಆಕೆಯ ತಾಯಿಯೊಂದಿಗೇ ಬೆಂಗಳೂರಿನ ಟಿವಿ ಸ್ಟುಡಿಯೋಗೆ ಸಾಗಿಸಲು ಹೊರಟಾಗ ಇದು ರಂಪವಾಯಿತು.

ಸಂಧ್ಯಾರ ನೆಂಟರ್‍ಯಾರೋ 'ಇದೊಂದು ಕಿಡ್‌ನ್ಯಾಪ್ ಕೇಸೆಂದು' ಜಿಲ್ಲಾಧಿಕಾರಿ ಹಾಗೂ ಪೊಲೀಸರಿಗೆ ದೂರಿತ್ತರು.

ಅತ್ತ ತನ್ನ ಸಾಹಸಕ್ಕೆ ಬೆಂಗಳೂರಿನಲ್ಲಿ ಸಿಗಬಹುದಾದ ಮನ್ನಣೆ ಹಾಗೂ ಕೀರ್ತಿ ಬಗ್ಗೆ ಲೆಕ್ಕ ಹಾಕುತ್ತಾ ಇದ್ದ ರಾಜೂ ನದಾಫನ ಗಾಡಿಯನ್ನು ದಾವಣಗೆರೆಯ ಪೊಲೀಸರು ಅಡ್ಡಗಟ್ಟಿ ವಿಚಾರಣೆ ಆರಂಭಿಸಿದಾಗ ಆತನಿಗೆ ತನ್ನ ತಪ್ಪಿನ ಅರಿವಾಗಿದೆ. ರಾಜೂ "ಸಂಧ್ಯಾರನ್ನು ಡಾಕ್ಟರಿಗೆ ತೋರಿಸಲು ಕರೆದೊಯ್ಯುತ್ತಿದ್ದೇನೆ" ಅಂತ ಸುಳ್ಳು ಹೇಳಿ ಕಿಡ್‌ನ್ಯಾಪ್ ಕೇಸಿನಿಂದ ಪಾರಾಗಿದ್ದಾನೆ.

ಜನಸಾಮಾನ್ಯರ ವೈಯಕ್ತಿಕ ಬದುಕಿನೊಳಗೆ ನುಗ್ಗಿ ಏನು ಬೇಕಾದರೂ ಮಾಡಬಹುದೆಂಬ ಒಂದು ತಪ್ಪು ಕಲ್ಪನೆ ಹಾಗೂ ಉಡಾಫೆಯ ನಂಬಿಕೆ ಕೆಲ ಪತ್ರಕರ್ತರಲ್ಲಿದೆ.

ಅಂತವರಿಗೆ ರಾಜೂ ನದಾಫನ ಪ್ರಕರಣ ಪಾಠವಾಗಲಿ. ●

3<<<...ವೇದಿಕೆಯ ಹಕ್ಕೊತ್ತಾಯಗಳು

ಕಟ್ಟುನಿಟ್ಟಾಗಿ ನಿಷೇಧಿಸಬೇಕು. ಆರೆಸ್ಸೆಸ್ ಒಂದು ರಾಜಕೀಯ ಸಂಘಟನೆಯೇ ಹೊರತು ಅದು ಹೇಳಿಕೊಳ್ಳುವಂತೆ ಸಾಂಸ್ಕೃತಿಕ ಸಂಘಟನೆ ಖಂಡಿತಾ ಅಲ್ಲ, ಇದನ್ನು ಸರ್ಕಾರ ತನ್ನ ಸುತ್ತೋಲೆಯಲ್ಲಿ ಸ್ಪಷ್ಟಪಡಿಸಬೇಕು.

• ಪ್ರಭಾಕರ ಭಟ್, ಜಗದೀಶ ಕಾರಂತ, ಪಿ.ಪಿ.ಹೆಗ್ಡೆ, ಜಗದೀಶ ಶೇಣವರಂತಹ ಅನೇಕ ಸಂಘ ಪರಿವಾರ ಮುಖಂಡರು ಸಂವಿಧಾನಕ್ಕೆ ಸೆಡ್ಡು ಹೊಡೆದು ಅಲ್ಪಸಂಖ್ಯಾತ ವಿರೋಧಿ, ಕೋಮುದ್ವೇಷಪೂರಿತ ಭಾಷಣಗಳನ್ನು ಮಾಡುತ್ತಲೇ ಇದ್ದಾರೆ. ಇಂಥವರ ವಿರುದ್ಧ ದಾಖಲಾದ ಪ್ರಕರಣಗಳನ್ನು ಬಿಜೆಪಿ ಸರ್ಕಾರದ ಸಚಿವಸಂಪುಟ ನೀಡಿದ್ದ ಆದೇಶಗಳಂತೆ ಹಿಂದೆಗೆದುಕೊಳ್ಳಲಾಗಿದೆ. ಈಗ ಹೊಸ ಸರ್ಕಾರಕ್ಕೆ ನಮ್ಮ ಹಕ್ಕೊತ್ತಾಯ ಏನೆಂದರೆ ಸದರಿ ಪ್ರಕರಣಗಳನ್ನೆಲ್ಲಾ ಪುನರುಜ್ಜೀವಿತಗೊಳಿಸಿ ಸರಿಯಾದ ಮರುತನಿಖೆಗೆ ಚಾಲನೆ ನೀಡಬೇಕು.

• ಹಿಂದಿನ ಬಿಜೆಪಿ ಸರ್ಕಾರವು ಗಜೆಟ್ ಅಧಿಸೂಚನೆ ಮೂಲಕ ಹಿಂಬಾಗಿಲಿನಿಂದ ಸ್ಥಾಪಿಸಿದ ಗೋಸೇವಾ ಆಯೋಗದ ಏಕೈಕ ಉದ್ದೇಶವೇ ಅಲ್ಪಸಂಖ್ಯಾತ ಪ್ರಜೆಗಳಿಗೆ ಕಿರುಕುಳ ನೀಡುವುದಾಗಿದೆ. ಆದುದರಿಂದ ಸದರಿ ಆಯೋಗವನ್ನು ತತ್‌ಕ್ಷಣ ರದ್ದುಗೊಳಿಸಬೇಕು.

• ಬಿಜೆಪಿ ಸರ್ಕಾರವು ರಾಷ್ಟ್ರೋತ್ಥಾನ ಪರಿಷತ್ತಿನಂತಹ ವಿವಿಧ ಸಂಘಪರಿವಾರದ ಅಂಗಸಂಸ್ಥೆಗಳಿಗೆ ಬೇಕಾಬಿಟ್ಟಿಯಾಗಿ ಹಂಚಿದ ಅನುದಾನಗಳನ್ನು ವಾಪಸ್ ಪಡೆದುಕೊಳ್ಳಬೇಕು.

• ಕರಾವಳಿ, ಮಲೆನಾಡು ಮತ್ತು ಇನ್ನಿತರ ಕೋಮುಸೂಕ್ಷ್ಮ ಪ್ರದೇಶಗಳಲ್ಲಿ ಬೀಡುಬಿಟ್ಟಿರುವ ಅದಕ್ಷ, ಕೋಮುವಾದಿ ಅಧಿಕಾರಿಗಳನ್ನು ತಕ್ಷಣ ಬದಲಾಯಿಸಿ ಅವರ ಜಾಗಕ್ಕೆ ದಕ್ಷ, ಜಾತ್ಯತೀತ ಅಧಿಕಾರಿಗಳನ್ನು ನೇಮಿಸಬೇಕು.

• ಕೋಮು ಹಿಂಸಾಚಾರದ ಘಟನೆಗಳಲ್ಲಿ ಮೊದಲ ಬಲಿಪಶುಗಳಾಗುವ ಮಹಿಳೆಯರಿಗೆ ಸೂಕ್ತ ರಕ್ಷಣೆ ಮತ್ತು ನ್ಯಾಯ ಒದಗಿಸಬೇಕು.

• ಕೋಮು ಹಿಂಸಾಚಾರ ತಡೆ ಮಸೂದೆಯನ್ನು ಕೆಲವು ಸೂಕ್ತ ತಿದ್ದುಪಡಿಗಳೊಂದಿಗೆ ಕೂಡಲೆ ಜಾರಿಗೊಳಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು.

• ನ್ಯಾ. ಸಾಚಾರ್ ಮತ್ತು ನ್ಯಾ. ರಂಗನಾಥ ಮಿಶ್ರಾ ವರದಿಗಳನ್ನು ಕೂಡಲೆ ಅನುಷ್ಠಾನಗೊಳಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು.

• ಸವರ್ಣೀಯ ಹಿಂದೂಗಳಿಂದ ಈಗಲೂ ಆಚರಿಸಲ್ಪಡುತ್ತಿರುವ 'ಮಡೆಸ್ನಾನ', 'ಪಂಕ್ತಿಭೇದ'ದಂತಹ ಅಮಾನವೀಯ ಆಚರಣೆಗಳನ್ನು ನಿಲ್ಲಿಸಬೇಕು.

• ಖಾಸಗಿ ಒಡೆತನದಲ್ಲಿರುವ ಎಲ್ಲಾ ಧಾರ್ಮಿಕ ಸ್ಥಳಗಳನ್ನು ರಾಷ್ಟ್ರೀಕರಣಗೊಳಿಸಿ ಅವನ್ನೆಲ್ಲ ಧಾರ್ಮಿಕ ದತ್ತಿ ಇಲಾಖೆಗೆ ವಹಿಸಿಕೊಡಬೇಕು.

ಮಂಗಳೂರು: ಡಾ.ಭಂಡಾರಿ ಸಾವಿನಲ್ಲಿ ಕ್ರಿಕೆಟ್ ಬೆಟ್ಟಿಂಗ್‌ನ ವಾಸನೆ?


ಭಂಡಾರಿ

ಬಿಜೆಪಿ ರಾಜ್ಯ ಆರೋಗ್ಯ ಘಟಕದ ಸಂಚಾಲಕರಾಗಿದ್ದ ಡಾ.ಕೈಕೆರೆ ಮೋಹನ ದಾಸ್ ಭಂಡಾರಿ ಇತ್ತೀಚೆಗಷ್ಟೆ ಪದೀಲ್‌ನ ಅಳಕೆಯಲ್ಲಿರುವ ತಮ್ಮ ಮನೆ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಈ ಕುರಿತು ಸ್ಪಷ್ಟ ಚಿತ್ರಣ ಹೊರಬರುವ ಸಾಧ್ಯತೆ ಇತ್ತಾದರೂ ಪೊಲೀಸರು ಇದು ಆತ್ಮಹತ್ಯೆಯಲ್ಲ, ಆಕಸ್ಮಿಕವಾಗಿ ಕಾಲುಜಾರಿ ಬಾವಿಗೆ ಬಿದ್ದು ಸತ್ತು ಹೋಗಿದ್ದಾರೆಂದು ಅಧಿಕೃತವಾಗಿ ಸಾರುವ ಮೂಲಕ ಪ್ರಕರಣಕ್ಕೆ accidental death ಎಂಬ ಷರಾ ಬರೆದು ಬಿಟ್ಟಿದ್ದಾರೆ. ಆದರೆ ಮೋಹನ್‌ದಾಸ್ ಶವವಾಗಿ ತೇಲಿದ ಬಾವಿ, ಅದರ ಸುತ್ತಲೂ ಇರುವ ಕಟ್ಟೆಗಳನ್ನು ನೋಡಿದ ಎಂತವರಿಗೇ ಆದರೂ ಕಾಲುಜಾರಿ ಬಿದ್ದರೆನ್ನುವ ಮಾತನ್ನು ಒಪ್ಪಲು ಸಾಧ್ಯವೇ ಇಲ್ಲ, ಅದು ಆತ್ಮಹತ್ಯೆ ಎನ್ನುವುದಕ್ಕೆ ಹಲವಾರು ಅನುಮಾನಗಳಿವೆ. ಅವೆಲ್ಲವನ್ನೂ ಕೆದಕುತ್ತಾ ಹೋದರೆ ಆ ಆತ್ಮಹತ್ಯೆಯ ಸೆರಗಿನಲ್ಲಿ ಕ್ರಿಕೆಟ್ ಬೆಟ್ಟಿಂಗ್ ಜಾಲದ ಛಾಯೆಯೂ ಅಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ.

ವೈದ್ಯರಾಗಿ ನಲವತ್ತಕ್ಕೂ ಹೆಚ್ಚು ವರ್ಷಗಳಿಂದ ತಮ್ಮನ್ನು ತೊಡಗಿಸಿಕೊಂಡಿದ್ದ ಮೋಹನ್‌ದಾಸ್ ಬಲು ಕ್ರಿಯಾಶೀಲ ಆಸಾಮಿ. ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನ ಕಾರ್ಯಕಾರಿ ಸಮಿತಿಯ ಸದಸ್ಯನಾಗಿ, ಕರ್ನಾಟಕ ರಾಜ್ಯ ಐಎಂಎನ ಉಪಾಧ್ಯಕ್ಷನಾಗಿ, ಫ್ಯಾಮಿಲಿ ಫಿಸಿಷಿಯನ್ ಒಕ್ಕೂಟದ ಸಂಸ್ಥಾಪಕ ಅಧ್ಯಕ್ಷನಾಗಿ, ಒಟ್ಟಾರೆ ವಿಭಿನ್ನ ಆಯಾಮಗಳಲ್ಲಿ ತನ್ನನ್ನು ಉದ್ದಕ್ಕೂ ತೊಡಗಿಸಿಕೊಂಡು ಬಂದಿದ್ದಂತಹ ವ್ಯಕ್ತಿ. ಮೂಲತಃ ಕುಂದಾಪುರದವರಾದ ಇವರು ಆರಂಭದಲ್ಲಿ ವೃತ್ತಿಯನ್ನು ಆರಂಭಿಸಿದ್ದು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯಲ್ಲಿ, ಅಲ್ಲಿದ್ದದ್ದು ನಾಲ್ಕು ವರ್ಷ ಮಾತ್ರ. ಆಮೇಲೆ ಮಂಗಳೂರಿಗೆ ಬಂದು ಭಂಡಾರಿ ನರ್ಸಿಂಗ್ ಹೋಮ್ ತೆರೆದು ವೃತ್ತಿ ಆರಂಭಿಸಿದ್ದರು. ನಂತರ ಭಂಡಾರಿ ಎಜುಕೇಷನ್ ಟ್ರಸ್ಟ್ ಸ್ಥಾಪಿಸಿ ಶಿಕ್ಷಣ ಕ್ಷೇತ್ರದಲ್ಲೂ ತಮ್ಮನ್ನು ಗುರುತಿಸಿಕೊಂಡಿದ್ದರು. ಈ ಪರಿ productive ವ್ಯಕ್ತಿಯನ್ನು, ಅದಾಗತಾನೆ ಕರಾವಳಿ ತೀರದಲ್ಲಿ ಚಿಗುರೊಡೆಯುತ್ತಿದ್ದ ಬಿಜೆಪಿ ರಾಜಕಾರಣ ಸಹಜವಾಗೇ ಆಕರ್ಷಿಸಿತ್ತು, ಬಿಜೆಪಿ ರಾಜ್ಯ ಘಟಕದ ಮೆಡಿಕಲ್ ಸೆಲ್‌ನಲ್ಲೂ ತಮ್ಮನ್ನು ಗುರುತಿಸಿಕೊಂಡಿದ್ದರು.

ಇಂತಹ ಕ್ರಿಯಾಶೀಲ ಮತ್ತು ಉತ್ಸಾಹಿ ವ್ಯಕ್ತಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆಂದರೆ ಅದರ ಹಿಂದೆ ಪ್ರಚಂಡ ಕಾರಣವೇ ಇದ್ದಿರಬೇಕು. ಇತ್ತೀಚಿನ ದಿನಗಳ ಅವರ ನಡವಳಿಕೆ ಇಂತಹ ಅನುಮಾನಗಳಿಗೆ ಪುಷ್ಟಿ ನೀಡುತ್ತದೆ. ಕಳೆದ ಹದಿನೈದು ದಿನಗಳಿಂದ ಮೋಹನ್‌ದಾಸ್ ವಿಪರೀತ ಖಿನ್ನತೆಗೆ ಒಳಗಾಗಿದ್ದರೆಂದು ಅವರನ್ನು ಹತ್ತಿರದಿಂದ ಕಂಡವರು ಹೇಳುತ್ತಾರೆ. ಆ ದಿನ ಅವರು ಆತ್ಮಹತ್ಯೆ ಮಾಡಿಕೊಂಡದ್ದು ತಿಳಿಯುವುದಕ್ಕೂ ಮೊದಲು ಅವರ ಪತ್ನಿ ಲಲಿತಾ ಆತಂಕಗೊಂಡಿದ್ದ ರೀತಿಯೇ ಮೋಹನ್‌ದಾಸ್ ಮನಸ್ಥಿತಿ ಸರಿ ಇಲ್ಲವೆನ್ನುವುದನ್ನು ಸಾಬೀತುಪಡಿಸುತ್ತದೆ.


ಭಂಡಾರಿ ಆತ್ಮಹತ್ಯೆ ಮಾಡಿಕೊಂಡ ಬಾವಿ

ಜೂನ್ 12ನೇ ತಾರೀಖಿನ ಮಧ್ಯಾಹ್ನದ ವೇಳೆಗೆ ಮನೆಯಲ್ಲಿ ತಮ್ಮ ಪತಿ ಕಾಣದ್ದನ್ನು ಗಮನಿಸಿದ ಲಲಿತಾರವರು ಇಡೀ ಮನೆಯನ್ನು ಹುಡುಕಿದ್ದಾರೆ. ಅವರೆಲ್ಲೂ ಕಾಣದಿದ್ದಾಗ ಕೂಡಲೆ ಗಾಬರಿಯಿಂದ ತಮ್ಮ ಆಂಬುಲೆನ್ಸ್ ಡ್ರೈವರ್ ಶಿವುಗೆ ಫೋನಾಯಿಸಿ ವಿಷಯ ತಿಳಿಸಿ, ತಕ್ಷಣವೇ ಮನೆಗೆ ಬರುವಂತೆ ಹೇಳಿದ್ದಾರೆ. ಆತ ಬಂದು ಮತ್ತೊಮ್ಮೆ ಮನೆಯೆಲ್ಲಾ ಹುಡುಕಿಯಾದ ಮೇಲೆ ಸೀದಾ ಹೋಗಿ ಬಾವಿಯಲ್ಲಿ ಇಣುಕಿ ನೋಡಿದ್ದಾನೆ. ಆಗ ಬಾವಿಯಲ್ಲಿ ಮೋಹನ್‌ದಾಸ್‌ರ ಚಪ್ಪಲಿಗಳು ತೇಲಾಡುತ್ತಿರುವುದು ಕಾಣಿಸಿ ವಿಷಯ ಬಹಿರಂಗವಾಗಿದೆ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ, ತನ್ನ ಗಂಡ ಮನೆಯಲ್ಲಿ ಕಾಣುತ್ತಿಲ್ಲ ಎಂಬ ಒಂದೇ ಕಾರಣಕ್ಕೆ ಪತ್ನಿ ಲಲಿತಾ ಆತಂಕಕ್ಕೀಡಾಗಿ ಗಾಬರಿಯಿಂದ ಡ್ರೈವರ್‌ನನ್ನು ಮನೆಗೆ ಕರೆಸುತ್ತಾರೆಂದರೆ ಮೋಹನ್‌ದಾಸ್ ಮೊದಲಿನ ರೀತಿ ಸಾಮಾನ್ಯ ಮನಸ್ಥಿತಿಯಲ್ಲಿರಲಿಲ್ಲ ಎಂಬುದು ಖಾತ್ರಿಯಾಗುತ್ತದೆ. ಆತ ಯಥಾಸ್ಥಿತಿಯಲ್ಲೇ ಇದ್ದಿದ್ದರೆ ಗಂಡ ಹೊರಗೆಲ್ಲೊ ಹೋಗಿರಬೇಕು, ಮನೆಗೆ ವಾಪಸಾಗಬಹುದೆಂದು ಆಕೆ ಉದಾಸೀನ ಮಾಡುತ್ತಿದ್ದರು. ಆದರೆ ಕಳೆದ ಸ್ವಲ್ಪ ದಿನಗಳಿಂದ ಖಿನ್ನತೆಯಿಂದ ವರ್ತಿಸುತ್ತಿದ್ದ ಗಂಡ ಕಾಣುತ್ತಿಲ್ಲ ಎಂದಕೂಡಲೇ ಆಕೆಯ ಮನದಲ್ಲಿ ಅಪಶಕುನದ ಸೂಚನೆಗಳು ಮೂಡಿ ಡ್ರೈವರ್‌ಗೆ ಫೋನಾಯಿಸುವಂತೆ ಮಾಡಿದ್ದವು..

ಹಾಗೆ ನೋಡಿದರೆ, ಮೋಹನ್‌ದಾಸ್‌ರನ್ನು ಖಿನ್ನತೆಗೆ ತಳ್ಳುವಂತ ಯಾವ ಕೌಟುಂಬಿಕ ಕಾರಣಗಳೂ ಇರಲಿಲ್ಲ, ಮೂರು ಮಕ್ಕಳಲ್ಲಿ ಒಬ್ಬ ಇಂಗ್ಲೆಂಡ್‌ನಲ್ಲಿ ವೈದ್ಯನಾಗಿದ್ದರೆ ಮತ್ತೊಬ್ಬ ಮಂಗಳೂರಿನಲ್ಲೆ ನರ್ಸಿಂಗ್ ಹೋಮ್ ನೋಡಿಕೊಂಡಿದ್ದಾನೆ. ಉಳಿದವನೊಬ್ಬ ಇಂಜಿನಿಯರ್. ಹಾಗಾಗಿ ಅವರದ್ದೊಂದು ರೀತಿಯಲ್ಲಿ ನಿಶ್ಚಿಂತ ನಿವೃತ್ತ ಜೀವನ. ಹಾಗಿದ್ದರೆ ಅವರನ್ನು ಖಿನ್ನತೆಗೆ ದೂಡಿದ್ದಾದರೂ ಏನು? ಅಂತ ಕೆದಕಿದಾಗ ಈ ಕ್ರಿಕೆಟ್ ಬೆಟ್ಟಿಂಗ್‌ನ ವಾಸನೆ ಹೊರಡುತ್ತದೆ.


ಮೋಹನ್‌ದಾಸ್ ಕ್ರಿಕೆಟನ್ನು ವಿಪರೀತ ಎನ್ನುವಷ್ಟರಮಟ್ಟಿಗೆ ಹಚ್ಚಿಕೊಂಡಿದ್ದರು. ದಕ್ಷಿಣ ಕನ್ನಡ ಕ್ರಿಕೆಟ್ ಅಸೋಸಿಯೇಷನ್‌ನ ಉಪಾಧ್ಯಕ್ಷರಾಗಿ, ದ.ಕನ್ನಡ ಕ್ರಿಕೆಟ್ ಸ್ಟೇಡಿಯಮ್‌ನ ಛೇರ್ಮನ್ನಾಗಿ ಅವರು ಇಷ್ಟಪಟ್ಟು ತಮ್ಮನ್ನು ತೊಡಗಿಸಿಕೊಂಡಿದ್ದೇ ಇದನ್ನು ಸಾಬೀತುಪಡಿಸುತ್ತವೆ. ಅವರ ಕ್ರಿಕೆಟ್ ಕ್ರೇಜು ಇತ್ತೀಚೆಗೆ ಮುಕ್ತಾಯವಾದ ಐಪಿಎಲ್ ಟೂರ್ನಿಯಲ್ಲಿ ಮಿತಿಮೀರಿತ್ತೆಂದು ಆತ್ಮೀಯರು ಹೇಳುತ್ತಾರೆ. ಇದೇ ಕಾರಣಕ್ಕೆ ಟೂರ್ನಿಯ ವೇಳೆಯಲ್ಲಿ 40 ಲಕ್ಷದಷ್ಟು ಹಣವನ್ನು ಬೆಟ್ಟಿಂಗ್‌ಗೆ ಹೂಡಿ ಕಳೆದುಕೊಂಡಿದ್ದರೆನ್ನುವ ರಹಸ್ಯವೂ ಅವರ ಆತ್ಮೀಯರಿಂದ ತಿಳಿದುಬಂದಿದೆ. ರಾಷ್ಟ್ರಮಟ್ಟದಲ್ಲಿ ತೀವ್ರ ಚರ್ಚೆಯಾಗುತ್ತಿರುವ ಸ್ಪಾಟ್ ಫಿಕ್ಸಿಂಗ್‌ನಂತಹ ಕರಾಳ ದಂಧೆಯಿಂದಾಗಿ ಲಕ್ಷಾಂತರ ಜನ ಬೆಟ್ಟಿಂಗ್‌ನಿಂದಾಗಿ ಕೋಟ್ಯಂತರ ಹಣ ಕಳೆದುಕೊಂಡದ್ದು ಹೊಸ ವಿಷಯವೇನಲ್ಲ, ಅಂತವರಲ್ಲಿ ಈ ಮೋಹನ್‌ದಾಸ್ ಭಂಡಾರಿ ಕೂಡಾ ಒಬ್ಬರಾಗಿದ್ದಿರಬಹುದು. ಇದೇ ಕಾರಣದಿಂದಾಗಿ ಅವರು ಕಳೆದ ಕೆಲದಿನಗಳಿಂದ ಖಿನ್ನತೆಗೆ ಬಲಿಯಾಗಿದ್ದರು ಎನ್ನಲಾಗುತ್ತಿದೆ.

ಅಂದಹಾಗೆ, ಮೊನ್ನೆಯ ಐಪಿಎಲ್‌ನಲ್ಲಿ ಮಂಗಳೂರಿನಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಬೆಟ್ಟಿಂಗ್ ನಡೆದಿದೆ. ಈ ಬೆಟ್ಟಿಂಗ್‌ನಲ್ಲಿ ಉದ್ಯಮಿಗಳು, ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳು ಹೆಚ್ಚಾಗಿ ತೊಡಗಿಸಿಕೊಂಡಿರುವುದು ವಿಶೇಷ. ಡಾ. ಭಂಡಾರಿ ಆತ್ಮಹತ್ಯೆಯಲ್ಲಿ ಈಗ ಬೆಟ್ಟಿಂಗ್ ಲೋಕದ ಆಯಾಮ ಕಾಣಿಸುತ್ತಿದೆ. ಆದರೆ ನಿಜಕ್ಕೂ ಈ ದಂಧೆಯಲ್ಲಿ ನಷ್ಟಗೊಂಡವರ ಸಂಖ್ಯೆ ದೊಡ್ಡದಿದೆ. ಮೊನ್ನೆಯ ಐಪಿಎಲ್‌ನಲ್ಲಂತೂ ಹೆಚ್ಚಿನ ಫಲಿತಾಂಶಗಳು ತಲೆಕೆಳಗಾಗಿ ಬೆಟ್ಟಿಂಗ್ ಪ್ರಿಯರ ಫೇವರಿಟ್ ತಂಡಗಳು ನೆಲ ಕಚ್ಚಿದೆ. ಹೀಗಾಗಿ ಬೆಟ್ಟಿಂಗ್ ನಡೆ... ಲಾಸ್ ಆದವರ ಸಂಖ್ಯೆಯೂ ಹೆಚ್ಚಿದೆ. ಬೆಟ್ಟಿಂಗ್ ಕಟ್ಟಿ ಕಾಸನ್ನು ವಾಪಸ್ ಕೊಡಲಾಗದವರಿಂದ ವಸೂಲಿಗೆಂದು ಪುಂಡಿ-ರೌಡಿಗಳ ತಂಡವು ಮಂಗಳೂರಿನಲ್ಲಿ ತಿರುಗಾಡುತ್ತಿರುವುದು ಸಾಮಾನ್ಯವಾಗಿಹೋಗಿದೆ.

ಅಷ್ಟಕ್ಕೂ ಮೋಹನ್‌ದಾಸ್‌ಗಾಗಲಿ ಅವರ ಕುಟುಂಬಕ್ಕಾಗಲಿ 40 ಲಕ್ಷವೇನ... ಪ್ರಾಣಹೋಗುವಂತ ಅಮೌಂಟಲ್ಲ. ಆದರೂ 64ರ ಇಳಿವಯಸ್ಸಿನಲ್ಲಿದ್ದ ಆತನಿಗೆ ಸುಖಾಸುಮ್ಮನೆ ಹಣ ಕೈಬಿಟ್ಟದ್ದು ಈ ಪರಿ ಬಾಧಿಸಿರುವ ಸಾಧ್ಯತೆಯನ್ನಂತೂ ತಳ್ಳಿ ಹಾಕುವಂತಿಲ್ಲ. ಆ ಖಿನ್ನತೆ ಅವರನ್ನು ಕರೆತಂದು ಬಾವಿಗೆ ತಳ್ಳಿರುವ ಸಂಭವವೇ ಹೆಚ್ಚು. ಆದರೆ ಇಷ್ಟು ದಿನ ಗೌರವಯುತವಾಗಿ ಬದುಕಿದ, ಬಿಜೆಪಿಯೊಂದಿಗೆ ಬಾಂಧವ್ಯ ಹೊಂದಿದ್ದ ಮೋಹನ್‌ದಾಸ್‌ರ ಸಾವನ್ನು ಬೆಟ್ಟಿಂಗ್‌ನೊಂದಿಗೆ ಬೆರೆಸುವುದು ಅವರ ಕುಟುಂಬದವರು ಸೇರಿದಂತೆ ಸುಮಾರಷ್ಟು ಜನರಿಗೆ ಇಷ್ಟವಿಲ್ಲದಿರಬಹುದು. ಅದೇ ಕಾರಣಕ್ಕೆ, ಅವರ ಆತ್ಮಹತ್ಯೆಯನ್ನು ಆಕಸ್ಮಿಕ ಸಾವನ್ನಾಗಿಸುವ ಪ್ರಯತ್ನಗಳು ನಡೆದಿರಬಹುದೆನ್ನುವ ಗುಸುಗುಸು ಹರಿದಾಡುತ್ತಿದೆ..

● ವರದಿಗಾ...

ಗುಟ್ಕಾ ನಿಷೇಧ: ಅಡಿಕೆ ಬೆಳೆಗಾರರ ಬವಣೆ



ಸಿದ್ಧರಾಮಯ್ಯನವರ ಸರಕಾರ ಅಧಿಕಾರಕ್ಕೆ ಬಂದ ...ಷದರಲ್ಲಿ ಎರಡು ಜನಪ್ರಿಯ ಕಾರ್ಯಕ್ರಮಗಳನ್ನು ...ರಿಗೆ ತಂದಿದೆ. ಒಂದು ಕಡುಬಡವರಿಗೆ ಒಂದು ರೂ.ಗೆ ...ವತ್ತು ಕೆಜಿ ಅಕ್ಕಿ ಕೊಡುವುದು, ಇನ್ನೊಂದು ಯುವಕರ ...ರೋಗ್ಯ ದೃಷ್ಟಿಯಿಂದ ಗುಟ್ಕಾ ಮೇಲೆ ನಿಷೇಧ ಹೇರಿರು ...ದು. ಮೇಲುನೋಟಕ್ಕೆ ಈ ಎರಡೂ ಕಾರ್ಯಕ್ರಮಗಳು ...ಗತಾರ್ಹವಾಗಿವೆ. ಆದರೆ ಈ ಎರಡೂ ಕಾರ್ಯಕ್ರಮ ...ಂದ ಆಗುವ ಪರಿಣಾಮಗಳಿಂದ ಸಿದ್ಧರಾಮಯ್ಯ ಅದು ...ಗೆ ಬಚಾವ್ ಆಗುತ್ತಾರೆ ಅನ್ನುವುದನ್ನು ಮುಂದೆ ...ೋಡಬೇಕು.

ಈ ಎರಡೂ ಯೋಜನೆಗಳಿಂದ ಭತ್ತ ಮತ್ತು ಅಡಿಕೆ ...ೆಯುವ ರೈತರಿಗೆ ಪೆಟ್ಟು ಬೀಳುವುದು ಸತ್ಯ. ಅಗ್ಗದ ...ದಲ್ಲಿ ಕಡು ಬಡವರಿಗೆ ಅಕ್ಕಿ ಕೊಡುವುದರ ಬಗ್ಗೆ ...ತ್ತ ಬೆಳೆಯುವ ಯಾವ ರೈತರ ವಿರೋಧವಿಲ್ಲ, ಆದರೆ ... ಯೋಜನೆಯಿಂದ ಭತ್ತ ಬೆಳೆಯುವ ರೈತರ ಮೇಲೆ ...ಮ ಪರಿಣಾಮವಾಗುತ್ತದೆ ಎಂಬುದನ್ನು ಪರಿಶೀಲಿಸಿ ...ಯೇ, ರೈತರನ್ನು ಉಪೇಕ್ಷಿಸಿ ಅಕ್ಕಿ ಹಂಚುವ ನೈತಿಕತೆ ...ಕಾರಗಳಿಗಿವೆಯೇ ಎಂಬ ಪ್ರಶ್ನೆಯಂತೂ ಇದ್ದೇ ಇದೆ.

ಇಂದು ಒಂದು ಕ್ವಿಂಟಾಲ್ ಭತ್ತ ಬೆಳೆಯಬೇಕಾದರೆ ...ಲ್ಲವೆಂದರೂ ಎರಡರಿಂದ ಎರಡೂವರೆ ಸಾವಿರ ...ಪಾಯಿ ಖರ್ಚಾಗುತ್ತದೆ. ಆದರೆ ಅದೇ ಭತ್ತಕ್ಕೆ ...ರುಕಟ್ಟೆಯಲ್ಲಿರುವ ದರ ಕೇವಲ ಕ್ವಿಂಟಾಲಿಗೆ 1,100 ...ದ 1,200 ರೂಪಾಯಿ ಮಾತ್ರ. ಅಂದರೆ ಭತ್ತ ಬೆಳೆ ...ುವ ರೈತರು ಇವತ್ತು ಅದನ್ನು ಅರ್ಧ ಬೆಲೆಗೆ ಮಾರಿ ...ಳ್ಳುತ್ತಿದ್ದಾರೆ. (ಇದು ಮಲೆನಾಡಿನ ಲೆಕ್ಕಾಚಾರ. ನೀರಾವರಿ ...ಲಭ್ಯ ಇರುವ ಪ್ರದೇಶಗಳಲ್ಲಿ ಬರೇ ರಾಸಾಯನಿಕ ಬಳಸಿ ...ತ್ತ ಬೆಳೆಯುವವರಿಗೆ ಖರ್ಚು ಸ್ವಲ್ಪ ಕಡಿಮೆ ಆಗಬಹುದು. ..., ಮಲೆನಾಡಿಗಿಂತ ಉತ್ಪಾದನೆಯೂ ಹೆಚ್ಚು. ಆದರೆ ...ಳ ವ್ಯತ್ಯಾಸವೇನು ಇರುವುದಿಲ್ಲ.) ಹೀಗೆ ಅರ್ಧ ಬೆಲೆಗೆ ...ರಿಕೊಳ್ಳುವ ರೈತರು ಅದೆಷ್ಟು ದಿನ ಭತ್ತವನ್ನು ...ೆಯಬಹುದು?

'ಅಗ್ಗಕ್ಕೆ ಅನ್ನ ಸಿಕ್ಕಿದರೆ ಉತ್ತೋರ್ಯಾರು' ಎಂಬ ಮಾತಿದೆ. ...ಕ್ಕಿ, ಗೋಧಿ, ರಾಗಿ ಮುಂತಾದ ಆಹಾರ ಬೆಳೆಗಳಿಗೆ ...ರುಕಟ್ಟೆಯಲ್ಲಿ ದರ ಏರಿಸಲು ಯಾವ ಸರ್ಕಾರಗಳೂ ...ುವುದಿಲ್ಲ. ಯಾವುದೇ ಅಗತ್ಯ ವಸ್ತುಗಳಿಗೂ ಇಲ್ಲದ ...ಿ ಪದ್ಧತಿ ಇಂದಿಗೂ ಆಹಾರ ಬೆಳೆಗಳ ಮೇಲಿದೆ. ...ತ್ತ ಬೆಳೆದರೆ ರೈತರಿಂದ ನೇರವಾಗಿ ಅಲ್ಲದಿದ್ದರೂ ಭತ್ತ ...ರೀದಿದಾರರಿಂದ, ಅಕ್ಕಿ ಮಾಡುವವರಿಂದ ಸರಕಾರ ಕನಿಷ್ಠ ...00 ರೂಪಾಯಿಗಳ ಲೆವಿಯನ್ನು ಬಲಾತ್ಕಾರದಿಂದ ...ೆಯುತ್ತದೆ. ಇಷ್ಟೆಲ್ಲ ಆದ ಮೇಲೂ ಭತ್ತಕ್ಕೆ ಸೂಕ್ತ ...ೆ ಸಿಗದಿದ್ದರೆ ರೈತರು ಆರ್ಥಿಕ ಬೆಳೆ ಬೆಳೆಯಲಾರಂಭಿಸು ...ೆ. ಭತ್ತದ ಬದಲಾಗಿ ಆಕೇಶಿಯ, ಸರ್ವೇಮರ ನೆಡುತ್ತಾರೆ. ...ುಂದೊಂದು ದಿನ ದುಡ್ಡು ಕೊಟ್ಟರೂ ಅಕ್ಕಿ ಸಿಗದೆ ...ೋಗಬಹುದು.

ಹೀಗೆ ಹೇಳುತ್ತಿರುವುದರಿಂದ 'ಬಡವರಿಗೆ ಆಹಾರ ...ವ್ರತೆ ಒದಗಿಸುವ ಯೋಜನೆಯನ್ನು' ವಿರೋಧಿಸುತ್ತಿದ್ದೇ ...ಬ ಆರೋಪ ಬರಬಹುದು. ಖಂಡಿತ ಅಗ್ಗಕ್ಕೆ ಅಕ್ಕಿ ...ಡುವುದಕ್ಕೆ ನನ್ನ ವಿರೋಧವಿಲ್ಲ, ಆದರೆ ಭತ್ತ ಬೆಳೆಯುವ ...ತರಿಗೆ ಲಾಭದಾಯಕವಾದ, ವೈಜ್ಞಾನಿಕವಾದ ಬೆಲೆ ನಿಗದಿ ...ಾಡದ ಸರ್ಕಾರಕ್ಕೆ ಅದನ್ನು ಅಗ್ಗದ ದರದಲ್ಲಿ ಹಂಚುವ ...ತಿಕತೆ ಇಲ್ಲ ಎಂಬುದಷ್ಟೇ ನನ್ನ ನಿಲುವು. ಆ ಕಾರಣಕ್ಕೆ ...ರ್ಕಾರ ಇನ್ನಾದರೂ ಭತ್ತಕ್ಕೆ ಬೆಂಬಲ ಬೆಲೆ ಘೋಷಿಸಬೇಕು.

...ಟ್ಕಾ ನಿಷೇಧಿಸಿರುವುದು ಆತುರದ ಕ್ರಮ

... ಯುವಜನರ ಆರೋಗ್ಯ ದೃಷ್ಟಿಯಿಂದ ಗುಟ್ಕಾವನ್ನು ...ಷೇಧ ಮಾಡಿದ್ದೇವೆ ಎಂದು ಆರೋಗ್ಯ ಮಂತ್ರಿಗಳು ಹೇಳಿದ್ದಾರೆ. ಸುಪ್ರೀಂಕೋರ್ಟಿನ ಆದೇಶ ಮತ್ತು ಗುಣಮಟ್ಟದ ಆಹಾರ ನಿಯಂತ್ರಣ ಕಾಯ್ದೆಯನ್ವಯ ನಿಷೇಧ ಮಾಡಲಾಗಿದೆ ಎಂದೂ, ಈಗಾಗಲೇ ಇಪ್ಪತ್ತು ರಾಜ್ಯಗಳಲ್ಲಿ ಗುಟ್ಕಾವನ್ನು ನಿಷೇಧಿಸಲಾಗಿದೆ ಎಂದೂ ಅವರು ಹೇಳಿದ್ದಾರೆ.

ದೇಶದ ಇಪ್ಪತ್ತು ರಾಜ್ಯಗಳಲ್ಲಿ ಗುಟ್ಕಾವನ್ನು ನಿಷೇಧಿಸಿದ್ದರೂ ಅವೆಲ್ಲ 'ಬಳಕೆದಾರ' ರಾಜ್ಯಗಳೇ ಹೊರತು 'ಬೆಳೆಗಾರ' ರಾಜ್ಯಗಳಲ್ಲ. ಕರ್ನಾಟಕದ ಐದು ಲಕ್ಷ ಎಕರೆಗಳಲ್ಲಿ 2 ಲಕ್ಷ ಟನ್ ಅಡಿಕೆ ಬೆಳೆಯಲಾಗುತ್ತಿದ್ದು ದೇಶದಲ್ಲಿಯೆ ಪ್ರಥಮ ಸಾಲಿನಲ್ಲಿದೆ. ನಾವು ಬೆಳೆದ ಅಡಿಕೆಯಲ್ಲಿ ಅರ್ಧಕ್ಕಿಂತ ಹೆಚ್ಚು ಅಡಿಕೆ ಗುಟ್ಕಾಕ್ಕೆ ಬಳಕೆಯಾಗುತ್ತಿದೆ. ಅಡಿಕೆ ಬೆಳೆಯನ್ನು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನಂಬಿದ ಎರಡು ಕೋಟಿ ಜನ ನಮ್ಮ ರಾಜ್ಯದಲ್ಲಿದ್ದಾರೆ. ಹೀಗಿರುವಾಗ ಈ ನಿಷೇಧವು ಇವರೆಲ್ಲರ ಬದುಕಿನ ಮೇಲೆ ಪರಿಣಾಮ ಬೀರಲಿದೆ.

ಗುಟ್ಕಾ ನಿಷೇಧದ ಗುಮ್ಮ ಇಂದು ನಿನ್ನೆಯದಲ್ಲ, ಗುಟ್ಕಾ ಹುಟ್ಟಿಕೊಂಡ ದಿನದಿಂದ ಅದರ ಜನಪ್ರಿಯತೆ ಸಹಿಸದ ಸಿಗರೇಟು ಕಂಪನಿಗಳು ಇದರ ವಿರುದ್ಧ ಹುಯಿಲೆಬ್ಬಿಸುತ್ತಲೆ ಇದ್ದಾವೆ. 'ಅಡಿಕೆ ಬೆಳೆಗಾರರು ಗುಟ್ಕಾ ನಂಬಿ ಬದುಕುತ್ತಿಲ್ಲ, ಸರ್ಕಾರ ರೈತರ ಕೈಬಿಡುವುದಿಲ್ಲ, ಈ ನಿಷೇಧದಿಂದಾಗಿ ಅಡಿಕೆ ಬೆಲೆ ಕುಸಿಯುವುದಿಲ್ಲ' ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಆದರೆ ಅವರು ಈ ಹೇಳಿಕೆ ಕೊಟ್ಟ ಎರಡು ದಿನಗಳಲ್ಲಿ ಅಡಿಕೆ ಬೆಲೆ ಹಿಂದಿನ ಬೆಲೆಗೆ ಬಂದು ನಿಂತಿದೆ.

ಕಳೆದ ಮೂವತ್ತು ವರ್ಷಗಳಿಂದ ಅಡಿಕೆಗೆ ಇದೇ ದುರ್ಗತಿ ಮತ್ತೆ ಮತ್ತೆ ಎದುರಾಗಿದೆ. ಸಂಸ್ಕರಿಸಿದ ಅಡಿಕೆಯನ್ನು ಇನ್ನೇನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಬೇಕು. ಅಷ್ಟರಲ್ಲಿ ಸುಪ್ರೀಂಕೋರ್ಟ್ ಆದೇಶ, ಯಾವುದೂ ರಾಜ್ಯದಲ್ಲಿ ಗುಟ್ಕಾ ನಿಷೇಧ, ಯಾರೋ ಅಡಿಕೆ ಮಂಡಿ ಮಾಲೀಕ ಆತ್ಮಹತ್ಯೆ ಮಾಡಿಕೊಂಡ, ಇನ್ಯಾರೋ ಸಾಲ ತೀರಿಸದೆ ಓಡಿಹೋದ ಎಂಬ ಸುದ್ದಿಗಳು ಅಂದು ಅವತ್ತು ಮಾರುಕಟ್ಟೆಯಲ್ಲಿ ಅಡಿಕೆ ದರ ಕುಸಿಯುತ್ತದೆ. ಅದರಿಂದ ರೈತರಿಗೆ ಸಾವಿರಗಟ್ಟಲೆ ರೂಪಾಯಿ ನಷ್ಟವಾಗುತ್ತದೆ. ಎಂತಹದ್ದೇ ಕಷ್ಟದಲ್ಲಿಯೂ ಅಡಿಕೆ ಬೆಳೆಗಾರರನ್ನು ಕೇಳುವವರೇ ಇಲ್ಲದಂತಾಗಿದೆ.

ಸಿದ್ದರಾಮಯ್ಯ ಒಂದು ಲೆಕ್ಕದಲ್ಲಿ ಅಡಿಕೆ ಬೆಳೆಗಾರರಿಗೆ ನೆಮ್ಮದಿಯನ್ನು ತಂದು ಕೊಟ್ಟಿದ್ದಾರೆ ಎನ್ನಬಹುದು. ಯಾಕೆಂದರೆ ಕಳೆದ ಮೂವತ್ತು ವರ್ಷಗಳಿಂದ ಗುಟ್ಕಾ ಗುಮ್ಮ ನಿತ್ಯವೂ ರೈತರನ್ನು ಕಾಡುತ್ತಿತ್ತು, ಅದಕ್ಕೆ ಸಿದ್ದರಾಮಯ್ಯ ನಾಂದಿ ಹಾಡಿದ್ದಾರೆ. ಇನ್ನಾದರೂ ಅಡಿಕೆಗೆ ಒಂದು ಸ್ಥಿರವಾದ ಬೆಲೆ ಸಿಕ್ಕಬಹುದು. ಅದರಿಂದ ಅಡಿಕೆ ಬೆಳೆಗಾರ ಉಳಿಯುತ್ತಾನೋ, ಸಾಯುತ್ತಾನೋ ತೀರ್ಮಾನವಾಗುತ್ತದೆ.

ಅಷ್ಟೇ ಅಲ್ಲ, ಅಡಿಕೆ ಬೆಳೆಗಾಗಿ ರೈತರು ಗುಟ್ಕಾವನ್ನು ಬೆಂಬಲಿಸಬೇಕಾದ ಪರಿಸ್ಥಿತಿ ಇತ್ತು, ಕಂಡವರ ಮಕ್ಕಳಿಗೆ ವಿಷ ಉಣಿಸಿ ತಾವು ದುಡ್ಡು ಮಾಡಿಕೊಳ್ಳುತ್ತಾರೆ ಎಂಬ ಆರೋಪವೂ ಅಡಿಕೆ ಬೆಳೆಯುವವರ ಹೆಗಲ ಮೇಲಿತ್ತು, ಅದರಿಂದ ಇನ್ನಾದರೂ ಮುಕ್ತಿ ದೊರಕಬಹುದು.

1980 ರಲ್ಲಿ ಅಡಿಕೆಗೆ 1500-1800 ರೂಪಾಯಿ ಬೆಲೆ ಇತ್ತು, ಕೊಟಾರಿ ಕಂಪನಿಯವರು ತಾಂಬೂಲವೆಂಬ ಗುಟ್ಕಾವನ್ನು ಪೊಟ್ಟಣಗಳಲ್ಲಿ ಹಾಕಿ ಮಾರಲು ಪ್ರಾರಂಭಿಸಿದರು. ಆಗ ಅಡಿಕೆಯ ಬೆಲೆ ದ್ವಿಗುಣವಾಯಿತು. ಅವತ್ತೆ

ವಿಶೇಷ ಲೇಖನ

ಕಲ್ಕುಳಿ ವಿಠಲ್ ಹೆಗ್ಡೆ

ಗುಟ್ಕಾ ನಿಷೇಧ ಮಾಡಬೇಕು ಎಂಬ ಒತ್ತಾಯವೂ ಕೇಳಿ ಬಂದಿತ್ತು. ಗುಟ್ಕಾ ನಿಷೇಧ ಮಾಡಬೇಕು ಎಂದು ಹೇಳುತ್ತಿದ್ದವರ ಹಿಂದೆ ನಿಂತಿದ್ದವರು ಸಿಗರೇಟ್ ಕಂಪನಿಗಳ ಮಾಲೀಕರು. ಅದರಲ್ಲೂ ಮುಖ್ಯವಾಗಿ ಐಟಿಸಿ ಕಂಪನಿ. ವಿಪರ್ಯಾಸವೆಂದರೆ ತಮ್ಮ ಪದಾರ್ಥದಲ್ಲಿ ನೂರಕ್ಕೆ ನೂರು ತಂಬಾಕನ್ನೇ ಬಳಸುವ ಸಿಗರೇಟ್ ಕಂಪೆನಿಗಳು, ಗುಟ್ಕಾದಲ್ಲಿ ಒಂದಿಷ್ಟು ತಂಬಾಕನ್ನು ಬಳಸುತ್ತಿದ್ದುದ್ದನ್ನೇ ದೊಡ್ಡದು ಮಾಡಿ 'ಅದು ಆರೋಗ್ಯಕ್ಕೆ ಹಾನಿಕರ' ಎಂದು ವಾದ ಮಂಡಿಸಿದವು.

Food Safety and Standards Authority of India (FASSI) (ಫಾಸ್ಸಿ) ಕೂಡ ಆಗಸ್ಟ್ 5, 2011ರಲ್ಲಿ ಅಡಿಕೆಯೊಂದಿಗೆ ತಂಬಾಕನ್ನು ಬೆರೆಸುವುದನ್ನು 2, 3, 4 ಕಾಯ್ದೆಯಡಿ ನಿಷೇಧಿಸಿ ಅದರ ನಿಯಂತ್ರಣಕ್ಕೆ ಆದೇಶ ಮಾಡಿತ್ತು, ಈ ಆದೇಶ ಮಾರ್ಚ್ 2012ರಿಂದ ಜಾರಿಗೆ ಬಂದಿದೆ. ಇದರ ಪ್ರಕಾರ ಆಹಾರ ಮತ್ತು ಔಷಧಿ ಪ್ರಾಧಿಕಾರವು ಗುಟ್ಕಾ ಮಾಡುವವರ ಮತ್ತು ಮಾರುವವರ ಮೇಲೆ 25 ಸಾವಿರ ದಂಡ ವಿಧಿಸಬಹುದಾಗಿದೆ.

ಮೇಲ್ಕಂಡ ಕಾಯ್ದೆಯ ಸೆಕ್ಷನ್ 2, 3, 4 ರ ಪ್ರಕಾರ ತಂಬಾಕು ಅಥವಾ ನಿಕೋಟಿನ್‌ನನ್ನು ಯಾವುದೇ ಆಹಾರ ಪದಾರ್ಥ ತಯಾರಿಕೆಯಲ್ಲಿ ಬಳಸಬಾರದು. ಫಾಸಿಯ ನಿರ್ದೇಶಕರಾದ ವಿ.ಎನ್.ಗೌರ್ ಅವರು ಅಡಿಕೆ ಬಳಸಿ ತಯಾರಿಸುವ ಪಾನ್‌ಮಸಲಾ ಆಹಾರವಂತೆ. ಅದನ್ನು ಸುಪ್ರೀಂ ಕೋರ್ಟಿಗೆ ಸಲ್ಲಿಸಿದ ಮೇಲ್ಮನವಿಯಲ್ಲಿ ಪ್ರಶ್ನಿಸಲಾಗಿತ್ತು, ಆಗ ಕೋರ್ಟ್ ಕೂಡ ಅಡಿಕೆ ಮತ್ತು ಪಾನ್‌ಮಸಾಲ ಪರಿಮಳ ಮತ್ತು ರುಚಿಗೆ ಅಗಿಯುವುದರಿಂದ ಅದು ಆಹಾರವೆಂದು ತೀರ್ಪು ನೀಡಿತ್ತು, ಅದರ ಪ್ರಕಾರ ಸೆಕ್ಷನ್ 2(5) ಕಾಯ್ದೆಯಂತೆ ಈಗ ಗುಟ್ಕಾವನ್ನು ನಿಷೇಧಿಸಲಾಗಿದೆ.

ಈ ಕಾಯ್ದೆಯಲ್ಲಿ ಗುಟ್ಕಾವನ್ನು ಉದ್ದೇಶಪೂರ್ವಕವಾಗಿ ಒಂದು ಕಲಂನಡಿ ಸೇರಿಸಲಾಗಿದೆ ಎಂಬ ಅನುಮಾನ ಇದೆ. ಈ ಕಾಯ್ದೆಯು ಮುಖ್ಯವಾಗಿ ಗುಣಮಟ್ಟದ ಆಹಾರವನ್ನು ಒದಗಿಸುವ ಮತ್ತು ಕಲಬೆರಕೆಯನ್ನು ತಡೆಯುವ ಕಾಯ್ದೆಯಾಗಿದೆ. ಮುಖ್ಯವಾಗಿ ಬೇಕರಿ, ಸ್ವೀಟ್‌ಸ್ಟಾಲ್, ಹೋಟೆಲ್‌ಗಳಲ್ಲಿ ಬಳಸುವ ಬಣ್ಣ, ಎಣ್ಣೆ, ಹಾಲು, ತುಪ್ಪ ಮುಂತಾದವುಗಳ ಕಲಬೆರಕೆ; ಕೃತಕವಾಗಿ ಹಣ್ಣು ಮಾಡಲು ಬಳಸುವ ಅಪಿಟಲಿನ್ ಆಸಿಡ್ (ಕಾರ್ಬನ್ ಗ್ಯಾಸ್) ಮತ್ತು ಹಣ್ಣು ಹೊಳೆಯುವಂತೆ ಮಾಡಲು ಬಳಸುವ ವಿಷಕಾರಿ ಮ್ಯಾಣ (ವಾಕ್ಸ್‌ಸ್ಪ್ರೇ) ಮುಂತಾದವುಗಳ ತಡೆಗೆ ಈ ಕಾನೂನನ್ನು ಜಾರಿಗೆ ತರಲಾಗಿತ್ತು, ವಿಚಿತ್ರವೆಂದರೆ ಕಾಫಿಪುಡಿಯೊಂದಿಗೆ ಬಳಸುವ ಚಿಕೋರಿಗೆ ಈ ಕಾಯ್ದೆಯಲ್ಲಿ ವಿನಾಯತಿ ನೀಡಲಾಗಿದೆ. ಯಾಕೆಂದರೆ ಚಿಕೋರಿ ಬೆಳೆ ಮತ್ತು ಮಾರುಕಟ್ಟೆ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಕೈಯಲ್ಲಿದೆ.

ಹೊಡೆತ ಬೆಳೆಗಾರರಿಗೆ

ಅಡಿಕೆ ಮಲೆನಾಡಿನ ಸಾಂಪ್ರದಾಯಿಕ ಬೆಳೆ. ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಮಲೆನಾಡಿನಲ್ಲೂ ಸಾವಿರಾರು ವರ್ಷಗಳಿಂದ ಅಡಿಕೆಯನ್ನು ರೈತರು ಬಳಸುತ್ತಿದ್ದಾರೆ. ಅಡಿಕೆಗೆ ಒಳ್ಳೆಯ ಧಾರಣೆ ಬಂದಾಗ ಆಹಾರ ಬೆಳೆಯಲು ಕಟ್ಟಿದ್ದ ಅಣೆಕಟ್ಟಿನ ನೀರಿನಲ್ಲೂ ಅಡಿಕೆಯನ್ನು ಜನ ಬೆಳೆಯಲಾರಂಭಿಸಿದರು. ಆದರ ಮೇಲೆ ಯಾವ ನಿಯಂತ್ರಣವೂ ಇರಲಿಲ್ಲ.

ಈಗ ನೋಡಿದರೆ ಅಡಿಕೆಯನ್ನು ಬೆಳೆಯುವ ಸಾಂಪ್ರದಾಯಿಕ ಪ್ರದೇಶಗಳಲ್ಲಿ ಅಡಿಕೆಗೆ ಹಳದಿ ರೋಗ, ಹಿಡಿಮುಂಡಿಗೆ ಇತ್ಯಾದಿ ಮಾರಣಾಂತಿಕ ರೋಗಗಳು ತಾಗಿ ಇನ್ನು ಕೆಲವೇ ವರುಷಗಳಲ್ಲಿ ಸಂಪೂರ್ಣ ಅಡಿಕೆ ತೋಟ ಗಳನ್ನೇ ಬಲಿ ತೆಗೆದುಕೊಳ್ಳುವ ಲಕ್ಷಣಗಳು ಕಾಣುತ್ತಿದೆ. ಹಳದಿ ರೋಗಪೀಡಿತ ರೈತರು ಆತ್ಮಹತ್ಯೆಯ ದಾರಿ ಹಿಡಿದಿದ್ದಾರೆ. ಇಂತಹ ರೈತರ ರಕ್ಷಣೆಗೆ ಶಿಫಾರಸ್ಸುಗಳನ್ನು ಮಾಡಿದ್ದ ಗೊರಬ್ ಸಿಂಗ್ ವರದಿ ಇದ್ದರೂ, ಈ ಬಗ್ಗೆ ಹೈಕೋರ್ಟ್ ಆದೇಶ ಇದ್ದರೂ ಯಾವುದನ್ನೂ ಮಾಡದ ಸರ್ಕಾರಗಳು ಅಡಿಕೆ ಬೆಳೆಗಾರರನ್ನು ಸತಾಯಿಸುತ್ತಲೇ ಇವೆ.

ಸಿದ್ದರಾಮಯ್ಯನವರು ತರಾತುರಿಯಲ್ಲಿ ಗುಟ್ಕಾ ನಿಷೇಧ ಮಾಡಿರದಿದ್ದರೆ ಅವರಾಗಲಿ ಅವರ ಅಧಿಕಾರಿಗಳಾಗಲಿ ಜೈಲಿಗೆ ಹೋಗುತ್ತಿರಲಿಲ್ಲ. ಗುಟ್ಕಾ ಕೇಸು ಇನ್ನೂ ಸುಪ್ರೀಂಕೋರ್ಟಿನಲ್ಲಿ ಚಾಲ್ತಿಯಲ್ಲಿರುವುದರಿಂದ ಅಡಿಕೆ ಮತ್ತು ಅಡಿಕೆ ಬೆಳೆಗಾರರ ಪರವಾಗಿ ವಾದಿಸಲು ನೂರು ಕಾರಣಗಳಿದ್ದವು.

ಈಗ ಬಹುದೊಡ್ಡ ಆತಂಕವಿರುವುದು ಮುಂದೊಂದು ದಿನ ಅಡಿಕೆಯನ್ನೇ ನಿಷೇಧಿಸುವ ಹುನ್ನಾರ ನಡೆಯುತ್ತಿರುವ ಬಗ್ಗೆ. ಭೋಪಾಲ್‌ನಲ್ಲಿರುವ ಪೀಪಲ್ಸ್ ಡೆಂಟಲ್ ಕಾಲೇಜಿನ ಬಾಯಿ ಮತ್ತು ಕುತ್ತಿಗೆ ಕ್ಯಾನ್ಸರ್ ತಜ್ಞ ಡಾ. ಶಹಜಿ ಥಾಮಸ್ ಪ್ರಕಾರ 'ಅಡಿಕೆಯೊಂದಿಗೆ ಬಳಸುವ ತಂಬಾಕು ಸುಣ್ಣ ಆರೋಗ್ಯಕ್ಕೆ ಹಾನಿಕರ. ಅಡಿಕೆಯಲ್ಲಿರುವ ಕಾರೋಲಿನ್ ಎಂಬ ಪದಾರ್ಥ ಕ್ಯಾನ್ಸರ್‌ಕಾರಕ. ಅದಕ್ಕೆ ಅಡಿಕೆಯನ್ನೇ ನಿಷೇಧಿಸಬೇಕು' ಎಂಬುದು.

ಅಡಿಕೆಯನ್ನು ಈಗಾಗಲಿ ನಿಷೇಧಿತ ಪಟ್ಟಿಯಲ್ಲಿ ಸೇರಿಸಿರುವುದರಿಂದ ಮುಂದೊಂದು ದಿನ ಇದು ಕೂಡ ಸಾಧ್ಯವಾಗಬಹುದು. ಇದನ್ನು ವಿರೋಧಿಸಲು ಅಡಿಕೆ ಬೆಳೆಗಾರರ ದೊಡ್ಡ ಮಟ್ಟದ ಸಂಘಟನೆಯಾಗಲಿ, ಸಂಸ್ಥೆಯಾಗಲಿ ಇಲ್ಲ.

ಆದರೆ ಒಂದು ಮಾತು: ಮುಂದಿನ ಬಜೆಟ್‌ನಲ್ಲಿಯೇ ಅಡಿಕೆ ಬೆಳೆಗಾರರಿಗೆ ಪರಿಹಾರ ನೀಡದಿದ್ದಲ್ಲಿ ಕಾಂಗ್ರೆಸ್ ಸರ್ಕಾರ ಲೋಕಸಭಾ ಚುನಾವಣೆಯಲ್ಲಿ ಪರಿಣಾಮ ಎದುರಿಸಬೇಕಾಗಬಹುದು... ●

ಕಣ್ಣಾಮುಚ್ಚಾಲೆಯಾಟ.....

'ಲಂಕೇಶ್' ಅನ್ನು ಇನ್ನಷ್ಟು ವೈವಿಧ್ಯಮಯಗೊಳಿಸಲು ನಮ್ಮ ತಂಡ ಯೋಚಿಸುತ್ತಿದೆ. ಹಾಗಾಗಿ ಓದುಗರ ಪ್ರಶ್ನೆಗಳಿಗೆ ಉತ್ತರಿಸುವ 'ಕಣ್ಣಾಮುಚ್ಚಾಲೆ' ಅಂಕಣವನ್ನು ಪುನರಾರಂಭಿಸುತ್ತಿದ್ದೇವೆ.


ಪ್ರಶ್ನೆಗಳು ಯಾವ ವಿಚಾರ ಕುರಿತದ್ದಾದರೂ ಆದೀತು. ಆದರೆ ಪುಟ್ಟದಾಗಿರಲಿ. ಉತ್ತರಿಸುವವರಿಗೂ ಸವಾಲೆನಿಸುವಂತಿರಲಿ.

ನಿಮ್ಮ ಪ್ರಶ್ನೆಗಳನ್ನು ಪೋಸ್ಟ್ ಕಾರ್ಡ್ ಮೂಲಕ ಅಥವಾ 9980331427 ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಮೂಲಕ ಅಥವಾ lankesh70@rediffmail.comಗೆ ಇ-ಮೇಲ್ ಮೂಲಕವೂ ಕಳುಹಿಸಬಹುದು.

ಓದುಗರಿಗೆ ಮುದ ನೀಡುವಂತ, ಯೋಚನೆಗೆ ಪ್ರೇರೇಪಿಸುವಂತ, ಸುಮ್ಮನೆ ನಕ್ಕು ಬಿಡುವಂತೆ ಮಾಡಬಲ್ಲ 'ಕಣ್ಣಾಮುಚ್ಚಾಲೆ' ಅಂಕಣ ಮುಂದಿನ ಸಂಚಿಕೆಯಿಂದ ಶುರುವಾಗಲಿದೆ.

ಪ್ರಶ್ನೆ ಕಳುಹಿಸಬೇಕಾದ ವಿಳಾಸ
ಲಂಕೇಶ್ ವಾರ ಪತ್ರಿಕೆ, ಕಣ್ಣಾಮುಚ್ಚಾಲೆ ವಿಭಾಗ,
ನಂ. 9, ಇಎಟಿ ರಸ್ತೆ, ಬಸವನಗುಡಿ, ಬೆಂಗಳೂರು 560004


ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್



ತನ್ವೀರ್ ಪಡೆ ಜೈಲುಪಾಲು

ಶಿವಾಜಿನಗರದಲ್ಲಿ 'ಇಜ್ಜತ್ ಕಾ ಲಫಡಾ'

ಶಿವಾಜಿನಗರದ ಪಾಪಕೂಪದಲ್ಲಿ ಹರಿದ ರಕ್ತ ಮತ್ತು ಉರುಳಿದ ತಲೆಗಳ ಲೆಕ್ಕ ಸಣ್ಣದೇನಲ್ಲ. ಕೋಳಿ ಫಯಾಜ್, ರಿಜ್ವಾನ್ ಮೌಲಾ, ಬಾಂಬೆ ಹಮೀದ್, ಪೈಲ್ವಾನ್ ಆಜಮ್- ಹೀಗೆ ಪುಡಿಪುಡಿಗಳಿಂದ ಹಿಡಿದು ದೈತ್ಯ ಘಂಟರುಗಳ ತನಕ ರಕ್ತ ಹರಿಸಿದವರ್ಯಾರೂ ಉಳಿದಿಲ್ಲ. ಇದು ಗೊತ್ತಿದ್ದೂ ಹೊಸ ಹೊಸ ಹುಡುಗರು ಫೀಲ್ಡಿಗಿಳಿಯುವುದು ನಿಂತಿಲ್ಲ.


ರೋಷನ್

ಶಿವಾಜಿನಗರದ ಪಕ್ಕಾ ಮುಸ್ಲಿಂ ವರಸೆಯಲ್ಲೇ ಹೇಳುವುದಾದರೆ; ಆದು ಇಜ್ಜತ್ ಕಾಲ ಫಡಾ!

ಅಂದರೆ ಮರ್ಯಾದೆಗಾಗಿ ನಡೆದ ಬೀದಿ ಕಾಳಗ. 'ಜಮಾನಾ ರೌಡಿ' ಎಂದು ಹೊಸ ಹುಡುಗರು ಕೊಡುವ ಚೂರುಪಾರು ಮರ್ಯಾದೆ ಉಳಿಸಿಕೊಂಡರೆ ಅಷ್ಟೇ ಸಾಕು ಎಂದು ತನ್ನ ಪಾಡಿಗೆ ತಾನಿದ್ದ ಒಂದಾನೊಂದು ಕಾಲದ ಶಿವಾಜಿನಗರದ ಡಾನ್ ತನ್ವೀರ್‌ಗೆ ಹೇಳಹೆಸರಿಲ್ಲದವನೊಬ್ಬ ವಿನಾಕಾರಣ ಕೆಣಕಿದನೆಂದರೆ ಏನಾಗಬೇಡ?

ಮೊನ್ನೆ ಜೂನ್ 7ರ ರಾತ್ರಿ ಶಿವಾಜಿನಗರದಲ್ಲಿ ನಡೆದ ನಡುರಸ್ತೆ ಮಾರಾಮಾರಿಗೆ ಸಂಬಂಧಪಟ್ಟಂತೆ ತನ್ವೀರ್ ಜೈಲುಪಾಲಾಗಿದ್ದಾನೆ. ಆತನ ಏಳು ಮಂದಿ ಸಹಚರರನ್ನೂ ಬಿಡದೆ ಫ್ರೇಜರ್‌ಟೌನ್ ಇನ್ಸ್‌ಪೆಕ್ಟರ್ ಮಹೇಶ್ವರಪ್ಪ ಪರಪ್ಪನ ಅಗ್ರಹಾರಕ್ಕೆ ರವಾನಿಸಿದ್ದಾರೆ. ಒದೆ ತಿಂದ ಜುಬೇರ್ ಪೈಲ್ವಾನ್ ಗಾಯಗೊಂಡು ಆಸ್ಪತ್ರೆಯಲ್ಲಿ ಗಾಯ ನೆಕ್ಕುತ್ತಿದ್ದರೆ ಆತನ ತಂದೆ ಜಂಶೆದ್ ಪೈಲ್ವಾನ್ ತನ್ವೀರ್ ಜೈಲಿಂದ ಹೊರಬೀಳುವುದನ್ನೇ ಕಾದು ಕತ್ತಿ ಮಸೆಯತೊಡಗಿದ್ದಾನೆ.

ಶಿವಾಜಿನಗರದ ಪಾಪಕೂಪದಲ್ಲಿ ಹರಿದ ರಕ್ತ ಮತ್ತು ಉರುಳಿದ ತಲೆಗಳ ಲೆಕ್ಕ ಸಣ್ಣದೇನಲ್ಲ. ಕೋಳಿ ಫಯಾಜ್, ರಿಜ್ವಾನ್ ಮೌಲಾ, ಬಾಂಬೆ ಹಮೀದ್, ಪೈಲ್ವಾನ್ ಆಜಮ್- ಹೀಗೆ ಪುಡಿಪುಡಿಗಳಿಂದ ಹಿಡಿದು ದೈತ್ಯ ಘಂಟರುಗಳ ತನಕ ರಕ್ತ ಹರಿಸಿದವರ್ಯಾರೂ ಉಳಿದಿಲ್ಲ, ಇದು ಗೊತ್ತಿದ್ದೂ ಹೊಸ ಹೊಸ ಹುಡುಗರು ಫೀಲ್ಡಿಗಿಳಿಯುವುದು ನಿಂತಿಲ್ಲ. ಕೋಳಿ ಫಯಾಜ್‌ನ ಮಗ ಪಪ್ಪು ತಂದೆಗಿಂತಲೂ ಭಯಾನಕವಾಗಿ ಚಿಗುರಿ ನಿಂತ. ಆತನ ಮಾವ- ಅಂದರೆ ಕೋಳಿ ಫಯಾಜ್‌ನ ಅಕ್ಕನ ಮಗ- ಶಕೀಲ್ ರೌಡಿಸಂನ್ನೇ ಕಾಯಕ ಮಾಡಿಕೊಂಡ. ಫ್ರೇಜರ್‌ಟೌನಿನಿಂದ ಗೆದ್ದು ಕೌನ್ಸಿಲರ್ ಕೂಡ ಆಗಿಬಿಟ್ಟ.

ಇನ್ನು ತನ್ವೀರ್ ಶಿಷ್ಯನಂತಿದ್ದ ಇಷ್ತಿಯಾಕ್ ಪೈಲ್ವಾನ್, ಬ್ರಿಗೇಡ್ ಆಜಮ್, ಶಾಕಿರ್, ಸಜ್ಜಾದ್, ಯೂಸುಫ್ ಪಟೇಲ್ ಆಲಿಯಾಸ್ ನಾನಾ- ಹೀಗೆ ಬರೋಬ್ಬರಿ ಒಂದು ಡಜನ್ ರೌಡಿಗಳೀಗ ಶಿವಾಜಿನಗರದ ಆಧಿಪತ್ಯಕ್ಕಾಗಿ ಆಯುಧ ಝಳಪಿಸುತ್ತಿದ್ದಾರೆ. ಕಾರಣ ಭೂಗತ ಜಗತ್ತಿನ ಆಕರ್ಷಣೆ ಮತ್ತು ರಿಯಲ್ ಎಸ್ಟೇಟ್ ಉತ್ಪತ್ತಿಯ ಮೇಲಿನ ದುರಾಶೆ. ಒಂದೆರಡು ತಲೆ ಉರುಳಿಸಿ ರೌಡಿ ಎನ್ನಿಸಿಕೊಂಡಾಕ್ಷಣ ಡೀಲು, ಸೆಟಲ್‌ಮೆಂಟುಗಳನ್ನು ನಿಭಾಯಿಸಿ ದುಡ್ಡು ಮಾಡಬಹುದೆಂಬ ದುರಾಶೆಯಿಂದಾಗಿಯೇ ಹೊಸ ಹೊಸ ಪಾತಕಿಗಳು ಶಿವಾಜಿನಗರದಲ್ಲಿ ತಲೆ ಎತ್ತತೊಡಗಿದ್ದಾರೆ.

ಪಡ್ಡೆ ಹುಡುಗರೆಲ್ಲ ರೌಡಿಗಳಾಗಲು ನೂಕುನುಗ್ಗಲಿಗೆ ಬಿದ್ದರೆಂದರೆ ಸಹಜವಾಗೇ ಹಳೇ ರೌಡಿಗಳಿಗೆ ಡಿಮ್ಯಾಂಡ್ ಕುಸಿಯುತ್ತದೆ. ಸದ್ಯ ತನ್ವೀರ್‌ನದ್ದೂ ಇದೇ ಪರಿಸ್ಥಿತಿ. ಕೋಳಿ ಫಯಾಜ್ ಕೊಲೆಯಾದ ನಂತರ ಶಿವಾಜಿನಗರದ ಡಾನ್ ಪಟ್ಟಕ್ಕೆ ಬಂದವನು ತನ್ವೀರ್. ಅತ್ತ ವ್ಯಾವಹಾರಿಕ ಚಾಲಾಕಿತನವಾಗಲಿ ಇತ್ತ ರಾಜಕೀಯದ ಲೆಕ್ಕಾಚಾರವಾಗಲಿ ಎರಡೂ ಕರಗತವಾಗದೆ ಬರೀ ಯಡವಟ್ಟಿಗೆ ಬಿದ್ದೇ ಫಜೀತಿ ಮಾಡಿಕೊಂಡ. ಗುರು ಕೋಳಿ ಫಯಾಜ್‌ನ ಹತ್ಯೆಗೆ ರಿವೆಂಜಾಗಿ ಒಂದರ ಮೇಲೊಂದು ತಲೆ ಉರುಳಿಸುತ್ತಲೇ ಬಂದ. ಫಾರೂಕ್, ಜಾಕಿರ್, ಬಾಂಬೆ ಹಮೀದ್- ಹೀಗೆ ಕೋಳಿ ಫಯಾಜ್ ಹಂತಕರ ಪೈಕಿ ಒಬ್ಬೊಬ್ಬರನ್ನಾಗಿ ಬೇಟೆ ಆಡಿಕೊಂಡೇ ಬಂದ.


ಮಹಾನ್ ಫೈಟರ್ ದಿವಾನಾ ಆಲಿ, ಚಾಲಾಕಿ ಇಷ್ತಿಯಾಕ್ ಪೈಲ್ವಾನ್, ಕೋಳಿ ಫಯಾಜ್ ಅಕ್ಕನ ಮಗ


ಕಾರಣವೇ ಇಲ್ಲದೆ ಜೈಲಿಂದ ಪರಾರಿಯಾಗುವುದು, ವಿನಾಕಾರಣ ದುಬೈಗೆ ಹಾರಿ ತಲೆಮರೆಸಿಕೊಳ್ಳುವುದು, ಪದೇಪದೇ ಪೊಲೀಸರಿಗೆ ಸಿಕ್ಕಿಬಿದ್ದಂತೆ 'ಸೀನು' ಹುಟ್ಟಿಸುವುದು, ಆ ಕಾಲ ದಿಂದಲೂ ಪ್ರಚಾರಕ್ಕೆಂದು ತನ್ವೀರ್ ನಡೆಸಿಕೊಂಡೇ ಬಂದಿರುವ ಗಿಮ್ಮಿಕ್ಕು, ಯಾವ ಪರಾಕ್ರಮವನ್ನೂ ಮೆರೆಯದ ಈ ರೀತಿ ಎಸ್ಕೇಪು, ಅರೆಸ್ಟು, ಜೈಲು ಎಂದುಕೊಂಡೇ ಸುದ್ದಿ ಮಾಡುವ ಆತನ 'ತಂತ್ರ' ಕೇವಲ ಘಾತಕಿಗಳಿಗಷ್ಟೇ ಅಲ್ಲ, ಪೊಲೀಸರಿಗೂ ಹಾಸ್ಯದ ಸರಕಿದ್ದಂತೆ. ತನ್ವೀರ್ ಇಂಥ ಚೀಪ್ ಗಿಮ್ಮಿಕ್ಕಿಗೆ ಬಿದ್ದು ಫಜೀತಿ ಮಾಡಿಕೊಳ್ಳುತ್ತಿದ್ದರೆ ಮತ್ತೊಂದೆಡೆ ಆತನ ಒಬ್ಬೊಬ್ಬ ಶಿಷ್ಯರು ಫೀಲ್ಡಿನಲ್ಲಿ ಸೀರಿಯಸ್ಸಾಗಿ ತಮ್ಮ ತಾಕತ್ತು ಮತ್ತು ವರ್ಚಸ್ಸು ಎರಡನ್ನೂ ವೃದ್ಧಿಸಿಕೊಳ್ಳತೊಡಗಿದರು.


ಈ ಪೈಕಿ ಇಷ್ತಿಯಾಕ್ ಪೈಲ್ವಾನ್ ಶಿವಾಜಿನಗರದಿಂದ ಪಕ್ಷೇತರನಾಗಿ ತನ್ನ ಪತ್ನಿಯನ್ನು ಗೆಲ್ಲಿಸಿ ಕೌನ್ಸಿಲರ್ ಗಾದಿಗೆ ತಂದರೆ ಕೋಳಿ ಫಯಾಜ್ ಅಕ್ಕನ ಮಗ ಶಕೀಲ್ ಫ್ರೇಜರ್‌ಟೌನಿನಿಂದ ಕಾಂಗ್ರೆಸ್ ಕೌನ್ಸಿಲರ್ ಆಗಿಬಿಟ್ಟ. ಹಾಗೇ ದಿವಾನಾ ಆಲಿ ಕೂಡ ಬನಶಂಕರಿ ದೇವಸ್ಥಾನ ವಾರ್ಡಿನಿಂದ ಗೆದ್ದು ಜೆಡಿಎಸ್ ಕೌನ್ಸಿಲರ್ ಗೆಟಪ್ಪಿನಲ್ಲಿ ಓಡಾಡಲಾರಂಭಿಸಿದ್ದ


ದಿವಾನ್ ಆಲಿ



ಇಷ್ತಿಯಾಕ್ ಅಹ್ಮದ್


ಶಕೀಲ್


ಆಯೂಬ್


ಆತುಫ್

ಅಬ್ಬಾಸ್ ಅಲಿಗೆ ಶೇವಣಿ ಶೇಮ್!


ಅಬ್ಬಾಸ್

ಶಿವಾಜಿನಗರದ ಕತ್ತಲ ಜಗತ್ತಿನ ಜಾಯಮಾನವೇ ಅಂಥಾದ್ದು. ಯಾರು, ಯಾವ ಗಳಿಗೆಯಲ್ಲಿ ಯಾವ ಪಾರ್ಟಿ, ಮಿತ್ರರ್‍ಯಾರು, ಶತ್ರುಗಳ್ಯಾರು ಎಂಬುದೇ ಲೆಕ್ಕಕ್ಕೆ ಸಿಗದಷ್ಟು ಖತರ್‌ನಾಕ್ಕಾಗಿ ಬಿಟ್ಟಿದೆ. ಈತನಕ ನಡೆದ ರಕ್ತೇತಿಹಾಸ ಒತ್ತಟ್ಟಿಗಿರಲಿ, ಮೊನ್ನೆ ನಡೆದ ಚುನಾವಣೆಯನ್ನೇ ಗಮನಿಸಿದರೆ ಪ್ರತಿಯೊಬ್ಬ ರೌಡಿಯದ್ದೂ ಡಬ್ಬಲ್ ಗೇಮೇ!

ತನ್ವೀರ್ ಕಾಂಗ್ರೆಸ್ ಅಭ್ಯರ್ಥಿ ರೋಷನ್ ಬೇಗ್ ಪರ ಎಷ್ಟೇ ವೀರಾವೇಶದಿಂದ ಓಡಾಡಿದರೂ ಆತನ ಅಣ್ಣ ಆಸಿಫ್ ಜೆಡಿಎಸ್ ಪರ ಸಕ್ರಿಯವಾಗಿದ್ದ. ಕ್ವೀನ್ಸ್ ರಸ್ತೆಯ ಮೋದಿ ಮಸೀದಿಯ ಅಧ್ಯಕ್ಷನೂ ಆದ ಆಸಿಫ್ ಜೆಡಿಎಸ್ ನಾಯಕ ಮತ್ತು ಚಾಮರಾಜಪೇಟೆ ಶಾಸಕ ಜಮೀರ್‌ನ ಪರಮಾಪ್ತ ಮತ್ತು ಶಿವಾಜಿನಗರಕ್ಕೆ ಜೆಡಿಎಸ್ ಅಭ್ಯರ್ಥಿಯಾಗಿದ್ದ ಅಬ್ಬಾಸ್ ಆಲಿ ಬೊಹ್ರಾ ಪರವಹಿಸಿ ಇನ್ನಿಲ್ಲದಂತೆ ಪ್ರಚಾರಕ್ಕಿಳಿದಿದ್ದ.

ಅದೇರೀತಿ ರೋಷನ್ ಬೇಗ್ ಗೆಲ್ಲಿಸಲೆಂದು ಇಷ್ತಿಯಾಕ್ ಪೈಲ್ವಾನ್ ಅಖಾಡಕ್ಕಿಳಿದಿರುವಾಗಲೇ ಆತನ ಅಣ್ಣ ಅಶ್ಫಾಕ್ ಜೆಡಿಎಸ್ ನಾಯಕನ ಗೆಟಪ್ಪಿನಲ್ಲಿ ಕಾಂಗ್ರೆಸ್ ವಿರುದ್ಧ ಹೋರಾಟಕ್ಕಿಳಿದಿದ್ದ. ಶಿವಾಜಿನಗರದ ಅಷ್ಟೂ ರೌಡಿಗಳ ಪೈಕಿ ರೋಷನ್ ಬೇಗ್ ವಿರುದ್ಧ ಅಬ್ಬಾಸ್ ಅಲಿ ಬೊಹ್ರಾ ಬೆಂಬಲಕ್ಕೆ ನಿಂತ ಏಕೈಕ ಹಳೇ ಪಾತಕಿಯೆಂದರೆ ಆತ ಸಜ್ಜಾದ್. ಅದೂ 30 ಲಕ್ಷದ ನಗದು ಮತ್ತು ಒಂದು ಸ್ಕಾರ್ಪಿಯೋ ರೇಟಿಗೆ!

ತನ್ನ ಜೆಪಿ ನಗರದ ಬಂಗಲೆಯನ್ನು ಒತ್ತೆ ಇಟ್ಟು ಬೊಹ್ರಾ ಸಾಲ ತಂದು ಸಜ್ಜಾದ್ ಕೈಗಿತ್ತಿದ್ದೇ ಕೊನೆ. ಮಿಕ್ಕೆಲ್ಲ ರೌಡಿಗಳು ಬೊಹ್ರಾ ಪರ ಪ್ರಚಾರಕ್ಕೂ ಅವಕಾಶವಿಲ್ಲದಂತೆ ಜೆಡಿಎಸ್ ಕಾರ್ಯಕರ್ತರನ್ನು ಅಟ್ಟಾಡಿಸಿ ಬಡಿಯುತ್ತಿದ್ದರೆ ರೌಡಿ ಸಜ್ಜಾದ್ ಮಾತ್ರ ಅದೇ ಸಮಯ ಕಾದು ನಾಪತ್ತೆಯಾದವನು ಎಲ್ಲಾ ಮುಗಿದ ಮೇಲೆ ಬರುವ ಪೊಲೀಸರಂತೆ ಪ್ರತ್ಯಕ್ಷನಾಗುತ್ತಿದ್ದ. ಹಾಗಂತ ಸಜ್ಜಾದ್ ಬೇರೆಲ್ಲ ರೌಡಿಗಳ ದುಷ್ಮನ್ ಎಂದೇನಲ್ಲ. ಇವತ್ತಿಗೂ ತನ್ವೀರ್ ಜೊತೆ ಆತ್ಮೀಯನಾಗೇ ಇದ್ದಾನೆ. ಆದರೆ ಚುನಾವಣೆಯ ಖಮಾಯಿಯ ವಿಷಯದಲ್ಲಿ ಮಾತ್ರ ಪಾತ್ರ ಮತ್ತು ಪೋಷಾಕು ಬದಲಾಗುತ್ತದೆ. ನಾಳೆ ಜೆಡಿಎಸ್ ಅಧಿಕಾರಕ್ಕೆ ಬಂತೆಂದರೆ ಇದೇ ಪಟಾಲಮ್ಮು ಜಮೀರ್ ಪರ ಅಖಾಡಕ್ಕಿಳಿಯುತ್ತದೆ. ಒಟ್ಟಾರೆ ಶಿವಾಜಿನಗರದ ಪಾತಕಿಗಳಿಗೆ ತಾವು ಬಚಾವಾಗುವುದಷ್ಟೇ ಮುಖ್ಯ.


ಸಜ್ಜಾದ್

ಈಗ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದ್ದರ ಲಾಭ ಪಡೆಯಬೇಕಲ್ಲ, ಡೀಜೆ ಹಳ್ಳಿ, ಕೆಜಿ ಹಳ್ಳಿ, ಸಂಪಿಗೆಹಳ್ಳಿ, ನಾಗವಾರ, ಬಾಣಸವಾಡಿ ಸುತ್ತಮುತ್ತಲ ಏರಿಯಾಗಳಲ್ಲಿ ಬೇಕಾಬಿಟ್ಟಿ ಲಿಟಿಗೇಷನ್ ಪ್ರಾಪರ್ಟಿಗಳಿವೆ ಮತ್ತು ಅವುಗಳಿಗೆ ಕಾಂಪೌಂಡ್ ಹಾಕಬೇಕೆಂದರೆ ತನ್ನ ರೌಡಿ ಇಮೇಜನ್ನು ರಿನೀವಲ್ ಮಾಡಿಕೊಳ್ಳಬೇಕಾದ ಅನಿವಾರ್ಯ ಕರ್ಮಕ್ಕೆ ತನ್ವೀರ್ ಬಿದ್ದಿರಬೇಕು.

ಶಕೀಲ್, ಹುಟ್ಟಾ ಒರಟ ಸಜ್ಜಾದ್, ಟ್ಯಾನರಿ ರೋಡ್ ಪಾತಕಿ ಬ್ರಿಗೇಡ್ ಆಜಮ್, ಖತರ್‌ನಾಕ್ ತರಕಾರಿ ಖಲೀಲ್, ಸುಪಾರಿ ಕಿಲ್ಲರ್ ಯೂಸುಫ್ ಪಟೇಲ್- ಹೀಗೆ ಮುಸ್ಲಿಂ ಪಾಪಕೂಪದ ಭಯಾನಕರೆಲ್ಲ ತನ್ವೀರ್ ಆಧಿಪತ್ಯಕ್ಕೊಳಪಟ್ಟೇ ಫೀಲ್ಡಿಗಿಳಿದಿದ್ದರು. ಶಿವಾಜಿನಗರದಿಂದ ಹಿಡಿದು ಟ್ಯಾನರಿ ರಸ್ತೆಯ ತನಕ, ಬನಶಂಕರಿಯ ಇಲಿಯಾಸ್ ನಗರದಿಂದ ಗೋರಿಪಾಳ್ಯದ ತನಕ ತನ್ವೀರ್‌ನದ್ದೇ ಭೂಗತ ಚಕ್ರಾಧಿಪತ್ಯ!

ಆದರೆ ಸಾಮ್ರಾಜ್ಯ ವಿಸ್ತಾರಗೊಂಡಂತೆಲ್ಲ ಪಾಳೇಗಾರರ ಸಂಖ್ಯೆ ವೃದ್ಧಿಸುತ್ತದೆ ಮತ್ತು ಸಾಮಂತರ ದುರಾಶೆಯೂ ಹೆಚ್ಚುತ್ತದೆ. ಆತನಕ ತನ್ವೀರ್ ಬಲಗೈ ಬಂಟನಂತಿದ್ದ ಇಷ್ತಿಯಾಕ್ ಪೈಲ್ವಾನ್ ಕಾಲಕ್ರಮೇಣ ಸ್ವತಂತ್ರ ಪಡೆ ಕಟ್ಟಿಕೊಂಡು ಡೀಲಿಗಿಳಿದರೆ ಕೋಳಿ ಫಯಾಜ್ ಮಗ ಪಪ್ಪು ತನ್ನದೇ ಪಡ್ಡೆ ಹುಡುಗರ ಗ್ಯಾಂಗ್ ಸ್ಥಾಪಿಸಿದ್ದೇ ರಕ್ತ ಹರಿಸಲಾರಂಭಿಸಿದ್ದ. ಬ್ರಿಗೇಡ್ ಆಜಂ, ದಿವಾನಾ ಆಲಿ, ಸಜ್ಜಾದ್, ಶಾಕಿರ್, ಅತ್ತೂಫ್, ಶಕೀಲ್- ಹೀಗೆ ಯಾರೆಲ್ಲ ತನ್ವೀರ್ ಶಿಷ್ಯರೆಂದು ಚಾಲ್ತಿಯಲ್ಲಿದ್ದರೋ ಅವರೆಲ್ಲ ತಂತಮ್ಮದೇ ಏರಿಯಾಗಳಲ್ಲಿ ಹಿಡಿತ ಸಾಧಿಸಿ ಪ್ರತ್ಯೇಕ ಗ್ಯಾಂಗ್ ಕಟ್ಟಿಕೊಂಡರು.

ಕಾಲಕ್ರಮೇಣ ಪ್ರತ್ಯೇಕಗೊಂಡ ತನ್ವೀರ್ ಬಂಟರ ನಡುವೆಯೇ ಗ್ಯಾಂಗ್‌ವಾರ್ ಭುಗಿಲೆದ್ದಿತು. ಇಷ್ತಿಯಾಕ್ ಮತ್ತು ತರಕಾರಿ ಖಲೀಲ್ ಮಧ್ಯೆ ಬೀದಿ ಕಾಳಗವಾಯಿತು. ಶಕೀಲ್ ಮತ್ತು ಇಷ್ತಿಯಾಕ್ ನಡುವೆ ಹಗೆ ಹುಟ್ಟಿಕೊಂಡಿತು. ದಿವಾನಾ ಆಲಿಯನ್ನು ಮಾಹಿನ್ ಪಡೆ ಮುಗಿಸಿ ಹಾಕಿತು. ಅತ್ತೂಫ್ ಚಾಮರಾಜ ಪೇಟೆಯಲ್ಲಿ ಬೇರುಬಿಟ್ಟು ಯಾರ ಅಂಕೆಗೂ ನಿಲುಕದಂತಾದ. ತನ್ವೀರ್‌ಗೆ ವಯಸ್ಸಾಗತೊಡಗಿತ್ತು, ಪೊಲೀಸರ ಕಣ್ಣು ಹಿಂದಿಗಿಂತಲೂ ಬಲವಾಗಿ ಹಿಂಬಾಲಿಸತೊಡಗಿತ್ತು. ಸಣ್ಣಪುಟ್ಟ ಫಜೀತಿಗೆ ಕೈಯಿಟ್ಟು ಮುಂಬಯಿಗೆ ಪರಾರಿಯಾದ. ಅಲ್ಲಿಂದಲೂ ಪೊಲೀಸರು ಎಳೆದು ತಂದರೆ ಕೆಲಕಾಲ ಜೈಲು ಸವೆಸಿ ಹೊರಬಿದ್ದವನು ದುಬೈಗೆ ಪಲಾಯನಗೈದ.

ಬಿಜೆಪಿ ಅಧಿಕಾರದಲ್ಲಿದ್ದಷ್ಟೂ ಕಾಲ ಮಂತ್ರಿ ಕಟ್ಟಾ ಚೇಲಾ ಗಿರಿಯಲ್ಲೇ 'ಅಧಿಕಾರಸ್ಥ ಡಾನ್' ಪಟ್ಟವನ್ನ ಲಂಕರಿಸಿ ಇಷ್ತಿಯಾಕ್ ಪೈಲ್ವಾನ್ ಗುರು ತನ್ವೀರ್‌ನನ್ನೇ ಮೀರಿಸಿ ಶಿವಾಜಿನಗರ ವನ್ನಾಳಲಾರಂಭಿಸಿದ.

ದಿನೇದಿನೇ ಕುಗ್ಗತೊಡಗಿದ್ದ ಪ್ರಾಬಲ್ಯ, ಸಮೀಪಿಸುತ್ತಿದ್ದ ವೃದ್ಧಾಪ್ಯ, ಕುಸಿದ ವರ್ಚಸ್ಸು, ಹರಿದು ಹಂಚಿ ಹೋದ ಸಾಮ್ರಾಜ್ಯ ಇತ್ಯಾದಿಗಳಿಂದ ಹೈರಾಣಾದ ತನ್ವೀರ್ ಕೊನೆಕೊನೆಗೆ ಎಂಥಾ ದೈನೇಸಿ ಸ್ಥಿತಿಗೆ ಬಂದನೆಂದರೆ ತನ್ನ ಒಂದಾನೊಂದು ಕಾಲದ ಶಿಷ್ಯ ಇಷ್ತಿಯಾಕ್‌ಗೆ ಸರೆಂಡರ್ ಆಗಿ, ಸಣ್ಣಪುಟ್ಟ ಖರ್ಚಿಗೂ ಆತನೆದುರು ಕೈಕಟ್ಟಿ ನಿಲ್ಲಬೇಕಾದ ದುರ್ಗತಿಗೀಡಾದ. ಇಂಥಾ ದುಃಸ್ಥಿತಿಯಲ್ಲಿ ತನ್ವೀರ್‌ಗೆ ಚೂರು ಪಾರು 'ಬೆಲೆ' ಅಂತ ಬಂದಿದ್ದು ಇತ್ತೀಚೆಗಷ್ಟೇ ನಡೆದ ವಿಧಾನಸಭಾ ಚುನಾವಣೆಯಲ್ಲಿ.

ಶಿವಾಜಿನಗರಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ರೋಷನ್ ಬೇಗ್‌ಗೆ ತನ್ನ ಜೆಡಿಎಸ್ ಎದುರಾಳಿ ಅಬ್ಬಾಸ್ ಆಲಿ ಬೊಹ್ರಾರನ್ನು ಮಣಿಸಬೇಕೆಂದರೆ ಆ ಭಾಗದ ರೌಡಿಗಳನ್ನವಲಂಬಿಸದೇ ಬೇರೆ ದಾರಿಯೇ ಇರಲಿಲ್ಲ. ತಿಮ್ಮಯ್ಯ ರಸ್ತೆಯಲ್ಲಿ ಬೇರು ಬಿಟ್ಟಿದ್ದ ಶಕೀಲ್, ಕ್ವೀನ್ಸ್ ರೋಡ್ ಮತ್ತು ಟ್ಯಾನರಿ ರೋಡ್ ಸುತ್ತಮುತ್ತ ಪ್ರಬಲನಾಗಿದ್ದ ಯೂಸುಫ್ ಪಟೇಲ್, ರಸೆಲ್ ಮಾರ್ಕೆಟ್ ಸುತ್ತಮುತ್ತ ಅಡ್ಡೆಹಾಕುತ್ತಿದ್ದ ಪಪ್ಪು, ಫ್ರೇಜರ್‌ಟೌನ್ ದೊಡ್ಡಿ ಏರಿಯಾದ ರೌಡಿ ಶಕೀರ್, ಫ್ರೇಜರ್‌ಟೌನ್‌ನಲ್ಲಿ ಪ್ರಾಬಲ್ಯವಿದ್ದ ಬ್ರಿಗೇಡ್ ಆಜಮ್, ನಾಲಾ ರೋಡ್ ಸೇರಿದಂತೆ ಶಿವಾಜಿನಗರದ ಕೌನ್ಸಿಲರ್ ಆಗಿದ್ದ ಇಷ್ತಿಯಾಕ್ ಸೇರಿದಂತೆ ಶಿವಾಜಿನಗರದ ಬಹುತೇಕ ರೌಡಿಗಳನ್ನೆಲ್ಲ ರೋಷನ್‌ಬೇಗ್ ಒಟ್ಟುಗೂಡಿಸಿ ದರು. ಸಹಜವಾಗೇ ತನ್ವೀರ್‌ನನ್ನೂ ಕರೆಸಿಕೊಂಡಿದ್ದರು.

ಅಲ್ಲಿಗೆ ಸಜ್ಜಾದ್ ಒಬ್ಬನ ಹೊರತಾಗಿ ಬಹುತೇಕ ಶಿವಾಜಿನಗರದ ರೌಡಿಗಳೆಲ್ಲ ತನ್ವೀರ್ ನೇತೃತ್ವದಲ್ಲಿ ಒಗ್ಗೂಡಿದಂತಾಗಿತ್ತು. ರೋಷನ್ ಬೇಗ್ ಮುಂದೆ

>>>9

ಧಾರವಾಡ: ಗೆದ್ದ ಕಾಂಗ್ರೆಸ್ ಮೇಲೆ ಸೋಲಿನ ಮುಸುಕು!

ಹುಬ್ಬಳ್ಳಿ-ಧಾರವಾಡದಲ್ಲಿ 'ಕೈ' ಒಂದೆ ಆದರೆ ಬೆರಳು ಮಾತ್ರ ಬಿಡಿಬಿಡಿ ಎನ್ನುವಂತಹ ವಾತಾವರಣ ಸೃಷ್ಟಿಯಾಗಿದೆ. ಇಲ್ಲಿ ಮೊದಲಿನಿಂದಲೂ ಎಚ್.ಕೆ.ಪಾಟೀಲ್ ಮತ್ತು ಡಿ.ಕೆ.ಶಿವಕುಮಾರ್ ಬಣಗಳು ಕಾಲೆಳೆದುಕೊಂಡು ಬಂದಿದ್ದವು. ಆದರೀಗ ಸಿದ್ದು ಬಣ ಮತ್ತು ಪರಮೇಶ್ವರ್ ಬಣಗಳೆಂಬ ಮತ್ತೆರಡು ಅಕೌಂಟ್‌ಗಳು ಓಪನ್ ಆಗಿವೆ...



ಅಂತೂ ಇಂತೂ ಈ ಸಲದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ...ರವಾಡ ಜಿಲ್ಲೆಯ ಮಟ್ಟಿಗೆ ಕಾಂಗ್ರೆಸ್ ದಿಗ್ವಿಜಯವನ್ನೇ ...ಧಿಸಿದೆ. ಬಿಜೆಪಿಯ ದುರಾಡಳಿತದಿಂದ ಬೇಸತ್ತಿದ್ದ ...ತದಾರನಿಂದಾಗಿ ಇಡೀ ರಾಜ್ಯದಲ್ಲಿ ಕಾಂಗ್ರೆಸ್ ಪರವಾದ ...ಬೀಯಿತು ಎಂಬುದೇನೋ ನಿಜ. ಆದರೆ ಆ ಅಲೆ ...ರವಾಡದಲ್ಲಿ ಎಷ್ಟರಮಟ್ಟಿಗೆ ಪ್ರಭಾವ ಬೀರುತ್ತದೆ ...ನ್ನುವುದಕ್ಕೆ ಹಲವಾರು ಅನುಮಾನಗಳಿದ್ದವು. ಯಾಕೆಂದರೆ ...ದ್ದು ಆಗಿನ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್‌ರ ತವರು ...ಷ್ಟೆ ಅದಕ್ಕಿಂತಲೂ ಹೆಚ್ಚಾಗಿ ಬಿಜೆಪಿ ರಾಜ್ಯಾಧ್ಯಕ್ಷನ ಚುಕ್ಕಾಣಿ ...ಡಿದಿದ್ದ ಪ್ರಹ್ಲಾದ್ ಜೋಷಿ ಸಂಸತ್ ಸದಸ್ಯನಾಗಿ ...ತಿನಿಧಿಸುತ್ತಿದ್ದ ಕ್ಷೇತ್ರವಾದ್ದರಿಂದ ಕಾಂಗ್ರೆಸ್ ಅಲೆ ಈ ...ಟ್ಟಿಗೆ ಕ್ಲಿಕ್ ಆಗುತ್ತದೆಂಬ ನಿರೀಕ್ಷೆಗಳು ಭಾರೀ ...ಬಾರಿಯವೇ ಆಗಿದ್ದವು. ಆದರು ಹೇತ್ಲಾಂಡಿ ಪ್ರಭಾವ, ...ತಿಷ್ಠೆಗಳಿಗೆಲ್ಲ ಧಾರವಾಡದ ಮತದಾರ ಸ್ಪಷ್ಟವಾಗಿ Exit ...ರಿ ತೋರಿದ್ದಾನೆ.

ಒಟ್ಟು 7 ವಿಧಾನಸಭಾ ಕ್ಷೇತ್ರಗಳ ಪೈಕಿ ಕಾಂಗ್ರೆಸ್ ...ಲ್ಕರಲ್ಲಿ ಜಯ ಸಾಧಿಸಿದ್ದರೆ, ಬಿಜೆಪಿ ಕೇವಲ ಎರಡಕ್ಕೆ ...ತ್ರ ತೃಪ್ತಿಗೊಂಡಿದೆ. ಇನ್ನುಳಿದ ಒಂದು ಹೊರೆಹೊತ್ತ ...ಪಿಳೆಯು ಪಾಲಾಗಿದೆ. ಅಂದಹಾಗೆ 2008ರ ...ನಾವಣೆಯಲ್ಲಿ ಜಿಲ್ಲೆಯಲ್ಲಿ 6 ಸ್ಥಾನಗಳನ್ನು ಬಿಜೆಪಿ ...ದ್ದರೆ ಒಂದು ಸ್ಥಾನ ಮಾತ್ರ ಕಾಂಗ್ರೆಸ್‌ಗೆ ಒಲಿದಿತ್ತು. ...ರೀತಿ ಅಂಕಿಅಂಶಗಳನ್ನು ಲೆಕ್ಕಹಾಕಿದರೆ ಜಿಲ್ಲೆಯಲ್ಲಿ ...ಂಗ್ರೆಸ್ ಭದ್ರ ನೆಲೆ ಕಂಡುಕೊಂಡಿದೆ ಅಂತೇನೊ ...ಳಬಹುದು. ಆದರೆ ಕಾಂಗ್ರೆಸ್‌ನ ಆಂತರಿಕ ಕಚ್ಚಾಟ, ...ಂಪುಗಾರಿಕೆಗಳನ್ನು ಹತ್ತಿರದಿಂದ ನೋಡಿದಾಗ ಅಲ್ಲಿ ...ಲ್ಲವೂ ಸರಿಯಿಲ್ಲ ಎಂಬುದು ಖಾತ್ರಿಯಾಗುತ್ತದೆ. ಪರಿಸ್ಥಿತಿ ...ಗೇ ಮುಂದುವರೆದರೆ ಲೋಕಸಭಾ ಚುನಾವಣಾ ವೇಳೆಗೆ ...ಕ್ಷದ ನಾಲ್ವರು ಶಾಸಕರಿದ್ದೂ ಕಾಂಗ್ರೆಸ್ ಜಿಲ್ಲೆಯನ್ನು ಕಳೆದುಕೊಳ್ಳಬೇಕಾಗುವುದಂತೂ ಸತ್ಯ!

ಪಕ್ಷ ಒಂದೇ ಆದರೂ ಬಣ ಬೇರೆ

ಹಾಗೆ ನೋಡಿದರೆ ಜಿಲ್ಲೆಯಲ್ಲಿ 'ಕೈ' ಒಂದೆ, ಆದರೆ ಬೆರಳು ಮಾತ್ರ ಬಿಡಿಬಿಡಿ ಎನ್ನುವಂತ ವಾತಾವರಣ ಸೃಷ್ಟಿಯಾಗಿದೆ. ಬಣ ರಾಜಕಾರಣದ ಗುಂಪುಗಾರಿಕೆ ಭರ್ಜರಿಯಾಗೇ ಬೇರು ಬಿಟ್ಟಿದ್ದು ಗೆದ್ದ ವಿಜಯೋತ್ಸವದಲ್ಲಿ ಅದು ಮತ್ತಷ್ಟೂ ಚಾಚಿಕೊಳ್ಳುತ್ತಿದೆ. ಮೊದಲಿನಿಂದಲೂ ಜಿಲ್ಲೆಯಲ್ಲಿ ಎಚ್.ಕೆ. ಪಾಟೀಲ್ ಬಣ ಮತ್ತು ಡಿ.ಕೆ.ಶಿವಕುಮಾರ್ ಬಣಗಳು ಸತತವಾಗಿ ಕಾಲೆಳೆದುಕೊಂಡು ಬಂದಿದ್ದವು. ಆದರೆ ಈ ಚುನಾವಣೆಯಲ್ಲಿ ಸಿದ್ದು ಬಣ ಮತ್ತು ಪರಮೇಶ್ವರ್ ಬಣಗಳೆಂಬ ಮತ್ತೆರಡು ಅಕೌಂಟ್‌ಗಳು ಓಪನ್ ಆಗಿರುವುದರಿಂದ ಮುಸುಕಿನ ಗುದ್ದಾಟ ಮೊದಲಿಗಿಂತಲೂ **malignant** ಹಂತಕ್ಕೆ ಬಂದು ತಲುಪಿದೆ. ಎಚ್ಕೆ ಪಾಟೀಲ್ ಬಣದಲ್ಲಿ ಹಿಂಡಸಗೇರಿ, ಜಕ್ಕಪ್ಪನವರ್, ಮಹೇಂದ್ರ ಸಿಂಘಿ ಮೊದಲಾದವರು ಮುಂಚೂಣಿಯಲ್ಲಿದ್ದರೆ ಡಿಕೇಶಿ ಬಣದಲ್ಲಿ ಸತೀಶ್ ಮೆಹರವಾಡೆ, ರಾಜಾ ದೇಸಾಯಿ, ದೊರೆರಾಜ ಮಣಿಕಂಠ ಮೊದಲಾದವರು ಪ್ರಮುಖವಾಗಿದ್ದಾರೆ. ಇತ್ತೀಚೆಗಷ್ಟೆ ಯಡ್ಡಿಯ ಕೆಜೆಪಿ ಸೇರಿದ ಮಾಜಿ ಮಂತ್ರಿ ಜಬ್ಬರ್‌ಖಾನ್ ಹೊನ್ನಳ್ಳಿ ಕಾಂಗ್ರೆಸ್‌ನಲ್ಲಿ ಇದ್ದಷ್ಟು ದಿನ ಡಿಕೇಶಿ ಬಣದಲ್ಲೇ ಗುರುತಿಸಿಕೊಂಡವ. ಹೊಸದಾಗಿ ಜನ್ಮವೆತ್ತಿರುವ ಪರಮೇಶ್ವರ್ ಬಣದಲ್ಲಿ ಕೆಪಿಸಿಸಿ ರಾಜ್ಯ ಕಾರ್ಯದರ್ಶಿ ಅನ್ವರ್ ಮುಧೋಳ, ರಾಜಶೇಖರ್ ಮೆಣಸಿನಕಾಯಿ, ಶಫಿ ಮುದ್ದೇಬಿಹಾಳ, ಈಸೂಫ಼ ಸವಣೂರ, ಮೋಹನ ಹಿರೇಮನಿ, ಪ್ರಕಾಶ ಕ್ಯಾರಕಟ್ಟಿ ಮತ್ತು ಶೆಟ್ಟರ್ ವಿರುದ್ಧ ಸ್ಪರ್ಧಿಸಿ ಸೋತ ಡಾ.ನಾಲವಾಡರ ತಂಡವಿದೆ. ಸಿದ್ದರಾಮಯ್ಯನವರ ಗುಂಪಿನಲ್ಲಿ ಮಂತ್ರಿ ಸಂತೋಷ್ ಲಾಡ್, ಶಾಸಕರಾದ ಸಿ.ಎಸ್.ಶಿವಳ್ಳಿ, ಪ್ರಸಾದ್ ಅಬ್ಬಯ್ಯ, ಎಂಎಲ್‌ಸಿ ಶ್ರೀನಿವಾಸ್ ಮಾನೆ ಗುರುತಿಸಿಕೊಂಡಿದ್ದಾರೆ. ಇದೇ ಕಾರಣಕ್ಕೆ ಸಂತೋಷ್ ಲಾಡ್‌ಗೆ ಕ್ಯಾಬಿನೆಟ್ ದರ್ಜೆಯ ಮಂತ್ರಿ ಸ್ಥಾನವಲ್ಲದೆ ಜಿಲ್ಲಾ ಉಸ್ತುವಾರಿ ಸಚಿವ ಉಮೇದುವಾರಿಕೆಯೂ ಲಭಿಸಿದೆ. ಬಣ ರಾಜಕಾರಣದ ಮೇಲಾಟದಲ್ಲಿ ಮೂರು ಬಾರಿ ಶಾಸಕನಾಗಿಯೂ ಮಂತ್ರಿ ಸ್ಥಾನದಿಂದ ವಂಚಿತನಾಗಿರುವ ವಿನಯ್ ಕುಲಕರ್ಣಿ ಇದೀಗ ಸಿದ್ದರಾಮಯ್ಯಗೆ ಹಿಡಿಶಾಪ ಹಾಕುತ್ತಿದ್ದಾನೆ. ಇದು ಧಾರವಾಡ 'ಕೈ'ನ ಸ್ಕ್ಯಾನಿಂಗ್ ರಿಪೋರ್ಟ್!

ಈ ಸಲದ ಚುನಾವಣೆಯಲ್ಲಿ ಹು-ಧಾ ಪೂರ್ವದಿಂದ ಪ್ರಸಾದ್ ಅಬ್ಬಯ್ಯ, ಧಾರವಾಡ ಗ್ರಾಮೀಣದಿಂದ ವಿನಯ್ ಕುಲಕರ್ಣಿ, ಕಲಘಟಗಿಯಿಂದ ಸಂತೋಷ್ ಲಾಡ್, ಕುಂದಗೋಳದಿಂದ ಸಿ.ಎಸ್.ಶಿವಳ್ಳಿ ಗೆದ್ದು ಬಂದಿದ್ದಾರಾದರೂ ಅವರ ಗೆಲುವುಗಳಲ್ಲಿ ವೈಯಕ್ತಿಕ ವರ್ಚಸ್ಸು ಮತ್ತು ಜನರ ಬಿಜೆಪಿ ತಿರಸ್ಕಾರಗಳು ಕಾಣಿಸುತ್ತಿವೆಯೇ ಹೊರತು ಕಾಂಗ್ರೆಸ್‌ನ ಸಂಘಟಿತ ಹೋರಾಟವಲ್ಲ. ಅಲ್ಲದೆ ನವಲಗುಂದ ಮತ್ತು ಹುಬ್ಬಳ್ಳಿ-ಧಾರವಾಡ ಪಶ್ಚಿಮ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನ ಸೋಲಿಗೆ ಕುರುಹುಗಳಾಗಿ ಕಾಣುವ ಸ್ವಪಕ್ಷೀಯ ಕಾಲೆಳದಾಟವೇ ಇದನ್ನು ಸಾಬೀತುಪಡಿಸುತ್ತದೆ.

ಸಂತೋಷ್ ಲಾಡ್‌ನನ್ನು ಜಿಲ್ಲಾ ಉಸ್ತುವಾರಿ ಸಚಿವ ಅಂತ ಒಪ್ಪಲು ಶಾಸಕರಾದ ವಿನಯ್ ಕುಲಕರ್ಣಿ, ಸಿ.ಎಸ್.ಶಿವಳ್ಳಿ ಅಲ್ಲದೆ ಎಚ್ಕೆ ಪಾಟೀಲ್ ಬಣ ಸುತಾರಾಂ ಸಿದ್ಧವಿಲ್ಲ. ಅಂತಹದ್ದರಲ್ಲಿ ಲಾಡ್‌ಗೆ ಸಹಕಾರ ನೀಡುವುದು ದೂರದ ಮಾತೇ ಸರಿ. ಇನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷನೂ ಆಗಿರುವ ಸಿ.ಎಸ್.ಶಿವಳ್ಳಿ ಈಗ ಶಾಸಕನಾಗುವ ಮೂಲಕ ಕುಂದಗೋಳಕ್ಕೆ ಮಾತ್ರ ಸೀಮಿತವಾಗಿಬಿಟ್ಟಿದ್ದಾನೆ. ಜೊತೆಗೆ ಮಹಾನಗರ ಜಿಲ್ಲಾ ಅಧ್ಯಕ್ಷ ಎ.ಎಂ.ಹಿಂಡಸಗೇರಿಗಂತೂ ಪಕ್ಷದೊಳಗೆ ಭರ್ಜರಿ ವಿರೋಧವಿದೆ. ಮುಖಂಡರು ಮತ್ತು ಕಾರ್ಯಕರ್ತರ ನಡುವೆ ಸಮನ್ವಯ ಸಾಧಿಸಬೇಕಾದ ಇವರೇ ಬಣಗಳಲ್ಲಿ ಹಂಚಿಹೋಗಿರುವಾಗ ಜಿಲ್ಲಾ ಕಾಂಗ್ರೆಸ್‌ನ್ನು ಹಸ್ತದ ಒಂದೇ ಸೂರಿನಡಿಗೆ ತಂದು ರಿಪೇರಿ ಮಾಡುವ ಸಾಹಸವನ್ನು ಸದ್ಯಕ್ಕಂತು ನಿರೀಕ್ಷಿಸಲು ಸಾಧ್ಯವಿಲ್ಲ. ಇತ್ತೀಚೆಗೆ ನಿಗಮ, ಮಂಡಳಿಗಳ ಅಧ್ಯಕ್ಷರುಗಳ ನೇಮಕಕ್ಕೆ ಅರ್ಹರ ಹೆಸರನ್ನು ಅಂತಿಮಗೊಳಿಸುವ ಜವಾಬ್ದಾರಿಯನ್ನು ಆಯಾ ಜಿಲ್ಲಾ ಅಧ್ಯಕ್ಷರಿಗೇ ನೀಡಲಾಗಿದೆ ಎಂಬ ಹೇಳಿಕೆ ಜಿ.ಪರಮೇಶ್ವರ್ ಬಾಯಿಂದ ಹೊರಬರುತ್ತಿದ್ದಂತೆಯೇ ಬಣ ರಾಜಕಾರಣ ಮತ್ತಷ್ಟೂ ಬಣ್ಣಗಟ್ಟಿದೆ. ತಮ್ಮ ಬಣದವರಲ್ಲದ ಅಧ್ಯಕ್ಷರುಗಳನ್ನೆ ಕೆಳಗಿಳಿಸಿ ತಮಗನುಕೂಲವಾಗುವವರನ್ನು ಅಧ್ಯಕ್ಷರನ್ನಾಗಿಸುವ ಚಟುವಟಿಕೆಗಳೂ ಗರಿಗೆದರಿವೆ. ಹುಬ್ಬಳ್ಳಿ-ಧಾರವಾಡ ನಗರ ಕಾಂಗ್ರೆಸ್ ಅಧ್ಯಕ್ಷ ಎ.ಎಂ.ಹಿಂಡಸಗೇರಿಯನ್ನು ಈ ಕೂಡಲೇ ವಜಾ ಮಾಡಬೇಕೆಂದು ಮೊನ್ನೆ ಅಂಜುಮನ್‌ನ ಮಾಜಿ ಅಧ್ಯಕ್ಷ ಮೊಹಮದ್ ಈಸೂಫ಼್ ಸವಣೂರ ನೇತೃತ್ವದಲ್ಲಿ ಅನ್ವರ್ ಮುಧೋಳ, ರಾಜಶೇಖರ ಮೆಣಸಿನಕಾಯಿ, ಶಫಿ ಮುದ್ದೇಬಿಹಾಳ, ಕಾರ್ಪೋರೇಟರ್ ಮೋಹನ ಹಿರೇಮನಿ, ಗಣೇಶ್, ಪ್ರಕಾಶ ಕ್ಯಾರಕಟ್ಟಿ, ದೀಪಕ್ ಚಿಂಚೂರೆ ಸೇರಿದಂತೆ 15 ಕ್ಕೂ ಹೆಚ್ಚು ಕಾರ್ಪೋರೇಟರ್‌ಗಳು ರಾಜ್ಯಾಧ್ಯಕ್ಷ ಜಿ.ಪರಮೇಶ್ವರ್‌ಗಲ್ಲದೆ ಸಚಿವ ಸಂತೋಷ್ ಲಾಡ್‌ಗೂ ದೂರು ನೀಡಿ ಆತನನ್ನು ತೆಗೆಯದೇ ಹೋದಲ್ಲಿ ಪಕ್ಷಕ್ಕೆ ಹಾನಿಯಾಗುವುದು ಖಚಿತವೆಂದು ಎಚ್ಚರಿಸಿ ಬಂದಿದ್ದಾರೆ. ಸ್ಪಷ್ಟ ಬಹುಮತದೊಂದಿಗೆ ರಾಜ್ಯದ ಗದ್ದುಗೆ ಏರಿರುವ ಕಾಂಗ್ರೆಸ್‌ಗೆ ಸದ್ಯಕ್ಕಂತು ತೊಂದರೆಯಿಲ್ಲ, ಆದರೆ ಈ ಬಣ ರಾಜಕಾರಣದ ಎಫೆಕ್ಟ್ ಗೊತ್ತಾಗುವುದು ಮುಂಬರುವ ಲೋಕಸಭಾ ಚುನಾವಣೆಯಲ್ಲಿ. ಅಷ್ಟರ ಒಳಗೆ ಎಲ್ಲವನ್ನೂ ಸರಿದೂಗಿಸಿಕೊಳ್ಳದಿದ್ದರೆ ಸೋಲು ಕಟ್ಟಿಟ್ಟ ಬುತ್ತಿ.

ಇದಿಷ್ಟು ಕಾಲೆಳೆದಾಟದ ರಂಪವಾದರೆ ಲೋಕಸಭಾ ಚುನಾವಣೆಯ ಟಿಕೆಟ್‌ಗೂ ಕೈ ಪಾಳಯದಲ್ಲಿ ಸಾಕಷ್ಟು ತಿಕ್ಕಾಟಗಳು ಘಟಿಸುತ್ತಿವೆ. ಜಿಲ್ಲಾ ಉಸ್ತುವಾರಿ ಸಚಿವನಾಗುವ ಮೂಲಕ ಎಂ.ಪಿ ಚುನಾವಣೆಯಲ್ಲಿ ಧಾರವಾಡದಿಂದ ಅಭ್ಯರ್ಥಿಯನ್ನು ಗೆಲ್ಲಿಸಬೇಕಾದ ಹೊಣೆಯೂ ಸಂತೋಷ್ ಲಾಡ್ ಮೇಲೆ ಬಿದ್ದಿದೆ. ಈಗಿರುವ ವಿರೋಧ, ಮನಸ್ತಾಪಗಳ ನಡುವೆ ಲಾಡ್‌ಗೆ ಎಷ್ಟರಮಟ್ಟಿಗೆ ಬೆಂಬಲ ಸಿಗುತ್ತದೆನ್ನುವುದು ಅನುಮಾನ. ಆದರೂ ಲಾಡ್ ಗುಂಪು ಈಗಾಗಲೇ ಎಲೆಕ್ಷನ್ ತಾಲೀಮಿನಲ್ಲಿ ನಿರತವಾಗಿದೆ. ವಿಧಾನಸಭಾ ಚುನಾವಣೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಈ ಗುಂಪಿನ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಮೋಹನ್ ಅಸುಂಡಿಯ ಹೆಸರು ಎಂ.ಪಿ ಟಿಕೆಟ್ ಆಕಾಂಕ್ಷಿ ಪಟ್ಟಿಯಲ್ಲಿ ಮುಂಚೂಣಿಯಲ್ಲಿದೆ. ಈ ನಡುವೆ ದೆಹಲಿ ಹೈಕಮಾಂಡ್‌ನೊಂದಿಗೆ ಸಂಪರ್ಕ ಹೊಂದಿರುವ ಮಾಜಿ ಸಂಸದ ಮಂಜುನಾಥ್ ಕುನ್ನೂರು ತನಗೇ ಟಿಕೆಟ್ ಸಿಗುವುದೆಂಬ ಖಾತರಿಯ ಮಾತುಗಳನ್ನಾಡುತ್ತಿದ್ದಾರೆ. ಚುನಾವಣೆ ಸಂದರ್ಭದಲ್ಲಿ ಮಾತ್ರ ಸಕ್ರಿಯರಾಗುವ ಕುನ್ನೂರರ ಪ್ಲಸ್ ಪಾಯಿಂಟ್ ಅವರು ಲಿಂಗಾಯತರು ಎಂಬುದು. ಆದರೆ ಚುನಾವಣೆಯಲ್ಲಿ ಗೆಲ್ಲಲು ಅದು ಸಾಲುವುದಿಲ್ಲ.

ಒಟ್ನಾರೆ ಜಿಲ್ಲಾ ಕಾಂಗ್ರೆಸ್ಸಿಗರು ತಮ್ಮ ಬಣ ಪ್ರತಿಷ್ಠೆಯನ್ನು ಬದಿಗಿಟ್ಟು ಒಗ್ಗಟ್ಟಾಗದಿದ್ದರೆ 2014ರ ಲೋಕಸಭಾ ಚುನಾವಣೆಯಲ್ಲಿ ಇಲ್ಲಿಂದ ಸೋಲುವುದು ಗ್ಯಾರಂಟಿ!

● ಹುಬ್ಬಳ್ಳಿಯಾಂವ

ಗಿಮ್ಮಿಕ್ಕು ಶುರುಹಚ್ಚಿಕೊಂಡ ಚೆಡ್ಡಿಗಳು

ಇತ್ತ ಜಿಲ್ಲಾ ಕಾಂಗ್ರೆಸ್ ಜಿದ್ದಾಜಿದ್ದಿನಲ್ಲಿ ಕಾಲೆಳೆದುಕೊಳ್ಳುತ್ತಿದ್ದರೆ, ಅತ್ತ ಬಿಜೆಪಿ ಸದ್ದಿಲ್ಲದೆ ತನ್ನ ಗಿಮಿಕ್ ಶುರು ...ಡಿಕೊಂಡಿದೆ. ಇದ್ದಕ್ಕಿದ್ದಂತೆ ಆ್ಯಕ್ಟಿವ್ ಆಗಿರುವ ಪ್ರಹ್ಲಾದ್ ಜೋಷಿ ಸೋತ, ಗೆದ್ದ ಶಾಸಕರನ್ನೆಲ್ಲ ಕಲೆಹಾಕಿ ...ಮಾಲೋಚನೆ ನಡೆಸಿ ಲೋಕಸಭಾ ಚುನಾವಣೆಗೆ ಹುರಿದುಂಬಿಸುತ್ತಿದ್ದಾನೆ. ರಾಜ್ಯದಲ್ಲಿ ಮತ್ತು ಸ್ವತಃ ಬಿಬಿಎಂಪಿಯಲ್ಲಿ ...ಮ್ಮದೇ ಕೇಸರಿ ಸರ್ಕಾರವಿದ್ದಾಗ ಸಿಲಿಕಾನ್ ಸಿಟಿಗೆ ಕಸದ ಕಳಂಕ ಅಂಟಿಸಿದ್ದ ಜೋಷಿಯ ಟೀಮು ಮೊನ್ನೆ ಶಾಸಕ ...ರವಿಂದ್ ಬೆಲ್ಲದ್‌ನ ಜೊತೆಯಲ್ಲಿ ಬೀದಿಕಸ ಗುಡಿಸಿಯೂ ಬಂದಿದ್ದಾರೆ. ಇದೆಲ್ಲವು ಎಲೆಕ್ಷನ್ ಗಿಮಿಕ್ ಅಲ್ಲದೆ ...ತ್ತೇನೂ ಅಲ್ಲ. ತಮ್ಮದೇ ಸರ್ಕಾರ ಸಾಲುಸಾಲು ಹಗರಣದಲ್ಲಿ ಭಾಗಿಯಾಗಿ ಛೀಮಾರಿ ಹಾಕಿಸಿಕೊಂಡಿದ್ದರೂ ...ಂದ್ರ ಸರ್ಕಾರದ ಭ್ರಷ್ಟಾಚಾರಗಳನ್ನು ಪಠಿಸುತ್ತಾ ಜನರಿಗೆ ಹತ್ತಿರವಾಗಲು ಹವಣಿಸುತ್ತಿರುವ ಜೋಷಿ ಮೊನ್ನೆ ...ಮಾಜಿ ಮುಖ್ಯಮಂತ್ರಿ ಶೆಟ್ಟರ್‌ನನ್ನು ಬಿಟ್ಟು ಸಭೆ ನಡೆಸಿದ್ದೀರಿ' ಅಂತ ಜಿಲ್ಲಾಧಿಕಾರಿ ಕಚೇರಿಯಲ್ಲಿ ಭಾರಿ ...ದ್ದಲವನ್ನೇ ಎಬ್ಬಿಸಿದ್ದ, ರೈತರಿಗೆ ನಾಮ ತೀಡಿದ ಶೆಟ್ಟರ್ ಅವ್ಯವಹಾರ ಕಣ್ಣ ಮುಂದಿದ್ದರೂ ಇವತ್ತು ಅದೇ ರೈತರಿಗೆ ...ಸ್ಲೆಲುಬಾಗುವ ಮೊಸಳೆ ಕಣ್ಣೀರಿನ ಡೈಲಾಗ್ ಉದುರಿಸುತ್ತಿದ್ದಾನೆ. ಹೀಗೆ ತಮ್ಮ ತಪ್ಪಿನ ಹುಣ್ಣುಗಳ ಮೇಲೆ ತುಪ್ಪ ...ರಿದು ಜನರಿಗೆ ನೆಕ್ಕಿಸಲು ಚೆಡ್ಡಿ ಟೀಮು ಜಿಲ್ಲೆಯಲ್ಲಿ ಹಾತೊರೆಯುತ್ತಿದ್ದರೂ ಯಾವೊಬ್ಬ ಕಾಂಗ್ರೆಸಿಗನೂ ಅದನ್ನು ...ತಿರೋಧಿಸುವ ದಿಟ್ಟತನ ತೋರದಿರುವುದು ದುರಂತ. ●

ಅಧಿಕಾರಿಗಳಿಗೆ ಬಿಸಿ ಮುಟ್ಟಿಸಬೇಕಿದೆ

ಬಣ ರಾಜಕೀಯದಲ್ಲಿ ಬ್ಯುಸಿಯಾಗಿರುವ ಜಿಲ್ಲಾ ಕಾಂಗ್ರೆಸ್ಸಿಗರು ತಕ್ಷಣವೇ ಒಂದು ಸಂಗತಿಯತ್ತ ಗಮನ ಹರಿಸಬೇಕಿದೆ. ಕಳೆದ ಬಾರಿ ಅಧಿಕಾರದಲ್ಲಿದ್ದ ಬಿಜೆಪಿ ಆಯಕಟ್ಟಿನ ಜಾಗಗಳಲ್ಲಿ ತಮಗೆ ಅನುಕೂಲವಾಗುವಂತ 'ಸಂಘಮಿತ್ರ'ರನ್ನೇ ತಂದು ಕೂರಿಸಿದೆ. ಧಾರವಾಡ ಜಿಲ್ಲೆಯಲ್ಲಂತೂ ಅಧಿಕಾರ ವರ್ಗ ಸಂಪೂರ್ಣ ಕೇಸರಿಮಯ! ಡಿಸಿ ಸಮೀರ್ ಶುಕ್ಲಾ, ಪಾಲಿಕೆ ಆಯುಕ್ತ ಪಾಟೀಲ್, ಪೊಲೀಸ್ ಆಯುಕ್ತ ಪದ್ಮನಯನ, ಡಿಸಿಪಿ ಶ್ರೀಕಾಂತ್ ಜೋಷಿ ಮೊದಲಾದವರೆಲ್ಲ ಪ್ರಹ್ಲಾದ್ ಜೋಷಿ ಹಾಗೂ ಶೆಟ್ಟರ್ ಹಾಕಿದ ಗೆರೆಯನ್ನು ದಾಟುವವರಲ್ಲ. ಇನ್ನು ಅಬಕಾರಿ, ಸಾರಿಗೆ ಪ್ರಾಧಿಕಾರದಂತ 'ಜಬರ್‌ದಸ್ತ್' ಇಲಾಖೆಯ ಅಧಿಕಾರಿಗಳಂತೂ ಇನ್ನೂ ಬಿಜೆಪಿ ಸರ್ಕಾರವೇ ಅಧಿಕಾರದಲ್ಲಿದೆ ಎನ್ನುವ ಭ್ರಮೆಯಲ್ಲಿ ಭಾರೀ ಲೂಟಿ ನಡೆಸುತ್ತಿದ್ದಾರೆ. ಪಡಿತರ ಇಲಾಖೆ ನಿಯಂತ್ರಿಸುತ್ತಿರುವ ಮ್ಯಾನೇಜರ್ ನಾಗರಾಜ್ ಬನವಾಸಿಯಂತೂ ಸಿದ್ದರಾಮಯ್ಯನ '30 ಕೆಜಿ ಅಕ್ಕಿ'ಯ ಸ್ಕೀಮು ಕೇಳಿಯೇ ಹಸಿದು ಕೂತಿದ್ದಾನೆ. ಪಾಲಿಕೆಗೆ ಒಕ್ಕರಿಸಿರುವ ಇಂಜಿನಿಯರ್ ಪುಟ್ಟಣ್ಣನವರಂತ ತಿಗಣೆಗಳು ಜನರ ರಕ್ತ ಹೀರುವುದನ್ನೇ ಕಾಯಕವನ್ನಾಗಿಸಿಕೊಂಡಿದ್ದಾರೆ. ಇಂತಹ ಅಧಿಕಾರಿಗಳಿಗೆ ಬಿಸಿ ಮುಟ್ಟಿಸುವ ಕೆಲಸ ಮೊದಲು ಆಗಬೇಕು. ತಮ್ಮ ಸೀಟುಗಳಿಗೆ ಫೆವಿಕಾಲ್ ಮೆತ್ತಿಸಿಕೊಂಡಿರುವ ಇವರನ್ನು ಎತ್ತಂಗಡಿ ಮಾಡೋದು ಸುಲಭದ ಮಾತಲ್ಲ, ಆದರೆ ಜನ ಅಂತಹ ಬದಲಾವಣೆಗಾಗಿಯೇ ತಮಗೆ ಮತ ಒತ್ತಿದ್ದಾರೆನ್ನುವುದನ್ನು ಜಿಲ್ಲಾ ಕಾಂಗ್ರೆಸ್ ಪಾಳಯ ಅರ್ಥ ಮಾಡಿಕೊಳ್ಳಬೇಕಿದೆ. ●

...ದ<<<

...ಪಿಯಿಂದ ಸಿಂತಿದ್ದ ನಿವೃತ್ತ ಐಎಎಸ್ ಪೆರುಮಾಳ್ ...ತ್ತು ಜೆಡಿಎಸ್‌ನ ಅಬ್ಬಾಸ್ ಅಲಿ ಬೊಹ್ರಾಗೆ ಠೇವಣಿ ...ದ ಹುಟ್ಟಲಿಲ್ಲ, ರೋಷನ್ ಬೇಗ್ ಗೆಲ್ಲುವಲ್ಲಿ ತಾನು ...ದ ಕಾರಣಕರ್ತನೆಂಬಂತೆ ತನ್ವೀರ್ ಭಾವಿಸಿಕೊಂಡ. ...ಗ್ರೆಸ್ ಸರ್ಕಾರವಿದೆ, ಆ ಕಾಲದಿಂದಲೂ ಪರಿಚಯದ ...ಗ್ ಗೆದ್ದಾಗಿದೆ. ಶಿವಾಜಿನಗರದ ಪಾಪಕೂಪದಲ್ಲಿ ಸಾಕಷ್ಟು ...ರು ಪರಿದುಹೋಗಿದೆ. ವಯಸ್ಸು ಬೇರೆ ಐವತ್ತಾಗುತ್ತಾ ...ತು, ಸಿಕ್ಕೆ ದೊಡ್ಡ ಕಣ್ಣು ಬಿಟ್ಟ ಹುಡುಗರ್‍ಯಾರಿಗೂ ತನ್ನ ..., ಗೌರವವಿಲ್ಲ, ಫೀಲ್ಡು ಬೇರೆ ಕೈತಪ್ಪಿದೆ. ಇಂಥಾ ...ದಲ್ಲಿ ದುನಿಯಾ ನಡೆಸಬೇಕೆಂದರೆ ತಾನಿನ್ನು ಫೀಲ್ಡು ...ಲ್ಲಿ ಎಂದು ತೋರಿಸಿಕೊಳ್ಳದೇ ಬೇರೆ ದಾರಿಯೇ ಇಲ್ಲ.

ಇಂಥದೊಂದು ಲೆಕ್ಕ ಹಾಕಿಯೇ ತನ್ವೀರ್ ಜೂನ್ 7ರ ಡ್ರಾಮಾಕ್ಕೆ ಕೈಯಿಟ್ಟಿದ್ದಾನೆ. ಫ್ರೇಜರ್‌ಟೌನ್ ಮಸೀದಿ ಪಕ್ಕದ ಹೋಟೆಲೊಂದರಲ್ಲಿ ಅಡ್ಡೆ ಹಾಕಿದ್ದ ಜಂಶೆದ್ ಪೈಲ್ವಾನ್ ಏಕಾಏಕಿ ತನ್ವೀರ್‌ನನ್ನು ಕಂಡಿದ್ದೇ 'ಕ್ಯಾರೇ ಗಾಂಡು... ದೊಡ್ಡ ರೌಡಿ ಏನೋ ನೀನೂ...?' ಎಂದು ಕಿಚಾಯಿಸಿದನಂತೆ. ಅದಕ್ಕೆ ತನ್ವೀರ್ ಜಂಶೆದ್ ಪೈಲ್ವಾನ್‌ನನ್ನು ಹಿಡಿದು ಬಡಿದನಂತೆ. ಹಾಗೆ ಜಂಶೆದ್‌ನನ್ನ ಬಡಿದು ಜಾಗ ಖಾಲಿ ಮಾಡಿದ ತನ್ವೀರ್‌ಗೆ ಜಂಶೆದ್ ಮಗ ಜುಬೇರ್ ಪೈಲ್ವಾನ್ ತನ್ನ ಮೊಬೈಲಿನಿಂದ ಫೋನಾಯಿಸಿದ್ದೇ 'ಏ ಮುದಿಯಾ ತಾಕತ್ತಿದ್ರೆ ನನ್ನನ್ನು ಮುಟ್ಟಿ ನೋಡೋ, ಗಂಡಸೇ ಆಗಿದ್ರೆ ನನ್ನನ್ನು ಮುಟ್ಟಿ ಜೀವಂತ ಹೋಗೋ...' ಎಂದು ಕೆಣಕಿದನಂತೆ. ಅಷ್ಟಕ್ಕೇ ಕೆಂಡಾಮಂಡಲನಾದ ತನ್ವೀರ್ ರಸೆಲ್ ಮಾರ್ಕೆಟ್ ಪಕ್ಕದ ಚೌಡಿಗಲ್ಲಿಯಲ್ಲಿದ್ದ ಜಂಶೆದ್ ಮನೆಗೆ ನುಗ್ಗಿದ್ದೇ ಮಗ ಜುಬೇದ್ ಪೈಲ್ವಾನ್‌ನನ್ನು ಅಟ್ಟಾಡಿಸಿ ಡ್ಯಾಗರ್‌ನಿಂದ ಚುಚ್ಚಿದನಂತೆ. ಮಾರಾಮಾರಿಯಲ್ಲಿ ಒಂದಿಬ್ಬರು ತನ್ವೀರ್ ಶಿಷ್ಯರಿಗೂ ಮಚ್ಚೇಟು ಬಿತ್ತಂತೆ!

ಮೇಲುನೋಟಕ್ಕಿದು ಶಿವಾಜಿನಗರದ ರೌಡಿ ಕಾಳಗದಂತೆಯೇ ಕಾಣುತ್ತದೆ. ಜಂಶೆದ್ ಪೈಲ್ವಾನ್ ಆಗಲಿ ಆತನ ಮಗ ಜುಬೇರ್ ಪೈಲ್ವಾನ್ ಆಗಲಿ ವೃತ್ತಿಪರ ರೌಡಿಗಳಲ್ಲ, ರಸೆಲ್ ಮಾರ್ಕೆಟ್‌ನ ಸ್ವಾ ..ಪು ವ್ಯಾಪಾರಿಗಳು. ಹಳೇ ಕಾಲದ ಪೈಲ್ವಾನರೆಂಬ ಹೆಸರಿದೆ ನಿಜ, ಕ್ರಿಮಿನಲ್ ಹಿನ್ನೆಲೆಯಿಲ್ಲ, ವಿನಾಕಾರಣ ತನ್ವೀರ್‌ನನ್ನು ಕೆಣಕಿ ದುಬ್ಬ ಲಾಂಗೆತ್ತಿಕೊಂಡು ನಡುರಸ್ತೆಯಲ್ಲಿ ಬಡಿದಾಡುವಂತಹ ಹರಕತ್ತು, ಕಾರಣ ಯಾವುದೂ ಇಲ್ಲದ ಪೈಲ್ವಾನರು ಕಾಂಗ್ರೆಸ್ ಅಧಿಕಾರಕ್ಕೆ ಬಂದಾಕ್ಷಣವೇ ಮಹಾಪಾತಕಿ ತನ್ವೀರ್ ವಿರುದ್ಧ ಮುಸ್ತಿಗೆ ಬೀಳುತ್ತಾರೆಂದರೆ ಅದು ಅಂಡರ್‌ವರ್ಲ್ಡ್ ಜಿದ್ದಾಜಿದ್ದಿಯಂತೂ ಅಲ್ಲವೇ ಅಲ್ಲ.

ತನ್ವೀರ್‌ನ ಗಿಮ್ಮಿಕ್ ಬಲ್ಲವರಿಗಿದು ಮಜಾಕಿನ ಜೋಕೇ ಹೊರತು ಈ ಇಳಿ ವಯಸ್ಸಿನಲ್ಲಿ ದುಸ್ಸಾಹಸಕ್ಕಿಳಿಯುವ ತಾಕತ್ತಾಗಲಿ, ಹರಕತ್ತಾಗಲಿ ಆತನಿಗಿಲ್ಲ, ತನ್ನ ಭೋಗದ ಸಾಮ್ರಾಜ್ಯ ಉಳಿಸಿಕೊಳ್ಳಲು ಈ ವಯಸ್ಸಲ್ಲೂ ತೋಗಾದಿ ಹಾಸ್ಯಾಸ್ಪದನಾಗುವ ತನ್ವೀರ್ ಬಗ್ಗೆ ಮರುಕಬಿಟ್ಟರೆ ಬೇರೇನೂ ಅನ್ನಿಸುವುದಿಲ್ಲ.

● ರಾ.ಸೋಮನಾಥ್

ಹಿಟ್ಲರ್ ಬಂದ!



ಬಂದಾನೋ... ಬಾರನೋ ಎಂಬಂತಿದ್ದ ನರೇಂದ್ರ ಮೋದಿ ಕೊನೆಗೂ ಬಿಜೆಪಿಯ ನಾಯಕನಾಗಿ ರಾಷ್ಟ್ರ ರಾಜಕಾರಣದ ಸೀನ್‌ನಲ್ಲಿ ಕಾಣಿಸಿಕೊಂಡಿದ್ದಾನೆ.

ಇದು ಕಟ್ಟಾ ಹಿಂದೂತ್ವವಾದಿಗಳಿಗೆ ಥ್ರಿಲ್ ಅನ್ನು, ಖಾಸಗಿ ಉದ್ಯಮಿಗಳಿಗೆ ಹೊಸ ಹುರುಪನ್ನು ಹಾಗೂ ಕಾಂಗ್ರೆಸ್‌ಗೆ ಕೊಂಚ ಚಿಂತೆಯನ್ನು ಉಂಟು ಮಾಡುತ್ತಿರುವುದಂತೂ ನಿಜ.

ಜೊತೆಗೆ ಮೇಲ್ಜಾತಿಯ ಶ್ರೀಮಂತರಿಗೆ, ಚಿಲ್ಲಿ ಬುದ್ಧಿಯ ಪತ್ರಕರ್ತರಿಗೆ, ಮಿಡಲ್ ಕ್ಲಾಸಿನ ತೆಳುಬುದ್ಧಿಯವರಿಗೂ ಮೋದಿ ಹೆಸರು ಒಂಥರಾ ನಿರೀಕ್ಷೆಯ 'ಮೇನಿಯಾ'..... ಅಂದರೆ ಕಾಯಿಲೆ!

ಮತ್ತೊಂದೆಡೆ ಪ್ರಜಾಪ್ರಭುತ್ವವನ್ನು ನಂಬುವವರಿಗೆ, ಜಾತ್ಯತೀತರಿಗೆ, ಅಸಲಿ ದೇಶಭಕ್ತರಿಗೆ, ದಲಿತ-ಹಿಂದುಳಿದ-ಅಲ್ಪಸಂಖ್ಯಾತರಿಗೆ, ಮಹಿಳೆಯರಿಗೆ 'ಮೋದಿ' ಹೆಸರು ಭಯ ಹುಟ್ಟಿಸುತ್ತಿದೆ.

ಹೀಗೆ ಕೆಲವರ ಪಾಲಿಗೆ ಅವತಾರ ಪುರುಷನಂತೆಯೂ ಮಿಕ್ಕವರಿಗೆ ಅನಾಹುತಕಾರಿಯಂತೆಯೂ ಕಾಣುವ ಮೋದಿ ಇನ್ನು ಮುಂದೆ ನಿತ್ಯ ಸುದ್ದಿಯಲ್ಲಿರುವುದು ಖಚಿತ. ಏಕೆಂದರೆ 2014 ರ ಲೋಕಸಭಾ ಎಲೆಕ್ಷನ್‌ನಲ್ಲಿ ಬಿಜೆಪಿಯ ಚುನಾವಣಾ ಪ್ರಚಾರ ಸಮಿತಿಗೆ ಅಧ್ಯಕ್ಷನಾಗಿ ಮೋದಿಯೇ ನೇಮಕಗೊಂಡಿದ್ದಾನೆ.

ಈ ಮೋದಿ ಮಹಾನ್ ಮಾತುಗಾರ. ಆದರೆ ಇವನ ಮಾತುಗಳಲ್ಲಿ ಮುತ್ಸದ್ದಿತನ ಕಾಣುವುದಿಲ್ಲ. ಪ್ರಧಾನಿ ಮನಮೋಹನ್ ಸಿಂಗ್‌ರನ್ನು 'ಮೌನ' ಮೋಹನ ಸಿಂಗ್ ಅನ್ನುವುದು, ಶಶಿ ತರೂರ್ ಪತ್ನಿ ಸುನಂದಾಗೆ '50 ಕೋಟಿಯ ಗೆಳತಿ' ಅಂದದ್ದು, 'ಬರೀ ಕೈ ತೋರಿಸುತ್ತಿದ್ದೀರಲ್ಲಾ, ನಿಮ್ಮ ಸಿಎಂ ಅಭ್ಯರ್ಥಿಯ ಮುಖಾ ತೋರಿಸಿ' ಎನ್ನುತ್ತಾ ಕರ್ನಾಟಕದ ಚುನಾವಣಾ ಪ್ರಚಾರ ಭಾಷಣದಲ್ಲಿ ಕಾಂಗ್ರೆಸ್ ಅನ್ನು ಗೇಲಿ ಮಾಡಿದ್ದೆಲ್ಲಾ ಮೋದಿಯ ಮಾತಿನ ಶೈಲಿಗೆ ಪುರಾವೆಗಳಾಗಿವೆ.

ಇವೆಲ್ಲಾ ಹೆಚ್ಚುಕಡಿಮೆ ಕಾಲೇಜು ಹುಡುಗರ ಎಸ್‌ಎಂಎಸ್ ಜೋಕುಗಳ ಲೆವೆಲ್ ಮಾತುಗಳು.

ಆದರೆ ಮೋದಿ ವಿಭಿನ್ನ ಅನ್ನಿಸಿಕೊಳ್ಳುತ್ತಿರುವುದು ಇದಿಷ್ಟರಿಂದ ಮಾತ್ರವಲ್ಲ, ಅವನು ಗುಜರಾತನ್ನು ಕಳೆದೊಂದು ದಶಕದಲ್ಲಿ ಅದ್ಭುತವಾಗಿ ಅಭಿವೃದ್ಧಿ ಮಾಡಿದ್ದಾನೆಂಬ ಮಾತನ್ನು ಈಗ ವ್ಯವಸ್ಥಿತವಾಗಿ ಹಬ್ಬಿಸಲಾಗುತ್ತಿದೆ.

ಇದು ಅಸಲಿಗೆ ಯಾರ ಅಭಿವೃದ್ಧಿ, ಅದರ ಪ್ರಯೋಜನ ಯಾರಿಗಾಗುತ್ತಿದೆ ಎಂಬ ಪ್ರಶ್ನೆ ಕೇಳಲೂ ಬಿಡದೆ ಗುಜರಾತ್ ಮಾದರಿ ಬಗ್ಗೆ ಶಂಖ ಊದಲಾಗುತ್ತಿದೆ.

ಇಂಡಿಯಾ ದೇಶದ ಖಾಸಗಿ ಉದ್ಯಮಪತಿಗಳೂ ಮತ್ತವರ ಕಂಟ್ರೋಲಿನಲ್ಲಿರುವ ಸುದ್ದಿ ಮಾಧ್ಯಮಗಳೂ ಈಗ ಮೋದಿ ಮಾದರಿ ಅಭಿವೃದ್ಧಿ ಬಗ್ಗೆ ಪ್ರಚಾರ ನಡೆಸುತ್ತಿವೆ.

ಇಡೀ ಇಂಡಿಯಾ ದೇಶಕ್ಕೇ ಮೋಕ್ಷ ತೋರಿಸಬಲ್ಲ ನಾಯಕನೆಂಬಂತೆ ಸ್ವತಃ ಮೋದಿಯೇ ತನ್ನ ಬಗ್ಗೆ ಹೇಳಿಕೊಳ್ಳುತ್ತಿದ್ದಾನೆ.

ಈ ಗದ್ದಲದಲ್ಲಿ ಮೋದಿ ಮೂರು ಸಾವಿರ ಮುಸ್ಲಿಮರ ನರಮೇಧ ನಡೆಸಿದ ವಿಚಾರವನ್ನು ಮರೆಮಾಚಲಾಗುತ್ತಿದೆ.

ಕಾಂಗ್ರೆಸ್‌ಗಂತೂ ಈ ವಿಚಾರ ಎತ್ತಿ ತೋರಿಸುವ ಸ್ಥೈರ್ಯ-ಛಾತಿ ಎರಡೂ ಇಲ್ಲ.

ಎಲೆಕ್ಷನ್ ತಯಾರಿ

ನಿಜ ಹೇಳಬೇಕೆಂದರೆ ದೆಹಲಿಯಲ್ಲಿ ಪುನಃ ಅಧಿಕಾರ ಹಿಡಿಯುವ ಆಸೆಯೇ ಬಿಜೆಪಿಗೆ ಬತ್ತಿಹೋಗಿತ್ತು. ದುರ್ಬಲಗೊಂಡ ಪಕ್ಷ, ಒಳಜಗಳ, ಪ್ರಭಾವವಿರದ ನಾಯಕರು, ಮಿತ್ರ ಪಕ್ಷಗಳ ಅನಿಶ್ಚಯ ಮನೋಭಾವಗಳೆಲ್ಲಾ ಸೇರಿ ಬಿಜೆಪಿಯ ಸ್ಥೈರ್ಯವನ್ನೆಲ್ಲಾ ಕುಗ್ಗಿಸಿದ್ದವು. ಆದರೆ ಯಾವಾಗ ಕಾಂಗ್ರೆಸ್ ನಾಯಕತ್ವದ ಯುಪಿಎ ಸರ್ಕಾರ ಒಂದಾದಮೇಲೊಂದರಂತೆ ಹಗರಣ ಮಾಡುತ್ತಾ ಬಂತೊ, ಬೆಲೆ ಏರಿಕೆ, ಆರ್ಥಿಕ ಸ್ಥಗಿತತೆ ಜನಸಾಮಾನ್ಯರನ್ನು ಬಾಧಿಸ ತೊಡಗಿತೊ ಆಗಲೇ ಕಾಂಗ್ರೆಸ್‌ನ ತೂಕ ಇಳಿಯ ತೊಡಗಿತು. ಜೊತೆಗೆ ಬಿಜೆಪಿಯೊಳಗೆ ಈಗ ವಾಜಪೇಯಿ ಯಾವ ಸ್ಥಿತಿಯಲ್ಲಿದ್ದಾರೊ ಅದೇ ಥರಾ ಭಾಸವಾಗುವ ಮನ್‌ಮೋಹನ್ ಸಿಂಗ್ ಕೂಡಾ ಕಾಂಗ್ರೆಸ್ ಪಕ್ಷಕ್ಕೆ ಹಾಸಿಗೆ ಹಿಡಿದಿರುವ ಒಂದು ರೋಗಿಯ ಗೆಟಪ್ ನೀಡಿದ್ದಾರೆ.

ಉಳಿದಿರುವ ಬಿಜೆಪಿಯ ಲಾಲ್‌ಕೃಷ್ಣ ಅಡ್ವಾಣಿಯು ಸಂಘ ಪರಿವಾರದ ಕಣ್ಣಲ್ಲಿ ಒಂದು ಖರ್ಚಾಗಿ ಹೋಗಿರುವ ಸರಕು, ಇಲ್ಲಾಂದರೆ ಖಾಲಿ ಗೋಣಿ ಚೀಲ. ಅಡ್ವಾಣಿಯನ್ನು ಮುಂದಿಟ್ಟುಕೊಂಡು ಎಲೆಕ್ಷನ್ ಗೆಲ್ಲಲಾಗುವುದಿಲ್ಲ ಎಂಬುದು ಬಿಜೆಪಿಗಳಿಗೆ ಚೆನ್ನಾಗಿ ಗೊತ್ತಿದೆ.

ಮತ್ತೊಂದೆಡೆ ಕಾಂಗ್ರೆಸ್‌ಗೆ ಪ್ರಧಾನಿ ಮನಮೋಹನ್ ಸಿಂಗ್ ಓಟು ತಂದುಕೊಡುವುದಿಲ್ಲ ಎಂಬುದು ಚೆನ್ನಾಗಿ ಗೊತ್ತಿದೆ.

ಹಗರಣಗಳ ಹೊರೆಯ ಕಾರಣ ಸೋನಿಯಾ ಒಬ್ಬಳೆಯ ಶ್ರಮವೂ ಕಾಂಗ್ರೆಸ್‌ಗೆ ಆಕ್ಸಿಜನ್ ನೀಡಲಾರದೆಂಬ ಹಿಂಜರಿಕೆಯೂ ಇರಬಹುದು. ಈ ಎರಡೂ ಪಕ್ಷಗಳಿಗೂ ತಮ್ಮ ತಮ್ಮ ಮಿತ್ರಪಕ್ಷಗಳೊಂದಿಗೆ ನಾಮಕಾವಸ್ತೆಯ ಚುನಾವಣಾಪೂರ್ವ ಮೈತ್ರಿಗಳಿರುತ್ತಾದ್ದರಿಂದ ಕಾಂಗ್ರೆಸ್ ಹಾಗೂ ಬಿಜೆಪಿಗಳೇ ಎದುರಾಬದುರಾ ನಿಂತು ಎಲೆಕ್ಷನ್ ಹೋರಾಟ ನಡೆಸಬೇಕಾಗುತ್ತದೆ.





ಇದೆಲ್ಲ ಒಟ್ಟಿಗೆ ಸೇರಿ ಈಗ ರಾಷ್ಟ್ರ ರಾಜಕಾರಣದ ನಕ್ಷೆಯಲ್ಲಿ ಹೊಸ ನಾಯಕರ ಆಗಮನವಾಗುತ್ತಿದೆ.

ಬಿಜೆಪಿಯು ತನ್ನ ಸಮಸ್ಯೆಗೆ ಈಗ ನರೇಂದ್ರ ಮೋದಿಯಲ್ಲಿ ಪರಿಹಾರ ಹುಡುಕಲು ಹೊರಟಿದೆ. ಇದಕ್ಕುತ್ತರವಾಗಿ ಕಾಂಗ್ರೆಸ್ ರಾಹುಲ್ ಗಾಂಧಿಯನ್ನು ಅಖಾಡಕ್ಕಿಳಿಸುತ್ತದಾ ಎಂಬುದನ್ನು ಕಾದುನೋಡಬೇಕಷ್ಟೆ. ರಾಜಕೀಯ ಅಪ್ರೆಂಟಿಸ್‌ಶಿಪ್ ಅನ್ನು ಪೂರ್ಣಗೊಳಿಸಿರುವಂತೆ ಕಾಣುವ ರಾಹುಲ್ ಮಾತು ಕಲಿತಿದ್ದಾನೆ. ಕೊಂಚ ಫಿಲಾಸಫಿಕಲ್, ರಾಜಕೀಯ-ಭಾವುಕತೆಯನ್ನೆಲ್ಲ ಬೆರೆಸಿ ಮಾತಾಡುವ ರಾಹುಲ್‌ನನ್ನು 'ಬಡವರ ರಾಜಕುಮಾರ'ನಂತೆ ಬಿಂಬಿಸುವ ಯತ್ನ ನಡೆದಿದೆ.

ಏನಿದು ಮೋದಿ ಮಾಡೆಲ್?

"ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆ" ಎನ್ನುವ ಮಾತು ಯಡಿಯೂರಪ್ಪನಾದಿಯಾಗಿ ಇಲ್ಲಿನ ಎಲ್ಲಾ ಬಿಜೆಪಿಗಳೂ ಡಂಗೂರ ಸಾರುತ್ತಾ ಬಂದಿದ್ದನ್ನು ಜನ ನೋಡಿದ್ದಾರೆ. ಈ ಮಾತು ಈಗ ರಾಷ್ಟ್ರಮಟ್ಟದಲ್ಲೂ ಬಿಜೆಪಿಗಳ ಬಾಯಲ್ಲಿ ಕೇಳಿಬರುತ್ತಿದೆ. ಇನ್ನು ಕೈಗಾರಿಕೋದ್ಯಮಿಗಳ ಕಂಟ್ರೋಲಿನಲ್ಲಿರುವ ಟಿವಿ ಹಾಗೂ ಪತ್ರಿಕೆಗಳೂ ಗುಜರಾತ್ ಮಾದರಿಯ ಅಭಿವೃದ್ಧಿಯ ಬಗ್ಗೆ ಪದೇಪದೇ ಪ್ರಚಾರ ನೀಡುತ್ತಿವೆ.

ಆದರೆ ಅಲ್ಲಿ ಯಾರು ಅಭಿವೃದ್ಧಿ ಹೊಂದುತ್ತಿದ್ದಾರೆ? ಅಭಿವೃದ್ಧಿಯ ಪ್ರತಿಫಲ ಎಲ್ಲಾ ಜನವರ್ಗಗಳಿಗೂ ಸಿಕ್ಕುತ್ತಿದೆಯಾ ಎಂಬುದನ್ನು ಮಾತ್ರ ಆಳಕ್ಕಿಳಿದು ನೋಡುತ್ತಿಲ್ಲ.

ಕಳೆದ ಒಂದು ದಶಕದಲ್ಲಿ ಗುಜರಾತ್ ವೇಗವಾಗಿ ಬದಲಾಗಿರುವುದು ನಿಜ. ದೇಶ-ವಿದೇಶಗಳ ಉದ್ದಿಮೆದಾರರು ಗುಜರಾತ್‌ಗೆ ನುಗ್ಗಿ ಹೋಗಿ ಸಾವಿರಾರು ಕೋಟಿ ರೂಪಾಯಿಗಳ ಬಂಡವಾಳ ಹಾಕುತ್ತಿರುವುದು ನಿಜ. ಆದರೆ ಹರಿದು ಬರುತ್ತಿರುವ ಬಂಡವಾಳದಲ್ಲಿ 40% ಹಣ ಮೂಲಭೂತ ಸೌಕರ್ಯಗಳ ಮೇಲೆ ಹೂಡಿಕೆಯಾಗುತ್ತಿದೆ. ರಸ್ತೆ, ರೈಲು, ಸಂಪರ್ಕ, ಬಂದರುಗಳ ಅಭಿವೃದ್ಧಿ, ಕೈಗಾರಿಕಾ ವಸಾಹತುಗಳ ನಿರ್ಮಾಣಕ್ಕೆ ಹಾಕಿದಷ್ಟು ಹಣ ಉತ್ಪಾದನಾ ಕ್ಷೇತ್ರಕ್ಕೆ ಹೋಗುತ್ತಿಲ್ಲ, ವಿಶೇಷ ಆರ್ಥಿಕ ವಲಯ, (SEZ), **Green field sites, Special Investors Region, Investors Support Scheme** ಗಳ ಮೂಲಕ ಇಡೀ ರಾಜ್ಯದ ಆರ್ಥಿಕತೆಯನ್ನೇ ನರೇಂದ್ರ ಮೋದಿ ಖಾಸಗಿಯವರ ವಶಕ್ಕೊಪ್ಪಿಸಿದ್ದಾನೆ. ಇವರಿಗೆ ಸಬ್ಸಿಡಿಗಳು, ರಿಯಾಯಿತಿಗಳು, ಸರ್ಕಾರದ ಬಂಡವಾಳ ಪಾಲುದಾರಿಕೆಗೆ ಖಾಸಗಿ ಪಾಲುದಾರರು ನೀಡಬೇಕಿದ್ದ ಲಾಭಾಂಶಕ್ಕೆ **Royalty Holiday** ಗಳ ಮೂಲಕ ಖಾಸಗಿ ಖಜಾನೆ ಭರ್ತಿ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ.

ಈ ಉದ್ದಿಮೆದಾರರಿಗೆ ಬೇಕಾದ ಭೂಮಿ-ನೀರು-ವಿದ್ಯುತ್ ಅನ್ನು ಗ್ರಾಮೀಣ ಜನರಿಂದ ಕಸಿದು ನೀಡಲಾಗುತ್ತಿದೆ. ಜೊತೆಗೆ ಗುಜರಾತಿನಾದ್ಯಂತ ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳನ್ನು ಖಾಸಗಿಯವರಿಗೆ ವಹಿಸಲಾಗಿದೆ.

ಈ ಆಕ್ರಮಣಕಾರಿ ಖಾಸಗಿ ಬಂಡವಾಳಗಾರರು ಗುಜರಾತನ್ನು ಮನಸ್ಸೋ ಇಚ್ಛೆ ಲೂಟಿ ಹೊಡೆಯುತ್ತಿರುವುದನ್ನೇ 'ಒಂದು ಹೊಸ ಅಭಿವೃದ್ಧಿ'ಯ ಮಾಡೆಲ್ ಎಂಬುದಾಗಿ ಬಿಂಬಿಸಲಾಗುತ್ತಿದೆ.

ಜನಸಾಮಾನ್ಯರ ಮೇಲೆ ಇದೆಲ್ಲದರ ಪರಿಣಾಮ ಏನಾಗಿದೆ ಎಂಬುದನ್ನು ಈಗ ನೋಡೋಣ.

ನ್ಯಾಷನಲ್ ಪ್ಲಾನಿಂಗ್ ಕಮಿಷನ್‌ನ ಕಳೆದ ಸಾಲಿನ ವಾರ್ಷಿಕ ವರದಿಯಲ್ಲಿ ಗುಜರಾತ್ ಕುರಿತಂತೆ ಕೆಲವು ಕುತೂಹಲಕಾರಿ ಅಂಕಿಅಂಶಗಳು ಕಾಣಸಿಗುತ್ತವೆ.

ಮಾನವ ಅಭಿವೃದ್ಧಿ ಸೂಚ್ಯಂಕ (**Human Development Index**) ನ ಮಾನದಂಡದಲ್ಲಿ ಈ ಮೊದಲು 6 ನೇ ಸ್ಥಾನದಲ್ಲಿದ್ದ ಗುಜರಾತ್ ಈಗ 9 ನೇ ಸ್ಥಾನಕ್ಕಿಳಿದಿದೆ. ಸಾಕ್ಷರತೆಯಲ್ಲಿ ಗುಜರಾತ್ ಏನು ನಂಬರ್ ಒನ್ ಸ್ಥಾನದಲ್ಲಿಲ್ಲ, ಬದಲಾಗಿ 18ನೇ ಸ್ಥಾನದಲ್ಲಿದೆ. ಶಿಶುಮರಣ ಸಂಖ್ಯೆ ಮಧ್ಯಪ್ರದೇಶ, ತಮಿಳುನಾಡು, ಮಹಾರಾಷ್ಟ್ರಕ್ಕಿಂತ ಹೆಚ್ಚಿದೆ. ರಾಷ್ಟ್ರೀಯ ಲಿಂಗಾನುಪಾತದ ಪ್ರಮಾಣ ಸಾವಿರ ಪುರುಷರಿಗೆ 940 ಇದ್ದರೆ ಅದು ಗುಜರಾತಿನಲ್ಲಿ 918 ಮಾತ್ರ ಇದೆ. ದೇಶದ ಹಸಿವುಪೀಡಿತ 17 ರಾಜ್ಯಗಳ ಪೈಕಿ ಗುಜರಾತೂ ಇದೆ. ಅದರ ಸ್ಥಾನ 13 ನೆಯದ್ದು. ಗುಜರಾತಿನ 5 ವರ್ಷ ಕೆಳಗಿನ ಮಕ್ಕಳ ಪೈಕಿ 45% ರಷ್ಟು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಈ ಮಕ್ಕಳೆಲ್ಲಾ ಬಡ ಕುಟುಂಬಗಳಿಗೆ ಸೇರಿದವರೆಂಬುದನ್ನು ವಿಶೇಷವಾಗಿ ಹೇಳಬೇಕಿಲ್ಲ.

ಇನ್ನು ಶಿಕ್ಷಣ-ಆರೋಗ್ಯ ಕ್ಷೇತ್ರಗಳಲ್ಲಿ ಖಾಸಗಿ ಹತೋಟಿ ಇರುವುದರಿಂದ ಗುಜರಾತಿನ ಜನ ದೇಶದ ಇನ್ನಿತರ ರಾಜ್ಯಗಳ ಜನರಿಗಿಂತ ಹೆಚ್ಚು ಹಣವನ್ನು ಶಿಕ್ಷಣ-ಆರೋಗ್ಯಕ್ಕಾಗಿ ಖರ್ಚು ಮಾಡಬೇಕಾಗಿ ಬಂದಿದೆ.

ಮೋದಿಯ ಗುಜರಾತ್ ಅಭಿವೃದ್ಧಿಯ ಇನ್ನೊಂದು ದಾರುಣ ಮುಖ ಹೀಗಿದೆ.

ಉದ್ಯೋಗ ಸೃಷ್ಟಿಯಲ್ಲಿ ಗುಜರಾತ್ ಒಟ್ಟಾರೆಯಾಗಿ ಹಿಂದಿದೆ. ಇಷ್ಟರ ನಡುವೆ ಲಭ್ಯ ಹೊಸ ಉದ್ಯೋಗಗಳಲ್ಲಿ ಬಹುಪಾಲು ಅಲ್ಲಿನ ಮೇಲುಜಾತಿ ಹಾಗೂ ಮೇಲ್ವರ್ಗಗಳ ಜನರ ಪಾಲಾಗುತ್ತಿವೆ. ಹಿಂದೂತ್ವದ ಸಿದ್ಧಾಂತ ಪ್ರತಿಪಾದಿಸುವ ಜಾತಿತಾರತಮ್ಯವನ್ನು ಮೋದಿ ಸರ್ಕಾರ ಅನುಸರಿಸುತ್ತಿದ್ದು ದಲಿತರು, ಬುಡಕಟ್ಟು ಹಾಗೂ ಹಿಂದುಳಿದ ವರ್ಗಗಳು ಮತ್ತು ಮುಸಲ್ಮಾನ ಯುವಜನತೆ ಉದ್ಯೋಗಾವಕಾಶಗಳಿಂದ ವಂಚಿತರಾಗುತ್ತಿದ್ದಾರೆ.

ಅಲ್ಲಿ ಅಭಿವೃದ್ಧಿ ಎಂಬುದು ಪ್ರಧಾನವಾಗಿ ಅಹಮದಾಬಾದ್ ಹಾಗೂ ಸೂರತ್‌ಗಳಲ್ಲಿ ಕೇಂದ್ರೀಕೃತಗೊಂಡಿದೆ. ಬುಡಕಟ್ಟು ಜನ ಹೆಚ್ಚಿರುವ ಒಂಭತ್ತು ಜಿಲ್ಲೆಗಳನ್ನು ಪೂರ್ಣ ನಿರ್ಲಕ್ಷಿಸಲಾಗಿದೆ.


ಇಷ್ಟಕ್ಕೂ ಗುಜರಾತ್‌ನಲ್ಲಿ ತಲೆ ಎತ್ತುತ್ತಿರುವ ಹೊಸ ಕೈಗಾರಿಕೆಗಳ ಪೈಕಿ ವಿಷಕಾರುವ ರಾಸಾಯನಿಕ ಕಾರ್ಖಾನೆಗಳು, ಹಡಗು ಒಡೆಯುವ ಉದ್ದಿಮೆಗಳು ಹಾಗೂ ಕಲ್ಲಿದ್ದಲು-ಗ್ಯಾಸ್ ಆಧರಿತ ವಿದ್ಯುತ್ ಉತ್ಪಾದನಾ ಯೋಜನೆಗಳದ್ದೇ ಸಿಂಹಪಾಲು. ಇದರಿಂದಾಗಿ ಇಡಿ ಭಾರತದಲ್ಲೇ ಅತೀ ಮಾಲಿನ್ಯಕಾರಿ ಕೈಗಾರಿಕಾ ವಲಯವೆಂದು ಗುಜರಾತ್ ಕುಖ್ಯಾತಿ ಪಡೆಯುತ್ತಿದೆ.

ಈ ಮಾಡೆಲನ್ನೇ ಇಡೀ ಇಂಡಿಯಾಗೆ ಪರಿಚಯಿಸಲು ಮೋದಿ ಹೊರಟಿದ್ದಾನೆ.

ಖಾಸಗಿ ಲೂಟಿಕೋರರ ಗೆಳೆಯ

ನರೇಂದ್ರ ಮೋದಿ ದೆಹಲಿ, ಮುಂಬೈ, ಕಲ್ಕತ್ತಾ ನಗರಗಳಿಗೆ ಹೋಗಿ ಇಂಡಿಯಾ ದೇಶದ ಅಭಿವೃದ್ಧಿಯ

ಅಡ್ವಾಣಿ ಆತಂಕ ನಿಜವಾಗುತ್ತಿದೆ




ಒಂದು ಸಾರಿಯಾದರೂ ಇಂಡಿಯಾ ದೇಶದ ಪ್ರಧಾನಮಂತ್ರಿ ಆಗಿಬಿಡಬೇಕು ಎಂಬ ಮಹದಾಸೆ ಇಟ್ಟುಕೊಂಡಿರುವ ಲಾಲ್‌ಕೃಷ್ಣ ಅಡ್ವಾಣಿಗೆ ಈ ಜನ್ಮದಲ್ಲಿ ಅವಕಾಶ ಸಿಗುವಂತೆ ಕಾಣುತ್ತಿಲ್ಲ.

ಯಾವಾಗ ಮೋದಿಯನ್ನು ಬಿಜೆಪಿ ರಾಷ್ಟ್ರ ರಾಜಕಾರಣದ ಮುಂಚೂಣಿಗೆ **RSS** ನವರು ತಂದು ನಿಲ್ಲಿಸಿದರೋ ಅದರ ಮರುಕ್ಷಣದಲ್ಲೇ ಎನ್‌ಡಿಎ ಮೈತ್ರಿಕೂಟ ಒಡೆದು ಛಿದ್ರಗೊಳ್ಳುತ್ತಿದೆ. ಮೋದಿ ನೇಮಕದ ವಿಚಾರ ಬಿಜೆಪಿಯ ಆಂತರಿಕ ಸಂಗತಿಯಾದರೂ ಎನ್‌ಡಿಎ ಮಿತ್ರಪಕ್ಷಗಳಿಗೆ ನರಹಂತಕನೆಂಬ ಕುಖ್ಯಾತಿಯ ಮೋದಿಯ ಆಗಮನ ಅಸಹನೀಯವಾಗಿದೆ. ಇದಕ್ಕೆ ಕಾರಣವೂ ಇದೆ.

ಮುಸ್ಲಿಂ ಹಾಗೂ ದಲಿತರ ವಿರೋಧಿಯಾಗಿರುವ ಮೋದಿ ಚುನಾವಣಾ ಪ್ರಚಾರಕ್ಕಿಳಿದರೆ ಆ ಸಮುದಾಯಗಳ ಮತದಾರರು ಕೇವಲ ಬಿಜೆಪಿ ವಿರುದ್ಧ ಮಾತ್ರವಲ್ಲದೆ ಅದರ ಮಿತ್ರಪಕ್ಷಗಳಿಂದಲೂ ದೂರಾಗುವುದು ಗ್ಯಾರಂಟಿ. ಭಾರತದಲ್ಲಿ ಮುಸ್ಲಿಂ ಮತದಾರರು ಶೇ. 10 ರಿಂದ 20 ರಷ್ಟಿರುವ 186 ಸಂಸತ್ ಕ್ಷೇತ್ರಗಳಿವೆ. ಉತ್ತರ ಪ್ರದೇಶದ 80 ಕ್ಷೇತ್ರಗಳ ಪೈಕಿ 54 ರಲ್ಲಿ, ಬಿಹಾರದ 40 ರಲ್ಲಿ 29, ಬಂಗಾಳದ 42 ರಲ್ಲಿ 28, ಕೇರಳದ 20 ರಲ್ಲಿ 14, ಆಂಧ್ರದ 42 ರಲ್ಲಿ 12, ಅಸ್ಸಾಂನ 14 ರಲ್ಲಿ 9, ಕರ್ನಾಟಕದ 28 ರಲ್ಲಿ 15 ಕ್ಷೇತ್ರಗಳಲ್ಲಿ ಮುಸ್ಲಿಂ ಮತದಾರರ ಸಂಖ್ಯೆ ಗಣನೀಯವಾಗಿದೆ. ವಸ್ತುಸ್ಥಿತಿ ಹೀಗಿರುವಾಗ ಜೆಡಿಯು, ಬಿಜು ಜನತಾದಳ, ತೃಣಮೂಲ ಕಾಂಗ್ರೆಸ್, ತೆಲುಗು ದೇಶಂ ಪಕ್ಷಗಳು ವಿನಾಕಾರಣ ಅಥವಾ ಮೋದಿ ಕಾರಣದಿಂದ ಈ ಮತದಾರರ ವಿರೋಧ ಯಾಕೆ ಮಾಡಿಕೊಳ್ಳುತ್ತಾರೆ?

ಈ ಅಪಾಯ ತಿಳಿದಿದ್ದ ಅಡ್ವಾಣಿಗೆ ಮೋದಿ ಗುಜರಾತ್ ಬಿಟ್ಟು ಹೊರಬರದಿರಲಿ ಎಂಬ ನಿಲುವಿತ್ತು. ಆದರೆ ಬಿಜೆಪಿಯಲ್ಲೀಗ ಆರ್‌ಎಸ್‌ಎಸ್‌ನದ್ದೇ ಅಧಿಪತ್ಯ. ಪಕ್ಷವನ್ನು ಸಂಘಪರಿವಾರಿಗಳೇ ನಿಯಂತ್ರಿಸುತ್ತಿದ್ದಾರೆ. ಅಡ್ವಾಣಿ ರಾಜೀನಾಮೆ ಹಿಂತೆಗೆಸಲು ಮೋಹನ್ ಭಾಗವತ್‌ರೇ ಖುದ್ದು ಬಂದರೆಂಬುದೇ ಇದಕ್ಕೆ ಸಾಕ್ಷಿಯಾಗಿದೆ.

ಆರ್‌ಎಸ್‌ಎಸ್‌ನವರು ನರೇಂದ್ರ ಮೋದಿಗಾಗಿ ಹಿರಿಯ ನಾಯಕ ಅಡ್ವಾಣಿಯನ್ನೇ ಬಲಿ ಕೊಡಲು ತಯಾರಾಗಿದ್ದು ಮಿತ್ರಪಕ್ಷಗಳಲ್ಲಿ ಆತಂಕ ಮೂಡಿಸಿದೆ. ಈ ಪಕ್ಷಗಳೀಗ ಕಾಂಗ್ರೆಸ್ಸೂ ಬೇಡ, ಕೋಮುವಾದಿ ಮೋದಿಯ ಬಿಜೆಪಿಯೂ ಬೇಡ ಎನ್ನುತ್ತಾ ಮೂರನೆಯ ಸಂಯುಕ್ತ ರಂಗ ಕಟ್ಟಲು ಹೊರಟಿದ್ದಾರೆ.



...ಗ್ಗೆ ಭಾಷಣ ಮಾಡಿಬರುತ್ತಿರುವುದು ಆಗಾಗ್ಗೆ ...ದಿಯಾಗುತ್ತಿದೆ. ಆದೇರೀತಿ ವಿದೇಶಗಳಲ್ಲೂ ಮೋದಿಯ ...ಪ್ರಲಾಪ ನಡೆದಿದೆ. ಆದರೆ ಇಲ್ಲೆಲ್ಲ ಮೋದಿಯನ್ನು ...ಆತಿಥ್ಯ ನೀಡುತ್ತಿರುವವರು ಖಾಸಗಿ ಉದ್ದಿಮೆದಾರರೇ ...ಜನಸಾಮಾನ್ಯರಲ್ಲ ಅಥವಾ ವಿದೇಶಿ ಸರ್ಕಾರಗಳಲ್ಲ.

...ಗುಜರಾತಿನಲ್ಲಿ ಲೂಟಿಗೆ ಮುಕ್ತ ಅವಕಾಶ ಪಡೆದಿರುವ ...ವ್ಯಾಪಾರಿಗಳಿಗೆ ಮೋದಿ ಈ ದೇಶದ ಪ್ರಧಾನಿಯಾದರೆ ...ಇಂಡಿಯಾವನ್ನೇ ಪಾನ್ ಬೀಡಾ ತರ ಬಾಯಿಗೆ ...ಕೊಂಡು ಜಗಿದು ನುಂಗಿಬಿಡುವ ಸುವರ್ಣಾವಕಾಶ ...ತ್ತದಲ್ಲಾ, ಹಾಗಾಗಿ ಈ ಉದ್ದಿಮೆದಾರರು ತಮ್ಮ ...ಾವ ಬಳಸಿಕೊಂಡು ಮೋದಿ ಒಬ್ಬ 'ಅಭಿವೃದ್ಧಿಯ ...ಕಾರ'ನೆಂಬಂತೆ ಬಿಂಬಿಸುತ್ತಾ ಜನರಿಗೆ ಮಂಕುಬೂದಿ ...ಚಲು ನೋಡುತ್ತಿದ್ದಾರೆ. ಈ ಜನ ಅಪ್ಪಿತಪ್ಪಿಯೂ ...ೀದಿ 2002 ರಲ್ಲಿ ನಡೆಸಿದ ನರಮೇಧದ ಬಗ್ಗೆ ...ಪ್ರಸ್ತಾಪಿಸುವುದಿಲ್ಲ.

ಉದ್ದಿಮೆದಾರರ ರಾಜಕೀಯ

...ವ್ಯಾಪಾರಿಗಳ ಲಾಬಿ ಎಲ್ಲಾ ರಾಜಕೀಯ ಪಕ್ಷಗಳಿಗೂ ...ಕಾಸಿನ ನೆರವು ನೀಡುವುದು, ಸಮಯ ಸಿಕ್ಕಾಗ ತಮಗೆ ...ಾದಂತೆ ಕಾನೂನುಗಳನ್ನು ಬದಲಾಯಿಸಿಕೊಳ್ಳುವುದು ...ದ್ದೆ. ಇದಾದನಂತರ ಕೆಲ ಉದ್ದಿಮೆದಾರರೇ ನೇರವಾಗಿ ...ಜಕೀಯಕ್ಕಿಳಿದು ಶಾಸಕರು ಸಂಸದರಾಗಿದ್ದೂ ಉಂಟು. ...ರೀಗ ಇನ್ನೊಂದು ಟ್ರೆಂಡ್ ಶುರುವಾಗಿದೆ. ...orporates will back anyone who can ...se profiteering' ಎಂಬಂತೆ ಈ ಲಾಭಬಡುಕ ...ನ್ಯಮಿಗಳೇ ಭಾರತದ ರಾಜಕೀಯ ಚಿತ್ರಣವನ್ನೇ ...ಲಿಸಲು ಹೊರಟಿದ್ದಾರೆ.

"ಮೋದಿ ಗುಜರಾತಿನಲ್ಲಿ ನಮಗೆ ಇಷ್ಟು ಅನುಕೂಲ ...ಡಿಕೊಟ್ಟಿದ್ದಾರೆ. ನೀವೆಷ್ಟು ಮಾಡುತ್ತೀರಿ ಹೇಳಿ, ಇಲ್ಲಾಂದ್ರೆ ...ಲ್ಲಾ ಮೋದಿಯ ಪರ ನಿಲ್ಲುತ್ತೇವೆ" ಎಂಬಂತೆ ಕಾಂಗ್ರೆಸ್ ...ನ್ನ ಬ್ಲಾಕ್‌ಮೇಲ್ ಮಾಡುವಂತೆ ವರ್ತಿಸುತ್ತಿದ್ದಾರೆ.

...ಮೋದಿ ಈಗ ಸಂಘಪರಿವಾರದ ರಾಜಕುಮಾರ ಹಾಗೂ ...ರ್ಪೊರೇಟ್‌ಗಳ ಡಾರ್ಲಿಂಗ್ ಆಗಿದ್ದಾನೆ. ಮತ್ತೊಂದೆಡೆ ...ಗ್ರೆಸ್ ಆದರಲ್ಲೂ ರಾಹುಲ್ ಗಾಂಧಿ ಬಡವರ ...ಲಿನ ರಾಜಕುಮಾರನಂತೆ ತೋರ್ಪಡಿಸಿಕೊಳ್ಳುತ್ತಾ ...ತೆಯಲ್ಲಿ ಕಾರ್ಪೊರೇಟ್ ಲಾಬಿಯ ಹಿತಕಾಯುವ ...ವನ್ನು ಮಾಡುತ್ತಿದ್ದಾರೆ.


...ಸಾರಾಂಶದಲ್ಲಿ ಹೇಳಬೇಕೆಂದರೆ ಕಾಂಗ್ರೆಸ್‌ಗೆ ...ದ್ದಿಮೆದಾರರಿಗೆ ನೆರವಾಗಬೇಕು. ಜೊತೆಗೆ ಜನಸಾಮಾನ್ಯರ ...ಕಾಯಬೇಕೆಂಬ ಕೆಲ ಬಯಕೆಗಳೆರಡೂ ಇವೆ.

...ಆದರೆ ಮೋದಿಗೆ ಕಾರ್ಪೊರೇಟ್ ರಂಗದ ಲೂಟಿಗೆ ...ಕ್ತ ಅವಕಾಶ ನೀಡಬೇಕು, ತಾನೇ ಪ್ರಧಾನಿಯಾಗಬೇಕೆಂಬ ...ವೇ ಅಜೆಂಡಾಗಳಿವೆ. ತಮಾಷೆ ಏನೆಂದರೆ ಭಾರತದಲ್ಲೀಗ ...ಜಕೀಯ ಪಕ್ಷಗಳ ಭ್ರಷ್ಟಾಚಾರದಲ್ಲಿ ಕಾರ್ಪೊರೇಟ್ ...ಸಂಗಳೂ ದೋಷಿಗಳಾಗುತ್ತಿವೆ. 2ಜಿ ಹಗರಣ, ಕಲ್ಲಿದ್ದಲು ...ರಣ, ಸತ್ಯಂ ಕಂಪ್ಯೂಟರ್ಸ್, ನವೀನ್ ಜಿಂದಾಲ್-ನೀರಾ ...ಡಿಯಾ, ಎಚ್‌ಡಿಎಫ್‌ಸಿ, ಐಸಿಐಸಿಐ ಬ್ಯಾಂಕ್ ...ಣಗಳಲ್ಲಿ ಈ ದೇಶಕ್ಕೆ ಖಾಸಗಿ ಕಂಪನಿಗಳು ನೀಡಿರುವ ...ಡುಗೊರೆಗಳು. ಇಂಥವರ ರಾಜಕೀಯ ನಾಯಕನಾಗಿ ...ೋದಿ ಈಗ ಕಾಣಿಸಿಕೊಳ್ಳುತ್ತಿದ್ದಾನೆ.

...ಸಾವಿರಾರು ಅಮಾಯಕರ ಕೊಲೆ ಮಾಡಿಸಿ, ...ಕಾರಕ್ಕೇರಿರುವ ಮೋದಿ ಜರ್ಮನಿಯಲ್ಲಿ ಹಿಟ್ಲರ್ ...ಗಾಡಿದಂತೆಯೇ ಬಂಡವಾಳಗಾರರ ಬೆಂಬಲ ಪಡೆದು ...ಸಾಗಿ ಅಧಿಕಾರ ಒಡೆಯುವ ಕನಸು ಕಾಣುತ್ತಿದ್ದಾನೆ. ...ಆಧುನಿಕ ಭಾರತದ ಈ ಹಿಟ್ಲರ್ ಇಂಡಿಯಾ ದೇಶದ ...ಸ ಗಂಡಾಂತರ... ಬಡತನ, ಅನಕ್ಷರತೆಗಳಿಗಿಂತ ಈ ...ದಿಯೇ ದೊಡ್ಡ ಆಪತ್ತು ಎಂಬ ಭಾವನೆ ಮೂಡಿಬರುತ್ತಿದೆ.

...ಮೋದಿಗೆ ಇದೇ ದೊಡ್ಡ ಅಡೆತಡೆ.

● ಪಾರ್ವತೀಶ



ಪೋಲೀಸ್ ಮಲ್ಲಿ ಮಾನಭಂಗ

ಚಿತ್ರದುರ್ಗದಲ್ಲೊಂದು 'ತ್ರಿಕೋನ' ರೇಪ್ ಕಹಾನಿ!

ಮೊನ್ನೆ ಚಿತ್ರದುರ್ಗದ ಒಂದು ಪೊಲೀಸ್ ಠಾಣೆಯಲ್ಲಿ ಒಂದೇ ದಿನ ಎರಡು ರೇಪ್ ಕೇಸುಗಳು ದಾಖಲಾದವು. ಒಂದರ ಕುದಿ ಎಳಿದರೆ ಮತ್ತೊಂದರ ಬುಡವೇ ಕಿತ್ತು ಬರುವಂತಹ ಪ್ರಕರಣಗಳವು. ಎರಡರ ಹಿಂದೆಯೂ ಲೋಕಲ್ ರಾಜಕಾರಣ, ಬಡ್ಡಿ ಮಾಫಿಯಾ, ಹಡಬೆ ದುಡ್ಡಿನ ಧಿಮಾಕುಗಳು ತಳುಕು ಹಾಕಿಕೊಂಡಿರುವುದರಿಂದ ಅವು ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿವೆ.

'ನಟೋರಿಯಸ್' ಕಾರ್ಪೋರೇಟರ್ ಕಮ್ ಬಡ್ಡಿ ಕುಳ 'ಪೊಲೀಸ್ ಮಲ್ಲಿ'ಯೇ ಎರಡೂ ಕೇಸುಗಳ ಮೂಲ ಪುರುಷ. ಘಟನೆ ನಡೆದ ದಿನ ಈತ ಚಿತ್ರದುರ್ಗದ ಜೆಸಿ ಬಡಾವಣೆಯಲ್ಲಿರುವ ಪ್ರಗತಿ ಶಿಕ್ಷಣ ಸಂಸ್ಥೆಯ ಲಿಟ್ಲ್‌ಫ್ಲೇರ್ ಸ್ಕೂಲಿಗೆ ವಸೂಲಿಗೆಂದು ಹೋದವನು ಅಲ್ಲಿದ್ದ ರಿಸೆಪ್ಷನಿಸ್ಟ್ ಅನಿತಾ ಎಂಬಾಕೆಯೊಂದಿಗೆ ಅಸಭ್ಯವಾಗಿ ವರ್ತಿಸಿ ಮಾನಭಂಗ ಯತ್ನದ ಕೇಸು ಜಡಿಸಿಕೊಂಡಿದ್ದಾನೆ.

ಇದಾದ ಮರುಕ್ಷಣವೇ ಮತ್ತೊಬ್ಬ ರಿಂಗ್‌ಮಾಸ್ಟರ್ ಕಾಂತರಾಜನ ಎಂಟ್ರಿಯಾಗಿದೆ. ಪೊಲೀಸ್ ಮಲ್ಲಿಯನ್ನು ಬಚಾವ್ ಮಾಡಲೆಂದೇ ಘಟನೆಯ ದಿನ ಹೈದ್ರಾಬಾದ್‌ನಲ್ಲಿದ್ದ ಅದೇ ಲಿಟ್ಲ್‌ಫ್ಲೇರ್ ಸ್ಕೂಲ್‌ನ ಮಾಲೀಕ ಸಂಜೀವ್ ರೆಡ್ಡಿಯನ್ನು 'ನಾಗವೇಣಿ ಎಂಬಾಕೆಯನ್ನು ಮಾನಭಂಗ ಮಾಡಲು ಯತ್ನಿಸಿದ' ಎಂಬ ಸುಳ್ಳು ಕೇಸಿನಲ್ಲಿ ಫಿಟ್ ಮಾಡಲಾಗಿದೆ. ಗೋಜಲುಗೋಜಲೆನಿಸುವ ಈ ಪ್ರಕರಣಗಳ ಹಿಂದಿರುವ 'ತ್ರಿಕೋನ' ವ್ಯವಹಾರವನ್ನು ಅರ್ಥ ಮಾಡಿಕೊಂಡಾಗಲೆ ಇವುಗಳ ಅಸಲಿಯತ್ತು ಮತ್ತು ಅನಾಚಾರ ಬಯಲಾಗೋದು.

ಪೊಲೀಸ್ ಮಲ್ಲಿ ಅಲಿಯಾಸ್ ಮಲ್ಲಿಕಾರ್ಜುನ ಚಿತ್ರದುರ್ಗದ ಕರಾಳ ಬಡ್ಡಿ ಕ್ರಿಮಿ. ಒಂದಷ್ಟು ದಿನ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿದ ಕಾರಣಕ್ಕೆ ಇವನಿಗೆ ಪೊಲೀಸ್ ಮಲ್ಲಿಯೆನ್ನುವ ಅಡ್ಡ ಹೆಸರು ಜೋತು ಬಿದ್ದಿದೆ. ಚಿತ್ರದುರ್ಗ, ಭೀಮಸಮುದ್ರ, ಮೆದಕೆಪುರದಲ್ಲಿ ಗಣಿ ಲೂಟಿ ಉತ್ತುಂಗದಲ್ಲಿದ್ದ ಸಮಯದಲ್ಲೇ ಪೊಲೀಸ್ ಇಲಾಖೆ ತೂರಿಕೊಂಡ ಇವನನ್ನು ಉನ್ನತಾಧಿಕಾರಿಗಳು ಬಳಸಿಕೊಂಡದ್ದು ಗಣಿ ಮಾಲೀಕರಿಂದ ಹಫ್ತಾ ವಸೂಲಿ ಕಾರ್ಯಕ್ಕೆ. ಅದಕ್ಕೆ ಹೇಳಿಮಾಡಿಸಿದಂತ ಸಕಲ ಗುಣಗಳೂ ಇವನಲ್ಲಿದ್ದವು. ಈತ ಹೈವೇಗಳಲ್ಲಿ ಮೈನ್ಸ್ ಲಾರಿಗಳಿಗೆ ಕೈಹಾಕುವ ಕಾಯಕದಿಂದಲೂ ಭರ್ಜರಿಯಾಗಿ ಕಮಾಯಿ ಮಾಡಿಕೊಂಡ.



ಆತ ಪೊಲೀಸ್ ಇಲಾಖೆಯಲ್ಲಿ ಇದ್ದದ್ದು ನಾಲ್ಕೇ ವರ್ಷ! ಅಷ್ಟರಲ್ಲಾಗಲೆ ಕೋಟಿಗಟ್ಟಲೆ ಹಣ ತಿಂದು ದುಂಡಗಾದ ಮಲ್ಲಿ ದಿಢೀರನೆ ತನ್ನ ಸರ್ಕಾರಿ ಕೆಲಸಕ್ಕೆ ರಾಜೀನಾಮೆ ನೀಡಿ ಹೊರಬಂದು ಆಯ್ದುಕೊಂಡದ್ದು ಬಡ್ಡಿ ದಂಧೆಯನ್ನು. ಜೂಜುಕೋರರಿಗೆ ಶೇಕಡ ಹತ್ತರ ದರದ ಬಡ್ಡಿ ಮೇಲೆ ಹಣ ನೀಡಿ ಈತ ಹಾಳು ಮಾಡಿದ ಸಂಸಾರಗಳಿಗೆ ಲೆಕ್ಕವೇ ಇಲ್ಲ. ಇವನಿಂದ ಹಣ ಪಡೆದವರಲ್ಲಿ ಆಂಧ್ರದ ರೆಡ್ಡಿಗಳೇ ಹೆಚ್ಚು. ಹೀಗೆ ಕಂಡವರ ಗಂಟು ಕದಿಯುವ ಕಾಯಿಲೆಯ ಮುಂದಿನ ಹಂತವೇ ರಾಜಕಾರಣ. ಅನಾಯಾಸವಾಗಿ ಅಲ್ಲಿಗೂ ಕಾಲಿರಿಸಿದ ಮಲ್ಲಿ ಇತ್ತೀಚೆಗೆ ನಡೆದ ಪುರಸಭೆ ಚುನಾವಣೆಯಲ್ಲಿ 6ನೇ ವಾರ್ಡಿನಿಂದ ಪಕ್ಷೇತರನಾಗಿ ಸ್ಪರ್ಧಿಸಿ ಕಾರ್ಪೋರೇಟರ್ ಕೂಡಾ ಆದ.


'ಇಲಾಖೆಯಲ್ಲಿದ್ದಾಗಲೆ ಖಾಕಿ ರೌಡಿಯಂತೆ ಆಡುತ್ತಿದ್ದ ಮಲ್ಲಿ, ಬಡ್ಡಿ ದಂಧೆಗಿಳಿದ ಮೇಲೆ ಫುಲ್‌ಟೈಮ್ ರೌಡಿಸಂ ಅನ್ನೇ ಕಸುಬಾಗಿಸಿಕೊಂಡಿದ್ದ. ಕಾರ್ಪೋರೇಟರ್ ಆದ ಮೇಲಂತೂ ಅವನ ಅಟ್ಟಹಾಸ ಹೇಳತೀರದ್ದಾಯಿತು. ಅಂತಹ ಪೊಲೀಸ್ ಮಲ್ಲಿಯ ಬಳಿ ಲಿಟ್ಲ್‌ಫ್ಲೇರ್ ಸ್ಕೂಲ್‌ನ ಒಡೆಯ ಸಂಜೀವ್ ರೆಡ್ಡಿಯೂ 35 ಲಕ್ಷ ರೂಪಾಯಿ ಸಾಲ ಪಡೆದಿದ್ದ. ಮಲ್ಲಿ ಮತ್ತು ಸಂಜೀವ್ ರೆಡ್ಡಿಯ ನಡುವೆ ವ್ಯವಹಾರ ಲಿಂಕ್ ಬೆಳೆಸಿದ ಕಾಂತರಾಜನೇ ಇಡೀ ವೃತ್ತಾಂತದ ರಿಂಗ್‌ಮಾಸ್ಟರ್! ಈ ಕಾಂತರಾಜನೂ ಚಿತ್ರದುರ್ಗ ಪುರಸಭೆಯ ಹಾಲಿ ಕಾರ್ಪೋರೇಟರ್. ಜೆಡಿಎಸ್ ಪಕ್ಷದಲ್ಲಿ ಗುರುತಿಸಿಕೊಂಡ ಈತ ಸದ್ಯ ಪುರಸಭೆಯ ಅಧ್ಯಕ್ಷನಾಗುವ ಚಿತಾವಣೆಯಲ್ಲಿದ್ದಾನೆ.

ಬಡ್ಡಿ ದಂಧೆ ಮತ್ತು ಪೊಲಿಟಿಕಲ್ ಕರಿಯರ್‌ಗಳು ಸಹಜವಾಗೇ ಪೊಲೀಸ್ ಮಲ್ಲಿ ಮತ್ತು ಕಾಂತರಾಜನ ನಡುವೆ ಸಣ್ಣದೊಂದು ಸ್ನೇಹವನ್ನು ಶುರು ಮಾಡಿದ್ದವು. ಕಾಂತರಾಜ ಮತ್ತು ಸಂಜೀವ್ ರೆಡ್ಡಿ ಇಬ್ಬರೂ ಮೊದಲಿನಿಂದಲೂ ಗಳಸ್ಯ-ಕಂಠಸ್ಯ ಎನ್ನುವಷ್ಟರಮಟ್ಟಿಗೆ ಆಪ್ತಮಿತ್ರರು. ಹೆದ್ದಾರಿ 4ರಲ್ಲಿ ಪ್ರಗತಿ ಶಾಲೆಯನ್ನು ಆರಂಭಿಸಿದ ಸಂಜೀವ್ ರೆಡ್ಡಿ ಕೆಲವೇ ದಿನಗಳಲ್ಲಿ ಅದಕ್ಕೆ ದೈತ್ಯ ಕ್ಯಾಂಪಸ್‌ನ ರೂಪ ತಂದುಕೊಟ್ಟು ಕ್ಯಾಪಿಟೇಷನ್ ಕುಳಗಳೇ ತಬ್ಬಿಬ್ಬಾಗುವಂತೆ ಮಾಡಿದ್ದ. ಅದೆಲ್ಲವನ್ನು ಸಾಧಿಸಲು ಸಂಜೀವ್ ರೆಡ್ಡಿಗೆ ಅಪಾರ ದುಡ್ಡಿನ ಅವಶ್ಯಕತೆ ಇತ್ತು. ಸುಮಾರಷ್ಟು ಜನರ ಬಳಿ ಸಾಲ ತಂದೇ ಶಾಲೆಗೆ ಸುರಿದಿದ್ದ. ಅವರೆಲ್ಲರಿಗೂ ಕಾಲಕಾಲಕ್ಕೆ ಬಡ್ಡಿ ಕಟ್ಟುತ್ತಲೇ ಬಂದಿರುವ ಸಂಜೀವ್ ರೆಡ್ಡಿ ಉತ್ತಮ ವ್ಯವಹಾರಸ್ಥ ಎಂಬ ನಂಬಿಕೆಯನ್ನೂ ಗಿಟ್ಟಿಸಿಕೊಂಡಿದ್ದಾನೆ.

ಅದೊಮ್ಮೆ ರೆಡ್ಡಿಗೆ ತುರ್ತಾಗಿ ಹಣ ಬೇಕಾಗಿದ್ದಾಗ ಆಪ್ತಮಿತ್ರ ಕಾಂತರಾಜ, ಈ ಪೊಲೀಸ್ ಮಲ್ಲಿಯನ್ನು ಪರಿಚಯಿಸಿ ಹಣ ಕೊಡಿಸಿದ್ದ. ಅಷ್ಟೂ ಹಣಕ್ಕೆ ರೆಡ್ಡಿ ಪ್ರತಿ ತಿಂಗಳ [illegible] ಬರುತ್ತಿದ್ದ. ತನ್ನ ಬಡ್ಡಿ ಭಂಟ ಪ್ರಕಾಶ ಎಂಬಾತನೊಂದಿಗೆ ಶಾಲೆಗೆ ಬರುತ್ತಿದ್ದ ಪೊಲೀಸ್ ಮಲ್ಲಿ ಸಂಜೀವ್ ರೆಡ್ಡಿ ಕೊಟ್ಟಿರುತ್ತಿದ್ದ ಹಣವನ್ನು ರಿಸೆಪ್ಷನಿಸ್ಟ್ ಅನಿತಾಳಿಂದ ವಸೂಲಿ ಮಾಡಿಕೊಂಡು ಹೋಗುತ್ತಿದ್ದ. ಹಾಗೆ ಬಂದುಹೋಗುವಾಗಲೇ ಕೆಟ್ಟ ಕ್ರಿಮಿ ಮಲ್ಲಿಯ ಕಣ್ಣು ಅನಿತಾಳ ಮೇಲೆ ಬಿತ್ತು!

ಈ ನಡುವೆ ಕಾಂತರಾಜ ಮತ್ತು ಪೊಲೀಸ್ ಮಲ್ಲಿಯ ನಡುವೆ ರಾಜಕಾರಣದ ಜಗ್ಗಾಟವೊಂದು ನಡೆದಿತ್ತು. 35 ಸದಸ್ಯ ಬಲದ ಚಿತ್ರದುರ್ಗ ಪುರಸಭೆಯ ಚುನಾವಣೆಯಲ್ಲಿ ಯಾವೊಂದು ಪಕ್ಷವೂ ಬಹುಮತ ಗೆಲ್ಲಲಿಲ್ಲ. ಈಗ 15 ಸ್ಥಾನ ಗೆದ್ದಿರುವ ಜೆಡಿಎಸ್ ಕೂಡಾ ಗದ್ದುಗೆ ಏರುವ ಅವಕಾಶವಿತ್ತು. ಶತಾಯಗತಾಯ ಇದನ್ನು ಮಿಸ್ ಮಾಡಿಕೊಳ್ಳಲೇಬಾರದು, ತಾನೇ ಅಧ್ಯಕ್ಷನಾಗಬೇಕೆಂಬ ಹಠಕ್ಕೆ ಬಿದ್ದ ಕಾಂತರಾಜ ಬೇಕಾದ ಕಸರತ್ತುಗಳನ್ನೆಲ್ಲ ಮಾಡಲಾರಂಭಿಸಿದ. ಬಿಟ್ಟಿ ದುಡ್ಡಿನಿಂದ ಪೊಲಿಟಿಕ್ಸ್‌ಗೆ ಪಕ್ಷೇತರನಾಗಿ ಪಾದಾರ್ಪಣೆ ಮಾಡಿದ್ದ ಪೊಲೀಸ್ ಮಲ್ಲಿಗೂ ಅದ್ಯಾವ ಘಳಿಗೆಯಲ್ಲಿ ತಾನೂ ಪುರಸಭೆಯ ಅಧ್ಯಕ್ಷನಾಗಬೇಕೆಂಬ ಹಂಬಲ ಬೆನ್ನುಹತ್ತಿತೊ ಗೊತ್ತಿಲ್ಲ, ದುಡ್ಡು ಚೆಲ್ಲಿ ಕಾರ್ಪೋರೇಟರ್‌ಗಳ ಖರೀದಿಗಿಳಿದು ಬಿಟ್ಟ. ಇದರಿಂದ ಸಹಜವಾಗಿಯೇ ಕಾಂತರಾಜ ಮತ್ತು ಪೊಲೀಸ್ ಮಲ್ಲಿಯ ನಡುವೆ ಮನಸ್ತಾಪ ಕಾಣಿಸಿಕೊಂಡಿತ್ತು. ಇಬ್ಬರ ಸಂಬಂಧವೂ ಹಳಸಿಹೋಗಿತ್ತು.

ಮೊನ್ನೆ ಯಥಾಪ್ರಕಾರ ಬಡ್ಡಿ ಹಣ ಕೇಳಲು ಪೊಲೀಸ್ ಮಲ್ಲಿ ತನ್ನ ಚೇಲಾ ಪ್ರಕಾಶನೊಂದಿಗೆ ಸ್ಕೂಲ್‌ಗೆ ಬಂದಿದ್ದಾನೆ. ಅವತ್ತು ಸಂಜೀವ್ ರೆಡ್ಡಿ ಹೈದ್ರಾಬಾದ್‌ಗೆ ಹೋಗಿದ್ದ.



ಹಾಗಾಗಿ ರಿಸೆಪ್ಷನಿಸ್ಟ್ ಅನಿತಾಳ ಬಳಿ ಹಣ ಕೊಟ್ಟಿರಲಿಲ್ಲ. ಆಕೆ ಅದನ್ನೇ ಪೊಲೀಸ್ ಮಲ್ಲಿಗೆ ಹೇಳಿದಳು. ಆ ದಿನ ಅದ್ಯಾವ ಗ್ರಹಚಾರ ಪೊಲೀಸ್ ಮಲ್ಲಿಯ ಹೆಗಲೇರಿತ್ತೋ ಗೊತ್ತಿಲ್ಲ, ತಾನು ಮೊದಲಿನಿಂದಲೂ ಕಣ್ಣಿಟ್ಟು ಆಸೆ ಬೆಳೆಸಿಕೊಂಡಿದ್ದ ಅನಿತಾಳನ್ನು 'ನನಗೆ ಹಣವೇನು ಬೇಡ, ನೀನೇ ನನ್ನೊಂದಿಗೆ ಸಹಕರಿಸಿಬಿಡು' ಎಂದು ಅಶ್ಲೀಲವಾಗಿ ತೊದಲುತ್ತಾ ಪೌರುಷ ತೋರಲು ಮುಂದಾದ. ಅನಿತಾ ಅದನ್ನು ಪ್ರತಿಭಟಿಸಿ ಕೂಗಾಡಿದಳು. ಗಲಾಟೆ ಕೇಳಿ ಶಾಲಾ ಸಿಬ್ಬಂದಿಗಳು ಸೇರುತ್ತಿದ್ದಂತೆಯೇ ಅಲ್ಲಿಂದ ಪೊಲೀಸ್ ಮಲ್ಲಿ ಕಾಲ್ಕಿತ್ತ. ಆದರೆ ಅನಿತಾ ಕೂಡಲೇ ನಗರ ಪೊಲೀಸ್ ಠಾಣೆಗೆ ಹೋಗಿ ಪೊಲೀಸ್ ಮಲ್ಲಿಯ ವಿರುದ್ಧ 'ಪೋಲಿ' ಕೇಸೊಂದನ್ನು ಜಡಿದು ಬಿಸಿ ಮುಟ್ಟಿಸುವ ಪ್ರಯತ್ನ ಮಾಡಿದಳು.

ಇದಿಷ್ಟೂ ನಡೆದ ಸ್ವಲ್ಪ ಹೊತ್ತಿಗೇ ಅದೇ ನಗರ ಪೊಲೀಸ್ ಸ್ಟೇಷನ್‌ಗೆ ಬಂದ ನಾಗವೇಣಿ ಎಂಬ ಮತ್ತೊಬ್ಬ ಹೆಂಗಸು 'ಪ್ರಗತಿಶಾಲೆಯ ಓನರ್ ಸಂಜೀವ್ ರೆಡ್ಡಿ ನನ್ನನ್ನು ಮಾನಭಂಗ ಮಾಡಲು ಯತ್ನಿಸಿದ' ಅಂತ ದೂರು ನೀಡಿದಳು. ಆಕೆಯ ದೂರಿನ ಪ್ರಕಾರ ನಾಗವೇಣಿ, ಸಂಜೀವ್ ರೆಡ್ಡಿಗೆ ಹತ್ತು ಲಕ್ಷ ಸಾಲ ನೀಡಿದ್ದು ಅದನ್ನು ವಾಪಾಸ್ ಕೇಳಲು ಪ್ರಗತಿ ಕ್ಯಾಂಪಸ್‌ಗೆ ಹೋದಾಗ ಅಲ್ಲಿಯೇ ಆತ ಆಕೆಯ ಮೇಲೆ ಅತ್ಯಾಚಾರ ನಡೆಸಲು ಯತ್ನಿಸಿದನಂತೆ. ಅಂದಹಾಗೆ, ಈ ನಾಗವೇಣಿ ಚೇತನಾ ವಿದ್ಯಾಸಂಸ್ಥೆ ಎನ್ನುವ ಶಾಲೆಯ ಕಾರ್ಯದರ್ಶಿ. ಅಸಲಿಗೆ ಅವತ್ತು ಸಂಜೀವ್ ರೆಡ್ಡಿ ಚಿತ್ರದುರ್ಗದಲ್ಲಿ ಇರಲೇ ಇಲ್ಲ, ಹೈದ್ರಾಬಾದ್‌ನಲ್ಲಿದ್ದ. ಅಂತವನು 'ವೀಡಿಯೋ ಕಾನ್ಫರೆನ್ಸ್' ಮೂಲಕ ರೇಪ್‌ಗೆ ಪ್ರಯತ್ನಿಸಿದನೆ? ಅದೂ ಅಲ್ಲದೆ ಪ್ರಗತಿ ಶಿಕ್ಷಣ ಸಂಸ್ಥೆಯ ಸಂದರ್ಶಕರ ಪುಸ್ತಕದಲ್ಲಿ ಆ ದಿನ ಶಾಲೆಗೆ ಭೇಟಿ ನೀಡಿದವರೆಲ್ಲರ ಸಹಿಗಳನ್ನು ಪಡೆಯಲಾಗಿತ್ತು. ಘಟನೆಯ ದಿನ ಪೊಲೀಸ್ ಮಲ್ಲಿ ಅಲ್ಲಿ ಹೋಗಿದ್ದಕ್ಕೆ ಅವನ ಸಹಿಯಿದೆ. ಆದರೆ ನಾಗವೇಣಿ ಶಾಲೆಗೆ ಹೋಗಿದ್ದಕ್ಕೆ ಪುರಾವೆ ಒದಗಿಸಬೇಕಾದ ಸಹಿಯೇ ಪುಸ್ತಕದಲ್ಲಿಲ್ಲ. ಇದು ಹೇಗೆ ಸಾಧ್ಯ? ಇಂತಹ ಪ್ರಶ್ನೆಗಳನ್ನು ಕೆದುಕುತ್ತಾ ಹೋದರೆ ಕಾಂತರಾಜನ ಮಾಸ್ಟರ್‌ಪ್ಲಾನ್ ಅನಾವರಣಗೊಳ್ಳುತ್ತದೆ.

ತಾನು ಮಾಡಿ ಬಂದ ಹಲ್ಕಾ ಕೆಲಸಕ್ಕಾಗಿ ರಿಸೆಪ್ಷನಿಸ್ಟ್ ಅನಿತಾ ದೂರು ನೀಡಿದ್ದಾಳೆಂಬುದು ತಿಳಿಯುತ್ತಿದ್ದಂತೆಯೇ ಪೊಲೀಸ್ ಮಲ್ಲಿ ಸಹಾಯಕ್ಕಾಗಿ ಮೊರೆ ಹೋಗಿದ್ದು ಇದೇ ಕಾಂತರಾಜನ ಬಳಿ. ಹೇಗೂ ಕಾಂತರಾಜ್ ಮತ್ತು ಸಂಜೀವ್ ರೆಡ್ಡಿ ಇಬ್ಬರೂ ಸ್ನೇಹಿತರು; ಜಸ್ಟ್ ಮಾತ್‌ಮಾತಲ್ಲೆ ಪ್ರಕರಣ ಬಗೆಹರಿಸಿಕೊಂಡರಾಯಿತು ಎಂಬ ಇರಾದೆ ಪೊಲೀಸ್ ಮಲ್ಲಿಯದ್ದು. 'ನಾನು ಪುರಸಭೆಯ ಅಧ್ಯಕ್ಷನಾಗುವ ಪ್ರಯತ್ನದಿಂದ ಹಿಂದೆ ಸರಿಯುತ್ತೇನೆ ಮಾತ್ರವಲ್ಲ, ನೀನೆ ಅಧ್ಯಕ್ಷನಾಗಲು ಪಕ್ಷೇತರನಾದ ನಾನು ಬೇಕಾದ ಬೆಂಬಲವನ್ನೆಲ್ಲ ನೀಡುತ್ತೇನೆ. ಕೇಸ್ ವಾಪಾಸ್ ತೆಗೆಸಿಬಿಡು' ಎನ್ನುವ ಆಫರನ್ನು ಮಲ್ಲಿ, ಕಾಂತರಾಜನ ಮುಂದಿರಿಸಿದ್ದಾನೆ. ಇಷ್ಟು ಸುಲಭದಲ್ಲಿ ತಾನು ಅಧ್ಯಕ್ಷನಾಗುವ ಆಫರ್ ಕೇಳುತ್ತಿದ್ದಂತೆಯೇ ಕೈಗೆ ಫೋನೆತ್ತಿಕೊಂಡ ಕಾಂತರಾಜ, ಸಂಜೀವ್ ರೆಡ್ಡಿಗೆ ಫೋನಾಯಿಸಿ ಅನಿತಾಳಿಂದ ಕೇಸ್ ವಾಪಾಸ್ ತೆಗೆದುಕೊಳ್ಳುವಂತೆ ಹೇಳಿದ್ದಾನೆ. ಆದರೆ ಸಂಜೀವ್ ರೆಡ್ಡಿ ಅದಕ್ಕೆ ಸುತರಾಂ ಒಪ್ಪಿಲ್ಲ.


'ಹಣಕಾಸಿನ ವಿಚಾರವಿದ್ದರೆ ನಾನೇ ಬಗೆಹರಿಸಿ ಕೊಡುತ್ತಿದ್ದೆ. ಆದರೆ ಅದು ಆಕೆಯ ಮಾನದ ಪ್ರಶ್ನೆ. ಅವಳಿಗೆ ಅವಮಾನವಾಗಿದೆ, ಆಕೆ ದೂರು ನೀಡಿದ್ದಾಳೆ. ಅವಳ ಸ್ವಂತದ ವಿಷಯದಲ್ಲಿ ನಾನು ಹೇಗೆ ಮೂಗು ತೂರಿಸಲಿ?. ನಾನಂತೂ ಕೇಸ್ ವಾಪಾಸ್ ತೆಗೆದುಕೊಳ್ಳುವಂತೆ ಆಕೆಗೆ ಹೇಳುವುದಿಲ್ಲ' ಅಂತ ಸಂಜೀವ್ ರೆಡ್ಡಿ ಹೇಳುತ್ತಿದ್ದಂತೆಯೇ ಕಾಂತರಾಜನ ಅಧಿಕಾರದಾಸೆಗೆ ಕಲ್ಲುಬಿದ್ದಿದೆ. ಅದರಿಂದ ಉಗ್ರನಾದ ಕಾಂತರಾಜ ಮಾನಭಂಗ ಆರೋಪವನ್ನು ಸೃಷ್ಟಿಸಿ ನಾಗವೇಣಿ ಎಂಬಾಕೆಯನ್ನು ಪೊಲೀಸ್ ಸ್ಟೇಷನ್‌ಗೆ ಓಡಿಸಿದ. ಇದೊಂತರಾ ಸಂಜೀವ್ ರೆಡ್ಡಿಯನ್ನು ಬ್ಲ್ಯಾಕ್‌ಮೇಲ್ ಮಾಡುವ ತಂತ್ರವಾಗಿದೆ. ಆ ಕೇಸ್ ವಾಪಾಸಾದರೆ, ಇದೂ ವಾಪಾಸ್!

ಆದರೆ ದುಡ್ಡನ್ನು ಬಿತ್ತಿ ದುಡ್ಡನ್ನೇ ಬೆಳೆಯುವ ಕ್ಯಾಪಿಟಲಿಸ್ಟ್ ಕುಳ ಸಂಜೀವ್ ರೆಡ್ಡಿ ಅಷ್ಟು ಸುಲಭಕ್ಕೆ ಬಗ್ಗುವಂತೆ ಕಾಣುತ್ತಿಲ್ಲ. ಹೈದ್ರಾಬಾದ್‌ನಿಂದ ಬಂದವನೇ ಎರಡೂ ಕೇಸುಗಳ ಕುರಿತಂತೆ ಸಮಗ್ರ ತನಿಖೆ [illegible] ಬೇಕೆಂದು ಪಟ್ಟುಹಿಡಿದಿದ್ದಾನೆ. ಸಮಯಸಾಧಕ ಕಾಂತರಾಜ ಮತ್ತು ಬಡ್ಡಿ ಕ್ರಿಮಿ ಪೊಲೀಸ್ ಮಲ್ಲಿ [illegible] ಮುಂದೆಂತಹ ಟ್ವಿಸ್ಟ್ ಕೊಡುತ್ತಾರೊ ಕಾದು ನೋಡಬೇಕು.

● ವರದಿಗಾರ

ಪ್ರತಿಯೊಬ್ಬರೂ ಒಂದು ಬಗೆಯಲ್ಲಿ ಪರಕೀಯರು

-ಡಾ.ಕೆ.ವೈ.ನಾರಾಯಣಸ್ವಾಮಿ



ಪಂಥದ ವಿಚಾರ ಬಂದರೆ ಹಿಂಜರಿಕೆ ಯಿಲ್ಲ, ನಾನು ಎಡಪಂಥೀಯ ಲೇಖಕ. ನನ್ನ ಸೃಜನಶೀಲ ಅಭಿವ್ಯಕ್ತಿಯ ಆಶಯವೇ ಎಡಪಂಥದಲ್ಲಿ ಕೊನೆ ಗೊಳ್ಳುತ್ತದೆ. ಎಡಪಂಥದ ಲೇಖಕನಾಗಿ ರುವುದು ಎಂದರೆ ದೊಡ್ಡ ಸಾಮಾಜಿಕ ಹೊಣೆಗಾರಿಕೆಯನ್නು ನಿರ್ವಹಿಸಲು ಕೈಗೊಂಡ ಸಾಂಸ್ಕೃತಿಕ ಪಣ.

ಸಂದರ್ಶನ

● ಡಾ. ಲಕ್ಷ್ಮಿಪತಿ ಸಿ.ಜಿ.

ಯಾವುದೇ ಮನುಷ್ಯನಲ್ಲಿ ಚೈತನ್ಯವಿದೆ ಎಂಬುದು ಆಧುನಿಕ ಕನ್ನಡ ರಂಗಭೂಮಿಯ ಪಿತಾಮಹರಲ್ಲಿ ಒಬ್ಬರಾದ ಸಿಜಿಕೆಯವರ ಅದಮ್ಯ ನಂಬಿಕೆ. ಅವರ ಪ್ರಕಾರ ನಿರರ್ಥಕ ಮನುಷ್ಯನೇ ಇಲ್ಲ, ಈ ನಂಬಿಕೆಯ ಫಲವಾಗಿ ರೂಪುಗೊಂಡ ನಾಟಕಕಾರ ಕೆ.ವೈ. ನಾರಾಯಣ ಸ್ವಾಮಿ. ಕೋಲಾರ ಜಿಲ್ಲೆಯ ಕುಪ್ಪೂರಿನ ನಾರಾಯಣಸ್ವಾಮಿ. ಸರಕಾರಿ ಪದವಿ ಕಾಲೇಜಿನಲ್ಲಿ ಕನ್ನಡ ಮೇಷ್ಟ್ರಾಗಿರುವ ನಾರಾಯಣಸ್ವಾಮಿ, ಕವಿ, ಸಿನಿಮಾಕಥೆಗಾರ, ಕಥೆಗಾರ, ವಿಮರ್ಶಕನಾದರೂ ಪ್ರಸಿದ್ಧರಾಗಿರುವುದು ಅವರೇ ಹೇಳುವಂತೆ 'ಸಾಮಾನ್ಯರ ಜನಪ್ರಿಯ ನಾಟಕಕಾರ'ನಾಗಿ. ಹಳೇ ಕಾಲದ ಗತ್ತಿನ ಮೇಷ್ಟ್ರಂತಿರುವ ಕೆ.ವೈ. ಖಚಿತವಾದ ನಿಲುವನ್ನು ತೆಗೆದುಕೊಳ್ಳಬಲ್ಲ ಗಟ್ಟಿಗ. ಕೇವಲ ನಾಟಕ ರಚನೆಯಷ್ಟೆ ಮಾಡದೇ ರಂಗಭೂಮಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಕ್ರಿಯಾಶೀಲ ಲೇಖಕ. ಕಳೆದ ಹತ್ತು ವರುಷಗಳಲ್ಲಿ ಸತತವಾಗಿ ಪ್ರತಿವರ್ಷವೂ ಅವರ ನಾಟಕಗಳು ಪ್ರದರ್ಶನಗೊಂಡು ಯಶಸ್ವಿಯಾಗಿವೆ. ಏಕಕಾಲದಲ್ಲಿ ಕರ್ನಾಟಕದ ವಿವಿಧೆಡೆ ಅವರ ನಾಟಕಗಳು ಪ್ರದರ್ಶನಗೊಂಡಿವೆ ಅಂದರೆ ನಾರಾಯಣಸ್ವಾಮಿಯವರ ಪ್ರತಿಭೆ ಮತ್ತು ಜನಪ್ರಿಯತೆಯನ್ನು ಯಾರು ಬೇಕಾದರೂ ಊಹಿಸಬಹುದು. ಇದೇ ತಿಂಗಳ 15 ರಿಂದ 19 ರವರೆಗೆ ಅವರ ನಾಟಕೋತ್ಸವ ರವೀಂದ್ರ ಕಲಾಕ್ಷೇತ್ರದಲ್ಲಿ ಜರುಗಲಿದೆ. ಆ ನೆಪದಲ್ಲಿ ಪತ್ರಿಕೆಯು ನಾರಾಯಣಸ್ವಾಮಿಯವರ ಜೊತೆ ಪುಟ್ಟ ಸಂವಾದ ನಡೆಸಿದೆ.

ಪ್ರಶ್ನೆ: ನಾಟಕ ರಚನೆಯ ಹಿಂದಿನ ಪ್ರೇರಣೆ ಏನು?

* 1987 ರಲ್ಲಿ ಸಿ.ಜಿ.ಕೆ. ಕಲಾಕ್ಷೇತ್ರದಲ್ಲಿ 40 ದಿನದ ವರ್ಕ್‌ಶಾಪ್ ಮಾಡಿದ್ರು. ಅದೇ ನನ್ನ ನಾಟಕ ರಚನೆಯ ಮೂಲ. ಅದಕ್ಕಿಂತ ಹೆಚ್ಚು ಎಂದರೆ ಥೀಯಟರ್ ಅಂದ್ರೆ ಪ್ರೊಟೆಸ್ಟ್ ಅಂತ ಸಿಜಿಕೆ ಹೇಳಿಕೊಟ್ರು. It was shocking. ಅದೇ ನನ್ನ ನಾಟಕ ರಚನೆಯ " Defining moment."

ಸಿಜಿಕೆ ಹಚ್ಚಿಸಿದ ಕಿಡಿ ದೀಪವಾಗಲು ಇನ್ನೂ ಹಲವಾರು ಕಾರಣಗಳಿದ್ದವು. ಆಗ ಕರ್ನಾಟಕದಲ್ಲಿ ನಡೆದಿದ್ದ ಚಳವಳಿಗಳು, ಪಿವಿಕೆ, ಸಮುದಾಯ ಇತ್ಯಾದಿ.

ಪ್ರಶ್ನೆ: ನಿಮ್ಮ ಊರು, ಬಾಲ್ಯ ಇವುಗಳ ಪಾತ್ರ ಏನು?


* ಕೋಲಾರ ಜಿಲ್ಲೆಯವನಾದ್ದರಿಂದ ನಮ್ಮೂರಿನ ಸುತ್ತಮುತ್ತ ತೆಲುಗಿನಲ್ಲಿ ಮಹಾಭಾರತ, ರಾಮಾಯಣವನ್ನು ನಿರೂಪಿಸುವ ಕಥನಕಾರರಿದ್ದರು. ಹಾಗೆಯೇ ಕರ್ನಾಟಕದ ಪರಂಪರೆಯೇ ಕಥನ ಪರಂಪರೆ. ಅರ್ಜುನ ಜೋಗಿಗಳು, ಸುಡುಗಾಡು ಸಿದ್ದರು, ಮೊದಲಾದವರು. ಹಾಗಾಗಿಯೇ ನನ್ನ ಬಹಳಷ್ಟು ನಾಟಕಗಳಲ್ಲಿ ಬಂದು ಹೋಗುತ್ತಾರೆ.


ಪ್ರಶ್ನೆ: ಇದರಲ್ಲಿ ಹೊಸದೇನಿದೆ? ಕಂಬಾರರು, ಹೆಚ್.ಎಸ್.ಶಿವಪ್ರಕಾಶ್ ಇಂತಹ ನಿರೂಪಕರನ್ನು ಬಳಸಿದ್ದಾರಲ್ಲ?

* ಕಂಬಾರರು ಬಳಸಿದ್ದು ಸೂತ್ರದಾರರನ್ನು, ಶಿವಪ್ರಕಾಶ್ ನೀಲಗಾರರನ್ನು ತಂದರು. ಅದನ್ನು ಹೊರತುಪಡಿಸಿದರೆ ನಾಟಕದಲ್ಲಿ ಅಲೆಮಾರಿಗಳು, ಕೆಳ ಸಮುದಾಯದ ಕಥನಕ್ರಮವನ್ನು ಹೆಚ್ಚಾಗಿ ಬಳಸಿಕೊಂಡ ನಾಟಕಕಾರ ನಾನೇ ಅನ್ನಿಸುತ್ತೆ.

ಪ್ರಶ್ನೆ: ಕನ್ನಡ ರಂಗಭೂಮಿಯಲ್ಲಿ ನೀವು ಯಾವ ಪರಂಪರೆಗೆ ಸೇರಿದವರು?

* ಒಂದು ಅರ್ಥದಲ್ಲಿ ನಾನು ಕುವೆಂಪು ತಾತ್ವಿಕ ಭಿತ್ತಿಯಲ್ಲಿ ಮೂಡಿದವನು.





ನಾಟಕ ತಂತ್ರದಲ್ಲಿ ಮಾತ್ರ ಭಿನ್ನ. ನನ್ನ ನಾಟಕದಲ್ಲಿ ಕಂಡುಬರುವ ತಂತ್ರ ಭಾರತದ ರಂಗಭೂಮಿಯ ಮಟ್ಟಿಗೆ ಹೊಸದು.

ಪ್ರಶ್ನೆ: ನಾಟಕದ ತಂತ್ರವನ್ನು ಸಮಕಾಲೀನ ನಾಟಕಕಾರರ ಜೊತೆ ಹೋಲಿಸಿ ವಿವರಿಸಲು ಸಾಧ್ಯವೇ?



* ನೋಡಿ, ನಮ್ಮ ಮುಂದೆ ಎರಡು ಮಾದರಿಗಳಿವೆ. ಕಾರ್ನಾಡರದು ಒಂದು ಮಾದರಿ, ಮತ್ತೊಂದು ಕಂಬಾರರ ಮಾದರಿ.

ಕಾರ್ನಾಡರು ಚರಿತ್ರೆ ಮತ್ತು ಪುರಾಣದಿಂದ ಅಲಕ್ಷಿತ ವಸ್ತುವೊಂದನ್ನು ಆಯ್ದುಕೊಂಡು ಸಂದು ಕಟ್ಟನಲ್ಲಿ ಉಪಕತೆಯ ಎಳೆಯೊಂದನ್ನು ಆಯ್ದು ನಾಟಕ ಮಾಡುತ್ತಾರೆ. ಸಂಭಾಷಣೆಯಲ್ಲಿ ನಾಟಕೀಯತೆ ಇರುತ್ತದೆಯೇ ಹೊರತು ನಾಟಕಕ್ಕೆ ನಾಟಕೀಯ ಗುಣ ಇರುವುದು ಕಡಿಮೆ.

ಕಂಬಾರರು ಊಳಿಗಮಾನ್ಯ ಜಗತ್ತಿನಲ್ಲಿ ಕಾಮಪ್ರೇಮದ ಮೂಲದಿಂದ ಹೊರಡುವ ಪ್ರತಿಭಟನೆಯ ಜಗತ್ತನ್ನು ಕಟ್ಟುತ್ತಾರೆ. ಆದರೆ ಯಾವ ಊಳಿಗಮಾನ್ಯ ಜಗತ್ತನ್ನು ವಿರೋಧಿಸುತ್ತಾರೋ ಅದು ಸಂಭ್ರಮವಾಗಿ ಕೊನೆಗೊಳ್ಳುತ್ತದೆ.

ಪ್ರಶ್ನೆ: ನಿಮ್ಮ ನಾಟಕದ ವಿಶೇಷ ಏನು?

* ಅವರು ಕ್ಯಾರೆಕ್ಟರ್ ಅನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ನಾನು ಸಂದುಕಟ್ಟು (context) ನ್ನು ಆರಿಸಿಕೊಳ್ಳುತ್ತೇನೆ. ಯಾವುದೇ context ಅನ್ನು ಸಮಕಾಲೀನಗೊಳಿಸಿಕೊಳ್ಳುವುದು ಸುಲಭ. ಕಾಲದೇಶಗಳನ್ನು ಛಿದ್ರಗೊಳಿಸಲು ಸಾಧ್ಯವಾಗುತ್ತದೆ.

ಪ್ರಶ್ನೆ: ನೀವು ಆಧುನಿಕೋತ್ತರ ನಾಟಕಕಾರರ ರೀತಿ ಕಾಲ ಮತ್ತು ದೇಶಗ ಹಂಗನ್ನೂ ಮೀರಲು ಪ್ರಯತ್ನಿಸುತ್ತಿದ್ದೀರಾ?

* ನನ್ನ ನಾಟಕಗಳ ತಾತ್ವಿಕ ವಿನ್ಯಾಸ ಆಧುನಿಕೋತ್ತರ ಚೌಕಟ್ಟಿನಲ್ಲಿಯೆ ರೂಪುಗೊಳ್ಳುತ್ತಿದೆ.

ಪ್ರಶ್ನೆ: ನಿಮ್ಮ ನಾಟಕಗಳಿಗೆ ಒದಗಿದ ಆಧುನಿಕೋತ್ತರತೆ ಸಂಭವಿಸಿದ್ದೋ ಅಥವಾ ಪ್ರಜ್ಞಾಪೂರ್ವಕವಾಗಿ ಒಡಮೂಡಿದ್ದೋ?

* ತನಗೆ ತಾನೇ ಆಧುನಿಕೋತ್ತರ ಸಂದರ್ಭದಲ್ಲಿ ಒಡಮೂಡಿದ್ದು.

ಪ್ರಶ್ನೆ: ನಿಮ್ಮನ್ನು ಕಲಕಿದ ಆಧುನಿಕೋತ್ತರ ಸಂದರ್ಭ ಯಾವುದು?

* ನಾನು ಮೊದಲ ಬಾರಿಗೆ ಬೆಂಗಳೂರಿಗೆ ಬಂದ ತಕ್ಷಣ ಬಿರುಕುಗಳ ಕಾಣಿಸಿದವು. ಮೊದಲ ಹತ್ತು ವರ್ಷಗಳ ಬೆಂಗಳೂರಿನ ಜೀವನ ನನ್ನ ಬದುಕಿ ಆಧುನಿಕೋತ್ತರ ಕಾಲಘಟ್ಟವಾಗಿತ್ತು ಎಂದರೆ ತಪ್ಪಾಗಲಾರದು. ನಗರದ ಜೊ ಅನುಸಂಧಾನಗೊಳ್ಳುವ ಹಳ್ಳಿಗನೊಬ್ಬನ ದಿಗ್ಭ್ರಮೆ, ಆಘಾತ, ಸಂಭ್ರಮ ಎಲ್ಲದಕ್ಕೂ ಒಳಗಾದ ಮನಸ್ಸು ಕಾಲ ದೇಶಗಳನ್ನು ಮೀರುವ ಸ್ಥಿತಿ ತಾನಾಗಿಯೇ ಒದ ಬಂತು.

ಗ್ರಾಮದಲ್ಲಿ ಒಂಟಿ ಅನಿಸುವುದೇ ಇಲ್ಲ, ಬಹಿಷ್ಕೃತರಾದರೂ publi domain ಒಳಗಡೆಯೇ ಇರುತ್ತಾರೆ. ಆದರೆ ನಗರದಲ್ಲಿ ಎಲ್ಲರೂ ಬಹಿಷ್ಕೃತರ ಅನ್ನಿಸಿತು. ನಾನು 17-18 ವರ್ಷದ ಹುಡುಗನಾಗಿದ್ದಾಗ ಯಾರನ್ನೊ ಹುಡುಕಿಕೊಂಡು ಬೆಂಗಳೂರಿಗೆ ಬಂದಿದ್ದೆ, ದಾರಿ ತಪ್ಪಿದೆ. ಗುಂಪೊಂದು ನ ಅಪರಿಚಿತತೆಯನ್ನೇ ಬಂಡವಾಳವಾಗಿಸಿಕೊಂಡು ನನ್ನನ್ನು ಕಳ್ಳನೆಂದು ಪರಿಗಣಿ ಹಲ್ಲೆ ಮಾಡುವುದರಲ್ಲಿತ್ತು, ಅಲ್ಲಿಯೇ ಇದ್ದ ಅಗಸರ ಕುಟುಂಬವೊಂದ ನನ್ನನ್ನು ಅವರಿಂದ ರಕ್ಷಿಸಿ, ಆ ರಾತ್ರಿ ಆಶ್ರಯ ನೀಡಿತು.

ಆ ದಿನ ನಾನು ಎದುರಿಸಿದ ಘಟನೆ ಏಕಕಾಲದಲ್ಲಿ ಆಳವಾದ ಅಸಹಾಯಕ ಮತ್ತು ಅನಾಥಪ್ರಜ್ಞೆಯನ್ನು ಉಂಟುಮಾಡಿತು. ಅಂದು ನಡೆದ ಆ ನಾಟಕದ ಕಳ್ಳನೆಂದು ಕರೆಯಲ್ಪಟ್ಟಿದ್ದು ಕಳ್ಳನಲ್ಲವೆಂದು ಕರೆದುಕೊಳ್ಳಲು ಯಾವ ಪುರಾವೆಗಳ ಇರಲಿಲ್ಲ, ಕಾಲ ದೇಶಗಳು ಕರಗಿ ಸಂದರ್ಭ ಮನುಷ್ಯನನ್ನು ರೂಪಿಸುವ ಬ ನನ್ನಲ್ಲಿ ದಿಗ್ಭ್ರಮೆ ಮತ್ತು ತಲ್ಲಣ ಉಂಟುಮಾಡಿತು. ನೋಡಿದರೆ ಆ ಘಟ socio cultural text ಆಗಿ ಕಾಣಿಸುತ್ತೆ.

ಪ್ರಶ್ನೆ: ಪರಕೀಯತೆ ನಿಮ್ಮ ನಾಟಕದ ಪ್ರಧಾನ ಲಕ್ಷಣವಾಗಿರುವಂ ತೋರುತ್ತದೆ.

* ಹೌದು, ಪಂಪಭಾರತದಲ್ಲಿ ಪಂಪನೇ ಅನಾಥಪ್ರಜ್ಞೆಯಿಂದ ನರಳುತ್ತಾ ಕರ್ಣ ಏಕಾಂಗಿಯಾಗಿರುತ್ತಾನೆ. ಅಭಿಜ್ಞಾನ ಶಾಕುಂತಲದಲ್ಲಿ ಕಾಳಿದಾಸನ ಪಾತ್ರ ಅಗಲಿಕೆಯೇ ಪ್ರಧಾನ ಲಕ್ಷಣವಾಗಿದೆ. ಕಳುವು ನಾಟಕದಲ್ಲಿ ಫ್ರೂಟ್ ಲಾಯಿರಿ ಪಾತ್ರ... ಹೀಗೆ ಪ್ರತಿಯೊಬ್ಬರೂ ಒಂದಲ್ಲ ಒಂದು ಬಗೆಯಲ್ಲಿ ಪರಕೀಯರ

ಪ್ರಶ್ನೆ: ನೀವು ಸ್ಕ್ರಿಪ್ಟ್ ಮಾಡಿದ ಬಸವಲಿಂಗಯ್ಯ ನಿರ್ದೇಶಿಸಿದ 'ಮಲೆಗಳ ಮದುಮಗಳು' ಕಾದಂಬರಿ ಅದ್ಭುತ ಯಶ ಗಳಿಸಿತ್ತು. ಆದರೆ ಕುವೆಂ ಮನೋರಂಗದ ನಾಟಕಗಳು ಎಂದು ಕರೆದ ಕೃತಿಯನ್ನು ನಾಟಕವಾಗಿಸುವ ಬಿಕ್ಕಟ್ಟು ಎದುರಾಗಲಿಲ್ಲವೇ?

* ಖಂಡಿತ ಇಲ್ಲ, ಕುವೆಂಪು ಅವರನ್ನು ರಂಗಕ್ಕೆ ತರುವುದು ಸಮಸ್ಯೆಯೆ ಅಲ್ಲ. ಕಾದಂಬರಿಯಲ್ಲಿಯೇ ಅಸಾಧ್ಯ ಡ್ರಾಮಾ ಇದೆ. ಇಡೀ ಕೃತಿಯೆ ಒಂದು ಗಾಢವಾದ ಸುದೀರ್ಘವಾದ ದೃಶ್ಯದಂತೆ ಕಡೆಯಲ್ಪಟ್ಟಿದೆ. ಕಾಲ ದೆ ಮೀರಿದ ಬಂಧ ಇದೆ.

ಆದರೆ ನಾಟಕವಾಗಿಸುವಾಗ ಕೆಲವು ಮಿತಿಗಳಿವೆ. ಘಟನೆಗಳು ಸರಣಿಯ ನಡೆಯಬೇಕು. ಪಯಣ ತುಂಡಾಗದಂತೆ ನೋಡ್ಕೊಬೇಕು. ಏಕೆಂ ಕಾದಂಬರಿಯೇ ಹಲವು ಪಯಣಗಳ ನಿರೂಪಣೆ. ನಿರೂಪಣೆಗೆ ಚೌಕ ಬೇಕು. ಆ ನಿರೂಪಣೆಯನ್ನು ಅರ್ಜುನನ ಜೋಗಿಗಳು, ಹೆಳವರು, ಸುಡುಗಾ ಸಿದ್ದರ ಮೂಲಕ ಮಾಡಿಕೊಂಡಿದ್ದೀವಿ. ಅದನ್ನು ಎಲ್ಲ ರಂಗ ಸಾಧ್ಯತೆ ಮೂಲಕ ರಂಗಕ್ಕೆ ತಂದ ಕೀರ್ತಿ ನಿರ್ದೇಶಕ ಬಸವಲಿಂಗಯ್ಯನವರಿಗೆ ಸಲ್ಲಬೇ

ಪ್ರಶ್ನೆ: ಕಳೆದ ದಶಕದಲ್ಲಿ ಕರ್ನಾಟಕದಲ್ಲಿ ರಾಜಕೀಯ ಸ್ಥಿತ್ಯಂತರ

ನಾಟೀಲ ವ್ಯಕ್ತಿಗಳಲ್ಲಿ ಆಗೋಚರ ಭಯ ಉಂಟಾಗಿತ್ತು. ಂತಹ ಸಂದರ್ಭದಲ್ಲಿ ನೀವು ಕೇವಲ ಅಕಾಡೆಮಿಕ್ ಕ್ಟಿವಿಸಂನಲ್ಲಿ ತೊಡಗಿಕೊಂಡಿರಿ. ಪೊಲಿಟಿಕಲ್ ಕ್ಟಿವಿಸಂನಿಂದ ದೂರ ಉಳಿದಿರಿ ಎಂಬ ಆರೋಪ ದೆಯಲ್ಲ.

* ನನಗೆ political activism ಬೇರೆ ಅಲ್ಲ ಕಾಡೆಮಿಕ್ ಆಕ್ಟಿವಿಸಂ ಬೇರೆ ಅಲ್ಲ. ಅದು ತಪ್ಪು ಳವಳಿಕೆಯ ವರ್ಗೀಕರಣ. ನಾವು ನ್ಯಾಯದ ಪರ ದ್ದೇವೆಯೋ ಇಲ್ಲವೋ ಎಂಬುದಷ್ಟೇ ಪ್ರಶ್ನೆ. ಬೀದಿಯಲ್ಲಿ ಂತು ಪ್ರತಿಭಟಿಸುವುದು ಮಾತ್ರ ಆಕ್ಟಿವಿಸಂ ಅಲ್ಲ. ಂಪ್ಠಾರತದಲ್ಲಿ ಆರೆಸ್ಸೆಸ್‌ನವರನ್ನು ಲೇವಡಿ ಮಾಡಿದ್ದೇನೆ. ಕ್ರರತ್ನದಲ್ಲಿ ಬಾಹುಬಲಿಯನ್ನು ಚಮ್ಮಾರನನ್ನಾಗಿ ೀರಿಸಿದ್ದೇನೆ.

ಜನಪರ ಜೀವಪರ ಮಾತನ್ನು ಧೈರ್ಯವಾಗಿ ೀಳುವುದು ಬರಹಗಾರ ಮಾಡಬೇಕಾಗಿರುವ ಕೆಲಸ. ್ಯರ್ಯವಾಗಿ ಹೇಳದೇ ಹೋದರೆ ಅದು ಹಿಪಾಕ್ರಸಿ.

ಒಬ್ಬ ವ್ಯಕ್ತಿ ನಿಜವಾದ ಅರ್ಥದಲ್ಲಿ ತನ್ನ ಸಾಮರ್ಥ್ಯ ಲ್ಲಿ ಪೂರ್ಣರೂಪದಲ್ಲಿ ಪ್ರಕಟಗೊಳ್ಳುತ್ತದೆಯೋ ಅಲ್ಲಿ ೀಲೊಳ್ಳಬೇಕು. ಕುವೆಂಪು, ಲಂಕೇಶ್ ಎಂದೂ ಪೂರ್ಣ ಮಾಣದ ಪೊಲಿಟಿಕಲ್ activists ಆಗಿರಲಿಲ್ಲ. ಗೆಂದು ಅವರನ್ನು ಕಡಿಮೆ political ಆಗಿದ್ದರೆಂದು ೀಳಲು ಸಾಧ್ಯವಿಲ್ಲ.

ಪ್ರಶ್ನೆ: ಗಡಿನಾಡ ಪ್ರದೇಶದಿಂದ ಬಂದ ನಿಮಗೆ ಯಾವ ಭವಿದೆ?

* ನನಗೆ ಕನಿಷ್ಠ ಮೂರು ಭಾಷೆಗಳ ಪರಿಚಯ ಇದೆ. ಲುಗು, ತಮಿಳು, ಕನ್ನಡ. ಲೇಖಕನಿಗೆ ಹಲವು ಭಾಷೆಗಳು ಭ್ಯವಾಗುತ್ತವೆ ಎಂದರೆ ಹಲಬಗೆಯ ಕಥನ ಕ್ರಮಗಳು ಕ್ಕುತ್ತವೆ.

ಪ್ರಶ್ನೆ: ಇದು ನಿಮಗೆ ತೆಲುಗಿನಲ್ಲಿ ನಾಟಕ ಬರೆಯಲು ರಣೆ ನೀಡಿತೇ?

ತೆಲುಗಿನ ರಂಗಭೂಮಿ ನಮ್ಮ ರಂಗಭೂಮಿಗೆ ೀಲಿಸಿದರೆ ಬಹಳ ಹಿಂದುಳಿದಿದೆ. ಅವರು ಸಿನಿಮಾದಲ್ಲಿ ಶಿಷ್ಟವಾಗಿ ಮುಂದುವರೆದಿರಬಹುದಷ್ಟೇ. ತೆಲುಗು ನಾಟಕ ರಯಲು ಪ್ರಜಾ ನಾಟ್ಯ ಮಂಡಳಿಯವರು ಕೇಳಿಕೊಂಡರು. ವೆಂಪುರವರ ಶೂದ್ರ ತಪಸ್ವಿ ತೆಲುಗಿಗೆ ಅನುವಾದ ಡಿ ಪ್ರತಿಕ್ರಿಯೆ ನೋಡಿದೆ. ಯಶಸ್ವಿಯಾಯಿತು. ಲುಗಿನಲ್ಲಿ 'ವಿನರಾ ವೇಮ'ನ ಬರೆದೆ.

ಪ್ರಶ್ನೆ: ಕಳುವು ನಾಟಕ ದೇವನೂರರ ಒಡಲಾಳದ ರ್ಬಲ ರೂಪ ಎಂಬ ಟೀಕೆ ಇದೆಯಲ್ಲ?

* ವಸ್ತು ದೃಷ್ಟಿಯಿಂದ ಸಂಬಂಧ ಇಲ್ಲ. ದೇವನೂರು ಬಹು ಪ್ರಭಾವಶಾಲಿ ಕಥಾ ನಿರೂಪಕರು. ಅವರ ಕಥಾ ರೂಪಣಾ ತಂತ್ರದಿಂದ ಪಾರಾಗೋದು ಕಷ್ಟ. ೀನಾದರೂ ದೇವನೂರರ ಒಡಲಾಳದಂತೆ ನನ್ನ ನಾಟಕ ಎಂದರೆ ಅದು compliment ಹೊರತು ದೋಷ ಲ್ಲ.

ಪ್ರಶ್ನೆ: ಇಷ್ಟವಾದ ನಾಟಕಕಾರರು ಯಾರು?

* ಸಾಫೊಕ್ಲಿಸ್, ಷೇಕ್ಸ್‌ಪಿಯರ್, ಲೋರ್ಕ, ಕುವೆಂಪು, ಂಕೇಶ್.

ಪ್ರಶ್ನೆ: ನೀವು ಚಲನಚಿತ್ರ ಕಥೆ ಬರೆಯುತ್ತಿರಾ ಅಲ್ಲವೆ?

* ನಮ್ಮಲ್ಲಿ ಚಿತ್ರಕತೆ ಬರೆಯೋದನ್ ಒಂದು ಪೆಷಿಯಲ್ ಕೆಲಸ ಅನ್ನೋದು ಗೊತ್ತಿಲ್ಲ, ಅದು ಕೇವಲ ಣಾ ಜೋಡಣೆ ಅಲ್ಲ, ಅದನ್ನು ನಾನು enjoy ಾಡುತ್ತೇನೆ.

ಪ್ರಶ್ನೆ: ನಿಮ್ಮನ್ನು ನೀವು ಯಾವ ಬಗೆಯ ಕಥೆಯ ಖಕ ಎಂದು ಕರೆದುಕೊಳ್ಳುತ್ತೀರಿ?

* ಪಂಥದ ವಿಚಾರ ಬಂದರೆ ಹಿಂಜರಿಕೆಯಿಲ್ಲ, ನಾನು ಡಪಂಥೀಯ ಲೇಖಕ. ನನ್ನ ಸೃಜನಶೀಲ ಅಭಿವ್ಯಕ್ತಿಯ ಸಹಜವಾಗಿಯೇ ಎಡಪಂಥದಲ್ಲಿ ಕೊನೆಗೊಳ್ಳುತ್ತದೆ. ಎಡಪಂಥದ ಲೇಖಕನಾಗಿರುವುದು ಎಂದರೆ ದೊಡ್ಡ ಸಾಮಾಜಿಕ ಜವಾಬ್ದಾರಿಕೆಯನ್ನು ನಿರ್ವಹಿಸಲು ಕೈಗೊಂಡ ಸಾಂಸ್ಕೃತಿಕ

ಪ್ರಶ್ನೆ: ಕೆಲವರು ಇತ್ತೀಚೆಗೆ ಕನ್ನಡ ಸಾಹಿತ್ಯ ನಿಂತಿದೆ ಬೆಳೆಯುತ್ತಿಲ್ಲವೆಂದೋ ಗೋಳಾಡುತ್ತಾರಲ್ಲ?


* ಅವರು ಹಾಗೆ ಹೇಳಿದರೆ ಮಾತ್ರ, ತಾವು ... ರಾಗಿದ್ದು ಶ್ರೇಷ್ಠ ಲೇಖಕರಾಗಿದ್ದು ನಿಜ ಎಂದು ... ಹಾಗೆ ಹೇಳುತ್ತಾರೆ. ಕನ್ನಡ ಸಾಹಿತ್ಯದಲ್ಲಿ ... ಲೇಖಕರು ಅದ್ಭುತಗಳನ್ನು ತಂದು ಸುರಿಸಿದ್ದಾರೆ. ... ಒಡದ, ಗಾಂಧಿದ ಜಸ ... [illegible]

ಮಂಡ್ಯ ಕೋರಮಂಡಲ್ ಶುಗರ್ಸ್:

'ಐಸಿಎಲ್' ಶ್ರೀನಿವಾಸನ್ ಜೊತೆ ಬಿಜೆಪಿ ವಾಮನಾಚಾರ್ಯರ 'ಸ್ಪಾಟ್ ಫಿಕ್ಸಿಂಗ್'


ಈ ಲೇಖನದ ಶೀರ್ಷಿಕೆ ಓದಿ ಇದು ಐಪಿಎಲ್ ಆಗಬೇಕಾದದ್ದು ಕಣ್ತಪ್ಪಿನಿಂದ ಐಸಿಎಲ್ ಆಗಿರಬೇಕೆಂದು ಓದುಗರು ಭಾವಿಸಬಾರದು. ಇದು ಐಪಿಎಲ್ ಕೊಳಕುಮಂಡಲ ಶ್ರೀನಿವಾಸನ ಮೋಸದ ಚರಿತ್ರೆಯ ಒಂದು ಕರಾಳ ಸ್ಥಳೀಯ ಆವೃತ್ತಿ. ಇದನ್ನು ತಿಳಿಯಲು ನೀವು ಹೆಚ್ಚು ದೂರವೇನೂ ಹೋಗಬೇಕಿಲ್ಲ. ಮಂಡ್ಯ ಮಾರ್ಗವಾಗಿ ಅಥವಾ ಹಾಸನ ಮಾರ್ಗವಾಗಿ ಹೊರಟರೆ ಕೇವಲ ಬೆಂಗಳೂರಿನಿಂದ 150 ಕಿ.ಮೀ ದೂರದಲ್ಲಿರುವ ಮಂಡ್ಯ ಜಿಲ್ಲೆಯ ಕೆಆರ್ ಪೇಟೆ ತಾಲ್ಲೂಕಿನಲ್ಲಿ ನೀವಿದನ್ನು ಕಾಣಬಹುದು. ಅಲ್ಲಿರುವ ಬಿಸಿಸಿಐ ಮಾಜಿ ಛೇರ್‌ಮನ್ ಶ್ರೀನಿವಾಸನ್ ಒಡೆತನದ ಐಸಿಎಲ್ ಸಕ್ಕರೆ ಕಾರ್ಖಾನೆ (ಹಿಂದಿನ ಕೋರಮಂಡಲ್ ಷುಗರ್ಸ್) ಹಾಗೂ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಛೇರ್‌ಮನ್ ಬಿಜೆಪಿ ವಾಮನಾಚಾರ್ಯರ ಮೋಸದಾಟದ ಸ್ಪಾಟ್ ಫಿಕ್ಸಿಂಗ್ ಕಥೆಯೇ ಇದು. ಬನ್ನಿ ಹೋಗಿಯೇ ನೋಡಿಕೊಂಡು ಬರೋಣ.

ಕೆ.ಆರ್.ಪೇಟೆ ಎಂದೇ ಕರೆಯಲ್ಪಡುವ ಕೃಷ್ಣರಾಜಪೇಟೆ ತಾಲ್ಲೂಕು ಇಡೀ ಮಂಡ್ಯ ಜಿಲ್ಲೆಯಲ್ಲಿ ಅತ್ಯಂತ ನಿರ್ಲಕ್ಷಿತವಾದ, ನೀರಿನ ಅನುಕೂಲವೂ ಇಲ್ಲದೆ ಬರಪೀಡಿತವಾಗಿದ್ದ ತಾಲ್ಲೂಕು. ಎರಡು ದಶಕಗಳ ಹಿಂದೆ ಹೇಮಾವತಿ ನದಿ ಮತ್ತು ಆಕೆಯ ಚಾನಲ್‌ಗಳ ಕೃಪಾಕಟಾಕ್ಷದಿಂದ ಒಂದಷ್ಟು ತೆಂಗು, ಬಾಳೆಯ ತೋಟ ಮಾಡಿಕೊಂಡು, ಒಂದು ಬೆಳೆ ಭತ್ತ ಇನ್ನೊಂದು ರಾಗಿ ಬೆಳೆದುಕೊಂಡು ತಕ್ಕಮಟ್ಟಿಗೆ ಎರಡು ಹೊತ್ತಿನ ಊಟಕ್ಕೆ ತತ್ವಾರವಿಲ್ಲ ಎಂಬ ಸ್ಥಿತಿಗೆ ತಲುಪಿದ್ದರು ತಾಲ್ಲೂಕಿನ ರೈತರು. ಇಂಥದ್ದರಲ್ಲಿ, ಈಗ ಬಿಸಿಸಿಐಯನ್ನು ಅಖಂಡ ಭ್ರಷ್ಟಾಚಾರದಲ್ಲಿ ಮುಳುಗಿಸಿ ಮೋಸದಾಟದ ಮಸಿಯನ್ನು ಮೈತುಂಬ ಮೆತ್ತಿಕೊಂಡಿರುವ ಶ್ರೀನಿವಾಸನ್ ಎಂಬ ಹುಟ್ಟು ವಂಚಕನ ಸಕ್ಕರೆ ಕಾರ್ಖಾನೆಯೊಂದು 1994ರಲ್ಲಿ ಕೆಆರ್‌ಪೇಟೆಯಲ್ಲಿ ತಲೆ ಎತ್ತಿತು. ಆಗ ಲಭ್ಯವಿದ್ದ ನೀರಿನ ಮಿತಿಯನ್ನೂ ಮೀರಿ ಸುತ್ತಮುತ್ತಲ ಪ್ರದೇಶಗಳ ರೈತರು ಕಬ್ಬನ್ನು ಬೆಳೆಯುವಂತೆ ಪ್ರಚೋದಿಸಿದ್ದು ಈಗ ಐಸಿಎಲ್ ಎಂದು ಹೆಸರಿಟ್ಟುಕೊಂಡಿರುವ ಈ ಕಂಪೆನಿ. ಎಲ್ಲಾ ಸಕ್ಕರೆ ಕಾರ್ಖಾನೆಗಳಂತೆಯೇ ಲಾಭದ ಲೆಕ್ಕಾಚಾರದಲ್ಲಷ್ಟೇ ಮುಳುಗಿದ ಕಾರ್ಖಾನೆ ತಾನು ಅರೆಯಲು ಅನುಮತಿ ಪಡೆದಿರುವ 2,500 ಟನ್ ಸಕ್ಕರೆಗಿಂತ ಎಷ್ಟೋ ಪಟ್ಟು ಹೆಚ್ಚು ಕಬ್ಬು ಬೆಳೆಯಲು ರೈತರನ್ನು ಮುಂದೊತ್ತಿದ್ದಲ್ಲದೆ ಈಗಲೂ 7000-8000 ಟನ್ ಕಬ್ಬು ಅರೆಯುತ್ತದೆಂಬ ಗುಮಾನಿಯಿದೆ.



ಇಷ್ಟೇ ಆಗಿದ್ದರೆ ಹೇಗೋ ಹಾಳಾಗಿ ಹೋಗಲಿ ಎಂದು ರೈತರೂ ಸುಮ್ಮನಿರುತ್ತಿದ್ದರೋ ಏನೋ; ಆದರೆ ಎರಡು ವರ್ಷಗಳ ಹಿಂದೆ ಐಸಿಎಲ್ ಕಂಪೆನಿ 'ಕೋರಮಂಡಲ್ ಷುಗರ್ಸ್' ಹೆಸರಿನಲ್ಲಿ ಉಪವಿದ್ಯುತ್ ಉತ್ಪಾದನಾ ಘಟಕ ಹಾಗೂ ಡಿಸ್ಟಿಲ್ಲರಿ ಸ್ಥಾಪಿಸಲು ಹೊರಟಿದೆ ಎಂಬ ಸೂಚನೆ ಸಿಗುತ್ತಲೇ ಸ್ಥಳೀಯ ರೈತರೂ, ಹೋರಾಟಗಾರರೂ, ಪ್ರಜ್ಞಾವಂತರೂ ದಂಗುಬಡಿದರು. ಪಕ್ಕದಲ್ಲೇ ಇರುವ ಪಾಂಡವಪುರದ ಪಿಎಸ್‌ಎಸ್‌ಕೆಯಲ್ಲಿ ಶತಾಯಗತಾಯ ಡಿಸ್ಟಿಲ್ಲರಿ ಹಾಕಲು ಅವಕಾಶ ನೀಡಲಾರೆವೆಂದು ಸ್ಥಳೀಯರು ಗುದ್ದಾಡಿದ್ದು ಏಕೆಂಬುದರ ಸಂಪೂರ್ಣ ಅರಿವು ಪಕ್ಕದ ತಾಲ್ಲೂಕಾದ ಕೆಆರ್‌ಪೇಟೆಯವರಿಗಿಲ್ಲದೆ ಹೋದರೆ ಇನ್ನಾರಿಗಿರಲು ಸಾಧ್ಯ? ಹಾಗೇ ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ನಾಗರಿಕರು ಜೆಮಿನಿ ಡಿಸ್ಟಿಲ್ಲರೀಸ್ ಆರಂಭವಾಗುವಾಗ ಎಚ್ಚೆತ್ತುಕೊಳ್ಳದೆ ನಂತರ ಪಡಿಪಾಟಲು ಪಟ್ಟು, ಸುದೀರ್ಘ ಹೋರಾಟ ನಡೆಸಿ ಅದನ್ನು ಮುಚ್ಚಿಸಿದ್ದರು. ಐಸಿಎಲ್ ಕಾರ್ಖಾನೆ ಈಗಾಗಲೇ ನಡೆಸುತ್ತಿರುವ 12 ಮೆ.ವ್ಯಾ ಸಾಮರ್ಥ್ಯದ ಉಪವಿದ್ಯುತ್ ಉತ್ಪಾದನಾ ಘಟಕ (ಕೋಜೆನ್) ಆರಂಭವಾದ ನಂತರ, ಅದರಿಂದ ಹೊರಟ ಹಾರುಬೂದಿ ಸುತ್ತಲಿನ 10 ಕಿ.ಮೀ ವ್ಯಾಪ್ತಿಯ ಹತ್ತಾರು ಹಳ್ಳಿಗಳನ್ನು ಅರ್ಧ ಇಂಚಿನಷ್ಟು ಮುಚ್ಚುತ್ತಿದ್ದುದು ಸ್ವತಃ ಅನುಭವಿಸಿದ ಕಷ್ಟ. ಅದರಿಂದಾಗಿ ಫಲವತ್ತಾಗಿ ಲಾಭ ತಂದುಕೊಡುತ್ತಿದ್ದ ತೆಂಗು, ಅಡಿಕೆ, ಎಲೆ, ಮೆಣಸಿನ ಬೆಳೆಗಳೆಲ್ಲ ಫಲ ಕಚ್ಚದೆ ತೋಟಗಳು ನಾಶವಾಗುತ್ತಾ ಹೋಗಿವೆ. ಇನ್ನು ಕಾರ್ಖಾನೆ ಸ್ಥಾಪಿಸಿರುವ 30 ಮೆ.ವಾ ಸಾಮರ್ಥ್ಯದ ಕಲ್ಲಿದ್ದಲು ಆಧಾರಿತ ಕೋಜೆನ್ ಘಟಕ ಹಾಗೂ ಡಿಸ್ಟಿಲ್ಲರಿ ಆರಂಭವಾದರೆ ಇನ್ನೇನ್ನೇನಾ ಅನುಭವಿಸಬೇಕಾಗಬಹುದು ಎಂಬುದನ್ನು ನೆನೆದೇ ಸ್ಥಳೀಯರು ತತ್ತರಿಸಿದರು.

ಆಗಲೇ ಆರಂಭವಾದದ್ದು ಕರ್ನಾಟಕ ರಾಜ್ಯ ರೈತ ಸಂಘ, ಪರಿಸರ ಮಾಲಿನ್ಯ ವಿರೋಧಿ ವೇದಿಕೆ ಹಾಗೂ ಹೇಮಾವತಿ ಉಳಿಸಿ ಆಂದೋಲನಗಳ ಹೆಸರಿನಲ್ಲಿ ರೈತರು ಮತ್ತು ಪ್ರಜ್ಞಾವಂತರ ಹೋರಾಟ. ಮಾಕವಳ್ಳಿ, ಕರೋಟಿ, ಕುಂದನಹಳ್ಳಿ, ಕುಪ್ಪಳ್ಳಿ, ಹೆಗ್ಗಡಹಳ್ಳಿ, ವಡ್ಡರಹಳ್ಳಿ, ಚೌಡನಹಳ್ಳಿ, ಬಂಡಿಹೊಳೆ, ಮಾಣಿಕನಹಳ್ಳಿ ಮೊದಲಾಗಿ ಸುತ್ತಮುತ್ತಲಿನ 30ಕ್ಕಿಂತ ಹೆಚ್ಚು ಹಳ್ಳಿಗಳ ಗ್ರಾಮಸ್ಥರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಿದರು. ಕಾರ್ಖಾನೆ ಕಾನೂನನ್ನು ಸರಿಯಾಗಿ ಪಾಲಿಸುತ್ತಿದೆಯೇ ಎಂದು ಪರಿಶೀಲಿಸಲು ಪ್ರಯತ್ನಿಸಿದ ಅವರಿಗೆ ಆಘಾತವೇ ಆಯಿತು. ಯಾವುದೇ ಹೊಸ ಘಟಕವನ್ನು ಸ್ಥಾಪಿಸುವ ಮೊದಲು ಪರಿಸರ ಮಾಲಿನ್ಯ ನಿಯಂತ್ರಣ ಕಾಯ್ದೆಯ ಪ್ರಕಾರ ಕಾರ್ಖಾನೆ ತಮ್ಮ ವ್ಯಾಪ್ತಿಯ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಆಫ್ ಸೈಟ್ ಪ್ಲಾನ್, ಆನ್ ಸೈಟ್ ಪ್ಲಾನ್‌ಗಳನ್ನು ಕೊಟ್ಟು ನಿರಪೇಕ್ಷಣಾ ಪತ್ರ (ಎನ್‌ಓಸಿ) ಪಡೆಯಬೇಕಿತ್ತು. ಎಲ್ಲಾ ಗ್ರಾ.ಪಂ.ಗಳ ಪತ್ರ ಪಡೆದ ನಂತರ ಸುತ್ತಲ ಗ್ರಾಮಸ್ಥರಿಗೆ ಅವರ ಮಾತೃಭಾಷೆಯಲ್ಲಿ ತನ್ನ ಯೋಜನೆಯ ಮಾಹಿತಿ ನೀಡಿ ಜಿಲ್ಲಾಧಿಕಾರಿಯವರ ಮುಂದಾಳತ್ವದಲ್ಲಿ ಸಾರ್ವಜನಿಕ ಸಭೆ ನಡೆಸಿ, ವಿರೋಧ ಬರದಿದ್ದರೆ, ಆ ನಂತರ ಕೇಂದ್ರ ಮತ್ತು ರಾಜ್ಯದ ಮಾಲಿನ್ಯ ನಿಯಂತ್ರಣ ಮಂಡಳಿಗಳಿಂದ ಒಪ್ಪಿಗೆ ಪತ್ರ ಪಡೆಯಬೇಕಿತ್ತು. ಇವೆಲ್ಲಾ ಮುಗಿದನಂತರವೇ ಕಟ್ಟಡ ನಿರ್ಮಾಣದಂತಹ ಕಾರ್ಯ ಕೈಗೊಳ್ಳುವ ಅವಕಾಶವಿತ್ತು ಕಾನೂನಿನಲ್ಲಿ. ಆದರೆ ಇದ್ಯಾವುದೂ ಆಗುವುದಕ್ಕೆ ಮೊದಲೇ ಕಾರ್ಖಾನೆ ಹೊಸ ಕಟ್ಟಡಗಳ ನಿರ್ಮಾಣವನ್ನು ಆರಂಭಿಸಿತ್ತು. ಉಳಿದ ಯಾವ ಗ್ರಾ.ಪಂ.ಗಳಿಗೂ ಯಾವುದೇ ಮಾಹಿತಿಯನ್ನೂ ನೀಡದೆ, ವ್ಯಾಪ್ತಿಯಲ್ಲಿರುವ ದೊಡ್ಡ ಊರಾದ ಮತ್ತು ವಿರೋಧಿ ಹೋರಾಟದ ಮುಂಚೂಣಿಯಲ್ಲಿರುವ ಮಾಕವಳ್ಳಿ ಪಂಚಾಯತಿಯ ಕೆಲವು ಸದಸ್ಯರನ್ನು ದಿಕ್ಕುತಪ್ಪಿಸಿ ಅದೊಂದರಿಂದ ಮಾತ್ರ ನಿರಪೇಕ್ಷಣಾ ಪತ್ರವನ್ನು ಪಡೆದಿತ್ತು. ಅದರಲ್ಲೂ ಸಾಕಷ್ಟು ಲೋಪದೋಷಗಳಿದ್ದವು. ಇಂದಿಗೂ ಅದೇ ವ್ಯಾಪ್ತಿಯ ಉಳಿದ ಗ್ರಾ.ಪಂ.ಗಳು ನಿರಪೇಕ್ಷಣಾ ಪತ್ರ ನೀಡಿಲ್ಲ.



ಇಂತಹ ಅಕ್ರಮವನ್ನು ವಿರೋಧಿಸಿ ಕೆಆರ್ ಪೇಟೆ ತಾಲ್ಲೂಕು ಪಂಚಾಯತಿ ಕಚೇರಿ, ಮಂಡ್ಯ ಜಿಲ್ಲಾಧಿಕಾರಿ ಕಚೇರಿ, ಜಿಲ್ಲಾ ಮಾಲಿನ್ಯ ನಿಯಂತ್ರಣಾಧಿಕಾರಿ, ಮೈಸೂರು ವಲಯ ನಿಯಂತ್ರಣಾಧಿಕಾರಿ ಕಚೇರಿ ಮೊದಲಾದ ಎಲ್ಲೆಡೆ ಪ್ರತಿಭಟನೆಗಳು ನಡೆದವು. ಚೆನ್ನೈಯಲ್ಲಿರುವ ನ್ಯಾಷನಲ್ ಗ್ರೀನ್ ಟ್ರಿಬ್ಯುನಲ್‌ನಲ್ಲಿ ಪ್ರಕರಣವನ್ನೂ ದಾಖಲಿಸಲಾಯಿತು ಹಾಗೂ ಅದು ಈ ಪ್ರಕ್ರಿಯೆಯಲ್ಲಿ ನಡೆದಿರುವ ಅಕ್ರಮಗಳನ್ನು ಗಮನಕ್ಕೆ ತೆಗೆದುಕೊಂಡು ಕಾರ್ಖಾನೆಗೆ ನೋಟಿಸನ್ನೂ ಜಾರಿ ಮಾಡಿತು. ಪ್ರಕರಣ ಇನ್ನೂ ವಿಚಾರಣೆಯ ಹಂತದಲ್ಲಿದೆ. ಸರಣಿ ಹೋರಾಟಗಳ ಪರಿಣಾಮವಾಗಿ ಸ್ಥಳ ಪರಿಶೀಲನೆಗೆ ಬಂದ ವಲಯ ನಿಯಂತ್ರಣಾಧಿಕಾರಿಗಳು, ಕೋರಮಂಡಲ್ ಕಾರ್ಖಾನೆಯ ಸುತ್ತಲಿನ ನೀರಿನ ಮಾದರಿ, ಮಣ್ಣಿನ ಮಾದರಿ ಸಂಗ್ರಹಿಸಿದರು. ಅದನ್ನು ಪರೀಕ್ಷೆಗೊಳಪಡಿಸಿದಾಗ, ನೀರು ಮತ್ತು ಮಣ್ಣಿನಲ್ಲಿ ಆಮ್ಲಜನಕದ ಪ್ರಮಾಣ ಅತ್ಯಂತ ಕಡಿಮೆ ಮಟ್ಟಕ್ಕಿಳಿದಿರುವುದು, ನೀರು-ಗಾಳಿಯಲ್ಲಿ ಅಪಾಯಕಾರಿ ಅನಿಲಗಳು ಸೇರಿರುವುದು, ಕಾರ್ಖಾನೆ ಸಕ್ಕರೆ ಉತ್ಪಾದನೆಯಲ್ಲಿ ಹೊರಬರುವ ಕೊಳಕು ನೀರನ್ನು ಸಂಸ್ಕರಿಸದೆ ಹಾಗೆಯೇ ಹೇಮಾವತಿ ನದಿಗೆ ನಿರಂತರವಾಗಿ ಸೇರಿಸುತ್ತಿರುವುದು, ಅದರಿಂದಾಗಿ ಆ ನೀರು ಕುಡಿಯಲು ಯೋಗ್ಯವಲ್ಲದ ಕೇವಲ ಬಚ್ಚಲು ತೊಳೆಯಲು ಬಳಸಬಹುದಾದ 'ಬಿ ದರ್ಜೆ'ಯ ನೀರಾಗಿರುವುದು- ಎಲ್ಲವೂ ಆಧಾರಸಹಿತವಾಗಿ ಸಾಬೀತಾಯಿತು. 2012ರ ಡಿಸೆಂಬರ್‌ನಲ್ಲಿ ಮೈಸೂರು ವಲಯ ಕಚೇರಿ ಈ ವರದಿ ಸಿದ್ಧಪಡಿಸಿತು. ಇದನ್ನು


ಆಧರಿಸಿ, 18 ಮಾರ್ಚ್ 2013ರಂದು ವಲಯ ಮಾಲಿನ್ಯ ನಿಯಂತ್ರಕರು ಕಾರ್ಖಾನೆಗೆ ನೋಟಿಸನ್ನೂ ಜಾರಿಮಾಡಿ, ಅದರ ಪ್ರತಿಯನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಕಚೇರಿಗೆ ಕಳಿಸಿದರು. ಜೊತೆಗೆ ನೀರಿನ ಕಾಯ್ದೆ-ಗಾಳಿ ಕಾಯ್ದೆ (ವಾಟರ್ ಆಕ್ಟ್- ಏರ್ ಆಕ್ಟ್) ಉಲ್ಲಂಘನೆಯ ಕಾರಣಕ್ಕಾಗಿ ಕ್ರಮ ಕೈಗೊಳ್ಳುವಂತೆಯೂ, ಹೊಸ ಪ್ರಾಜೆಕ್ಟ್‌ಗೆ ಅನುಮತಿ ನೀಡದಿರುವಂತೆಯೂ ಶಿಫಾರಸ್ಸು ಮಾಡಿದರು.

ಇದಕ್ಕೂ ಮೊದಲೇ 09.12.11ರಂದು ಜಿಲ್ಲಾಧಿಕಾರಿ ಪಿ.ಸಿ.ಜಾಫರ್‌ರವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ರೈತ ನಾಯಕರಾದ ರಾಜೇಗೌಡರು, ರೈತ ಯುವಕರು ಹಾಗೂ ಪಂಚಾಯತಿ ಸದಸ್ಯರು ಸಾಕಷ್ಟು ಪ್ರಶ್ನೆಗಳನ್ನೆತ್ತಿದಾಗ ಉತ್ತರ ನೀಡಲು ಕಾರ್ಖಾನೆ ಆಡಳಿತ ಮಂಡಳಿ ಒದ್ದಾಡುತ್ತಿದ್ದುದು ಕಂಡು, "ಈ ಸಭೆ ಅಪೂರ್ಣ; ಪ್ರಶ್ನೆ ಕೇಳಿದವರಿಗೆ ನೀವು ಹೇಳುವಂತಹ ಉನ್ನತ ತಂತ್ರಜ್ಞಾನ ಅಳವಡಿಸಿರುವ ಕಾರ್ಖಾನೆಗಳನ್ನು ತೋರಿಸಿ, ಅವರಿಗೆ ಮನವರಿಕೆ ಮಾಡಿಕೊಟ್ಟು ಎಲ್ಲರ ಒಪ್ಪಿಗೆ ಪಡೆಯಬೇಕು. ನಂತರವೇ ಈ ಸಭೆ ಪೂರ್ಣವಾಯಿತೆಂದು ಪರಿಗಣಿಸಲಾಗುವುದು" ಎಂದು ಜಿಲ್ಲಾಧಿಕಾರಿಗಳು ಅರ್ಧಕ್ಕೇ ಸಭೆ ನಿಲ್ಲಿಸಿದ್ದರು. ಆದರೆ, ಬಿಸಿಸಿಐನ್ನೇ ಮಂಗ ಮಾಡಬಲ್ಲವನಾದ ಶ್ರೀನಿವಾಸನ್ ಹಾಗೂ ಅವರ ಚೇಲಾಗಳು ಜಿಲ್ಲಾಡಳಿತಕ್ಕೆ ಮಂಕುಬೂದಿ ಎರಚಲು ಹಿಂಜರಿಯುತ್ತಾರೆಯೇ? ಈ ಹಿಂದೆಯೇ ತಮಗೆ ಬೇಕಾದ ಕೆಲವು ಸ್ಥಳೀಯ ಪುಢಾರಿಗಳನ್ನು ಬುಟ್ಟಿಗೆ ಹಾಕಿಕೊಳ್ಳಲು ಅವರನ್ನು ರೆಸಾರ್ಟ್‌ಗಳಿಗೆ ಕರೆದುಕೊಂಡು ಹೋಗಿ, ದಾಖಲೆಗಳಲ್ಲಿ ಅಲ್ಪಸ್ವಲ್ಪ ಬದಲಾವಣೆ ಮಾಡಿ, ಅವರುಗಳ ವಿವರ ನೀಡಿ, ಜಿಲ್ಲಾಡಳಿತವನ್ನೇ ದಿಕ್ಕುತಪ್ಪಿಸಿ ಅನುಮತಿ ಪಡೆದಿದ್ದರು.

ಇಷ್ಟೆಲ್ಲಾ ನಡೆದರೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಛೇರ್‌ಮನ್ ವಾಮನಾಚಾರ್ಯರು ಈ ದಿಕ್ಕಿಗೆ ಮುಖವನ್ನೂ ಮಾಡಲಿಲ್ಲ. ವಲಯ ಸಮಿತಿಯ ಶಿಫಾರಸ್ಸುಗಳನ್ನೂ, ಹೋರಾಟಗಾರರ ಮನವಿಗಳನ್ನೂ, ಗ್ರೀನ್ ಟ್ರಿಬ್ಯುನಲ್‌ನ ನೋಟಿಸನ್ನೂ ಜಾಣಕುರುಡಿನಿಂದ ಕಾಣದಂತೆ ಕುಳಿತರು. ಕೊನೆಗೆ, ಉತ್ಸಾಹಿ ಯುವಕರಾದ ಯೋಗೀಶ್, ತಮ್ಮೇಗೌಡ, ಕುಮಾರ್, ಕೃಷ್ಣೇಗೌಡ ಮೊದಲಾದ 20ಕ್ಕೂ ಹೆಚ್ಚು ಮಂದಿ ಅವರ ಕಚೇರಿಗೇ ಹೋಗಿ ದಬಾಯಿಸಿ ಬಂದಮೇಲೆ, ಸ್ಥಳ ಪರಿಶೀಲನೆಗೆ ಬಂದರು. ಅದೂ ದಿಢೀರ್ ಭೇಟಿ ನೀಡುವ ಬದಲು, ಮೊದಲೇ ಮಾಹಿತಿ ನೀಡಿ ಮಾರ್ಚ್ 29ರಂದು ಸ್ಥಳಕ್ಕೆ ಬಂದರು. ಆದರೆ, ಅವರನ್ನು ಕಂಡು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಬಂದಿದ್ದ ನೂರಾರು ಮಹಿಳೆಯರನ್ನೂ ಒಳಗೊಂಡಂತೆ ಸ್ಥಳೀಯರನ್ನು ಮುಖ ಕೊಟ್ಟು ಮಾತೂ ಆಡಿಸದೆ ಕಾರು ಹತ್ತಿ ಅವಸರವಾಗಿ ವಾಪಾಸ್ ಹೊರಟಾಗ, ಸ್ಥಳೀಯರು ಎರಡೂ ಗೇಟ್‌ಗಳಲ್ಲಿ ಮುತ್ತಿಗೆ ಹಾಕಿ ಅವರಿಗೆ ಮನವಿ ನೀಡಿದರು. ಇನ್ನೂ ರಾಜ್ಯ ಮಂಡಳಿಯ ಅನುಮತಿ ದೊರೆಯುವ ಮೊದಲೇ ಕಟ್ಟಡ ನಿರ್ಮಾಣ ಮಾಡುತ್ತಿರುವುದರ ಕಡೆ ಅವರ ಗಮನವನ್ನೂ ಸೆಳೆದರು.

ಇಷ್ಟೆಲ್ಲಾ ಅಕ್ರಮಗಳು ಕಣ್ಣಿಗೆ ರಾಚುವಂತಿರುವಾಗಲೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಏಪ್ರಿಲ್ 24ರಂದು ಕ್ಲಿಯರೆನ್ಸ್ ಸರ್ಟಿಫಿಕೇಟ್ ನೀಡುವ ಮೂಲಕ ಬಿಜೆಪಿಯ ವಾಮನಾಚಾರ್ಯರು ಸ್ಪಾಟ್‌ಫಿಕ್ಸಿಂಗ್‌ನಲ್ಲಿ ಭಾಗಿಯಾಗಿದ್ದಾರೆಂದು ಅನುಮಾನ ಪಡುವಂತಾಗಿದೆ. ಹೀಗಾಗಿ ಜೂನ್ 14ರಂದು ಸ್ಥಳೀಯ ರೈತರು, ಮಹಿಳೆಯರು ನೂರಾರು ಸಂಖ್ಯೆಯಲ್ಲಿ ನೇರವಾಗಿ ವಾಮನಾಚಾರ್ಯರಿಗೇ ಮುತ್ತಿಗೆ ಹಾಕಲು ಬರುತ್ತಿದ್ದಾರೆ. ತಮ್ಮ ಬದುಕನ್ನು ಕೊಳಕು ಮಾಡಲು ಹೊರಟಿರುವ ಕೋರಮಂಡಲ್ ಕಾರ್ಖಾನೆಯ ಅಕ್ರಮಗಳನ್ನು ನಿಯಂತ್ರಿಸಲು ಆಗ್ರಹಿಸಲಿದ್ದಾರೆ. ಅವರನ್ನು ಬೆಂಬಲಿಸಿ ರೈತಸಂಘ, ಕರ್ನಾಟಕ ಜನಶಕ್ತಿ ಮೊದಲಾದ ಸಂಘಟನೆಗಳೂ ಬೀದಿಗಿಳಿದಿವೆ. ಈಗಲಾದರೂ ಅರಣ್ಯ ಮತ್ತು ಪರಿಸರ ಇಲಾಖೆ ಸಚಿವರಾದ ರಮಾನಾಥ ರೈಯವರೂ, ಸರ್ಕಾರ ಎಚ್ಚೆತ್ತು, ಆಚಾರಿ-ಶ್ರೀನಿ ಫಿಕ್ಸಿಂಗಿಗೆ ಕಡಿವಾಣ ಹಾಕಿ, ... ಜನರನ್ನು ... ಕಾಪಾಡಬೇಕು!

• ಮಲ್ಲಿಗೆ ಸಿರಿಮನೆ



ಕೋರಮಂಡಲ ಶುಗರ್ ಫ್ಯಾಕ್ಟರಿ

ಮಾಯಾಮೃಗ



ವಿವಿಧ ತಳಿಗಳ ಭತ್ತದ ಗದ್ದೆ

ಬೃಹತ್ ಕಾರ್ಪೊರೇಟ್ ಕಂಪನಿಗಳ ವಿರುದ್ಧ ಒರಿಸ್ಸಾ ರಾಜ್ಯದ ಆದಿವಾಸಿಗಳು ಹಲವಾರು ವರ್ಷಗಳಿಂದ ಹೋರಾಟ ಮಾಡುತ್ತಾ ಬಂದಿದ್ದಾರೆ. ಇತ್ತೀಚೆಗೆ ಆ ರಾಜ್ಯದ ರಾಯಗಢ್ ಜಿಲ್ಲೆಯಲ್ಲಿ ಆದಿವಾಸಿಗಳು ವಾಸಿಸುವ ಹಾಡಿಗಳಿಗೆ ಭೇಟಿ ನೀಡಿದಾಗ ಡಾ. ಸಬಿಹಾ ಭೂಮಿಗೌಡ ಕಂಡ 'ಬದುಕಿನ ಕಥನ'ದ ಮೊದಲ ಭಾಗ ಇಲ್ಲಿದೆ.

ರೈಲು ವೇಗವಾಗಿ ಚಲಿಸುತ್ತಿತ್ತು. ಎತ್ತ ನೋಡಿದರೂ ಹಚ್ಚ ಹಸುರು. ಕಾನನದ ನಡುವೆ ದಾರಿ ಮಾಡಿಕೊಂಡು, ಇಲಿ ಬಿಲವನ್ನು ಹೊಕ್ಕುವಂತೆ ಸುರಂಗದ ಒಳನುಗ್ಗಿ ಮತ್ತೆಲ್ಲೋ ಹೊರಬಂದು, ಓಡುತ್ತಿದ್ದ ರೈಲು ಕಣ್ಣಾಮುಚ್ಚಾಲೆ ಆಟದಲ್ಲಿ ತೊಡಗಿದ್ದಂತೆ ಕಾಣುತ್ತಿತ್ತು. ರಭಸದಿಂದ ನುಗ್ಗಿಬರುತ್ತಿದ್ದ ಗಾಳಿಗೆ ಮುಖವನ್ನು ಒಡ್ಡಿಕೊಂಡು ಸಂಭ್ರಮಿಸುತ್ತಿದ್ದೆ. ಅಷ್ಟರಲ್ಲಿ ಗುಡ್ಡಸಾಲುಗಳು ಹಿನ್ನೆಲೆಗೆ ಸರಿದು, ಒಂದಷ್ಟು ಸಮತಟ್ಟು ಜಾಗ ಕಂಡಿತು. ರಾಗಿ ಕಟಾವು ಮಾಡುತ್ತಿದ್ದ ಹೆಂಗಸರೂ ಗಂಡಸರೂ ತಾವು ಮಾಡುತ್ತಿದ್ದ ಕೆಲಸವನ್ನು ಮರೆತು, ಓಡುವ ರೈಲನ್ನು ನೋಡುತ್ತ ನಿಂತರು. ಪುಟ್ಟಪುಟ್ಟ ಮಕ್ಕಳು ಬೆರಗುಗಣ್ಣಿಂದ ರೈಲನ್ನು ನೋಡುತ್ತಿದ್ದರು. ಕೆಲವು ಮಕ್ಕಳಂತೂ ಕುಣಿಕುಣಿದು ಸಂಭ್ರಮಿಸುವುದರ ಜೊತೆಗೆ ಕೈಬೀಸಿ ಟಾಟಾ ಮಾಡುತ್ತಿದ್ದರು. ಹಿನ್ನೆಲೆಯಲ್ಲಿ ನಿಂತಿದ್ದ ಗುಡ್ಡಸಾಲುಗಳು ಕೆಲವು ಎಕರೆಗಳ ಕೃಷಿಗೆ ಚೌಕಟ್ಟನ್ನು ನಿರ್ಮಿಸಿದಂತೆ ಕಂಡವು. ನೋಡನೋಡುತ್ತಿದ್ದಂತೆ, ಬಯಲು ಮಾಯವಾಗಿ ಬೆಟ್ಟಸಾಲುಗಳ ಬಳಿಗೇ ರೈಲು ಮುನ್ನುಗ್ಗ ತೊಡಗಿತು. ಇಲ್ಲಿನ ಬೆಟ್ಟಗಳು ಬಹುತೇಕ ದಿಗಂಬರ ದೀಕ್ಷೆ ತೊಟ್ಟಂತೆ ಕಂಡವು. ಎಲ್ಲಿ ನೋಡಿದರೂ ಹುಲ್ಲು ಹಾಸು; ಅದು ಬಟ್ಟರೆ ಕುರುಚಲು. ಉಳಿದಂತೆ ಬೋಳು ಬೋಳು ಬಂಡೆಗಳು. ದೊಡ್ಡ ದೊಡ್ಡ ಮರಗಳೇ ಇಲ್ಲ.

"ಆ ಬೆಟ್ಟ ಸಾಲ್ನ ನೋಡಿ. ನಮ್ಮ ಕಡೇ ಹಾಗೆ ಚೂಪಾದ್ ತುದಿ ಇರೋ ಬೆಟ್ಟಗಳೇ ಇಲ್ಲ! ಬೆಟ್ಟದ್ ಮೇಲ್ಭಾಗ ಆಟದ್ ಮೈದಾನ್ ಥರಾ ಇದೆ" ಸರಸ್ವತಿಯ ಮಾತು ಕೇಳಿ ಅವುಗಳತ್ತ ದೃಷ್ಟಿ ಹರಿಯಿತು.

"ಈ ಬೆಟ್ಟಗಳು ಬಾಕ್ಸೈಟ್ ಅದಿರಿನ ಶ್ರೀಮಂತ ಗಣಿಗಳು. ಹೀಗಾಗಿ ಇವುಗಳ ಆಕಾರ. . ." ಎಂದ ದೇಬರಂಜನ್. ಕೇವಲ ಚಿನ್ನದ, ಕಬ್ಬಿಣದ ಅದಿರಿನ ಬಗ್ಗೆ ಮಾತ್ರ ಕೇಳಿ ಗೊತ್ತಿದ್ದ ನಾನು,

"ಬಾಕ್ಸೈಟ್ ಅಂದ್ರೆ ಯಾವ ಥರದ ಅದಿರು? ಅದರಿಂದ ಏನ್ ಮಾಡ್ತಾರೆ?" ಅಂದೆ.

"ಬಾಕ್ಸೈಟ್‌ನಿಂದ ಅಲ್ಯುಮಿನಿಯಂ ತಯಾರಿಸ್ತಾರೆ. ಈಗಿನ್ ನಾಗರಿಕತೇಲಿ ಅಲ್ಯುಮಿನಿಯಂ ಬಹಳಾ ಬೇಕಾಗಿರೋ ಲೋಹ. ಗೃಹಬಳಕೆ ವಸ್ತುವಿನಿಂದ, ಏರೋಪ್ಲೇನ್, ರಾಕೆಟ್‌ಗಳ ನಿರ್ಮಾಣದವರೆಗೆ ಯಾವುದ್ಕೇ ಆಗ್ಲಿ ಅದು ಅನಿವಾರ್ಯ" ಸುನಂದಾಳ ವಿವರಣೆ.

ನಮ್ಮ ಮಾತು ವಿಷಯಾಂತರ ಆಗದಂತೆ ದೇಬರಂಜನ್, "ಬಾಕ್ಸೈಟ್ ಅದಿರಿನ ಈ ಗುಡ್ಡಗಳ್ನ 'ಪ್ರಕೃತಿ ಕಟ್ಟಿದ ಅಣೆಕಟ್ಟುಗಳು' ಅಂತಾ ಕರೀತಾರೆ. ಇವುಗಳ ವಿಶೇಷತೆ ಅಂದ್ರೆ, ಮಳೆಗಾಲ್‌ದಲ್ಲಿ ಸುರಿದ ಮಳೆನೀರ್‌ನೆಲ್ಲ ಅವು ತಮ್ಮ ಒಡಲಲ್ಲಿ ಹೀರ್‌ಕೊಂಡು, ವರ್ಷವಿಡೀ ಬಯಲಿಗೆ ನೀರು ಜಿನುಗೂ ಹಾಗೆ ಮಾಡ್ತವೆ. ಇವುಗಳಿಂದ ಇಲ್ಲಿನ ಆದಿವಾಸಿಗಳಿಗೆ ವರ್ಷದ ಮುನ್ನೂರ ಅರವತ್ತೈದು ದಿನವೂ ಶುದ್ಧನೀರಿಗೆ ತೊಂದ್ರೆ ಇಲ್ಲ" ಎಂದ.

ಎಲ್ಲರೂ ಗುಡ್ಡ-ಬೆಟ್ಟಗಳ ಸೌಂದರ್ಯವನ್ನು ಎರಡೂ ಕಣ್ಣುಗಳಲ್ಲಿ ತುಂಬಿಕೊಳ್ಳುತ್ತಿದ್ದೆವು.

"ಅಲ್ಲಿ ಕಾಣ್ತಿರೋ ಹಸಿರು ಬಣ್ಣದಲ್ಲಿ ಏನಾದ್ರೂ ವ್ಯತ್ಯಾಸ ನಿಮ್ಮ ಗಮನಕ್ಕೆ ಬರುತ್ತಾ" ಎಂಬ ಪ್ರಶ್ನೆಯನ್ನು ದೇಬರಂಜನ್ ನಮ್ಮೆಡೆಗೆ ಎಸೆದ.

"ಕಾಡು ಅಂದ್ರೇನೇ ಹಾಗಲ್ವಾ. ಎಷ್ಟು ವಿಧದ ಹಸಿರಿನ ಶೇಡ್‌ಗಳು ಇರ್ತವೆ."

"ನಾನು ಹೇಳ್ತಿರೋದು ಕಾಡಿನ ಸುದ್ದಿಯಲ್ಲ, ಇಲ್ಲಿರುವ ಭತ್ತದ ಗದ್ದೆಗಳ ಬಗ್ಗೆ."

"ಅದರಲ್ಲೇನ್ ವಿಶೇಷ?"

"ನಾನು ನಿಮ್ಮೂರಿಗೆ ಬಂದ್ರೆ, ಭತ್ತದ್ ಗದ್ದೆ ಎಷ್ಟೇ ವಿಶಾಲ ಇರ್ಲಿ, ಒಂದೇ ರೀತಿಯ ಹಸಿರು ಬಣ್ಣ. ಆದ್ರೆ ಇಲ್ಲಿ ನೋಡಿ, ಒಂದ್ ಎಕರೆಯಷ್ಟು ಇರೋ ಭತ್ತದ್ ಗದ್ದೇಲಿ ಎಷ್ಟು ವೆರೈಟಿ ಹಸಿರು ಇದೆ. ಕಾಣ್ತಾ?"

"ಹೌದಲ್ಲ, ಯಾಕೆ ಹೀಗೆ? ಅವೆಲ್ಲಾ ಒಟ್ಗೇ ನೆಟ್ಟ ಸಸಿಗಳಲ್ವಾ?"

"ಒಟ್ಗೇನೇ ನೆಟ್ಟಿದ್ದು. ಆದ್ರೆ ಒಂದೇ ತಳಿ ಅಲ್ಲ. ಅಷ್ಟ್ ಜಾಗ್‌ದಲ್ಲಿ ಕನಿಷ್ಠ ಐದಾರು ಭತ್ತದ ತಳಿ ನೆಟ್ಟಿದ್ದಾರೆ. ಅದ್ಕೇ ಆ ಗದ್ದೆ ಹಸಿರಿನ ಕೊಲಾಜ್ ಥರಾ ಕಾಣ್ತಿರೋದು."

"ಅದ್ಯಾಕೆ ಹಾಗೆ? ಎಲ್ರೂ ಹೀಗೇ ಮಾಡ್ತಾರಾ? ಅಥ್ವಾ?"

"ಆದಿವಾಸಿಗಳ್ ಬದುಕಿಗೂ ಇದಕ್ಕೂ ಸಂಬಂಧ ಇದೆ. ಮೊನೋಕಲ್ಚರ್ ಕೃಷಿಗೆ ಅವು ಯಾವತ್ತೂ ಒತ್ತು ನೀಡಿಲ್ಲ. ಸಾಂಪ್ರದಾಯಿಕವಾದ ಹತ್ತಾರು ಭತ್ತದ ತಳಿಗಳನ್ನ ಅವರು ಇವತ್ತೂ ಈ ವಿಧಾನದಿಂದ ಉಳಿಸಿಕೊಂಡ್ ಬಂದಿದ್ದಾರೆ. ಹವಾಮಾನ ಯಾವತ್ತೂ ಅನಿಶ್ಚಿತ. ಹೀಗಾಗಿ ಅದ್ರಲ್ಲಿ ಏನೇ ವ್ಯತ್ಯಾಸ ಆದ್ರೂ, ಒಂದು ತಳಿ ಕೈಕೊಟ್ರೂ ಇನ್ನೊಂದು ತಳಿಯಾದ್ರೂ ತಮ್ಮ ಕೈಹಿಡೀತದೆ ಅನ್ನೋ ಲೆಕ್ಕಾಚಾರವೂ ಇಂಥಾ ಕೃಷಿಸಂಸ್ಕೃತಿಯ ಹಿಂದೆ ಇದೆ."

ದೇಬರಂಜನ್‌ನ ಮಾತು ವಿಶಿಷ್ಟ ಎನಿಸಿತು. ಆದಿವಾಸಿಗಳ ಬದುಕಿನ ಎಳೆಎಳೆಯನ್ನೂ ಅರಿತವನಂತೆ ಕಂಡ. ಎಲ್ಲಿಯ



ಆದಿವಾಸಿಗಳ ವಿರೋಧದ ನಡುವೆಯು ತಲೆ ಎತ್ತಿದ ಕಾರ್ಖಾನೆ

ದೇಬರಂಜನ್? ಎಲ್ಲಿಯ ಒರಿಸ್ಸಾದ ಆದಿವಾಸಿಗಳು? ಪ್ರತಿಷ್ಠಿತ ಕಾಲೇಜಿನಲ್ಲಿ ತನ್ನ ಎಂ.ಕಾಂ ಪದವಿ ಮುಗಿಸಿ, ಯಾವುದೋ ಕಂಪೆನಿಯಲ್ಲಿ ಬಿಳಿಕಾಲರಿನ ಅಧಿಕಾರಿಗಳ ಗುಂಪಲ್ಲಿ ಒಬ್ಬನಾಗಬೇಕಿದ್ದ ಈತ, ಚಳವಳಿಯತ್ತ ಒಲವು ಬೆಳೆಸಿಕೊಂಡು, ಆದಿವಾಸಿಗಳ ಜೊತೆ ತನ್ನನ್ನು ಗುರುತಿಸಿಕೊಂಡುದು ಆತನ ಬದುಕಿನ ಒಂದು ಮುಖ್ಯ ತಿರುವು ಆಗಿದ್ದಿರಬೇಕು. ದೇಬರಂಜನ್ ಮಾತಿನಿಂದ ಆದಿವಾಸಿಗಳ ಕುರಿತು, ಅವರ ಬದುಕಿನ ಕ್ರಮದ ಕುರಿತು ಹಲವು ಕುತೂಹಲದ ಪ್ರಶ್ನೆಗಳು ಎದ್ದವು. ಅಷ್ಟರಲ್ಲಿ ನಾವು ಇಳಿಯಬೇಕಾದ ಸ್ಟೇಶನ್ ಹತ್ತಿರವಾಯಿತೆಂದು ಅವಸರಿಸತೊಡಗಿದೆವು.

ರೈಲು ಇಳಿದು, ಒಂದು ಆಟೋದಲ್ಲಿ ಲಗೇಜು ಹೇರಿ ನಾವೂ ಏರಿದೆವು. ಹಾದಿ ಉದ್ದಕ್ಕೂ ಬೆಟ್ಟಶ್ರೇಣಿ ನಮ್ಮನ್ನು ಹಿಂಬಾಲಿಸಿದಂತೆ ಕಂಡಿತು. ಆದಿವಾಸಿಗಳಿಗ್ಯಾಕೆ ರಸ್ತೆ ಎಂಬ ಧೋರಣೆಯೇನೋ! ಡಾಂಬರು ಕಂಡ ರಸ್ತೆ ಒಂದೂ ಇಲ್ಲ. ಎತ್ತಿಎತ್ತಿ ಕುಕ್ಕುವ ಆಟೋರಿಕ್ಷಾ ನಮ್ಮ ಮೂಳೆಗಳನ್ನು ಪರೀಕ್ಷಿಸುವಂತೆ ಕಾಣುತ್ತಿತ್ತು. ನಾಲ್ಕಾರು ಮೈಲು ಸಾಗುತ್ತಿದ್ದಂತೆ ದೊಡ್ಡ ಅಲ್ಯುಮಿನಿಯಂ ಫ್ಯಾಕ್ಟರಿ, ಹಿರಿಯ ಹುದ್ದೆಯ ನೌಕರರಿಗಾಗಿ ಕಟ್ಟಿದ ಭವ್ಯ ಕ್ವಾರ್ಟರ್ಸ್, ಮಧ್ಯಮ ಗುಂಪಿನ ಮನೆಗಳು, ಹತ್ತಿರದಲ್ಲೇ ದೊಡ್ಡ ಪೊಲೀಸ್ ಸ್ಟೇಶನ್! ಎಲ್ಲವೂ ಅಲ್ಲಿಯ ಇಡೀ ಪರಿಸರಕ್ಕೆ ಅನ್ಯವೆಂಬಂತೆ ವಿಚಿತ್ರವಾಗಿ ಕಂಡವು. ಕಾರ್ಖಾನೆಯ ಬೃಹತ್ ಆವರಣ ಕಂಡು ಬೆರಗಾಯಿತು. ಸ್ಥಳೀಯ ಜನರ ಹೋರಾಟದ ಬಗ್ಗೆ ಅಷ್ಟಿಷ್ಟು ಕೇಳಿದ್ದರಿಂದ ನಮಗೆ ಕಂಪೆನಿಯ ಅಸ್ತಿತ್ವ ಪ್ರಶ್ನಾರ್ಥಕ ಚಿಹ್ನೆಯಾಗಿ ಒಡಮೂಡಿತು. ಕುಲುಕಾಟದಲ್ಲಿ ಕೇಳಬೇಕೆಂದಿದ್ದ ಪ್ರಶ್ನೆಯನ್ನು ನುಂಗಿಕೊಂಡೆವು. ಅಂತೂ ಏಳು ಕಿ.ಮೀ ದೂರವನ್ನು ಕೇವಲ ಮುಕ್ಕಾಲು ಗಂಟೆಯಲ್ಲಿ ಕ್ರಮಿಸಿ, ಆದಿವಾಸಿಗಳ ಹಾಡಿಯನ್ನು ತಲುಪಿದೆವು.

ಆದಿವಾಸಿಗಳದು ಮಣ್ಣಿನ ಮನೆ. ಬಾಗಿಲೊಳಗೆ ಸೊಂಟ ಬಗ್ಗಿಸಿಯೇ ಒಳಪ್ರವೇಶಿಸಬೇಕು. ಒಳಜಗುಲಿ, ನಡುಮನೆ, ಅಡುಗೆಮನೆ ಬಟ್ಟರೆ ಇನ್ನೊಂದು ಕೋಣೆ ಅಲ್ಲಿಲ್ಲ. ಎಲ್ಲರ ಮನೆಯ ಎರಡೂ ಬದಿಗಳಿಗೆ ಕಟ್ಟೆ ಕಡ್ಡಾಯವೆಂಬಂತಿತ್ತು. ಎದುರುಬದುರು ಮನೆಗಳ ನಡುವೆ ವಿಶಾಲ ಹಾದಿ. ಕೊರೆಯುವ ಆ ಚಳಿಯಲ್ಲೂ ಎಳೆಯರಿಂದ ಹಿರಿಯರವರೆಗೆ ಉಟ್ಟಿದ್ದು ಕನಿಷ್ಠ ಸರಳ ಉಡುಗೆ. ಸೀರೆಯನ್ನೇ ಎರಡು ಮಡಿಕೆ ಮಾಡಿ, ಮೊಣಕಾಲ ಗಂಟಿನ ಕೆಳಗಿನವರೆಗೆ ಬರುವಂತೆ ಕಟ್ಟಿಕೊಂಡು ಉಳಿದುದನ್ನು ಮೈತುಂಬ ಹೊದ್ದರೆ ಹೆಂಗಸರ ಉಡುಗೆ ಮುಗಿದಂತೆ. ಮೂಗಿನ ಎಡ-ಬಲ ಹೊರಳೆಗಳಿಗಷ್ಟೇ ಅಲ್ಲದೆ ನಡುವಿನ ಕಂಬಕ್ಕೂ ಒಂದೊಂದು ನತ್ತು-ಮುಕುರ; ಕಿವಿಗೆ ಓಲೆಯ ಜೊತೆ ಬುಡ್ಡಿಗಳಿಗೂ ತೂತು. ಹಿರಿಯ ಹೆಂಗಸರು ಕುಪ್ಪಸದ ಅಗತ್ಯವನ್ನು ಅರಿತವರಲ್ಲ. ಗಂಡಸರದು ಅರೆಮೈ ಮುಚ್ಚಿದ ಪಂಚೆ. ಯಾರ ಮೈಯಲ್ಲೂ ಗುಲಗುಂಜಿ ತೂಕದ ಚೊಜ್ಜು ಕಾಣಸಿಗದು. ಇಂಥ ಸಾಂಪ್ರದಾಯಿಕ ಉಡುಗೆಯ ನಡುವಲ್ಲೇ ಚೂಡಿದಾರ, ನೈಟಿಗಳು ಅಲ್ಲಲ್ಲಿ ಪ್ರವೇಶ ಪಡೆದಿದ್ದವು. ನಮ್ಮನ್ನು ಎದುರುಗೊಳ್ಳಲು ದೊಡ್ಡ ಪರಿವಾರವೇ ನಿಂತಿತ್ತು. ಆ ಮನೆಗಳು, ಜನರು, ಬೀದಿ, ಅವರೆಲ್ಲರ ಹಾವ-ಭಾವ ಎಲ್ಲವೂ ನಮ್ಮ ನಮ್ಮ ಹಳ್ಳಿಯ ಅಜ್ಜಿಮನೆಯ ನೆನಪುಗಳನ್ನು ಕೆದಕಿದ್ದವು.

ಹೋರಾಟಾ ನಂಗ ಹೋರಾಟಾ
ಹಾಡಿ ಜನರ ಬದುಕಿಗಾಗಿ ಹೋರಾಟಾ
ಸಂಗ್ರಾಮಾ ನಂಗ ಸಂಗ್ರಾಮಾ
ಹಾಡಿ ಜನರ ಸ್ವತಂತ್ರಕಾಗಿ ಸಂಗ್ರಾಮಾ॥

ಹೋರಾಟದ ಸಮೂಹಗಾನ ದೂರದಿಂದ ತೇಲಿ ಬಂದಾಗ ಕಿವಿ ನೆಟ್ಟಗಾಯಿತು. ಹಾಡು ಕೇಳಿತೇ ಹೊರತು ಹಾಡುಗಾರರು ಕಾಣಲಿಲ್ಲ. ಹಾಡುವವರು ಎಳೆಯರು ಎಂಬುದು ದನಿಯಿಂದಲೇ ತಿಳಿಯುತ್ತಿತ್ತು. ಎಳೆಯರು ತಪ್ಪಿದಾಗ ಯಾರೋ ತಿದ್ದಿ ಹಾಡಿ ತೋರಿಸುತ್ತಿದ್ದರು. ಹಾಡು ಮುಂದುವರಿಯಿತು.

ಮರ ಗಿಡ ಹಕ್ಕಿಗಳೆ ನಂಗ ಸಂಸಾರ
ಅವೆಲ್ಲ ಇಲ್ಲದ ಬದುಕೆ ನಂಗ ದೂರ
ಅಂಜದೇ ನಂಗಗಾಗಿ ಬದುಕಲುಕು ಹೋರಾಟ
ಬೆಟ್ಟ ಕದ್ದು ತಿಂದವರಕೆ ದೂರಮಾಡೋ ಹೋರಾಟ?

ಹಾಡು ಮುಂದುವರಿಯುತ್ತಿತ್ತು, ನಾವು ಹುಡುಕುತ್ತಿದ್ದ ವ್ಯಕ್ತಿ ಅಲ್ಲಿಯೇ ಸಿಗುತ್ತಾನೆ ಎಂದು ದೇಬರಂಜನ್ ಹೇಳಿ ಭಗವಾನ್‌ನನ್ನು ಕರೆದುತರಲು ಹುಡುಗನನ್ನು ಕಳಿಸಿದರು. ಹುಡುಗನೊಂದಿಗೆ ಬಂದ ವ್ಯಕ್ತಿ ಭಗವಾನ್ ಎಂದು ತಿಳಿದಾಗ ಅಚ್ಚರಿಗೊಂಡೆ. ಹಾಡಿಯ ಯಾರನ್ನೇ ಮಾತನಾಡಿಸಿದರೂ ಅವರ ಮಾತಿನ ಮಧ್ಯೆ ಭಗವಾನ್‌ನ ನಾಮಸ್ಮರಣೆ ಇರುತ್ತಿತ್ತು. ಆತನೊಬ್ಬ ಹಿರಿಯ ನೇತಾರನಿರಬಹುದು ಎಂದು ಊಹಿಸಿದ್ದೆ. ಆದರೆ ನಮ್ಮ ಮುಂದೆ ಬಂದು ನಿಂತ ಈತ ಸಾಧಾರಣ ಎತ್ತರದ, ತುಸು ತುಂಬಿದ ಮೈಕಟ್ಟಿನ ಮೂವತ್ತರ ಹತ್ತಿರದ ವಯಸ್ಸಿನ ಎಳೆಯನಾಗಿದ್ದ. ನಿನ್ನೆಯಿಂದ ನಮ್ಮ ಆಸುಪಾಸೇ ಓಡಾಡುತ್ತ, ಮಿಂಚಿನಂತೆ ಇನ್ನೊಂದು ಗಳಿಗೆಯಲ್ಲಿ ಏನೋ ಕೆಲಸವೆಂದು ಬೇರೆಲ್ಲಿಗೋ ಓಡುತ್ತಿದ್ದ ಈತನನ್ನು ಗಂಭೀರವಾಗಿ ನಾನು ಪರಿಗಣಿಸಿರಲೇ ಇಲ್ಲ. ನಾವು ಹುಡುಕಾಡುತ್ತಿದ್ದ ಹಾಡಿಯ ಹೋರಾಟಗಾರ ನಾಯಕ ಭಗವಾನ್ ಈತನೇ ಎಂದಾಗ ಪೆಚ್ಚೆನಿಸಿತು.

ಮಾತಿಗೆ ತೊಡಗಿದಾಗ, 'ಎಲ್ಲಿಂದ ಆರಂಭಿಸಲಿ' ಎಂಬ ಅವನ ಪ್ರಶ್ನೆಗೆ ಬಿಗುಮಾನದಿಂದಲೇ, 'ಮೊದಲಿನಿಂದಲೇ ಆರಂಭಿಸು' ಎಂದೆ. ಹೇಳುವುದು ಏನಿದ್ದೀತು? ಸರಕು ಎಷ್ಟಿದ್ದೀತು ಎಂಬ ಉಡಾಫೆತನ ನನ್ನ ಮಾತಿನಲ್ಲಿತ್ತು. ಆದರೆ ಅವನು ಮಾತಿಗೆ ಕುಳಿತೊಡನೆ ಮನೆಮಂದಿ ಮಾತ್ರವಲ್ಲ ಬೀದಿಯ ಎಲ್ಲರೂ ಸುತ್ತ ನೆರೆದರು; ಮೈಯೆಲ್ಲ ಕಣ್ಣಾಗಿ ಕಿವಿಯಾಗಿಸಿಕೊಂಡು ಅವನ ಮಾತಿಗೆ ಕಾದು ಕುಳಿತರು. ಅವನನ್ನು ಪರಿಚಯಿಸಿದ ದೇಬರಂಜನ್ ಮಾತ್ರ ತನ್ನ ಕೆಲಸ ಇಲ್ಲಿಗೆ ಮುಗೀತು ಎಂಬಂತೆ ಅಲ್ಲಿಂದ ಹೊರ ನಡೆದ. ಅಲ್ಯುಮಿನಿಯಂ ಕಂಪೆನಿಯ ಜೊತೆಗಿನ ಆದಿವಾಸಿಗಳ ಹೋರಾಟವು ಎಳೆಎಳೆಯಾಗಿ ಬಿಚ್ಚಿಕೊಳ್ಳತೊಡಗಿತು.

"ಆಗ ನಾನಿನ್ನೂ 7-8ರ ಎಳೆ ಹುಡುಗ. ಶಾಲೆಗೆ ಆದೇ ತಾನೇ ಸೇರಿದ್ದೆ ನಾನೂ ನನ್ನ ಗೆಳೆಯರೂ ಅದೊಂದು ದಿನ ಆಡುತ್ತಿದ್ದ ಹೊತ್ತಲ್ಲಿ ದೊಡ್ಡದೊಡ್ಡ ಆಕರ್ಷಕ ಕಾರುಗಳಲ್ಲಿ ಚೆಂದಚೆಂದದ ಪ್ಯಾಂಟುಕೋಟು ಹಾಕಿಕೊಂಡ ಕಪ್ಪು ಕನ್ನಡಕ ಏರಿಸಿಕೊಂಡ ಹತ್ತಾರು ಜನ ಬಂದು ಇಳಿದರು. ನಾವು ಆಡೋದು ಬಿಟ್ಟು ಬಿಟ್ಟಕಣ್ಣಿಂದ ಅವರ್ನ ನೋಡ್ತಿದ್ವಿ. ಯಾರೋ ಏನೋ ಹೇಳೋದು, ಇನ್ಯಾರೋ ಟೇಪು, ಕೋಲು ಹಿಡ್‌ಕೊಂಡು ಓಡಾಡೋದು, ಮತ್ಯಾರೋ ಫೈಲ್ ತೆಗೆದು ಜಾಗ ಗುರ್ತಿಸೋದು, ಇನ್ನೊಂದು ಗುಂಪು ಸುಣ್ಣದ ಪುಡಿಯಂಥದ್ದು ಏನನ್ನೋ ಉದುರಿಸಿ ಜಾಗ ಗುರುತು ಮಾಡೋದು, ಕೆಲವರು ನೆಲ ಅಗೆಯೋದು ಮಾಡ್ತಿದ್ದರು. ಅಲ್ಲಿ ಏನು ಮಾಡ್ತಿದ್ದಾರೆ ಅಂತ ಅರ್ಥ ಆಗ್ದಿದ್ರೂ ದೂರ್‌ದಿಂದ್ಲೇ ನೋಡ್ತಿದ್ವಿ. ಅವ್ರು ಕಣ್ಮರೆಯಾದಾಗ ಅವ್ರ ಕಾರ್ ಹತ್ರ ಓಡಿದ್ವಿ. ನಮ್ಮ ಮಣ್ಣು ಕೈನಿಂದ ಕಾರಿನ ಮೇಲೆಲ್ಲ ಶಾಲೆಯಲ್ಲಿ ಆದೇತಾನೆ ನಾವು ಕಲಿತ ಕಾಗುಣಿತ, ನಮ್ಮನಮ್ಮ ಹೆಸರುಗಳ್ನ ಸ್ಪರ್ಧೆಯಿಂದ ಬರೀತಿದ್ವಿ. ಈ ಸಂಭ್ರಮದಲ್ಲಿ ಅವ್ರು ನಮ್ಮ ಹತ್ರ ಬಂದದ್ದೇ ತಿಳೀಲಿಲ್ಲ. ಬಂದವ್ರೇ ಕೈಗೆ ಸಿಕ್‌ಸಿಕ್ಕವರ್ನ ಹಿಡಿದು ಹಿಗ್ಗಾಮುಗ್ಗಾ ಹೊಡೆದ್ರು. ಸಣ್ಣವ್ರು ನಾವ್ ಸಿಕ್ಕ್‌ಹಾಕ್‌ಕೊಂಡ್ವಿ. ಕಾಲು ಬಲ ಇದ್ದವ್ರು ತಪ್ಪಿಸಿಕೊಂಡ್ರು. ನನ್ಗೆ ಜೋರಾದ ಏಟೆ ಬಿದ್ದಿತ್ತು.

ಅಲ್ಲೀವರೆಗೆ ಹೊಸಬರಿಂದ ಹೊಡ್ಸಿಕೊಂಡಿಲ್ಲದ ನನಗೆ ಅಪಮಾನ ಅನ್ನಿಸ್ತು. ಅದೆಲ್ಲಿಂದ ಧೈರ್ಯ ಬಂತೋ ಏನೋ ಅವ್ರ ಕಾರು ಹೊರಡ್‌ತಿದ್ದಂತೆ ಕೈಗೆ ಸಿಕ್ಕ ಕಲ್ಲು ಎತ್ತಿಕೊಂಡು ಬೀಸಿ ಒಗ್ದೆ. ನನ್ ಗೆಳೆಯರೂ ಏನೂ ಕಮ್ಮಿ ಇರಲಿಲ್ಲ. ಠಳ್ ಅಂತ ಕಾರಿನ ಕಿಟಕಿ ಗಾಜು ಒಡೆದ್ದು ಗೊತ್ತಾಯ್ತು. ಅಷ್ಟೇ, ಇನ್ನೆಂಥ ಶಿಕ್ಷೆ ಕಾದಿದೆಯೋ ಅಂತ ಗುಡ್ಡದ ದಾರಿಯಲ್ಲಿ ಓಡಿ, ಅವರ ಕಣ್ಣಿಂದ ತಪ್ಪಿಸಿಕೊಂಡ್ವಿ. ಇದೇ ನನ್ ಜೀವನದ ಮೊದಲ ಪ್ರತಿರೋಧ" ಎಂದು ಭಗವಾನ್ ಕುಲುಕುಲು ನಕ್ಕಾಗ ಅವನ ಕಪ್ಪುಮುಖದ ತುಂಬ ವಿಶೇಷವಾದ ಕಳೆ ಕಂಡುಬಂತು.


"ಅಲ್ಲಿಗೆ ಕಾರಿನಲ್ಲಿ ಬಂದವ್ರು ಕಂಪೆನಿಯವರು ಅಂತ ನಮ್ಗೆ ಮತ್ತೆ ತಿಳೀತು. ನಮ್ಮೂರಿಗೊಂದು ಕಂಪೆನಿ ಬರುತ್ತೆ ಅಂತ ಗೊತ್ತಾದಾಗ, ನನಗಿರಲಿ, ಊರಿನ ಯಾವ ಹಿರಿಯರಿಗೂ ಅದರ ಅರ್ಥ ಆಗ್‌ಲಿಲ್ಲ. ಇಲ್ಲಿಗೆ ಕಂಪೆನಿ ಬಂದ್ರೆ ನಮ್ಗೆ ಏನ್ ಉಪಯೋಗ? ಏನ್ ತೊಂದ್ರೆ ಅಂತಾನೂ ನಮ್ಗೆ ಗೊತ್ತಿರಲಿಲ್ಲ. ಅದೊಂದು ದಿವ್ಸ ಕೆಲವರು ಪ್ಯಾಟೆಯಿಂದ ಬಂದು, ನಮ್ ಊರಿನ್ ನಮ್ ಜಮೀನನ್ನ ಅಗಿಯೋಕ್ ಶುರುಮಾಡಿದ್ರು. ಆಚೆ ಬೀದಿಯ ಬುಲ್ರಾ ಹೊಲ್ದಲ್ಲಿ ರಾಗಿಪೈರು ಕಟಾವಿಗೆ ಬಂದಿತ್ತು. ಕಂಪೆನಿಯವ್ರ ದೊಡ್ಡದೊಡ್ಡ ಯಂತ್ರಗಳು ಬಂದು, ರಾಗಿ ಪೈರಿನ ಮೇಲೆಯೇ ಹಿಗ್ಗಾಮುಗ್ಗಾ ಓಡಾಡಿ, ಮಣ್ಣನ್ ಅಗೆದು ಹಾಕಿದ್ರು. ನಮ್ ಮುಖಿಯಾನ ಜೊತೆ ಊರವ್ರೆಲ್ಲ ಅಲ್ಲಿಗೆ ಬರೋವಷ್ಟರಲ್ಲಿ ಎಷ್ಟೋ ಹೊಲಗದ್ದೆಗಳು ಹೇಳಹೆಸರಿಲ್ಲ

>>>15

ಅಮೆರಿಕಾದ ಮಿಲಿಟರಿ ವಿಭಾಗ ನಮ್ಮೆಲ್ಲರ ದಿನನಿತ್ಯದ ಭಾಗವಾಗಿರುವ ಮೈಕ್ರೋಸಾಫ್ಟ್, ಗೂಗಲ್, ಸ್ಕೈಪ್, ಯಾಹೂ, ಫೇಸ್‌ಬುಕ್ ಇತ್ಯಾದಿ ಅಂತರ್ಜಾಲ ದೈತ್ಯಶಕ್ತಿಗಳ ಸಹಾಯದಿಂದ ರಾಷ್ಟ್ರೀಯ ಭದ್ರತಾ ನಿಯೋಗವನ್ನು ಸ್ಥಾಪಿಸಿದೆ. ಪರಿಣಾಮ? ಯಾರು ಯಾರೊಂದಿಗೆ ಸಂಭಾಷಿಸುತ್ತಾರೆ? ಏನೇನು ಬರೆಯುತ್ತಾರೆ? ಕಳಿಸುತ್ತಾರೆ? ಎಲ್ಲಿಂದ? ಎಷ್ಟು ಹೊತ್ತು? ಇತ್ಯಾದಿ ಸಮಸ್ತವೂ ಚಕಚಕನೆ ದಾಖಲಾಗುತ್ತಾ ಹೋಗುತ್ತದೆ.

ಮೈಯ್ಯಾದಲ್ಲಿ ದೋಸೆ ತಿಂದೆ, ಮೆಕ್ ಡೋನಾಲ್ಡಿನಲ್ಲಿ ಕೋಕ್ ಕುಡಿದೆ, ಹಾದಿಬದಿಯಲ್ಲಿ ಪಾನಿ ಪೂರಿ ನುಂಗಿದೆ ಎಂದು ನಮ್ಮ ಸಮಸ್ತವನ್ನೂ ಫೇಸ್‌ಬುಕ್ಕಿನಲ್ಲಿ ಮಹಾ ಹುಂಬತನದಿಂದ ದಾಖಲಿಸಿ ಅದರ ಒಡೆತನವನ್ನು ಫೇಸ್‌ಬುಕ್ಕಿಗೆ ಸಮರ್ಪಿಸುತ್ತಿರುತ್ತೇವಲ್ಲ? ಅವೆಲ್ಲವನ್ನೂ ಈಗ NSA ದ ನಿರ್ದೇಶಕ ಕ್ಲಾಪ್ಪರ್ ಮಹಾಶಯ ಸಹ ಎಚ್ಚರದಿಂದ ಗಮನಿಸಬಲ್ಲ.

ದೊಡ್ಡಣ್ಣ ಕಣ್ಣಿಟ್ಟಿದ್ದಾನೆ, ಜೋಕೆ!



...ಪಾರದರ್ಶಕತೆಯನ್ನು ಅಷ್ಟರಾಣೆ ಆಡಳಿತದಲ್ಲಿ ಎತ್ತಿ ...ಯುತ್ತೇವೆಂದು ನಂಬಿಸಿ ಅಧಿಕಾರಕ್ಕೆ ಬಂದಮೇಲೆ ...ಗಳಿಂದ ಪ್ರಜೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ...ಡುವುದನ್ನು 'ರಾಜನೀತಿ' ಎಂದು ಕೆಲವು ಬುದ್ಧಿವಂತರು ...ಯುತ್ತಾರೆ. ಅಂತಹ 'ರಹಸ್ಯ ರಾಜನೀತಿ'ಗಳನ್ನು ...ರ್ಜಾಲದ ಮೂಲಕ ಬೇಧಿಸಿ, ಒಳಹೊಕ್ಕು ಹೊರತೆಗೆ ...ವ ಸಾಹಸಿಗಳಿಗೆ ಒಂದು ಅಡ್ಡ ಹೆಸರಿದೆ: ಅಂತರ್ಜಾಲ ...ಕ್ಷಣಗಳು! ವರುಷಾನುಗಟ್ಟಲೆ ಆ ಕೊಳ್ಳೆಗಾರರು ನೀಡುತ್ತಿದ್ದ ...ಡ್ಡಣ್ಣ ಕಣ್ಣಿಟ್ಟಿದ್ದಾನೆ ಜೋಕೆ!' ಎಚ್ಚರಿಕೆಗಳೆಲ್ಲವೂ ಈ ಅಧಿಕೃತವಾಗಿಯೇ ಹೊರಬಿದ್ದಿವೆ.

...ಅಮೆರಿಕಾದ ಮಿಲಿಟರಿ ವಿಭಾಗ ನಮ್ಮೆಲ್ಲರ ದಿನನಿತ್ಯದ ...ಗವಾಗಿರುವ ಮೈಕ್ರೋಸಾಫ್ಟ್, ಗೂಗಲ್, ಸ್ಕೈಪ್, ...ಹೂ, ಫೇಸ್‌ಬುಕ್ ಇತ್ಯಾದಿ ಅಂತರ್ಜಾಲ ದೈತ್ಯಶಕ್ತಿಗಳ ...ಯದಿಂದ ರಾಷ್ಟ್ರೀಯ ಭದ್ರತಾ ನಿಯೋಗವನ್ನು (National Security Agency - NSA) ...ಪಿಸಿದೆ. ಅದರ ಕೆಲಸವೇನು? ಪ್ರಜೆಗಳ ಪ್ರತಿಯೊಂದು ...ನವಲನ, ಚಟುವಟಿಕೆಗಳ ಮೇಲೆ ನಿಕಟವಾದ ...ಣ್ಗಾವಲನ್ನು ಇಡಬೇಕು. ಪರಿಣಾಮ? ಯಾರು ...ರೊಂದಿಗೆ ಸಂಭಾಷಿಸುತ್ತಾರೆ? ಏನೇನು ಬರೆಯುತ್ತಾರೆ? ...ಸುತ್ತಾರೆ? ಎಲ್ಲಿಂದ? ಎಷ್ಟು ಹೊತ್ತು? ಇತ್ಯಾದಿ ಸಮಸ್ತವೂ ...ಕನೆ ದಾಖಲಾಗುತ್ತಾ ಹೋಗುತ್ತದೆ. ಅದೊಂದು ...ಹಿತಿಯ ಬಕಾಸುರ ಹೊಟ್ಟೆ. ಅದನ್ನ ಮೆಟಾಡೇಟಾ ...ದು ಕರೆಯುತ್ತಾರೆ.

...ಇಂಗ್ಲೆಂಡಿನ ಗಾರ್ಡಿಯನ್ ಪತ್ರಿಕೆ ಈ ಮಾಹಿತಿ ...ರ್ರಿಗಳನ್ನು ಬಳಸಿಕೊಂಡು ಅಮೆರಿಕಾ ಗುಪ್ತಚರ ವಿಭಾಗ ...ವ್ಯಾವ ರೀತಿಯಲ್ಲಿ ಕಾರ್ಯನಿರತವಾಗಿದೆಯೆಂಬುದನ್ನು ...ತ್ಯ ಬಯಲಿಗೆಳೆಯುತ್ತಿದೆ. 2001 ರಲ್ಲಿ ಅಮೆರಿಕಾದ ...ಡಿಗೋಪುರಗಳ ಮೇಲೆ ನಡೆದ ದಾಳಿಯ ನಂತರ ...ಶದಲ್ಲಿ ರಾಷ್ಟ್ರಾಭಿಮಾನ ಕಾಯಿದೆಯನ್ನು (Patriot ...) ಜಾರಿ ಮಾಡಲಾಯಿತು. ರಾಷ್ಟ್ರದ ಭದ್ರತಾ ದೃಷ್ಟಿ ...ದ ಯಾವ ರೀತಿಯ ಅನಾಚಾರವನ್ನೂ ಮಾಡಬಹುದು ...ಬುದರ ಸಾರಾಂಶವದು. ಆ ಕಾಯಿದೆಯಡಿ ಹೊಮ್ಮಿದ ...ಜನೆಯೇ ಪ್ರಿಸಂ.

...ಈ ಯೋಜನೆಯ ಪ್ರಕಾರ ಕಣ್ಗಾವಲಿಡಬೇಕಾದ್ದು ...! ಅಮೆರಿಕನ್ ಪ್ರಜೆಗಳ ಮೇಲಲ್ಲ, ಅದಕ್ಕಿಂತಲೂ ...ಗ್ಗಿ ಈ ಭೂಮಿಯ ಮೇಲಿರುವ ಎಲ್ಲಾ ಹುಲು ...ವರ ಮೇಲೆಯೂ ಕಟ್ಟೆಚ್ಚರವನ್ನು ಕಾಯ್ದುಕೊಂಡರೆ ...ರಿಕಾ ಸುಭದ್ರವಾಗಿರುತ್ತದೆ. ಅದು ಹೇಗೆ ಸಾಧ್ಯ? ...ರ್ಜಾಲದಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆ ... ಅಮೆರಿಕಾದಲ್ಲಿರುವ ಸರ್ವರ್‌ನೊಂದಿಗೆ ಸಂಪರ್ಕ ...ದಿರುವುದರಿಂದ ನಾವು ಅಂತರ್ಜಾಲದಲ್ಲಿ ಕೆಮ್ಮಿದ್ದು ...ಸಿದ್ದು ಇತ್ಯಾದಿಗಳೂ ಸಹ ನಿಖರವಾಗಿ ದಾಖಲಾಗುತ್ತಾ ...ಹಿತಿಯ ಬಕಾಸುರನ ಹೊಟ್ಟೆಯಲ್ಲಿ ಭದ್ರವಾಗಿ ...ರುತ್ತವೆ. ನೀವು ಇ ಮೇಲ್ ಕಳುಹಿಸಿ, ಫೇಸ್‌ಬುಕ್ಕಿನಲ್ಲಿ ...ಮಾನ್ಸ್ ಮಾಡಿ, ಅಮೆಜಾನಿನಲ್ಲಿ ಪುಸ್ತಕ ಕೊಂಡುಕೊಳ್ಳಿ, ...ವುದೋ ಬ್ಲಾಗಿನಲ್ಲಿ ಕಾಮೆಂಟಿಸಿ, ಪೋಲಿ ಚಿತ್ರವನ್ನು ...ಡಿ, ಏನು ಬೇಕಾದರೂ ಮಾಡಿ – ಎಲ್ಲವೂ ದೊಡ್ಡಣ್ಣನ ...ವಲಿನಲ್ಲಿಯೇ ನಡೆಯುತ್ತಿರುತ್ತದೆ. ಹುರ್ರೇ ಒಬಾಮಾ ...ಹಾಶಯರೇ! ನಿಮ್ಮ `yes we can' ಬರೀ ...ವಣಾ ಘೋಷಣೆಯಾಗಿ ಉಳಿದಿಲ್ಲ, ಇದೀಗ ಅಕ್ಷರಶಃ ...you can!

ಅದರಿಂದ ಭಾರತಕ್ಕೇನು?

...ಪ್ರಿಸಂನ 'ಅಪರಿಮಿತ ಮಾಹಿತಿ' ಯೋಜನೆ'ಯಡಿ ...ಡ್ಡಣ್ಣ ಕಣ್ಗಾವಲಿಟ್ಟಿರುವ ದೇಶಗಳಲ್ಲಿ ಭಾರತ ...ಯದು. ಮೊದಲು ಇರಾನ್, ನಂತರ ಪಾಕಿಸ್ತಾನ್, ...ರ್ಡಾನ್ ಹಾಗೂ ಈಜಿಪ್ಟ್. ನಾವೆಂತ ಅದೃಷ್ಟವಂತರು, ...ಡ್ಡಣ್ಣನಿಗೆ ನಮ್ಮ ಮೇಲೆಷ್ಟು ಪ್ರೀತಿ! ಮೇರಾ ಭಾರತ್ ...ಹಾನ್ ಎಂದೀಗ ನಾವು ಬೀಗಬಹುದು. ಮೈಯ್ಯಾದಲ್ಲಿ ...ಸೆ ತಿಂದೆ, ಮೆಕ್ ಡೋನಾಲ್ಡಿನಲ್ಲಿ ಕೋಕ್ ಕುಡಿದೆ, ... ಬದಿಯಲ್ಲಿ ಪಾನಿ ಪೂರಿ ನುಂಗಿದೆ ಎಂದು ನಮ್ಮ ...ಸ್ತವನ್ನೂ ಫೇಸ್‌ಬುಕ್ಕಿನಲ್ಲಿ ಮಹಾ ಹುಂಬತನದಿಂದ ...ಖಲಿಸಿ ಅದರ ಒಡೆತನವನ್ನು ಫೇಸ್‌ಬುಕ್ಕಿಗೆ ಸಮರ್ಪಿಸು ...ತ್ತೇವಲ್ಲ? ಅವೆಲ್ಲವನ್ನೂ ಈಗ NSA ದ ನಿರ್ದೇಶಕ ...ರ್ ಮಹಾಶಯ ಸಹ ಎಚ್ಚರದಿಂದ ಗಮನಿಸಬಲ್ಲ, ...ಸ್ನು ಅಮೆರಿಕಾದ ಸೆನೆಟ್‌ನಲ್ಲಿ ಹಾಜರುಪಡಿಸಿ 'ಹೌದೆ?' ಎಂದು ಕೇಳಿದ್ದಕ್ಕೆ ಆತ ಯಾವ ಅಂಜಿಕೆ, ನಾಚಿಕೆಯೂ ಇಲ್ಲದೇ 'ನೋ ಸರ್!' ಎಂದು ಉತ್ತರವಿತ್ತ. ಅದು ನಡೆದದ್ದು ಇದೇ ವರುಷದ ಮಾರ್ಚ್ ತಿಂಗಳಲ್ಲಿ.

ಆದರೆ ಈಗ ಆತ ಮಹಾ ಸುಳ್ಳುಬುರುಕ ಉತ್ತರವಿತ್ತಿದ್ದ ಎನ್ನುವುದು ಸಾಬೀತಾಗಿದೆ. ಅಷ್ಟೇ ಅಲ್ಲ 'ನಿಮ್ಮ ಮಾಹಿತಿಯೆಲ್ಲವೂ ನಮ್ಮಲ್ಲಿ ಭದ್ರ' ಎಂದು ಯಾವ ಮುಲಾಜೂ ಇಲ್ಲದೇ ಸುಳ್ಳು ಭರವಸೆಯನ್ನು ನೀಡುವ ಫೇಸ್‌ಬುಕ್, ಗೂಗಲ್ ಇತ್ಯಾದಿಗಳೂ ಸಹ ಆ ಕಾರಸ್ಥಾನದಲ್ಲಿ ಅಷ್ಟೇ ಶಾಮೀಲಾಗಿವೆ ಎನ್ನುವುದೂ ಬಯಲಾಗಿದೆ. ತಮಗೆ ಪ್ರಿಸಂ ತರಹದ ಯೋಜನೆಯ ಸುಳಿವೂ ಇರಲಿಲ್ಲ, ತಮಗೂ ಅದಕ್ಕೂ ಯಾವ ಸಂಬಂಧವೂ ಇಲ್ಲ ಎಂದು ಈ ಅಂತರ್ಜಾಲ ಚಿತ್ತಚೋರರು ಘೋಷಿಸಿಕೊಂಡಿದ್ದರು. ಅಷ್ಟೊತ್ತಿಗೆ ಸ್ವತಃ ಒಬಾಮಾ ಮಹಾಶಯರೇ 'ಅಮೆರಿಕಾದ ಭದ್ರತೆಯ ದೃಷ್ಟಿಯಿಂದ ಅಂತಹದ್ದೊಂದು ಯೋಜನೆ ಅಸ್ತಿತ್ವದಲ್ಲಿದೆ, ಕಾರ್ಯಶೀಲವಾಗಿದೆ' ಎಂದು ಒಪ್ಪಿಕೊಂಡು ಬಿಟ್ಟರಲ್ಲ! ಛೆ!

'ಮೇರಾ ಮಹಾನ್ ಭಾರತ್'ಗೆ ಕೆಲವು ಸವಾಲುಗಳು

ಈಗ ರಹಸ್ಯ ಚಟುವಟಿಕೆಗಳು ಬಟಾಬಯಲಾಗಿರುವುದರಿಂದ, ಅಮೆರಿಕನ್ ಗುಪ್ತಚರ ಸಂಸ್ಥೆಗಳು ಹಿಂಬಾಗಿಲಿಂದ ಹೋಗಿ ನಮ್ಮ ಖಾಸಗಿ ಅಂತಕ್ಕಂಥಾ ಮಾಹಿತಿಯನ್ನೂ ಚಾಚೂಬಿಡದೆ ಸಂಗ್ರಹಿಸುತ್ತಿರುವುದರಿಂದ, ನಮ್ಮನ್ನು ಪೊರೆಯುವ ಘನ ಸರಕಾರಕ್ಕೆ ಪಾಮರ ಪ್ರಜೆಗಳು ಕೆಲವು ಸವಾಲುಗಳನ್ನಾದರೂ ಕೇಳುವ ಕಾಲ ಬಂದಿದೆ.

ಮೊದಲನೆಯದಾಗಿ ಭಾರತ ಸರಕಾರಕ್ಕೆ ಪ್ರಿಸಂ ತರಹದ ಯೋಜನೆಯ ಬಗ್ಗೆ ಯಾವಾಗಿನಿಂದ ಗೊತ್ತಿತ್ತು? ಎಷ್ಟರ ಮಟ್ಟಿಗೆ ಗೊತ್ತಿತ್ತು? ಪ್ರಿಸಂ ತನ್ನ ಪ್ರಜೆಗಳ ಮಾಹಿತಿಯನ್ನು ಎಷ್ಟರಮಟ್ಟಿಗೆ ಸಂಗ್ರಹಿಸುತ್ತಿದೆ, ಅದರ ರೂಪರೇಷೆಗಳೇನು ಎಂದು ಭಾರತ ಸರಕಾರ ಯಾವತ್ತಾದರೂ ವಿಚಾರಿಸುವ ಗೋಜಿಗೆ ಹೋಗಿತ್ತೆ?

ಭಾರತ ಸರಕಾರ ತನ್ನ ಪ್ರಜೆಗಳ ಬಗೆಗಿನ ಮಾಹಿತಿ ಪಡೆಯಲು ಇದೇ ಪ್ರಿಸಂ ಯೋಜನೆಯ ಸಹಾಯವನ್ನು ಎಂದಾದರೂ ಪಡೆದಿದೆಯೆ?

ಅಥವಾ ಸ್ವತಃ NSA ಖುದ್ದಾಗಿ ಸಂಶಯಾಸ್ಪದ ವ್ಯಕ್ತಿಗಳನ್ನು ಸೂಚಿಸಿ, ಹೆಸರಿಸಿ, ಭಾರತ ಸರಕಾರಕ್ಕೆ ಅತ್ಯಂತ ಗುಪ್ತ ವರದಿಗಳ ಸರಬರಾಜು ಮಾಡಿದೆಯೆ?

ಈ ಮಾದರಿಯ ಡಿಜಿಟಲ್ ಕಣ್ಗಾವಲಿನ ಬಗೆಗೆ ಭಾರತ ಸರ್ಕಾರದ ನಿಲುವು, ನೀತಿ, ನಿಯಮಾವಳಿಗಳೇನು? ಹಾಗೂ ಭಾರತ ಸರಕಾರ ತನ್ನ ಪ್ರಜೆಗಳ ಖಾಸಗಿತನವನ್ನು ಕಾರ್ಪೊರೇಟ್ ಮತ್ತು ಅಮೆರಿಕಾದ ಕಣ್ಗಾವಲಿನಿಂದ ಹೇಗೆ ರಕ್ಷಿಸುತ್ತದೆ?

ಈ ಪ್ರಶ್ನೆಗಳಿಗೆ ಭಾರತ ಸರಕಾರ ಎಷ್ಟರಮಟ್ಟಿಗೆ ಜವಾಬ್ದಾರಿಯುತ ರೀತಿಯಲ್ಲಿ ಪ್ರತಿಕ್ರಿಯಿಸುತ್ತದೆ ಎನ್ನುವುದನ್ನು ಕಾದುನೋಡಬೇಕಷ್ಟೆ.

ಅಂತರ್ಜಾಲ ಸ್ವಾತಂತ್ರ್ಯ? ಎಷ್ಟರ ಮಟ್ಟಿಗೆ? ಯಾರಿಗೆ?

ಈ ರೀತಿಯ ಡಿಜಿಟಲ್ ಕಣ್ಗಾವಲು ಅಂತರ್ಜಾಲ ಸ್ವಾತಂತ್ರ್ಯದ ಬಗ್ಗೆ ಕೆಲವು ಮೂಲಭೂತ ಪ್ರಶ್ನೆಗಳನ್ನಂತೂ ಎತ್ತುತ್ತದೆ.

ಮೊದಲನೆಯದಾಗಿ ಅಂತರ್ಜಾಲದಲ್ಲಿ ನನ್ನದೆಂದು ಕೊಳ್ಳುವುದು ನಿಜವಾಗಿ ನನ್ನದಲ್ಲ, ಖಾಸಗಿತನವೆನ್ನುವುದು ಇಲ್ಲವೇ ಇಲ್ಲ. ನಾನು ಒದಗಿಸುವ ಮಾಹಿತಿಯೆಲ್ಲವೂ – ಅದು ಯಾವ ರೂಪದಲ್ಲಿಯೇ ಇರಲಿ – ಕಾರ್ಪೊರೇಟುಗಳಿಗೆ ಸೇರಿದ್ದು. ಅವರ ಅಂತರ್ಜಾಲದ ಜಾಹೀರಾತಿಗೆ ಒದಗಿ ಬರುವ ನಾನು ಅವರ ಮಟ್ಟಿಗೆ ಒಂದು ಮಿಕ ಅಷ್ಟೇ. ಗೂಗಲ್, ಫೇಸ್‌ಬುಕ್, ಯಾಹೂ ಇತ್ಯಾದಿಗಳ `its free, and will always be' ಸೇವೆಯ ಹಿಂದೆ ಯಾವ ಮಣ್ಣಾಂಗಟ್ಟಿ ಸೇವಾಸಕ್ತಿಯೂ ಇಲ್ಲ. ಜಾಹೀರಾತುಗಳಿಗೆ ನನ್ನನ್ನು ಒಡ್ಡಿ ಅತ್ತ ಮಿಲಿಯನ್ನುಗಟ್ಟಲೆ ಬಾಚಿಕೊಂಡು ಇತ್ತ ನನ್ನ ಬಗೆಗಿನ ಮಾಹಿತಿಯೆಲ್ಲವನ್ನೂ ಶೇಖರಿಸಿಕೊಳ್ಳುವ ತಲೆಹಿಡುಕರು ನನ್ನ ಒಪ್ಪಿಗೆಯಿಂದಲೇ ನನ್ನನ್ನು ಬೆತ್ತಲಾಗಿ ನಿಲ್ಲಿಸುವ ಹುನ್ನಾರದವರು.

ಎರಡನೆಯದಾಗಿ, ನನ್ನ ಬಗೆಗಿನ ಮಾಹಿತಿಯನ್ನು ನನ್ನದಲ್ಲದ ಪ್ರಭುತ್ವಕ್ಕೆ ಒದಗಿಸುವ ಇವರ ಧಾರ್ಷ್ಟ್ಯವಾದರೂ ಎಂತದ್ದು? ನಾನು ಅಮೆರಿಕನ್ ಪ್ರಜೆಯಲ್ಲ, ಆದರೆ ಅಮೆರಿಕನ್ ಪ್ರಭುತ್ವಕ್ಕೆ ನನ್ನ ಬಗೆಗಿನ ಪ್ರತಿಯೊಂದು ಮಾಹಿತಿಯೂ ಸಿಗಬಲ್ಲುದು. ಹಾಗಾದರೆ ನನ್ನ ಸರಕಾರ ಕಡಿದು ಕಟ್ಟೆ ಹಾಕುತ್ತಿರುವುದಾದರೂ ಏನನ್ನ? ಅಂತರ್ಜಾಲದ ತಲೆಹಿಡುಕ ದೈತ್ಯರು ನನ್ನ ಬಗೆಗಿನ ಮಾಹಿತಿಯನ್ನು ಯಾವುದೋ ಸರಕಾರಕ್ಕೆ ಬೇಷರತ್ತಾಗಿ ಒಪ್ಪಿಸುತ್ತೇವೆಂದು ಅವರ terms and conditions ನಲ್ಲಿ ಎಲ್ಲಿಯಾದರೂ ಹೇಳಿರುತ್ತಾರೇನು? ಆ ರೀತಿಯ ಕಣ್ಗಾವಲಿನ ಬಗೆಗೆ ಯಾವುದೇ ಅಂತಾರಾಷ್ಟ್ರೀಯ ಒಪ್ಪಂದವೇ ಇಲ್ಲವಲ್ಲ?

ಮೂರನೆಯದಾಗಿ, ನನ್ನ ಸರಕಾರ ಈ ಮಾಹಿತಿಯನ್ನು ದೊಡ್ಡಣ್ಣನಿಂದ ಪಡೆದುಕೊಂಡು ನನ್ನ ಧ್ವನಿಯನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದೆಯೇನು? ಉದಾಹರಣೆಗೆ, ಹೆಣ್ಣಿನ ಮೇಲೆ ನಡೆಯುತ್ತಿರುವ ಹಿಂಸೆಯ ವಿರುದ್ಧ ಆಂದೋಲನವನ್ನು ಹಮ್ಮಿಕೊಂಡು ಫೇಸ್‌ಬುಕ್ಕಿನ ಮೂಲಕ ಜಾಗೃತಿಯನ್ನು ಮೂಡಿಸಲು ಪ್ರಯತ್ನಿಸಿದರೆ ಪೊಲೀಸರಿಗೆ ಆ ಮಾಹಿತಿಯ ಇಂಚಿಷ್ಟೂ ತಲುಪಬಹುದಲ್ಲ? ಅದನ್ನು ಬಳಸಿಕೊಂಡು ಪೊಲೀಸರು ಆ ಆಂದೋಲನವನ್ನು ನಿಯಂತ್ರಿಸಲು, ಹತ್ತಿಕ್ಕಲು ಪ್ರಯತ್ನಿಸಬಹುದಲ್ಲ?

ಕೊನೆಯದಾಗಿ, ಇದರ ಬಗ್ಗೆ ಯಾಕೆ ಸಾರ್ವಜನಿಕ ಚರ್ಚೆಯೇ ಆಗದ ಮಹಾನ್ ಮೌನವೇಕೆ? ಅಥವಾ ಉದಾಸೀನವೆ?

ಅತ್ತ ಸಾರ್ವಜನಿಕವಾಗಬೇಕಾದ ಸರಕಾರಗಳು 'ಖಾಸಗಿ'ಯಾಗಿ ಮರೆಗೆ ಸರಿದರೆ ಇತ್ತ ವ್ಯಕ್ತಿಯಾದ, ಪ್ರಜೆಯಾದ ನಾನು ಖಾಸಗಿತನದ ಸವಲತ್ತನ್ನೆಲ್ಲವನ್ನೂ ಕಳೆದುಕೊಂಡು ಸರಕಾರದ ಸರ್ಚ್ಲೈಟಿನಡಿ ಬೆತ್ತಲಾಗಿ ನಿಂತಿರುವೆನೇನು? ವ್ಯಕ್ತಿಯಾಗಿ ನನಗೆ ವೈಯಕ್ತಿಕತೆಯ ಹಕ್ಕಿಲ್ಲವೇನು? 'ಬಿಲ'ದ ಹಕ್ಕನ್ನು ನಿರಾಕರಿಸುವುದು ಮಾನವ ಹಕ್ಕುಗಳ ಉಲ್ಲಂಘನೆಯಲ್ಲವೇನು?

ಪ್ರಶ್ನೆ ಮತ್ತದರ ಪ್ರಸ್ತುತತೆ

ಇಷ್ಟೆಲ್ಲಾ ಯಾಕೆ ತಲೆ ಕೆಡಿಸಿಕೊಳ್ಳಬೇಕು, ನಾವೆಲ್ಲಾ ಸಾಫ್ ಸೀದಾ ಮನುಷ್ಯರಪ್ಪಾ, ನಮಗೆ ಬಚ್ಚಿಡುವಂಥಾದ್ದು ಏನೂ ಇಲ್ಲ ಎಂದು ಹುಂಬ ವಾದವನ್ನು ಹೂಡುವ ಮುನ್ನ ಮತ್ತೊಮ್ಮೆ ಯೋಚಿಸಬೇಕಾಗುತ್ತದೆ. ಮನೆಗೆ ಗೂಡು ಎಂದೂ ಸಹ ನಾವು ಕರೆಯುತ್ತೇವೆ. ಮನೆ ಎಂದಾಗ ನಮ್ಮ ಕಣ್ಣೆದುರಿಗೆ ಗಾಜಿನ ಮನೆ ಮೂಡುವುದಿಲ್ಲ, ಗಾಜಿನ ಮನೆಯಲ್ಲಿ ಬದುಕುವುದು, ಬೆತ್ತಲಾಗಿ ಓಡಾಡುವುದು ಎರಡೂ ಮೌಲ್ಯಗಳೇನೂ ಅಲ್ಲ, ಕಣ್ಗಾವಲೆನ್ನುವುದು ಸೆನ್ಸರೀಕರಣವೇ. ಈ ರೀತಿಯ ನಿಕಟ ಕಣ್ಗಾವಲು ಅಂತರ್ಜಾಲಕ್ಕೆ ಪ್ರವೇಶವನ್ನು ನಿರ್ಬಂಧಿಸುವುದಕ್ಕಿಂತಲೂ ಘೋರವಾಗಿರುತ್ತದೆ. ಅಂತಹ ಕಣ್ಗಾವಲಿನಲ್ಲಿ ಮೈಮರೆತು ಹೆಜ್ಜೆ ಹಾಕುವುದು, ನಮ್ಮದೇ ತಾಳ, ಲಯಗಳನ್ನು ರೂಪಿಸಿಕೊಳ್ಳುವುದು ಅಸಾಧ್ಯವಾಗುತ್ತದೆ. ಸೃಷ್ಟಿಶೀಲತೆಗೆ ಪೆಟ್ಟು ಬೀಳುತ್ತದೆ. ಪ್ರತಿರೋಧ ಪಲಾಯನ ಮಾಡುತ್ತದೆ. ಪ್ರಜಾತಾಂತ್ರಿಕತೆ ಕುಸಿಯುತ್ತದೆ. ಅರಬ್ ಲೋಕದಲ್ಲಿ ನಡೆದ ವಸಂತ ಮಾಸದ ಚಳವಳಿಯಂತ ಘಟನೆಗಳು ನಡೆಯುವುದೇ ಇಲ್ಲ. ನಾವೆತ್ತುವ ಪ್ರತಿರೋಧದ ಪ್ರತಿಯೊಂದು ಸೊಲ್ಲು ಹುಟ್ಟಡಗಿ ಹೋಗುತ್ತದೆ.

ಅಂತರ್ಜಾಲದಲ್ಲಿ ನೀವು ಹಂಚಿಕೊಳ್ಳುವ ಮಾಹಿತಿಗೆ ನೀವೇ ಹಕ್ಕುದಾರರಲ್ಲದಿದ್ದರೆ, ನಿಮ್ಮ ಮೇಲೆ ಗೂಢಚಾರಿಕೆ ಮಾಡಲು ಸರಕಾರವೋ, ದೊಡ್ಡಣ್ಣನೋ ಅದನ್ನು ಬಳಸಿಕೊಳ್ಳುವುದಾದರೆ ಆ ಮಾಹಿತಿಯನ್ನು ಹಂಚಿಕೊಳ್ಳಬೇಕೆ ಎಂಬ ಪ್ರಶ್ನೆ ಬರುವುದಿಲ್ಲವೆ? ಯಾಕೆಂದರೆ ಕಣ್ಗಾವಲೆನ್ನುವುದು ಬರೀ ತನಿಖೆಯಲ್ಲ. ಕಾಲಿದ್ದರೂ ನಡೆಯದಂತೆ ಹೆಳವರನ್ನಾಗಿಸುವ ಮಹಾನ್ ಹುನ್ನಾರ ಅದು.

ಆ ಹುನ್ನಾರದಲ್ಲಿ ಭಾರತ ಸರಕಾರದ ಪಾಲೆಷ್ಟು ಎಂದು ಪ್ರಜೆಗಳು ಕೇಳುವುದು ಸರ್ವಥಾ ತಪ್ಪಂತೂ ಅಲ್ಲ.

● ಹರಿಶಂಕರ್

<<<

... ಆಗಿದ್ದು, ಈ ಘಟನೇನೇ ನಮ್ಮೂರಿನ ಹೋರಾಟಕ್ಕೆ ... ಆಗ್‌ಬಿಟ್ಟು."

...ಇಷ್ಟು ಹೇಳಿ ಭಗವಾನ್ ಮೌನವಹಿಸಿದ. ಬಹುಶಃ ಅವನ ...ಎದೆ ಅಂದಿನ ಚಿತ್ರ ಸುಳಿದಿರಬೇಕು. ಇತರರೂ ಮಾತು ...ಡಲಿಲ್ಲ, ಆದಾಗಲೇ ಅವರ ಹಳ್ಳಿಗೆ ... ತಯಾರಿಕೆಯ ದೊಡ್ಡ ಘಟಕ ...ವಾಗಿದ್ದನ್ನು ನೋಡಿದ್ದು ನೆನಪಾಯ್ತು, ಹೀಗಾಗಿ ... ಅವರ ಶರಣಾಗತಿಯ ಸೂಚಕವಿರಬೇಕು ...ಕೊಂಡೆ.

"ಹೋರಾಟಕ್ಕೆ ನಾಂದಿ ಅಂತೀರಿ. ಇಲ್ಲಿ ನೋಡಿದ್ರೆ ... ಕಾರ್ಖಾನೆ ತಲೆ ಎತ್ತಿದೆ?"

"... ಹೇಳ್ತೀನಿ ಕೇಳಿ. ಅದಕ್ಕೆ ಹಿಂದಿನ್ ... ನಾವ್ ... ಹೋರಾಟ ಅದೇ ಆಗ ಹುಟ್ಟಿತ್ತು. ಯಾರ್ಯಾರೋ ರಾಜಕೀಯ ಮುಖಂಡ್ರು ಬಂದ್ರು. ಕಂಪ್ನಿಯವ್ರು ಬಂದ್ರೆ ನಮ್ ಮನೆ-ಮಠ, ಜಮೀನು, ಬೆಳೆದ ಬೆಳೆ, ಅಷ್ಟೇ ಯಾಕೆ, ನಮ್ ಊರೇ ನಾಶ ಆಗತ್ತೆ ಅಂತ ನಮ್ಗೆ ತಿಳಿಹೇಳಿದ್ರು. ನಾವೋ ಮಣ್ಣಿನ್ ಮಕ್ಳು. ಅದೇ ಕೈಬಿಟ್ ಹೋದ್ರೆ ಬದುಕೋದ್ ಹ್ಯಾಗೆ ಅಂತ ನಮ್ ಹಿರೀರೆಲ್ಲ ಒಗ್ಗಟ್ಟಾದ್ರು. ಮರುದಿನ ಮಾಡಿಕೊಂಡ್ ತೀರ್ಮಾನದಂತೆ ಕಂಪೆನಿ ಕೆಲ್ಸಗಾರ್ರ ಮೇಲೆ ದಿಢೀರನೆ ದಾಳಿ ಮಾಡಿ, ಕೈಲಿದ್ದ ಕೋಲು, ಕತ್ತಿ ಹಿಡ್ಕೊಂಡು ಅವ್ರನ್ನ ಓಡಿಸಿಕೊಂಡು ಹೋದ್ರು. ಅಲ್ಗೆ ಕಂಪೆನಿಯವರ ಕತೆ ಮುಗೀತು ಅಂದ್ಕೊಂಡಿದ್ವಿ. ಆದ್ರೆ ಮರುದಿನ ನಮ್ಮವ್ರ ಮೇಲೆಲ್ಲ ಕಂಪೆನಿಯವ್ರು ಕೇಸ್ ಹಾಕಿ, ಅರೆಸ್ಟ್ ಮಾಡ್ಸಿದ್ರು. ನಮ್ಮವ್ರೂ ಕಮ್ಮಿ ಇಲ್ಲ, ಒಟ್ಟಿಗೆ ಪೊಲೀಸ್ ಸ್ಟೇಷನ್ನೇ ನುಗ್ಗಿ, ದಾಂಧೆ ಮಾಡಿ ನಮ್ಮವ್ರನ್ನ ಬಿಡಿಸ್ಕೊಂಡು ಬಂದ್ರು. ದಿನಾ ನಾವ್ ಸೇರಿ ಮೀಟಿಂಗ್ ಮಾಡೋದು, ಕಂಪ್ನಿ ಕಡೆಯವ್ರು ಯಾರ್ನೇ ಕಂಡ್ರೂ ಓಡ್ಸೋದು ಮಾಡ್ತಿದ್ವಿ. ಇದನ್ನ ಯಾರೋ ಪೇಪರ್‌ಗೆ ಬರೆದ್ರಂತೆ. ಆ ಸುದ್ದಿ ಓದಿ, ನಮ್ಗೆ ಸಹಾಯ ಮಾಡ್ಬೇಕಂತ ಕೆಲವ್ರು ಇಲ್ಲಿಗೆ ಬಂದ್ರು. ಈ ದೇವಾ ಸರ್, ರವಿ ಸರ್ ಹೀಗೆ ಕೆಲವ್ರು ಬಂದು, ನಮ್ಗೆ ತಿಳಿವಳಿಕೆ ನೀಡಿದ್ರು; ಹೋರಾಟ ಹ್ಯಾಗೆ ಮಾಡ್ಬೇಕು ಅಂತ ತಿಳಿಸಿ ಕೊಟ್ರು, ನಮ್ ಜೊತೆ ಒಟ್ಟಾಗಿ ನಿಂತು, ಬರಿಗಾಲಲ್ಲಿ ಹಳ್ಳಿ ತಿರುಗಿ ಜನನ್ನ ಒಟ್‌ಗೂಡಿಸಿದ್ರು. ಅದೆಲ್ಲ ದೊಡ್ಡ ಕತೆ."

"ನಿಮ್ ವಿರೋಧ ನೋಡಿ ಕಂಪೆನಿಯವ್ರು, ಸರಕಾರ್‌ದವ್ರು ಹಿಂದೆ ಸರಿದ್ರಾ? ಮತ್ತೆ ಈಗ ಅಲ್ಲಿ ಬರೋವಾಗ ಇತ್ತಲ್ಲ ಆ ಕಂಪೆನಿ.....?"

"ಅದರಲ್ಲಿ ಬಿಟ್‌ಬಿಡ್ತಾರೆ? ಸೀತಾಪಹರಣಕ್ಕೆ ರಾವಣ ವೇಷ ತೊಟ್ಟಂತೆ ಅವ್ರು ಬೇರ್ಬೇರೆ ಆಟ ಕಟ್ಟಿದ್ರು."

ಅಷ್ಟರಲ್ಲಿ ಸುಮಿತ್ರಾ, ದೊಡ್ಡ ತಂಬಿಗೆಯಲ್ಲಿ ಬಿಸಿಬಿಸಿ ಚಹ ಮಾಡಿ ತಂದಿಟ್ಟರು. ಚಹಾ ಅಂದರೆ ಶುಂಠಿ ಹಾಕಿ ಮಾಡಿದ ಕಪ್ಪು ಚಹಾ. ಆದಿವಾಸಿಗಳ ಯಾರ ಮನೆಗೆ ಹೋದರೂ ಕಪ್ಪು ಚಹಾದ ಆತಿಥ್ಯವೇ! ಹತ್ತಿರದಲ್ಲಿ ಎಲ್ಲೂ ಹಾಲಿನ ಡೈರಿಗಳು ಇಲ್ಲದ್ದಕ್ಕೆ, ಹೀಗೇನೋ ಎಂದುಕೊಳ್ಳುವಂತಿಲ್ಲ, ಆದಿವಾಸಿಗಳು ದನ-ಕರುಗಳನ್ನು ಸಾಕುವವರೇ. ಹೈನಿದ್ದೂ ಅಲ್ಲಿ ಹಾಲಿಗೆ ತಾತ್ಸಾರ! ಯಾಕೆ ಹೀಗೆ? ನನ್ನ ಪ್ರಶ್ನೆಗೆ ಸುಮಿತ್ರಾ "ದನದ ಹಾಲು ಕರುವಿಗೆ ಮೀಸಲು. ಅದನ್ನು ನಮಗೆ ಬಳಸುವುದು ಹ್ಯಾಗೆ" ಎಂದು ಹೇಳಿದ್ದು ಕೇಳಿ ಇನ್ನೂ ಅಚ್ಚರಿ. ಹೈನೋದ್ಯಮ, ಕ್ಷೀರಕ್ರಾಂತಿ ಎಂಬ ನಾಗರಿಕ ಜಗತ್ತಿನ ಅರ್ಥವ್ಯವಸ್ಥೆ ಚಿಂತನಾಕ್ರಮ ಈ ಆದಿವಾಸಿಗಳ ಲೋಕದೃಷ್ಟಿಯಲ್ಲಿ ಅಪಮಾರ್ಗದ ಸಂಪಾದನೆ! ಅಲ್ಲಿನ ಚಳಿಗೆ ಶುಂಠಿ ಹಾಕಿ ಮಾಡಿದ ಕಪ್ಪು ಚಹಾ ತುಂಬ ಹಿತವಾಗಿತ್ತು.

(ಮುಂದುವರೆಯುವುದು)

ಬಹಿಷ್ಕಾರಗೊಂಡ ಸಾವಿತ್ರಿ ಮತ್ತು 64 ಪುರುಷರು

ಬಂಡಾಯವೆದ್ದ ಮಹಿಳೆಯ ಕಥೆ 3

• ಗೌರಿ ಲಂಕೇಶ್

ಸಾವಿತ್ರಿಯ ಸ್ಮಾರ್ಥವಿಚಾರಣೆಯು ಬರೋಬ್ಬರಿ ಏಳು ತಿಂಗಳ ಕಾಲ ನಡೆಯಿತು. ಆಕೆ ಕೇರಳದ ಕರಾವಳಿಯ ಉದ್ದಗಲಕ್ಕೂ ಪ್ರೇಮಿಗಳನ್ನು ಹೊಂದಿದ್ದರಿಂದ ಮೂರು ವಿವಿಧ ಕಡೆಗಳಿಗೆ ವಿಚಾರಣೆಯನ್ನು ಸ್ಥಳಾಂತರಿಸಲಾಯಿತು. ಆ ಎಲ್ಲ ಕಡೆಗಳಲ್ಲಿ ಆಕೆಯನ್ನು ನಿಯಮದಂತೆ ಇತರರಿಂದ ಪ್ರತ್ಯೇಕಿಸಿ ಇಡಲಾಗಿತ್ತು. ಹೀಗೆ ತಿಂಗಳಾನುಗಟ್ಟಲೆ ಕಾಲ ತನ್ನ ನಾಯರ್ ದಾಸಿಯ ಹೊರತಾಗಿ ಬೇರೆ ಯಾರನ್ನೂ ನೋಡದೆ, ಮಾತನಾಡಿಸದೆ ಇದ್ದರೂ ಸಾವಿತ್ರಿ ಧೃತಿಗೆಡಲಿಲ್ಲ. ಬದಲಾಗಿ ಆಕೆ ಪ್ರತಿ ವಿಚಾರಣೆಯ ಸಂದರ್ಭದಲ್ಲೂ ಸಮಚಿತ್ತದಿಂದ ಪ್ರಶ್ನೆಗಳಿಗೆ ಉತ್ತರಗಳನ್ನು, ಸಾಕ್ಷಿ ಪುರಾವೆಗಳನ್ನು ನೀಡುತ್ತಿದ್ದಳು. ಹೇಗಿದ್ದರೂ ಆಕೆ ಹಲವಾರು ವಿಟಪುರುಷರ ಮೇಲೆ ಹಲವು ವರ್ಷಗಳಿಂದ ನಿಯಂತ್ರಣವನ್ನು ಸ್ಥಾಪಿಸಿದ್ದ ಬುದ್ಧಿವಂತೆಯೂ, ಸುಂದರಿಯೂ ಆಗಿದ್ದರಿಂದ ಯಾವ ಸಮಸ್ಯೆಯನ್ನೂ ಎದುರಿಸಲು ಆಕೆಗೆ ಕಷ್ಟವಾಗಲಿಲ್ಲ.

ಖ್ಯಾತ ವಿದ್ವಾಂಸರ, ಸಂಗೀತಗಾರರ, ಕಥಕ್ಕಳಿ ನೃತ್ಯಗಾರರ ಮತ್ತು ಸಮಾಜದ ಗಣ್ಯರ ಹೆಸರುಗಳನ್ನು ಹಾಗು ಅವರೆಲ್ಲರ ಬಗ್ಗೆ ತನ್ನಲ್ಲಿದ್ದ ಸಾಕ್ಷಿಗಳನ್ನು ಸಾವಿತ್ರಿ ಹೊರಗೆಡವುತ್ತಾ ಹೋದಂತೆ ಇಡೀ ಕೊಚ್ಚಿ ರಾಜ್ಯದ ಪ್ರತಿ ಪ್ರತಿಷ್ಠಿತ ಮನೆಯನ್ನು ಆತಂಕ ಆವರಿಸಿತು. ಅದು ಯಾವ ಮಟ್ಟಕ್ಕೆ ಹೋಯಿತೆಂದರೆ ಅವರೆಲರೂ ಕೊಚ್ಚಿ ರಾಜನ ಮೇಲೆ ಒತ್ತಡ ತರಲಾರಂಭಿಸಿದರು. ಅಷ್ಟರ ಹೊತ್ತಿಗೆ ಸಾವಿತ್ರಿ 64 ಜನರ ವಿರುದ್ಧ ಸಾಕ್ಷಿಗಳನ್ನು ನೀಡಿದ್ದಳು. ಆಗ ಕೊಚ್ಚಿ ರಾಜ ಸಾವಿತ್ರಿಯ ವಿಚಾರಣೆಯನ್ನು ನಿಲ್ಲಿಸಬೇಕೆಂದು ಆಜ್ಞೆ ನೀಡಿದನು. ಇದರಿಂದ ಪ್ರತಿಷ್ಠರಿಗೆ ನೆಮ್ಮದಿಯಾದರೂ ಸಾಮಾನ್ಯರು "ಸಾವಿತ್ರಿಯ ಬಾಯಿಯಿಂದ ಹೊರಬೀಳಲಿದ್ದ 65ನೇ ಹೆಸರು ಕೊಚ್ಚಿ ಮಹಾರಾಜನದ್ದೇ ಆಗುತ್ತಿದ್ದರಿಂದ ವಿಚಾರಣೆಯನ್ನು ನಿಲ್ಲಿಸಲಾಯಿತು" ಎಂದು ಕುಹಕವಾಡಿದ್ದರು.

ಸಾವಿತ್ರಿಯ ಸ್ಮಾರ್ಥವಿಚಾರಣೆಯ ಜವಾಬ್ದಾರಿಯನ್ನು ಹೊತ್ತಿದ್ದ ಜಥವೇದನ್ ನಂಬೂದರಿಯವರು 1905ರ ಜುಲೈ 13ರಂದು ತಮ್ಮ ತೀರ್ಪನ್ನು ನೀಡಿದರು. ಅದರಂತೆ ಸಾವಿತ್ರಿಯನ್ನಲ್ಲದೆ ಆಕೆಯೊಂದಿಗೆ ಅಕ್ರಮ ಲೈಂಗಿಕ ಸಂಬಂಧ ಹೊಂದಿದ್ದ 30 ನಂಬೂದರಿಗಳು, 10 ಐಯ್ಯರ್‌ಗಳು (ತಮಿಳು ಬ್ರಾಹ್ಮಣರು), 13 ಅಂಬಲವಾಸಿಗಳು (ದೇವಸ್ಥಾನಗಳ ಗರ್ಭಗುಡಿಯನ್ನು ನೋಡಿಕೊಳ್ಳುತ್ತಿದ್ದ ಸಮುದಾಯದವರು), ಹನ್ನೊಂದು ನಾಯರ್ ಸಮುದಾಯದ ಪುರುಷರ ವಿರುದ್ಧವೂ ಸಾಮಾಜಿಕ ಬಹಿಷ್ಕಾರವನ್ನು ಘೋಷಿಸಲಾಯಿತು. ಶಿಕ್ಷೆಗೆ ಗುರಿಯಾದವರಲ್ಲಿ ನ್ಯಾಯಾಧೀಶ ಜಥವೇದನ್ ಅವರ ಇಬ್ಬರು ಸಹೋದರರೂ ಇದ್ದರು.

ಈ 64 ಪುರುಷರಲ್ಲದೆ ಸಾವಿತ್ರಿ ಇನ್ನೂ ನಾಲ್ವರ ವಿರುದ್ಧ ಸಾಕ್ಷಿಗಳನ್ನು ನೀಡಿದ್ದರೂ ಅವರು ಶಿಕ್ಷೆಯಿಂದ ಬಚಾವಾದರು. ಯಾಕೆಂದರೆ ಅವರಲ್ಲಿ ಒಬ್ಬ ಸಾವಿತ್ರಿಗೆ ತನ್ನ ಬಗ್ಗೆ ಬೇಕಂತಲೇ ತಪ್ಪು ಮಾಹಿತಿಯನ್ನು ನೀಡಿದ್ದರಿಂದ ಆತನನ್ನು ಪತ್ತೆಹಚ್ಚಲಾಗಲಿಲ್ಲ. ಹಾಗೆಯೇ ಇನ್ನೊಬ್ಬ ಮುಸಲ್ಮಾನನಾಗಿದ್ದು ಹಿಂದೂಗಳ ಮೇಲೆ ನಂಬೂದರಿ ಬ್ರಾಹ್ಮಣರು ನಡೆಸುತ್ತಿದ್ದ ಸಾಮಾಜಿಕ ಸವಾರಿ ಆ ಸಮುದಾಯದವರಿಗೆ ಅನ್ವಯಿಸುತ್ತಿರಲಿಲ್ಲವಾದ್ದರಿಂದ ಆತನ ವಿರುದ್ಧ ಯಾವ ಕ್ರಮವನ್ನೂ ತೆಗೆದುಕೊಳ್ಳಲಾಗಲಿಲ್ಲ. ಜೊತೆಗೆ ವಿಚಾರಣೆ ಅಂತ್ಯಗೊಳ್ಳುವ ಮುನ್ನ ಇನ್ನೂ ಇಬ್ಬರು ಅಂಬಲವಾಸಿ ಸಮುದಾಯದವರು ನಿಧನ ಹೊಂದಿದ್ದರಿಂದ ಅವರ ವಿರುದ್ಧವೂ ಶಿಕ್ಷೆಯನ್ನು ಜಾರಿ ಮಾಡಲಾಗಲಿಲ್ಲ. ಒಟ್ಟು ಈ 68 ಪುರುಷರಲ್ಲದೆ ಇನ್ನೂ ಬೇರೆಯವರು ಆಕೆಯೊಂದಿಗೆ ಸಂಬಂಧ ಹೊಂದಿದ್ದರೆ ಎಂಬ ಪ್ರಶ್ನೆಗೆ



ಉತ್ತರ ಸಾವಿತ್ರಿಗೆ ಮತ್ತು ಆಕೆಯೊಂದಿಗೆ ಸಂಬಂಧ ಹೊಂದಿದ್ದ ಪುರುಷರಿಗೆ ಮಾತ್ರ ಗೊತ್ತಿತ್ತು.

ಈ ತೀರ್ಪು ಹೊರಬಿದ್ದನಂತರ ವಿಚಾರಣೆಯ ಮುಂದಿನ ಕಾರ್ಯಕ್ರಮ ನಡೆಯಿತು. ಅದು ಸಾವಿತ್ರಿಯ ಅಂತ್ಯಸಂಸ್ಕಾರ. ಆಕೆ ಇನ್ನೂ ಬದುಕಿದ್ದರೂ ಆಕೆಯ ತಿಥಿಯನ್ನು ಆಚರಿಸುವ ಮೂಲಕ ಆಕೆಯನ್ನು ನಂಬೂದರಿ ಸಮುದಾಯದಿಂದಲೇ ಹೊರಹಾಕಲಾಯಿತು. ನಿಯಮದಂತೆ ಆಕೆಯಿಂದ ಎದೆಯನ್ನು ಮುಚ್ಚುತ್ತಿದ್ದ ವಸ್ತ್ರವನ್ನು ಹಿಂದೆ ಪಡೆಯಲಾಯಿತು. ಜೊತೆಗೆ ಆಕೆ ಇನ್ನು ಮುಂದೆ ನಂಬೂದರಿ ಮಹಿಳೆಯರು ತಮ್ಮ ಮುಖವನ್ನು ಮುಚ್ಚಲು ಬಳಸುತ್ತಿದ್ದ ಚತ್ರಿಯನ್ನು ಬಳಸಬಾರದೆಂದು ಕಟ್ಟಾಜ್ಞೆಯನ್ನು ಹೊರಡಿಸಲಾಯಿತು.

ಶಿಕ್ಷೆಗೆ ಗುರಿಯಾದ 64 ಪುರುಷರಲ್ಲಿ ಅನೇಕರು ಗಣ್ಯಾತಿಗಣ್ಯರಿದ್ದು ಅವರೆಲ್ಲ ಅವಹೇಳನಕ್ಕೆ ಗುರಿಯಾದ್ದರಿಂದ ಕೇರಳದ ಸಾಂಸ್ಕೃತಿಕ ಕ್ಷೇತ್ರದ ಮೇಲೆ ದೊಡ್ಡ ಪರಿಣಾಮ ಬೀರಿತು. ಶಂಕರ ಪಣಿಕ್ಕರ್, ಮಾಧವನ್ ನಾಯರ್, ಗೋವಿಂದನ್ ನಂಬಿಯಾರ್, ಅಚ್ಯುತ ಪೊಡುವಲ್ ಎಂಬ ಖ್ಯಾತ ಕಥಕಳಿ ನೃತ್ಯಗಾರರೂ ಸಾವಿತ್ರಿಯ ಪ್ರಿಯಕರರಾಗಿದ್ದು ಅವರೆಲ್ಲ ತಮ್ಮ ಮನೆ ಮತ್ತು ವೃತ್ತಿಯನ್ನು ತೊರೆಯಬೇಕಾಯಿತು. ಇತರರೂ ತಮ್ಮ ಮನೆಗಳಿಂದ ಉಚ್ಚಾಟಿಸಲ್ಪಟ್ಟರು ಮತ್ತು ಅವರಲ್ಲಿ ಹಲವರು ತಮ್ಮ ಕೊನೆ ದಿನಗಳವರೆಗೆ ಇತರರಿಂದ ಭಿಕ್ಷೆ ಬೇಡುತ್ತಾ ಬದುಕಿದ್ದರು. ಇವೆಲ್ಲ ಕಾರಣಕ್ಕೆ ಕೊಚ್ಚಿ ರಾಜನು ಇನ್ನು ಮುಂದೆ ಸ್ಮಾರ್ಥ ವಿಚಾರಣೆಗಳು ನಡೆದು ಗಣ್ಯರ ಮಾನ ಹರಾಜಾಗಬಾರದೆಂದು ಅಂತಹ ವಿಚಾರಣೆಗಳಿಗೆ ಅಧಿಕ ಮೊತ್ತವನ್ನು ನಿಗದಿ ಮಾಡಿದನು.

ಸಾವಿತ್ರಿ ಪ್ರಕರಣದ ತೀರ್ಪು ಹೊರಬೀಳುತ್ತಿದ್ದಂತೆ ಆಘಾತಗೊಂಡ ಸಾವಿತ್ರಿಯ ತಂದೆ ಆತ್ಮಹತ್ಯೆ ಮಾಡಿಕೊಂಡರು. ಆಕೆಯ ತವರಿನ ಮನೆಯ ಎಲ್ಲಾ ಸದಸ್ಯರು ಸಮಾಜದ ನಿಂದನೆಗೆ ಹೆದರಿ ಅರಂಗೋಡೆ ಗ್ರಾಮದಲ್ಲಿದ್ದ ತಮ್ಮ ಇಲ್ಲಂ ಅನ್ನೇ ತೊರೆದು ಓಡಿಹೋದರು.

ಇನ್ನು ಸಾವಿತ್ರಿಯ ಕತೆ ಏನಾಯಿತು?

ಸಾವಿತ್ರಿಗಾದ ದುರ್ಗತಿಗೆ ಕಣ್ಣೀರಿಟ್ಟ ಆಕೆಯ ದಾಸಿ ಮನ್ನನಾರ್ ಸಮುದಾಯದವರ ಆಶ್ರಯ ಪಡೆಯುವಂತೆ ಸಾವಿತ್ರಿಯನ್ನು ಬೇಡಿಕೊಂಡಳು. ಆಗಿನ ಕಾಲದಲ್ಲಿ ಮನ್ನನಾರ್ ಸಮುದಾಯದವರು ಬೌದ್ಧ ಧರ್ಮೀಯರಾಗಿದ್ದು ನಂಬೂದರಿಗಳ ಸಾಮಾಜಿಕ ನಿಯಮಗಳನ್ನು ಅವರು ಪಾಲಿಸುತ್ತಿರಲಿಲ್ಲ. ಅಷ್ಟೇ ಅಲ್ಲ, ಅವರಲ್ಲಿ ಕೆಲವರು ನಂಬೂದರಿ ಸಮುದಾಯದಿಂದ ಉಚ್ಚಾಟನೆಗೊಂಡಿದ್ದ ಮಹಿಳೆಯರನ್ನು ಮದುವೆ ಆಗುತ್ತಿದ್ದರು ಅಥವಾ ಸಹೋದರಿಯರೆಂದು ಸ್ವೀಕರಿಸುವ ಮೂಲಕ ಅಂತಹ ಮಹಿಳೆಯರಿಗೆ ರಕ್ಷಣೆ ನೀಡುತ್ತಿದ್ದರು. ಆದರೆ ಸಾವಿತ್ರಿಯು ಇಂತಹ ರಕ್ಷಣೆ ಪಡೆಯಲು ನಿರಾಕರಿಸಿದಳು.

ವಿಚಾರಣೆಯ ನಂತರ ಸಾವಿತ್ರಿಯನ್ನು ಚಲಕ್ಕುಡಿ ಎಂಬ ಗ್ರಾಮದ ಹತ್ತಿರ ಹರಿಯುತ್ತಿದ್ದ ನದಿಯ ದಂಡೆಯಲ್ಲಿದ್ದ ಮನೆಯಲ್ಲಿ ಬಂಧಿಸಿಡಲಾಗಿತ್ತು. ದಿನಗಳು ಕಳೆದಂತೆ ಆಕೆಯ ಬಗ್ಗೆ ಜನ ಕುತೂಹಲವನ್ನು ಕಳೆದುಕೊಂಡಿದ್ದರಿಂದ ಆಕೆ ಆನಂತರ ಏನಾದಳು ಎಂಬುದರ ಬಗ್ಗೆ ಯಾರಿಗೂ ಸ್ಪಷ್ಟವಾಗಿ ಗೊತ್ತಿಲ್ಲ.

ಆದರೆ ಹಲವರ ಪ್ರಕಾರ ಆಕೆ ಕೆಲ ವರ್ಷಗಳ ನಂತ... ರೈಲ್ವೆ ಇಲಾಖೆಯಲ್ಲಿ ಗ್ಯಾಂಗ್‌ಮನ್ ಆಗಿ ಕೆಲಸಮಾಡುತ್ತಿ... ಆಂಗ್ಲೋ ಇಂಡಿಯನ್ ಒಬ್ಬನೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಕೇರಳವನ್ನೇ ತೊರೆದು ಹೋದಳಲ್ಲದೆ ಆಕೆಗೆ 80 ವರ್ಷ ವಯಸ್ಸಾಗುವ ತನಕ ತಮಿಳುನಾಡಿ... ಕೊಯಂಬತ್ತೂರು ಹತ್ತಿರ ಅನಾಮಿಕಳಾಗಿ ಜೀವನ ನಡೆ... ಕೊನೆಯುಸಿರೆಳೆದಳು...


ಸಾವಿತ್ರಿ ಯಾಕೆ ಹೀಗೆಲ್ಲ ಮಾಡಿದಳು ಎಂಬ ಪ್ರ... ಇವತ್ತಿಗೂ ಜನರನ್ನು ಕಾಡುತ್ತದೆ. ಆಕೆಯ ಬದುಕು ಮತ್ತು ವಿಚಾರಣೆಯನ್ನು ಕುರಿತು ಮಲೆಯಾಳಂನಲ್ಲಿ ಹಲವು ಪುಸ್ತಕಗಳು, ನಾಟಕ ಮತ್ತು ಸಿನಿಮಾಗಳು ಮೂಡಿಬಂದಿವೆ. ಈಕೆಯ ಕತೆಯನ್ನಾಧರಿಸಿ ನಿರ್ಮಾಣಗೊಂಡ 'ಪರಿನಯಮ್' ಎಂಬ ಚಿತ್ರಕ್ಕೆ 1994ರಲ್ಲಿ 'ಅತ್ಯುತ್ತಮ ರಾಷ್ಟ್ರೀಯ ಚಿ... ಪ್ರಶಸ್ತಿ' ಲಭಿಸಿತ್ತು. ಹಾಗೆಯೇ 'ಪ್ರತಿಕರ ದೇವತಾ' (ಪ್ರತೀಕಾ... ದೇವತೆ) ಎಂಬ ನಾಟಕದಲ್ಲಿ ಒಂದು ತರ್ಕವನ್ನು ಮಂಡಿಸಲಾಗಿದೆ. ಅದೇನೆಂದರೆ ಚಿಕ್ಕ... ಹುಡುಗಿಯಾಗಿರುವಾಗಲೇ ಮದುವೆಯಾಗಿ ತನ್ನ ಗಂಡನ ಮನೆಗೆ ಬಂದ ಸಾವಿತ್ರಿಯಿಂದ ಮುದಿ ಗಂಡನ ಕಾಮ... ತೃಷೆಯನ್ನು ತೀರಿಸಲಾಗುವುದಿಲ್ಲ. ಆಗ ಆತ ಓರ್ವ ವೇಶ್ಯೆಯನ್ನು ಮನೆಗೆ ಕರೆದುಕೊಂಡು ಬಂದು ಹೆಂಡತಿಯ ಮುಂದೆಯೇ ಆಕೆಯನ್ನು ಕಾಮಿಸುತ್ತಾನೆ. ಅಷ್ಟೇ ಅಲ್ಲ "ನಿನ್ನ ಗಂಡನಿಗೆ ಲೈಂಗಿಕ ಸುಖ ಕೊಡುವ ಆಸೆ ನಿನಗಿದ್ದರೆ ನೀನೂ ವೇಶ್ಯೆಯಾಗಿ ಆಕೆಯಂತೆ ನನಗೆ ತೃಪ್ತಿ ನೀಡು" ಎನ್ನುತ್ತಾನೆ. ಅದನ್ನೇ ಸವಾಲಾಗಿ ಸ್ವೀಕರಿಸುವ ಸಾವಿತ್ರಿ ವೇಶ್ಯೆಯಾಗಿ ಖ್ಯಾತಿ ಮತ್ತು ಕುಖ್ಯಾತಿಗಳನ್ನು ಗಳಿಸುತ್ತಾಳೆ. ಕೊನೆಗೊಂದು ದಿನ ತನ್ನನ್ನು ಅವಮಾನಿಸಿದ್ದ ಗಂಡನನ್ನೇ ತನ್ನಲ್ಲಿಗೆ ಕರೆಸಿಕೊಂಡು ತನ್ನ ಗುಟ್ಟು ರಟ್ಟಾಗುವಂತೆ ಮಾಡುವ ಮೂಲಕ ತನ್ನ ಗಂಡನ ಮತ್ತು ತನ್ನ ನಂಬೂದರಿ ಸಮುದಾಯದಲ್ಲಿ ಮಹಿಳೆಯರಿಗಾಗುತ್ತಿದ್ದ ಅನ್ಯಾಯಕ್ಕೆ ಸೇಡು ತೀರಿಸಿಕೊಳ್ಳುತ್ತಾಳೆ...

ಆದರೆ ನಿಜಜೀವನದಲ್ಲಿ ಸಾವಿತ್ರಿ ಮಾತ್ರ ತಾನು ಯಾಕೆ ಹೀಗೆ ಮಾಡಿದೆ ಎಂಬುದರ ಬಗ್ಗೆ ಎಂದೂ ಬಾಯಿಬಿಡಲಿಲ್ಲವಾದ್ದರಿಂದ ಆಕೆಯ ವರ್ತನೆಯ ಹಿಂದಿದ್ದ ಕಾರಣಗಳನ್ನು ವಿವಿಧ ರೀತಿಯಲ್ಲಿ ತರ್ಕಿಸಬಹುದಷ್ಟೇ...

(ಸಾವಿತ್ರಿಯ ಸ್ಮಾರ್ಥವಿಚಾರಣೆಯ ದಾಖಲೆಗಳು ಮತ್ತು ಶಿಕ್ಷೆಗೆ ಗುರಿಯಾದ ಪುರುಷರ ವಿವರಗಳು ಇವತ್ತಿಗೂ ಎರ್ನಾಕುಲಂನಲ್ಲಿರುವ ಕೇಂದ್ರ ಪತ್ರಾಗಾರ ಇಲಾಖೆಯಲ್ಲಿವೆ)

(ಮುಂದುವರೆಯುವುದು)

ನಾವು ಗೋವುಗಳಲ್ಲ



ಬೆಳ್ಳಗಿರುವುದೆಲ್ಲ ಹಾಲಲ್ಲ
ಎಂದು
ಯಾರು ಹೇಳಿದರೋ
ಗೊತ್ತಿಲ್ಲ ;
ಆದರೆ
ಬಿಳಿ ಆಕಳ ಮೈಮೇಲೆಲ್ಲ
ದೇವಾನುದೇವತೆಗಳು
ಅಡರಿ ಕುಳಿತಿರುವುದು
ಸುಳ್ಳಲ್ಲ.

ಕಾಮಧೇನು ಎಂದೇನೋ
ಅದಕೆ ಹೆಸರಿದೆಯಾದರೂ
ಕರೆದುಕೊಂಡರೆ ಕೊಟ್ಟೀತು
ಒಂದು ಚೊಂಬುಹಾಲು ;
ಅದನು ಬಿಟ್ಟರೆ ಕೊಟ್ಟುದಕೆ
ಸಾಕ್ಷಿ ಇಲ್ಲ ಮತ್ತೇನೂ.


ಆದಿದೇವ ಅದನು ಕಾದ
ಕದಿಯಲೋದ ಸುಯೋಧನ
ಗಾಂಡೀವಿ ಎದುರು
ಸೋತು ಹೋದ ;
ಅದಕಾಗಿ
ಸದಾ ಕದನವಿದೆ
ಎಂಬುದಕೆ ಸಾಕ್ಷಿಯಾದ.

ಬೆಳ್ಳಂಬೆಳಗ್ಗೆ ಎದ್ದು
ಹೊಲಕೋಗಿ ಹಸಿಹುಲ್ಲು
ತಂದು ಹಾಕದವರು
ಅದರ ಉಚ್ಚೆ ಸಗಣಿ
ಬಾಚದವರು
ಗಂಜಲ ಪರಿಶುದ್ಧವೆಂದರು.
ಕೆನೆಹಾಲಿನಾಸೆಗೋ
ಹಸಿಬೆಣ್ಣೆಯಾಸೆಗೋ
ಅದು
ಪೊರೆಯದವರ ಮಾತೆ ;
ದೇವರ ಮನೆಯೊಳಗೆ
ಅದಕೆ ಜಾಗವಿಲ್ಲದಿದ್ದರೂ
ಪೂಜಿಸುವುದಕೆ ಮಾತ್ರ
ಇದೆ ಫರ್ಮಾನು.

ಹಬ್ಬದಾ ಮಲೆಮಧ್ಯದೊಳಗೂ
ಆಗೊಲ್ಲವದು ಹುಲಿಗೆ ಮೇವು
ಪುಣ್ಯಕೋಟಿಯ ಮಾತಿನಲ್ಲೇ
ತರಬಲ್ಲದದು
ಹೆಬ್ಬುಲಿಗೆ ಸಾವು ;
ಏನು ಗುಟ್ಟೇ ತಾಯಿ
ಎಂದು ಕೇಳಿದರೆ
ಬಿಡಲೊಲ್ಲನು ಬಾಯಿ.

ಅದರ ಕರುವಿಗೆ ಮಮ್ಮಲ
ಮರುಗುವವರು
ನಮ್ಮ ಕರುವಿಗೆ
ಕರಗಲಾರರು ;
ಅದರಂತೆಯೇ
ನಾವೂ ತಿಂದರೂ
ಅದೇ ಮೇವು
ಆಗುವುದಿಲ್ಲ ನಾವು
ಗೋವು.

ಯಾಕಂದರೆ ನಮ್ಮದು
ಕರಿಯ ಮೈಬಣ್ಣ
ಅದಕೆ ಕರಿತಾರೆ ನಮ್ಮನ್ನು
ಕುರಿ ಎಮ್ಮೆ ಕೋಣ ;
ವಿನಾ ತೆಗೆದರೂ
ನಮ್ಮ ಪ್ರಾಣ ;
ಚಿಂತೆ ಮಾಡಲ್ಲ
ಬಿಳಿ ಮಾತಿನ
ಕರೀ ಮನಸಿನ
ಈ ಜನ.



■ ಕೆ.ಎಂ.ಗಂಗಾಧರಪ್ಪ

ಅದ್ವಾನಿ ಮತ್ತ ಚೆಡ್ಡಿ ಇಕ್ಕಿದರಂತಲ್ಲಾ!

ಥೂತ್ತೇರಿ

▸ ಯಾಹೂ


ಹಲವಾರು ಗಿರಾಕಿ ಅದ್ವಾನೀಜಿಯವರ ಅವತಾರಗಳೆಲ್ಲಾ ುಗಿದು, ಊರು ಹೋಗು ಕಾಡು ಬಾ ಎನ್ನುತ್ತಿದೆ ಬ ಹಂತ ತಲುಪಿದ್ದನ್ನು ಗ್ರಹಿಸಿದ ಚೆಡ್ಡಿಗಳು "ಇನ್ನು ಮುದುಕನನ್ನು ಕಟ್ಟಿಕೊಂಡು ಮುಂದುವರಿದಿದ್ದಾದರೆ ಗ್ರ ಹಿಂದೂಗಳ ಓಟು ಒಂದೂ ಬರುವುದಿಲ್ಲ" ಎಂದು ರ್ಧರಿಸಿ ಗುಜರಾತಿನ ನರಹಂತಕನನ್ನು ರೆಸತೊಡಗಿದವಂತಲ್ಲಾ. ಇದರಿಂದ ಸಿಟ್ಟಾದ ದ್ವಾನಿಯವರು "ನಾನು ಇಲ್ಲದೇ ಇದ್ದರೆ ಈ ಬಿಜೆಪಿಗಳು ವರ್ ಹತ್ತಿರ ಬರದೆ ಪಾಪರ್‌ಗಳಾಗಿ ಹೋಗುತ್ತಿದ್ದರು. .ಪಿ. ಸಿಂಗನ ಮಂಡಲ ಮೀಸಲಾತಿ ಜಾರಿ ವಿರುದ್ಧ ಥಾರೂಢನಾಗಿ ಹೊರಟು, ಇಡೀ ದೇಶವನ್ನ ಸುತ್ತಿ ಂದಿರ ನಿರ್ಮಾಣಕ್ಕಾಗಿ ಸಂಕಲ್ಪ ಯಾತ್ರೆ, ಇಟ್ಟಿಗೆ ಯಾತ್ರೆ, ್ಯೋತಿ ಯಾತ್ರೆ, ಪಾದುಕೆ ಯಾತ್ರೆ ಎಂದೆಲ್ಲಾ ತಿರುಗಿದೆ. ನು ಮುಗ್ಧ ಹಿಂದೂಗಳನ್ನು ಮತಾಂಧರನ್ನಾಗಿ ಮಾಡಿದ್ದಕ್ಕೆ ಜೆಪಿ ಅಧಿಕಾರಕ್ಕೆ ಬಂದು ವಾಜಪೇಯಿ ಪ್ರಧಾನಿಯಾದರು. ಾಜಪೇಯಿ ಭಾಗಕ್ಕೆ ನಾನೇನೊ ಹನುಮಂತ. ಆದರೆ ಳಿದ ವಾನರ ಸೇನೆಗೂ ನಾನು ಹನುಮಂತನಾಗಲಾರೆ. ನು ಸನ್ಯಾಸಿಯಲ್ಲ, ನನಗೂ ಪ್ರಧಾನಿಯಾಗಬೇಕೆಂಬ ಸೆಯಿದೆ. ಒಬ್ಬ ದುರ್ಬಲ ಸಿಕ್ಕ, ಅದೂ ಜಕಾರಣಿಯಲ್ಲದವನು ಹತ್ತು ವರ್ಷ ಪ್ರಧಾನಿಯಾಗಿ ಷ್ಟ್ರವನ್ನ ಆಳಿ ಬಿಟ್ಟ. ಅಂತಾದ್ದರಲ್ಲಿ ನಾನು ಆಗಬಾರದೆ? ಸ್ಕಂಥವನ ಅಪೇಕ್ಷೆಯನ್ನ ಇನ್ನ ಯಾವ ರೂಪದಲ್ಲಿ ತ್ತರಿಸಬೇಕು" ಎಂದು ಕಾದು ಕಾದು ಸುಸ್ತಾದರಂತಲ್ಲಾ, ದರೆ ಯಾವಾಗ ನರಹಂತಕ ದೇಶವನ್ನ ಸುತ್ತುವ ಜವಾಬ್ದಾರಿ ೊತ್ತನೋ, ಆ ಕೂಡಲೇ ಅದ್ವಾನಿ ಯಾರಿಗೂ ಗೊತ್ತಿಲ್ಲದ ನಮಾನಗಳನ್ನು ತ್ಯಜಿಸಿದ್ದು ಅಲ್ಲದೆ, ಚೆಡ್ಡಿಯನ್ನು ಬಿಚ್ಚಿ ಸಿದರಂತಲ್ಲಾ. ಇದರಿಂದ ಬೆಚ್ಚಿ ಬಿದ್ದ ಚೆಡ್ಡಿಗಳು ಅದ್ವಾನಿ ನೆ ಹತ್ತಿರ ಹೋಗಿ ಜಮಾಯಿಸಿದರಂತಲ್ಲಾ. "ಅದ್ವಾನಿಜೀ ವು ಏನನ್ನಾದರೂ ತ್ಯಾಗ ಮಾಡಿ. ಆದರೆ ಚೆಡ್ಡಿಯನ್ನು ಾತ್ರ ತ್ಯಜಿಸಬೇಡಿ" ಎಂದು ಭಾಗವತ ಬೇಡಿಕೊಳ್ಳಲಾಗಿ, ದ್ವಾನೀಜಿ ಕಳೆದ ಶತಮಾನದಿಂದಲೂ ಇಕ್ಕಿದ್ದ ಕೂರೆ ಡ್ಡಿಯನ್ನೊಮ್ಮೆ, ಭಾಗವತನನ್ನೊಮ್ಮೆ ನೋಡಿ ಪ್ರಧಾನಿ ಟ್ಟವನ್ನು ಧ್ಯಾನಿಸುತ್ತಲೇ ಚೆಡ್ಡಿ ತೆಗೆದು ಇಕ್ಕಿಕೊಂಡು ಮಸ್ತೆ ಸದಾ ವತ್ಸಲೇ ಮಾತೃ ಭೂಮಿ" ಎನ್ನುತ್ತಲೇ ್ಗಮಿಸಿದರಂತಲ್ಲಾ, ಥೂತ್ತೇರಿ!

* * * *

ಸಿದ್ದು ಸಂಪುಟ ಸದ್ದಿಲ್ಲದೆ ಕಂಗೊಳಿಸುತ್ತಿರುವಾಗ, ಆ ಪುಟದೊಳಗಿದ್ದು ಮೆರೆಯಬೇಕಾಗಿದ್ದ ಕನಕಪುರದ ಗೊಡೆಯನಾದ ಡಿ.ಕೆ. ಶಿವಕುಮಾರ್ ಏನಾದರೆಂಬ ಹಿತಿ ಯಾರಿಂದಲೂ ಸಿಗುತ್ತಿಲ್ಲವಲ್ಲ, ಅವರಿಗೇ ಫೋನ್ ಾಡಿದರೆ ಹೇಗೆ ಎಂದು ನಂಬರಿಗಾಗಿ ಕೂಗು ಮಾರವ್ವನನ್ನು ಕೇಳಲಾಗಿ "ಡಿ.ಕೆ.ಸಿ. ನಂಬರ್ ಡಿಲೀಟ್ ಮಾಡಿ ಹತ್ತು ವರ್ಷಗಳ ಮೇಲಾಯ್ತು" ಎಂದಳಲ್ಲಾ, ಕಡೆಗೆ ಡಿ.ಕೆ.ಶಿ. ಆತ್ಮೀಯ ಶಿವರಾಮೇಗೌಡನಿಂದ ಪಡೆದು ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: "ನಿನಗ್ಯಾರಿದ್ದರೇನು ಸುಖವಿಲ್ಲ ಪ್ರಭುವೆ ದಾರಿ ಸುಖವಿಲ್ಲಾ..."

"ಹಲೋ ಯಾರ್ರೀ?"



"ನಾನು ಸಾರ್, ಯಾಹು ಅಂತ, ಪತ್ರಕರ್ತ."

"ಏನೇಳ್ರಿ."

"ಎಲ್ಲಿದ್ದಿರಿ ಸಾರ್?"

"ನಾನೆಲ್ಲಾದ್ರು ಇರತಿನಿ. ಫೋನ್ ಮಾಡಿದ್ದು ಯಾಕೆ ಹೇಳ್ರಿ."

"ಸಿದ್ದು ಸಂಪುಟದಲ್ಲಿ ನಿಮ್ಮಂಥವರು ಇರಬೇಕಿತ್ತು ಸಾರ್."

"ಇರಬೇಕಿತ್ತು. ಅದನ್ನ ಹೈಕಮಾಂಡ್ ತಿಳಕೊಬೇಕಾಗಿತ್ತು. ತಿರುಬೋಕಿಗಳು ಹೇಳೊ ಚಾಡಿ ಮಾತ ಕೇಳಬಾರದಾಗಿತ್ತು."

"ತಿರಬೋಕಿಗಳ ಮಾತ ಕೇಳೊ ತರ ಇದಿಯಾ ಸಾರ್ ಹೈಕಮಾಂಡು?"

"ಇನ್ನೇನ್ರಿ ಮತ್ತೆ, ಅದ್ಯಾರೊ ದೊರೆಸ್ವಾಮಿ ಮೂಗರ್ಜಿ ಬರದವ್ರುನೆ. ಆ ಹಿರೇಮಠ್ ಅನ್ನೊ ಇನ್ಯಾರೊ ಸುಳ್ಳು ದಾಖಲೆನೆ ಕಳಿಸಿದ್ನಂತೆ. ಇನ್ನು ಆ ವಿಶ್ವನಾಥ್ ಅನ್ನೊ ತರಲೆ ಹೋಗಿ ಚಾಡಿ ಹೇಳಿ ನನಿಗೆ ಅನ್ಯಾಯ ಮಾಡಿದ್ರು."

"ನ್ಯಾಯವಾಗಿದ್ದೊರಿಗೆ ಅನ್ಯಾಯ ಮಾಡಬಾರ್ದು. ನೀವು ತಿರುಗಿಬೀಳಬೇಕು. ಸಾರ್."

"ತಿರುಗಿ ಬೀಳದೇನು ದೊಡ್ಡದಲ್ಲ, ನಾನು ಸರಿಯಾದ ಸಮಯಕ್ಕಾಗಿ ಕಾಯ್ತಾಯಿದ್ದಿನಿ."

"ಯಾರ ವಿರುದ್ಧ ತಿರುಗಿ ಬೀಳ್ತಿರಿ ಸಾರ್?"

"ಅದ್ನೇ ಯೋಚನೆ ಮಾಡ್ತಾಯಿದ್ದಿನಿ."

"ನಿಜ ಸಾರ್. ವೈರಿ ಒಬ್ಬ ಆದ್ರೆ ಕೂಡ್ಲೆ ತಿರುಗಿ ಬೀಳಬಹುದು. ಹಲವಾರು ಜನ ಆದ್ರೆ ಯೋಚನೆ ಮಾಡಬೇಕಾದ್ದೆಯ."

"ಹಲವಾರು ಜನ ಇಲ್ಲ ಕಂಡ್ರೀ."

"ನನಿಗೆ ಗೊತ್ತಿರಂಗೆ ಸಾರ್ ನಿಮಗೆ ದೇವೇಗೌಡ್ರು ಕುಟುಂಬದ ಎಲ್ರೂ ವೈರಿಗಳು."

"ಆ ಕುಟುಂಬದೋರ್ಯಲ್ಲ ವೈರಿಗಳಲ್ಲ ಕಂಡ್ರಿ."

"ಅದೇ ನೀವು ತಪ್ಪು ತಿಳಕಂಡಿರೋದು. ದೇವೇಗೌಡ್ರು ಮನೇಲಿ ಅಪ್ಪ-ಮಕ್ಕಳು ಕುಂತಗಂಡು ಯಾರನ್ನು ವಿಚಾರಿಸಿಕೊ ಬೇಕು ಅಂತ ಚರ್ಚೆ ಮಾಡಿದ್ರೆ ಮುಗಿತು. ಅದನ್ನು ಕೇಳಿಸಿಕೊಂಡ ಇಡೀ ಕುಟುಂಬ ನಿಷ್ಕಾರಣವಾಗಿ ಸಂಬಂಧಪಟ್ಟ ಆಸಾಮಿನ ದ್ವೇಷ ಮಾಡ್ತವೆ."

"ಅದೇನೊ ನಿಜ. ನಾನೇ ಅನುಭವಿಸಿದ್ದೀನಿ."

"ಇನ್ನು ಯೋಗೇಶ್ವರ, ತೇಜಸ್ವಿನಿ, ವಿಶ್ವನಾಥ, ದೊರೆಸ್ವಾಮಿ, ಹಿರೇಮಠ, ಸಿಂಧ್ಯಾ ಬೆಂಗಳೂರು ಲ್ಯಾಂಡ್ ಮಾಫಿಯಾ, ಗಣಿ ಮಾಫಿಯಾ... ಅಯ್ಯೋ ಅಯ್ಯೋ ಒಬ್ಬ ಉದಯೋನ್ಮುಖ ರಾಜಕಾರಣಿಗೆ ಇಷ್ಟು ವೈರಿಗಳಿರಬಾರ್ದು ಸಾರ್."

"ಅದಕ್ಯಲ್ಲ ನಾನು ತಲೆಕೆಡಿಸಿಕೊಳ್ಳಲ್ಲ. ನನ್ನ ಗುರಿ ಏನಿದ್ರೂ ಮುಖ್ಯಮಂತ್ರಿಯಾಗಬೇಕು."

"ಮುಖ್ಯಮಂತ್ರಿ ಯಾಕಾಗಬೇಕು ಸಾರ್?"

"ಯಾಕಾಗಬೇಕು ಅಂದ್ರೆ, ಇದ್ಯಂತ ದಡ್ಡ ಪ್ರಶ್ನೆರೀ?"

"ಅಲ್ಲ ಸಾರ್, ಹಿಂದೆ ಎಡೂರಪ್ಪಾದ್ರು, ಆಸ್ತಿ ಮಾಡಿದ್ರು. ಅದ್ಕೂ ಹಿಂದೆ ಕುಮಾರಣ್ಣಾದ್ರು, ಆಸ್ತಿ ಮಾಡಿದ್ರು. ಆದ್ರೆ ನಿಮಗೆ ಈಗಾಗ್ಲೆ ತುಂಬಾ ಆಸ್ತಿಯಿದೆ. ಆದ್ರಿಂದ ಮುಖ್ಯಮಂತ್ರಿ ಯಾಕಾಗ್ತಿರಿ?"

"ಯಾರ್ರಿ ತುಂಬಾ ಆಸ್ತಿಯಿದೆ ಅಂತ ಹೇಳಿದೋರು?"

"ಸಾರ್, ನಿಮ್ಮ ಇವತ್ತಿನ ಸ್ಥಿತಿಗೆ ವಿಪರೀತ ಆಸ್ತಿನೆ ಕಾರಣ. ಎಷ್ಟು ಬೇಕೊ ಅಷ್ಟಿದ್ರೆ ಮಂತ್ರಿಯಾಯ್ತಿದ್ರಿ. ಅದು ಅಕ್ರಮ ಆಸ್ತಿ ಕಾರಣಕ್ಕಲ್ಲವ ಸಾರ್ ನಿಮಗೆ ಮಂತ್ರಿ ಸ್ಥಾನ ಸಿಗದೆ ಹೋದದ್ದು?"

"ಈಗಿನ ಸಂಪುಟದಲ್ಲಿ ಯಲ್ಲಾ ಹರಿಶ್ಚಂದ್ರನ ಮಕ್ಕಳೇ ಇದ್ದಾರ? ಆ ದೇಶಪಾಂಡೆ ಎಷ್ಟು ಆಸ್ತಿ ಮಾಡಿದ್ದಾನೆ ಗೊತ್ತ?"

"ಅವುರೆಲ್ಲಾ ಬ್ರಾಹ್ಮಣರು ಸಾರ್. ಆಸ್ತಿ ಮಾಡಿದ್ರು ಗೊತ್ತಾಗಲ್ಲ, ಬ್ರಾಹ್ಮಣರ ತರ ಇದ್ದೋರು ಮಾಡಿದ್ರೂ ಗೊತ್ತಾಗಲ್ಲ, ನಿಮ್ಮ ಗುರು ಎಸ್ಸೆಂ ಕೃಷ್ಣ ಆಸ್ತಿ ಮಾಡಿದ್ರು ಕೂಡ ಯಾರಿಗಾರ ಗೊತ್ತಾಯ್ತಾ? ಅದೇ ತರ ನೀವು ಮಾಡಿಕೊಂಡಿದ್ರೆ ಇವತ್ತಿನ ಸ್ಥಿತಿ ಬತ್ತಿರಲಿಲ್ಲ."

"ನನಿಗೆ ಯಾವ ಸ್ಥಿತೀನೂ ಬಂದಿಲ್ಲ. ಒಕ್ಕಲಿಗ ಜನಾಂಗದ ಸ್ಟ್ರಾಂಗ್ ಲೀಡರಾಗಿ ಇವತ್ತಿಗೂ ಚೆನ್ನಾಗಿದ್ದೀನಿ. ಮುಂದೆ ಮುಖ್ಯಮಂತ್ರಿ ಆಗೇ ಆಯ್ತಿನಿ."

"ಯಂಗಾಯ್ತಿರಿ ಸಾರ್?"


"ಯಂಗೆ ಅಂದ್ರೆ ಶಾಸಕರು ಆರಿಸಿ ಬರಕ್ಕೆ ಧನಸಹಾಯ ಮಾಡ್ತೀನಿ. ಇನ್ನುಳದೋರನ ಮಂತ್ರಿ ಮಾಡ್ತೀನಿ ಅಂತ ಹೇಳ್ತಿನಿ. ಕಮ್ಯುನಿಟಿನೂ ಸಹಾಯ ಮಾಡತ್ತೆ. ನನ್ನೆದುರಿಗೆ ಎರಡು ಮಾರ್ಗ ಅವೆ. ಒಂದು ದೇವೇಗೌಡನ ತರ ಜನಾಂಗವೆಲ್ಲಾ ತಗಂಡೋಗಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಿ, ಅಡ್ಡಿ ಮಾಡಿದೋರಿಗೆ ಮೆಟ್ಟಲ್ಲಿ ಹಡದು ಮುಖ್ಯಮಂತ್ರಿಯಾಗೋದು. ಇನ್ನೊಂದು ಎಮ್ಮೆಲ್ಲೆಗಳನ್ನೆಲ್ಲಾ ಕೊಂಡು ರೆಸಾರ್ಟಿಗೆ ತಗಂಡೋಗಿ, ಅಲ್ಲಿಂದ ನೇರ ವಿಧಾನಸೌಧದ ಎದುರಿಗೆ ತಂದು ನಿಲ್ಲಿಸಿಕೊಂಡು ಮುಖ್ಯಮಂತ್ರಿಯಾಗಿ ಪ್ರಮಾಣವಚನ ತಗಳದು. ಇದ್ಯಾವುದೂ ನನಿಗೆ ಕಷ್ಟ ಅಲ್ಲ."

"ಥೂತ್ತೇರಿ!!!" ●

ಸಾವು ಮತ್ತು ಬದುಕಿನ ಅಂತರಾಳ

'ಕೆಲಸ ಮಾಡುವುದೇ ನಿಜವಾದ ಸಂತೋಷ' ಎಂದು ಬದ ಮೆನಾರ್ಡ್ ಪಾರ್ಕರ್ ಎಂಬ ಸಂಪಾದಕ ತನ್ನ ವತ್ತೆಂಟನೇ ವಯಸ್ಸಿನಲ್ಲಿ ತೀರಿಕೊಂಡ. ಈತ ್ಯೂಸ್‌ವೀಕ್' ಎಂಬ ಅಂತಾರಾಷ್ಟ್ರೀಯ ಖ್ಯಾತಿಯ ರಪತ್ರಿಕೆಯ ಸಂಪಾದಕ. ಇದು ಪ್ರಖ್ಯಾತ ಪತ್ರಿಕೆ, ಷಿಂಗ್ಟನ್ ಪೋಸ್ಟ್' ಸಂಸ್ಥೆಯ ಇನ್ನೊಂದು ಪತ್ರಿಕೆ; ತ ಐವತ್ತೆಂಟಕ್ಕೇ ಸಾಯಲು ಹೇಗೆ ಸಾಧ್ಯ, ಸರ್ಕಾರಗಳನ್ನು ಳಿಸಬಲ್ಲ, ರಕ್ಷಿಸಬಲ್ಲ ಒಬ್ಬನನ್ನು ಸಾವಿನ ದವಡೆಯಿಂದ ಳಿಸಿಕೊಳ್ಳಲು ಅಮೆರಿಕದ ವೈದ್ಯರಿಗೆ ಸಾಧ್ಯವಾಗಲಿಲ್ಲವೇ- ್ಯಾದಿ ಪ್ರಶ್ನೆಗಳೆಲ್ಲ ಹಳಸಲು ಗೊಣಗಾಟಗಳು. ಈ ನಾರ್ಡ್ ಪಾರ್ಕರ್‌ನ ಕುತೂಹಲ, ಜಗತ್ತನ್ನು ಪತ್ರಿಕೆಗಾಗಿ ಹಿಸುವಾಗ ತೋರಿದ ಕುಶಲತೆ, ತನ್ನ ಹೋದ್ಯೋಗಿಗಳೊಂದಿಗೆ ಸರ್ಕಾರ, ಪ್ರತಿಷ್ಠಿತರ ವಿರುದ್ಧ ಸಿದ ಯುದ್ಧದಂಥ ಹೋರಾಟ- ಇವು ಮುಖ್ಯ. ನಾನೇ ್ಬಾತ ಈ ನ್ಯೂಸ್‌ವೀಕ್ ಪತ್ರಿಕೆ ಒಂದಾನೊಂದು ಲದಲ್ಲಿ ಸರಿಯಾಗಿ ಅಚ್ಚಾಗುತ್ತಿರಲಿಲ್ಲ ಕೂಡ; 'ಟೈಮ್' ರಪತ್ರಿಕೆಯು ಬಡ ಸಂಬಂಧಿಯಂತಿತ್ತು, ಮೆನಾರ್ಡ್ ಪಾರ್ಕರ್ ನ್ನ ಸಮರ ಸಾರಿದ. ಇದು ಗನ್, ಬಾಂಬ್, ಟ್ಯಾಂಕ್‌ಗಳ ುದ್ಧವಲ್ಲ, ವರದಿಗಾರರು, ಲೇಖಕರನ್ನು ಹುರಿದುಂಬಿಸುವ, ವರಿಂದ ಅತ್ಯುತ್ತಮವಾದದ್ದನ್ನು ಪಡೆಯುವ ಕದನ. ್ಯೂಸ್‌ವೀಕ್ ಅಚ್ಚಾಗುವ ಗುರುವಾರದ ಕೊನೇ ್ಗೆಯವರೆಗೆ ಪಾರ್ಕರ್ ಚಡಪಡಿಸುತ್ತಲೇ ಇರುತ್ತಿದ್ದ ವರದಿ ಸರಿ ಇಲ್ಲ, ಇದರ ಶೈಲಿ ಪೆದ್ದುಪೆದ್ದಾಗಿದೆ, ಈ ಲೇಖನ ಮಂಕಾಗಿದೆ, ಈ ಶೀರ್ಷಿಕೆ ಜಡವಾಗಿದೆ, ಈ ಂ ಹಳೆಯದಾಗಿದೆ.... ಹೀಗೆ ತಾನೇ ಪೆನ್ ಹಿಡಿದು ದು ಹಾಕುತ್ತಿದ್ದ ವಿಯೆಟ್ನಾಂ ಯುದ್ಧ, ಗಲ್ಫ್‌ನ ರಕ್ತಪಾತ, ಟನ್‌ನ ಸೋಗಲಾಡಿತನ, ಅಟಗಾರನ ಗಾಂಚಾ ಸೇವನೆ... ್ಪನನ್ನು, ಹಿಂದು ವರದಿ ಮಾಡುತ್ತಿದ್ದ, ಅಗತ್ಯವಾದರೆ ರುಡುಗಳು ಸಹಾಯಕರೊಂದಿಗೆ ದುಡಿಯುತ್ತಿದ್ದ.

ಸಂಪಾದಕ ನಿಜಕ್ಕೂ ನಾಯಕ. ಆತ ತನ್ನ ವರದಿಗಾರರ ಕೈಬಿಡಬಾರದು. ತನ್ನ ಲೇಖಕರನ್ನು ಅವಮಾನಿಸಬಾರದು. ತನ್ನ ಕಲಾವಿದರನ್ನು ಬೇರೆಯವರೆದುರಿಗೆ ಅಣಕಿಸಬಾರದು.



ಪತ್ರಿಕೆಯೆಂದರೆ ಸ್ಫೂರ್ತಿ ಮುಖ್ಯ. ಕುತೂಹಲ, ಹುಡುಗಾಟ, ಗಾಂಭೀರ್ಯ, ವ್ಯಂಗ್ಯ ನಿಷ್ಠುರತೆ- ಎಲ್ಲ ಸೇರಿ ಪತ್ರಿಕೆಯ, ಸಂಪಾದಕನ ಅಂತರಂಗವಾಗುತ್ತದೆ.

ಫ್ಲೋ-ಜೋ 38ಕ್ಕೆ ತೀರಿಕೊಂಡಳು. ಈ ಸಂಪಾದಕ 58ಕ್ಕೆ ಕಣ್ಣುಮುಚ್ಚಿದ. ನೆಮ್ಮದಿಯ ಅಮೆರಿಕಾದಲ್ಲಿ ಕೂಡ ಗಣ್ಯರು ಸಹಿತ ಸಾಯುತ್ತಾರೆ. ಅದು ವಾಸ್ತವ.

ಸಾಯುತ್ತಾರೆ. ಹಾಗೆಯೇ ಬದುಕುತ್ತಾರೆ. ಇಷ್ಟವಾದ ಕೆಲಸ ನಿಜವಾದ ಬದುಕನ್ನು ನಮಗೆ ನೀಡುತ್ತದೆ. ಇಲ್ಲಿಯ ಮಿತಿ ಮತ್ತು ಸಾಧ್ಯತೆ ನಮ್ಮನ್ನು ವಿಸ್ಮಯಗೊಳಿಸುತ್ತವೆ.

ಜೀವ ಎಂಬ ವಿಚಿತ್ರ



ನನ್ನ ಗೆಳೆಯನೊಬ್ಬ ಪುಷ್ಕಿನ್‌ನ ಒಂದು ಕತೆ ಕಳಿಸಿ ಇದನ್ನು 'ಓದಲೇಬೇಕು' ಎಂದು ಹೇಳಿದ. ಪುಷ್ಕಿನ್ ಒಂದು ರೀತಿಯಲ್ಲಿ ರಷ್ಯಾದ ರಾಷ್ಟ್ರಕವಿ; ಹತ್ತೊಂಭತ್ತನೇ ಶತಮಾನದ ಈ ಕವಿ ಇಂಗ್ಲಿಷ್, ಫ್ರೆಂಚ್ ಕವಿಗಳಿಂದ ಪ್ರಭಾವಿತನಾದರೂ ರಷ್ಯಾದ ಭೀಕರ ವಿಸ್ತಾರ, ಪ್ರೌಢಿಮೆ, ಸ್ಫೂರ್ತಿ, ಚಳಿ, ಹುಂಬತನ ಇವನ್ನು ಎಲ್ಲರಿಗಿಂತ ಹೆಚ್ಚಾಗಿ ತೋರುವವನು. ಪ್ರೌಢ, ಕುದಿದವನನ್ನು ಹತೋಟಿಗೆ ತರಬಹುದು; ಆದರೆ ದೇಶದ ಮನೋಲಹರಿಯಿಂದ ಮತ್ತನಾದವನನ್ನು ಸಂಯಮದ ಮನುಷ್ಯನನ್ನಾಗಿ ಮಾಡುವುದು ಕಷ್ಟ. ಉದ್ವೇಗಹೀನಸ್ಥಿತಿಯೇ ಇಂಥವರಿಗೆ ನಿರ್ಜೀವ ಸ್ಥಿತಿ. ಇದರಿಂದಾಗಿಯೇ ಪದ್ಯ ಗದ್ಯ ಎರಡರಲ್ಲೂ ತನ್ನ ಸ್ಫೂರ್ತಿಯನ್ನು ಪುಷ್ಕಿನ್ ಹರಿಸಿದ. ಗದ್ಯದ ಲಯದಿಂದ ಈತನ ಪದ್ಯಕ್ಕೆ ಊನ ಬರಲಿಲ್ಲ; ಪದ್ಯದ ತುಯ್ಯುವಿಕೆಯಿಂದ ಗದ್ಯದ ಸ್ಪಷ್ಟತೆಗೆ ತೊಂದರೆಯಾಗಲಿಲ್ಲ. ಎರಡರಲ್ಲೂ ಜೀವ ಸಮಾನವಾಗಿ ಹರಿಯಿತು.

ಪುಷ್ಕಿನ್‌ನ ಒಂದೆರಡು ಕತೆ ಓದಿದ್ದ ನಾನು 'ದಿ ಶಾಟ್' ಎಂಬ ಕತೆಯನ್ನು ಓದಿರಲಿಲ್ಲ. ಈ ಕತೆಯಲ್ಲೊಬ್ಬ ಸ್ನೇಹಜೀವಿ, ಮಹಾ ಮಾತುಗಾರ, ಎಲ್ಲಕ್ಕಿಂತ ಹೆಚ್ಚಾಗಿ **A sure shot** (ಬಂದೂಕಿನಲ್ಲಿ ಗುರಿತಪ್ಪದೆ ಹೊಡೆಯುವವನು) ಬರುತ್ತಾನೆ. ಆತನಿಗೆ ಒಳ್ಳೆಯ ಊಟ, ಮದ್ಯ, ಹರಟೆ ಅಂದರೆ ಇಷ್ಟ. ಸೈನ್ಯದಲ್ಲಿರುವ ಈತ ಎಲ್ಲರ ಮೆಚ್ಚಿಗೆಯ ಗೆಳೆಯ. ಒಂದು ದಿನ ಇದ್ದಕ್ಕಿದ್ದಂತೆ ಸೈನಿಕನೊಬ್ಬನೊಂದಿಗೆ ಮಾತಿಗೆ ಮಾತು ಬೆಳೆದು ಜಗಳವಾಗುತ್ತದೆ; ಆ ಸೈನಿಕ ಸಿಲ್ವಿಯೋ ಎಂಬ **sure shot** ಪರಿಚಿತಳೊಬ್ಬಳೊಂದಿಗೆ ಗೆಳೆತನ ಬೆಳೆಸಿರುತ್ತಾನೆ. ಹತ್ತೊಂಭತ್ತನೇ ಶತಮಾನದ ನಡಾವಳಿಯಂತೆ, ಈ ಜಗಳವನ್ನು ಕೂಡ ಬಂದೂಕಿನ ದ್ವಂದ್ವ ಯುದ್ಧ ಮಾಡಿ (**duel**) ಬಗೆಹರಿಸಿಕೊಳ್ಳಲು ತೀರ್ಮಾನಿಸುತ್ತಾರೆ.

ದ್ವಂದ್ವಯುದ್ಧ ಶುರುವಾಗುವಾಗ ನಾಣ್ಯ ಹಾರಿಸಿ ಮೊದಲು ಯಾರು ಶೂಟ್ ಮಾಡುವುದೆಂದು ನಿರ್ಧರಿಸುತ್ತಾರೆ. ಸಿಲ್ವಿಯೋ ಟಾಸ್ ಗೆಲ್ಲುತ್ತಾನೆ. ಇನ್ನೇನು ಯುದ್ಧ ಶುರುವಾಗಬೇಕು, ಸಿಲ್ವಿಯೋ 'ಇವತ್ತು ಬೇಡ' ಎಂದು ದ್ವಂದ್ವ ಯುದ್ಧವನ್ನು ರದ್ದು ಮಾಡಿ ಅಲ್ಲಿಂದ ಹೊರಟುಹೋಗಿ ಬೇರೊಂದು ಪ್ರಾಂತ್ಯದ ಸೈನ್ಯದ ತುಕಡಿಯ ಜೊತೆ ಜೀವಿಸತೊಡಗುತ್ತಾನೆ. ಅಲ್ಲಿ ಆತ ಸೈನಿಕನಲ್ಲ ಸಾಮಾನ್ಯ. ತನ್ನಲ್ಲಿರುವ ಹಣವನ್ನೆಲ್ಲ ಸೈನಿಕ ಮಿತ್ರರಿಗೆ ಊಟ, ಮದ್ಯ ಕೊಡುವುದಕ್ಕೆ ವ್ಯಯಿಸುತ್ತಾನೆ. ಮುಂದೆ ಒಂದು ದಿನ ತನ್ನ ಹಿಂದಿನ ಶತ್ರುವನ್ನು ಉಳಿಸುವ ಬದಲು ಕೊಲ್ಲುವುದಾಗಿ ತೀರ್ಮಾನಿಸುತ್ತಾನೆ.

ಆ ಶತ್ರುವಿನಿಂದ ಕಾಗದ ಬರುತ್ತದೆ: 'ಈಗ ಬಾ, ಯುದ್ಧ ಮಾಡೋಣ' ಗನ್ ತೆಗೆದುಕೊಂಡು ಹೋಗುತ್ತಾನೆ. ಅವತ್ತು ಕೂಡ ಟಾಸ್ ಗೆಲ್ಲುತ್ತಾನೆ. ಅವತ್ತು ಕೂಡ ಕೊಲ್ಲಲು ಮನಸ್ಸು ಬಾರದೆ ಹಿಂದಕ್ಕೆ ಬಂದು ಬೇರೊಂದು ಸೈನ್ಯದ ತಂಡ ಸೇರಿ ಯುದ್ಧದಲ್ಲಿ ಸತ್ತು ಹೋಗುತ್ತಾನೆ. ಇದು ಕತೆ.


ಇದನ್ನು ಓದುತ್ತಾ... ಈ ಕತೆ ಸಾಮಾನ್ಯ, ವಿಶೇಷವೇನಿಲ್ಲ- ಅಂದುಕೊಂಡೆ. ಆದರೆ ಈ ಕತೆಯ ಪಾತ್ರಗಳು ಮತ್ತು ಸಿಲ್ವಿಯೋನ ಸಂಕೀರ್ಣ ವ್ಯಕ್ತಿತ್ವ ನನ್ನನ್ನು ಆಕರ್ಷಿಸತೊಡಗಿದವು; ಹಾಗೆಯೇ ಆತನ ಜೀವನಪ್ರೇಮ. ಒಬ್ಬಂಟಿಯಾಗಿ ಅನೇಕ ವರ್ಷ ಕಳೆದ ಈತ ತನ್ನ ಗೆಳತಿಯನ್ನು ಒಲಿಸಿಕೊಂಡವನನ್ನು ಸಿಟ್ಟಿನಿಂದ ಕೊಲ್ಲಬೇಕಿತ್ತು. ಆದರೆ ಸೇಡಿಗೆ ಬದಲು ಔದಾರ್ಯ ಅವನಲ್ಲಿತ್ತು. ಅವರ ಪ್ರೇಮ ನೋಡಿ ಅಸೂಯೆ ಪಡುವ ಬದಲು ಅವನಲ್ಲಿ ವಿಚಿತ್ರ ಅನುಕಂಪ ನೆಲಸಿತ್ತು, ಸಾವಿಗೆ ಬದಲು ಬದುಕು ಅವನನ್ನು ಸೆಳೆದಿತ್ತು.

ಒಬ್ಬ ಲೇಖಕನ ಕ್ರಿಯಾಶೀಲತೆ ವಿಚಿತ್ರವಾದದ್ದು. ಇಬ್ಬರೂ ಒಂದೇ ಕತೆ ಬರೆದರೂ ಒಬ್ಬನ ಕತೆ ಸತ್ತುಹೋಗುತ್ತದೆ. ಇನ್ನೊಬ್ಬ ಬರೆದದ್ದು ಹೊಳೆಯುತ್ತಾ ಬಣ್ಣ ನಳನಳಿಸುತ್ತಿರುತ್ತದೆ. ಇಬ್ಬರು ಒಂದೇ ವಸ್ತುವನ್ನು ಕುರಿತು ಮಾತಾಡಿದರೂ ಒಬ್ಬ ನಿಮ್ಮನ್ನು ಕೊರೆದು ಹಾಕುತ್ತಾನೆ. ಇನ್ನೊಬ್ಬ ತನ್ನ ವ್ಯಕ್ತಿತ್ವವನ್ನು ಕತೆಗೆ ತಂದು ನಿಮ್ಮಲ್ಲಿ ರೋಮಾಂಚನ ಹುಟ್ಟಿಸುತ್ತಾನೆ.

● ನವೆಂಬರ್ 11, 1998

ರೇಪ್ ಮಾಡಕ್ಕೆ ಬಂದಿದ್ದ ಅಂತ ಕಂಪ್ಲೆಂಟ್ ಕೊಡ್ತೀನಿ!

ಅಣಕ



• ಎಚ್.ಎಲ್.ಕೇಶವಮೂರ್ತಿ

ಜೂಜಿನ ಆಕರ್ಷಣೆಯೇ ಹಾಗಿರುತ್ತೆ. ಅದಕ್ಕೆ ಲಿಂಗ, ಧರ್ಮ, ಜಾತಿ, ವರ್ಗ, ವಯಸ್ಸು ಇವುಗಳ ಭೇದಭಾವ ಇಲ್ಲ. ಎಲ್ಲರನ್ನೂ ಸಮಾನವಾಗಿ ಸೆಳೆಯುತ್ತೆ. ಗೆದ್ದಾಗ ಖುಷಿಯಾಗುತ್ತೆ ಎಂತಹುದ್ದೊ ಹುಮ್ಮಸ್ಸು ಮೈಮನ ಎಲ್ಲವನ್ನು ಆವರಿಸುತ್ತೆ. ಧಾರಾಳಿಯಾಗುವ ಹಾಗೆ ಆಗುತ್ತೆ. ಸೋತಾಗ ಮನಸ್ಸಿಗೆ ಬೇಸರ ಆಗುತ್ತೆ, ಸೋತದ್ದನ್ನು ಹಿಂಪಡೆಯಲೇಬೇಕು ಎಂಬ ಛಲ ಮೂಡುತ್ತೆ. 'ಇದು ಬ್ಯಾಡ ಕಣ್ರಪಾ. ಮನೆ ಮಠ ಕಳಕಂಡಿದೀರಿ. ಇವರ ಸಹವಾಸ ಬುಟ್ಬುಡಿ' ಅನ್ನೊ ಬುದ್ಧಿ ಮಾತು ಹೇಳುವವರೂ ಇದ್ದಾರೆ. ಆಗ 'ಎಲ್ಲಿ ಕಳ್ಕಂಡಿದೀವೋ ಅಲ್ಲೇ ಹುಡುಕ್ಬೇಕು. ಅದನ್ನ ಬಿಟ್ಟು ಬೇರೆಲ್ಲೋ ಹುಡುಕಿದರೆ ಸಿಗಾಕಿಲ್ಲ' ಅನ್ನುವ ಹಾಗೆ ಆಗುತ್ತೆ. ಯಾವುದೇ ಜೂಜಾಗಲಿ. ಕೊನೆಗೆ ಹಣ ಮಾಡುವವನು ಅದನ್ನು ನಡೆಸುವವನೇ ಹೊರತು ಆಡುವವರಲ್ಲ ಅನ್ನುವುದು ತಿಳಿಯುತ್ತೆ. ಆದರೂ ಜೂಜಿನ ಸೆಳೆತ ಇದ್ದೇ ಇರುತ್ತೆ.

ಕೆಲವು ಜೂಜುಗಳು ಇರುತ್ತವೆ. ಜೂಜಾಡಲು ತಕ್ಷಣವೇ ಹಣ ನೀಡಬೇಕು ಅನ್ನುವ ನಿಯಮ ಎಲ್ಲರಿಗೂ ಇರುವುದಿಲ್ಲ. ಕೆಲವರಿಗೆ ಅದರಿಂದ ವಿನಾಯಿತಿ ಇರುತ್ತದೆ. ಕುದುರೆ ಜೂಜು ಅಂತಹದ್ದರಲ್ಲಿ ಒಂದು. ಕೆಲವು ಶ್ರೀಮಂತ ಖಾಯಂ ಪಂಟರುಗಳು ಇರುತ್ತಾರೆ. ಅವರು ಸ್ಟಾಲ್‌ಗೆ ಹೋಗಿ ಬುಕ್ಕಿಗಳಿಂದ ಟಿಕೆಟ್ಟುಗಳನ್ನು ಪಡೆಯುವುದಿಲ್ಲ. ಎಲ್ಲಿಯೋ ನಿಂತು ನಿರ್ದಿಷ್ಟ ಸನ್ನೆಗಳ ಮೂಲಕ ತಾನು ಇಂತಹ ಕುದುರೆಯ ಮೇಲೆ ಇಂತಿಷ್ಟು ರೂಪಾಯಿ ಹಣ ಕಟ್ಟಿದ್ದೇನೆ ಅನ್ನುವುದನ್ನು ಸೂಚಿಸುತ್ತಾರೆ. ಅನಂತರ ಒಟ್ಟಿಗೆ ಕುಳಿತು ಲೆಕ್ಕಾಚಾರ ಅಂತಿಮಗೊಳಿಸುತ್ತಾರೆ. ಈ ವ್ಯವಹಾರ ಬಹಳ ನಿಯತ್ತಿನಿಂದ ಕಟ್ಟುನಿಟ್ಟಾಗಿ ಜರುಗುತ್ತದೆ. ಬುಕ್ಕಿಯಾಗಲೀ ಪಂಟರ್ ಆಗಲಿ ಮೋಸ ಮಾಡುವುದಿಲ್ಲ. ಯಾರಿಗೇ ನಷ್ಟ ಆಗಲಿ, ಯಾರಿಗೇ ಲಾಭ ಆಗಲಿ ವ್ಯವಹಾರ ಮಾತ್ರ ಕರಾರುವಾಕ್ಕಾಗಿ ನಡೆಯುತ್ತದೆ.

ಇಂತಹದ್ದೇ 'ನಂಬಿಕೆ' ವ್ಯವಹಾರ ಐಪಿಎಲ್ ಜೂಜುಕಟ್ಟೆಯಲ್ಲೂ ನಡೆಯುತ್ತಿತ್ತಂತೆ. ಬಹಳಷ್ಟು ಮಹಿಳೆಯರು ಇದರಲ್ಲಿ ಭಾಗವಹಿಸುತ್ತಾರಂತೆ. ಈ ಸಾಲಿನ ಪಂದ್ಯಾವಳಿ ಎನ್ನುವ ಜೂಜಿನಲ್ಲೂ ಸುಮಾರು ಮಹಿಳೆಯರು ಹಣ ಕಟ್ಟಿದ್ದರಂತೆ. ದಾಂಡಿಗರೋ, ಬೌಲರುಗಳೋ ಅವರ ಮನದ ಇಂಗಿತದಂತೆ ನಡೆದುಕೊಳ್ಳದೇ ಇದ್ದುದರಿಂದಾಗಿ ಅವರಿಗೆಲ್ಲ ಬಾರೀ ಲುಕ್ಸಾನು ಆಯಿತಂತೆ. ಲಕ್ಷಾಂತರ ರೂಪಾಯಿ ಕೊಡಬೇಕಲ್ಲಪ್ಪಾ ಶಿವನೆ ಅಂತ ತಲೆಯ ಮೇಲೆ ಕೈ ಹೊತ್ತು ಕುಳಿತಿದ್ದರಂತೆ. ಇವರ ಸಂಕಟ ನೋಡಲಾಗದೆಯೋ ಏನೋ ಆ ದಯಾ ಮಯನಾದ ಭಗವಂತ ಸ್ಪಾಟ್‌ಫಿಕ್ಸಿಂಗ್ ಅನ್ನು ಜಗಜ್ಜಾಹೀರು ಆಗುವಂತೆ ನೋಡಿಕೊಂಡ. ಹಣ ಕೊಡಬೇಕಾದವರಿಗೆ ಒಂದು ನೆಪ ದೊರಕಿಸಿದ. ಬುಕ್ಕಿಗಳು 'ತಾವು ಇಷ್ಟು ಲಕ್ಷ ಕೊಡಬೇಕು ತಾಯಿ' ಅಂತ ಕೇಳಿದರೆ 'ಅದು ಮೋಸದಾಟ ಆಗಿದ್ದರಿಂದಲೇ ನಾನು ಸೋತಿರೋದು. ನ್ಯಾಯವಾಗಿ ಆಡಿದ್ದರೆ ನಾನೇ ಗೆಲ್ತಿದ್ದೆ. ಮೋಸದಾಟಕ್ಕೆ ಹಣ ಕೇಳ್ತಿದೀಯಲ್ಲ ನಾಚಿಕೆ ಆಗಲ್ವೆ ನಿಂಗೆ' ಅಂತೆಲ್ಲ ಕೂಗಾಡ್ತಾರಂತೆ. ಬುಕ್ಕಿಗಳ ಹತ್ತಿರ ಸಾವಿರಾರು ಜನರು ಹಣ ಕಟ್ಟಿರುತ್ತಾರೆ. ಕೋಟ್ಯಾಂತರ ರೂಪಾಯಿ ವ್ಯವಹಾರ ನಡೆದಿರುತ್ತೆ. ಗೆದ್ದವರು ಮೋಸದಾಟ ಗೀಸದಾಟ ಅನ್ನುವ ಕಣಿ ಕೇಳಲ್ಲ. ಕೊಡೋ ಹಣ ಬಿಸಾಕು ಅಂತಾರೆ. ಬರುವ ಹಣ ಬರುತ್ತಿಲ್ಲ. ಕೊಡುವ ಹಣ ಕೊಡಲೇಬೇಕು. ಹಿಂಗಾಗಿ ಬುಕ್ಕಿಗಳು ಸಾಲದ ಸುಳಿಗೆ ಸಿಕ್ಕಿ ಒದ್ದಾಡ್ತಿದಾರಂತೆ. ಇಂತಹ ಇಕ್ಕಟ್ಟಿಗೆ ಸಿಕ್ಕಿದ ಬುಕ್ಕಿಯೊಬ್ಬ ಹಣದ ಹೊಡೆತ ತಾಳಲಾರದೆ ಹಣ ಕಟ್ಟಿ ಸೋತಿದ್ದ ಶ್ರೀಮಂತ ಮಹಿಳೆಯೊಬ್ಬರ ಮನೆಗೆ ಫೋನಾಯಿಸಿ 'ಜೂಜಿನ ಹಣ ಕೊಡವ್ವ ತಾಯಿ' ಅಂತ ಕೇಳಬೇಕು ಎಂದುಕೊಂಡನಂತೆ. ಆಕೆಯ ಸೆಲ್‌ಪೋನ್ ಸಂಖ್ಯೆ ಒತ್ತಿದನಂತೆ. ಟ್ರಿಸ್ ಟ್ರಿಸ್ ಅಂತ ಅದು ಬಡಿದುಕೊಂಡಿತೇ ಹೊರತು ಅತ್ತಲಿಂದ ಬೇರೆ ಯಾವ ದನಿಯೂ ಕೇಳಿಬರಲಿಲ್ಲವಂತೆ. ಕೊನೆಗೆ ಆ ಶಬ್ದವೇ ಸುಸ್ತಾಗಿ 'ಈ ಗ್ರಾಹಕರು ಯಾವ ಕರೆಯನ್ನು ಸ್ವೀಕರಿಸುತ್ತಿಲ್ಲ' ಅಂತ ಉಲಿಯಿತಂತೆ. ಮತ್ತೆ ಮತ್ತೆ ಪ್ರಯತ್ನಿಸಿದನಂತೆ. ಮೊದಲಿನಂತೆಯೇ ಆಯಿತಂತೆ. ಗೌರವಾನ್ವಿತ ವ್ಯಕ್ತಿಗಳ ಸೆಲ್‌ಫೋನ್‌ಗಳ ರೀತಿಯೇ ಹೀಗೆ. ರಿಂಗ್ ಆಗುತ್ತೆ ರಿಸೀವ್ ಆಗಲ್ಲ. ಈ ಪುಣ್ಯಾತ್ಮರುಗಳಿಗೆ ರಿಂಗ್‌ಟೋನ್ ಕೇಳಿಸಿರುವುದಿಲ್ಲ ಎಂದು ಅಲ್ಲ, ಕೇಳಿಸಿರುತ್ತೆ. ಕರೆ ಮಾಡಿದವರ ಸಂಖ್ಯೆಯನ್ನು ಗಮನಿಸಿರುತ್ತಾರೆ. ಪರಿಚಯದ ಸಂಖ್ಯೆಯಾದರೆ ಉತ್ತರಿಸುತ್ತಾರೆ. ಇಲ್ಲವಾದರೆ ಇಲ್ಲ. ಅಪರಿಚಿತ ಸಂಖ್ಯೆಗಳಿಗೆ ಉತ್ತರಿಸಿದರೆ ಇವರಿಗೆ ಅಪಮಾನ! ಇಂತಹ ಗಣ್ಯ ವ್ಯಕ್ತಿಗಳಿಗೆ ಒಂದು ಸಲಹೆ. ತಾವುಗಳು ದಯ ಮಾಡಿ ಪರಿಚಿತ ಸಂಖ್ಯೆಗಳನ್ನು ಮಾತ್ರ ಸ್ವೀಕರಿಸುವ ಸೆಲ್‌ಫೋನ್ ಇದ್ದರೆ ಅದನ್ನು ಬಳಸಿ! ಈ ಸಾಲದ ಮಹಿಳೆಯೂ ದಿಢೀರನೆ ಇಂತಹ ಗಣ್ಯ ವ್ಯಕ್ತಿಗಳ ಸಾಲು ಸೇರಿದ್ದರೇನೋ. ಇಂತಹವರನ್ನು ಸಾಲದ ಗಣ್ಯವ್ಯಕ್ತಿ ಎನ್ನಬಹುದೇನೋ. ಇದೇನೇ ಇರಲಿ ಸಾಲದ ಬಾಧೆ ತಾಳಲಾರದೆ ನಮ್ಮ ಬುಕ್ಕಿ ಆಕೆಯ ಮನೆಗೇ ತೆರಳಿದನಂತೆ. ಇವನನ್ನು ನೋಡಿದವರೇ ಅನಿಷ್ಟ ಕಂಡಂತೆ ಮುಖ ಸಿಂಡರಿಸಿದರಂತೆ. ಏನು ಬಂದದ್ದು ಅನ್ನುವ ಹಾಗೆ ಮುಖಭಾವ ತೋರಿತಂತೆ. ಇವನು ಅದನ್ನು ನೋಡೇ ಭಯಗೊಂಡನಂತೆ. 'ಹಣ ಕೊಡಬೇಕಿತ್ತು ಮೇಡಂ' ಅಂತ ಅಂಜುತ್ತಅಂಜುತ್ತಲೇ ಹೇಳಿದನಂತೆ. ಹಣ ಎಂಬ ಶಬ್ದ ಕೇಳುತ್ತಲೇ ಆ ಮೇಡಮ್ಮಾರು 'ಯಾವ ಹಣ? ಸ್ಪಾಟ್‌ಫಿಕ್ಸಿಂಗ್ ಮಾಡಿಕೊಂಡು ಹೊಡ್ಕೊಂಡ್ರಲ್ಲ ಆ ಹಣನಾ?



ಮೋಸದಾಟಕ್ಕೆ ದುಡ್ಡು ಬೇರೆ ಕೊಡಬೇಕಾ?' ಅಂತೆಲ್ಲ ಕಂಡಾಬಟ್ಟೆ ರೇಗಾಡಿದರಂತೆ. ಆದರೂ ಹಣದ ಅವಶ್ಯಕತೆ ಬಹಳ ಇತ್ತಲ್ಲ: 'ಮೇಡಂ ನೀವು ಮಾತಿನಂತೆ ಹಣ ನೀಡದೆ ಇದ್ದರೆ ಇಲ್ಲಿಂದ ಕದಲೊಲ್ಲ' ಅಂತ ಹಟ ಹಿಡಿದನಂತೆ. ಆಗ ಆ ಗೌರವಾನ್ವಿತ ಮಹಿಳೆ ಏನು ಮಾಡಿದಳು ಅಂದರೆ...

'ಬೇಡ ಸುಮ್ನೆ ಹೋಗ್ಬಿಡು' ಅಂದರು.

'ಕೊಡಬೇಕಾದ ದುಡ್ಡು ಕೊಡಿ ಹೋಗ್ತೀನಿ.'

'ಹಂಗೆ ಹಟ ಮಾಡ್ಬೇಡ.'

'ದುಡ್ಡು ಕೊಡಿ ಹೋಗ್ತೀನಿ.'

ಇವನದ್ದು ಅದೇ ರಾಗ.

'ಹಿಂಗೆ ಹಟ ಮಾಡಿದ್ರೆ ಏನು ಮಾಡ್ತೀನಿ ಗೊತ್ತ

'ಏನು ಮಾಡಂಗಿದ್ದೀರಿ?'

'ರೇಪ್ ಮಾಡಕೆ ಬಂದಿದ್ದ ಅಂತ ಕಂಪ್ಲೇಂಟ ಕೊಡ್ತೀನಿ!'

(ಅ)ನೀತಿ: ಮಹಿಳೆಯರಿಗೆ ಪುರುಷರು ಸಾ ನೀಡಬಾರದು.

ನೀಡಿದ್ರೆ ನೀಡು ಕೊ. ಮಾತೊಂದ ಹೇಳ್ತೀನಿ.

ಸಾಲ ಮಾತ್ರ ಹಿಂತಿರುಗಿಸುವಂತೆ ಒತ್ತಾಯ ಮಾಡಬಾರದು!

ಹುಚ್ಚುಮುಂಡೆ ಮದುವೇಲಿ...

ಅಧಿಕಾರ ಸಿಕ್ಕರೆ ಸಾಕು. ಸಾರ್ವಜನಿ ಹಣದಲ್ಲಿ ಅವರ ದರ್ಬಾರು. ವಿಧಾನಸೌ ಕೊಠಡಿಗಳ ಮೇಲೆ ಇವರ ಕೆಂಗಣ್ಣು ರಮಾನಾಥ ರೈ ಕೊಠಡಿ ಗೋಡ ಹೊಡೆಸಿದರು.

ಕಾರಣ ಬೇಕಲ್ಲ?

'ವಾಸ್ತುದೋಷ' ಅನ್ನುವಂತಿಲ್ಲ.

ಮೂಢನಂಬಿಕೆಯವ ಎಂಬ ಹಣೆಪಟ್ಟಿ ಹೊರಬೇಕು.

ಏನು ಇದಕ್ಕೆ ಪರಿಹಾರ?

ಏನೋ ಒಂದು ಕಾರಣ ಹುಡುಕುವುದು!

ರಮಾನಾಥ ರೈಗೆ ಸಿಕ್ಕಿದ್ದು- ವಿಶಾ ಕೊಠಡಿ ಬೇಕಿತ್ತು!

ವಿಧಾನಸೌಧದ ಸೌಂದರ್ಯದ ಪ್ರಶ್ನೆ ಬೇಕಿಲ್ಲ!

ಅವರು ಮಾಡಿದ್ದು ಎಷ್ಟು ಸರಿ?

ಬಿಜೆಪಿ ಸರ್ಕಾರದ ಅವಧಿಯಲ್ಲೂ ಹೀಗ ಮಾಡಲಾಗಿತ್ತು!

ಇದು ಅವರ ಪಕ್ಷದ ಕೆಲವರ ಸಮಜಾಯಿಷಿ.

ಅವರಂತೆ ಇವರೂ ಆಡಳಿತ ನಡೆಸುವಂತಿದ್ದ ಬದಲಾವಣೆಯ ಅವಶ್ಯಕತೆ ಏನಿತ್ತು? ಇದು ಅವರ ತಲೆಗೆ

ಚಿತ್ರನಟಿಯರು ಮತ್ತು ಕ್ರಿಕೆಟಿಗರ ಮಿಲಾಖತ್

ಚಿತ್ರ ನಟಿಯರು ಮತ್ತು ಕ್ರಿಕೆಟ್ ಆಟಗಾರರ ಮಿಲಾಖತ್ ಕುರಿತು ಪಾರ್ವತೀಶರು ಬರೆದಿದ್ದ ವರದಿಯು ಇಷ್ಟವಾಯಿತು. ಸಿನಿಮಾ ತಾರೆಯರು ನಟನೆಯನ್ನು ಬಿಟ್ಟು ಇಂಥ ಸಮಾಜಘಾತುಕ ಚಟುವಟಿಕೆಗಳಲ್ಲಿ ತೊಡಗಿರುವುದು ಆತಂಕಕಾರಿ ವಿಚಾರವಾಗಿದೆ.

ಡಾ.ವಾಸು ಅವರ 'ಅಂಚಿನಿಂದ' ಅಂಕಣದ ಹಾಗೆ ಫಣಿರಾಜರ ಅಂಕಣ ಸರಳವಾಗಿಲ್ಲ. ಓದುಗರ ಹಿತದೃಷ್ಟಿಯಿಂದ ಅಂಕಣಗಳು ಅರ್ಥವಾಗುವ ಹಾಗೆ ಇರಲಿ. ಇತ್ತಿತ್ತ ಸಿನಿಮಾ ಪುಟಗಳು ಬೋರು ಹೊಡೆಸುತ್ತಿದ್ದವು. ಅಚ್ಚರಿಯೆನ್ನುವಂತೆ ನವನಟ ಧನಂಜಯನ ಸಂದರ್ಶನ ಇಷ್ಟವಾಯಿತು.



ಕಳೆದ ಸಂಚಿಕೆಯಲ್ಲಿ ಝೀ ವಾಹಿನಿ ರಘು ಅವರ ಬಗ್ಗೆ ಬರೆದು ಅನಾಮಧೇಯ ವ್ಯಕ್ತಿಯ ಭಾವಚಿತ್ರ ಪ್ರಕಟಿಸಿರುವುದು ತಮಾಷೆಯ ವಿಚಾರದಂತಿತ್ತು. ತಪ್ಪುಗಳು ಮರುಕಳಿಸುತ್ತಲೇ ಇದ್ದರೆ ನಗದೇ ವಿಧಿ ಇಲ್ಲ.

- ಗೋಪಾಲಕೃಷ್ಣ ಈ ಮೇಲ್ ಮೂಲಕ


ಆಮ್‌ವೇ ಮೋಸ: ಒಂದಿಷ್ಟು ಮಾಹಿತಿ

ಆಮ್‌ವೇ ಕಂಪನಿಯ ಐಬಿಒ(ಇಂಡಿಪೆಂಡೆಂಟ ಬ್ಯುಸಿನೆಸ್ ಓನರ್)ಗಳಾದರೆ ಆಮ್‌ವೇ ಪ್ರಾಡಕ್ಟ್‌ಗಳನ ಮಾರಲು ಪರವಾನಗಿ ದೊರೆತಂತೆ. ಪತ್ರಿಕೆಯ

ಮೀನುಗಾರಿಕೆಯೂ, ದೇಶದ ವಿಭಜನೆಯೂ

ಅಭಯಚಂದ್ರನೆಂಬ ಕಾಂಗ್ರೆಸ್ ಸಚಿವ ತಾನು ಜೈನ ಧರ್ಮದವನಾಗಿರುವುದರಿಂದ ತನಗೆ ಮೀನುಗಾರಿಕೆ ಖಾತೆ ಸರಿ ಹೊಂದುವುದಿಲ್ಲ ಎಂಬ ಹಾಸ್ಯಾಸ್ಪದ ಹೇಳಿಕೆ ಕೊಟ್ಟು ವಿವಾದಕ್ಕೆ ಗುರಿಯಾದ ಸಂದರ್ಭದಲ್ಲಿ ನನ್ನ ನೆನಪಿಗೆ ಬಂದಿದ್ದು ಭಾರತೀಯ ಮೇಲ್ಜಾತಿಯಲ್ಲಿ ಇಂತಹ ಸಂಕುಚಿತ ಬುದ್ಧಿ ಇರದೇ ಇದ್ದಿದ್ದರೆ ಬಹುಶಃ ಭಾರತ ದೇಶವು ವಿಭಜನೆಗೊಳ್ಳುತ್ತಲೇ ಇರಲಿಲ್ಲ ಎಂಬ ಅಂಶ!

ಈ ಮೀನುಗಾರಿಕೆಗೂ, 1947ರ ನಮ್ಮ ದೇಶದ ವಿಭಜನೆಗೂ ಏನು ಸಂಬಂಧ ಎಂಬ ಪ್ರಶ್ನೆ ಏಳಬಹುದು.



ಮೊಹಮ್ಮದ್ ಅಲಿ ಜಿನ್ನಾರ ಹಿಂದೂ ಅಜ್ಜ ಮೀನುಗಾರಿಕೆಯಲ್ಲಿ ತೊಡಗಿದ್ದಕ್ಕಾಗಿ ಅವರ ಮೇಲ್ಜಾತಿ ಬಂಧುಗಳು ಅವರನ್ನು ಸಮಾಜದಿಂದ ಬಹಿಷ್ಕರಿಸಿದ್ದರು. ಹಾಗೆ ಬಹಿಷ್ಕರಿಸದಿದ್ದರೆ ಬಹುಶಃ ಅವರ ಮಗ ಇಸ್ಲಾಂ ಧರ್ಮ ಸ್ವೀಕರಿಸುತ್ತಲೂ ಇರಲಿಲ್ಲ, ಅವರ ಮೊಮ್ಮಗ ಪಾಕಿಸ್ತಾನದ ಸೃಷ್ಟಿಕರ್ತನೂ ಆಗುತ್ತಿರಲಿಲ್ಲ.

ಇದೆಲ್ಲ ಆದದ್ದು ಹೀಗೆ: ಪ್ರೇಂಜಿಭಾಯಿ ಠಕ್ಕರ್ ಎಂಬುವವರು ಗುಜರಾತಿನ ವೇರಾವಲ್ (ಸೌರಾಷ್ಟ್ರ) ನಲ್ಲಿ ಸಣ್ಣ ವ್ಯಾಪಾರಸ್ಥರಾಗಿದ್ದರು. ಇವರು ಹಿಂದೂ ಮೇಲ್ಜಾತಿಯಾದ 'ಲೋಹಾಣ' ಎಂಬ ರಜಪೂತ ಜಾತಿಗೆ ಸೇರಿದವರಾಗಿದ್ದು ಈ ಜಾತಿಯವರು ಶುದ್ಧ ಶಾಖಾಹಾರಿಗಳು. ಮೀನು ತಿನ್ನದಿದ್ದರೇನಂತೆ ಲಾಭದಾಯಕ ಮೀನಿನ ವ್ಯಾಪಾರ ಮಾಡುವುದಕ್ಕೆ ಏನು ಅಡ್ಡಿ ಎಂಬ ಭಾವನೆಯಿಂದ ಪ್ರೇಂಜಿಭಾಯಿ ಮೀನಿನ ವ್ಯಾಪಾರದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇದಕ್ಕೆ ಅವರ ಜಾತಿಯ ನೇತಾರರಿಂದ ಆಕ್ಷೇಪಗಳು ಬಂದವು. ಆದರೂ ಅವರ ವಾದ ಒಂದೇ: "ನಾನು ಕೇವಲ ಮೀನಿನ ವ್ಯಾಪಾರ ಮಾಡುತ್ತಿದ್ದೇನೆಯೇ ಹೊರತು ಮೀನು ತಿನ್ನುತ್ತಿಲ್ಲವಲ್ಲ? ಹಾಗಾಗಿ ನಾನು ಜಾತಿ ಭ್ರಷ್ಟ ಹೇಗಾಗಲು ಸಾಧ್ಯ?"


ತಮ್ಮ ವಿರುದ್ಧದ ವಿರೋಧಗಳನ್ನು ಲೆಕ್ಕಿಸದೇ ಅವರು ಮೀನಿನ ವ್ಯಾಪಾರ ಮುಂದುವರಿಸಿ ದೊಡ್ಡ ಶ್ರೀಮಂತರಾದರು. ಅನಂತರ ಮೀನಿನ ವ್ಯಾಪಾರ ಬಿಟ್ಟು ಹತ್ತಿಯ ವ್ಯಾಪಾರದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆದರೂ ಅವರ ಲೋಹಾಣ ಜನಾಂಗದವರು ಅವರನ್ನು ಕ್ಷಮಿಸಿ ತಮ್ಮೊಳಗೆ ಸೇರಿಸಿಕೊಳ್ಳಲೇ ಇಲ್ಲ. ಅವರು ಆಗರ್ಭ ಶ್ರೀಮಂತರಾದರೂ ಸ್ವಜಾತಿಯ ಎಲ್ಲಾ ಸಭೆ ಸಮಾರಂಭಗಳಲ್ಲಿ ಅವರನ್ನು ಅವಮಾನಿಸಲಾಗುತ್ತಿತ್ತು.

ಅವರಿಗೆ ಜಿನ್ನಾಭಾಯಿ ಪೂಂಜಾಲಾಲ್ ಎಂಬ ಹೆಸರಿನ ಒಬ್ಬ ಮಗನಿದ್ದ. ಅವನು ಚಿಕ್ಕವನಿದ್ದಾಗಲೇ ತಂದೆ ಪ್ರೇಂಜಿಭಾಯಿ ಮೀನಿನ ವ್ಯಾಪಾರ ಬಿಟ್ಟುಬಿಟ್ಟಿದ್ದರು. ಆದರೂ ತಂದೆಗಾಗುತ್ತಿದ್ದ ನಿರಂತರ ಅವಮಾನ ನೋಡಿ-ನೋಡಿ ಜಿನ್ನಾಭಾಯಿಯ ಮನಸ್ಸು ಕುದಿಯುತ್ತಿತ್ತು. ಅವಮಾನದ ಬೇಗುದಿಯಲ್ಲೇ ತಂದೆ ಸತ್ತಾಗ ಜಿನ್ನಾಭಾಯಿಯ ಸಹನೆಯ ಕಟ್ಟೆಯೊಡೆದು, ಅವರು ತನ್ನ ಹಿಂದೂ ಹೆಂಡ ಮೀಠಿಬಾಯಿ ಸಹಿತ ಇಸ್ಲಾಂ ಧರ್ಮಕ್ಕೆ ಮತಾಂತ ಹೊಂದಿದರು. ಅವರ ಮೇಲೆ ಶಿಯಾ ಪಂಥದ ಸೂ ಸಂತರ ಪ್ರಭಾವ ಇದ್ದುದರಿಂದ ಅವರು ಶಿಯ (ಇಸ್ಮಾಯಿಲಿ-ಖೋಜಾ) ಪಂಥಕ್ಕೆ ಮತಾಂತರ ಹೊಂದಿದರು

ನಂತರ ಜಿನ್ನಾಭಾಯಿಯು ತನ್ನ ವ್ಯಾಪಾರವನ್ನು ಸಿಂಧ ಪ್ರಾಂತದ ಕರಾಚಿಗೆ ಸ್ಥಳಾಂತರಿಸಿದರು. ಅಲ್ಲಿ ಅವರಿ ಏಳು ಮಕ್ಕಳಾದವು - ನಾಲ್ಕು ಗಂಡು, ಮೂರು ಹೆಣ್ಣು ಮೊದಲನೇ ಮಗನಾದ ಮಹಮ್ಮದಲಿ ಕರಾಚಿಯಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿ ನಂತ ಇಂಗ್ಲೆಂಡಿಗೆ ಹೋಗಿ ಕಾನೂನು ಕಾಲೇಜಿಗೆ ಸೇರಿಕೊಂಡ ಅವರ ಪೂರ್ಣ ಹೆಸರಿದ್ದದ್ದು 'ಮೊಹಮ್ಮದಲಿ ಜಿನ್ನಾಭಾಯಿ ಪೂಂಜಾ' ಎಂಬುದಾಗಿ.

ಪೂರ್ಣವಾಗಿ ಇಂಗ್ಲಿಷರ ಮನಸ್ಥಿತಿ ಬೆಳೆಸಿಕೊಂಡಿ ಮೊಹಮ್ಮದಲಿಗೆ ಈ ಉದ್ದ ಗುಜರಾತಿ ಹೆಸರು ಹಳ್ಳಿಯ ಹೆಸರಂತೆ ಕಾಣಿಸಿತಂತೆ. ಅದಕ್ಕಾಗಿ ತನ್ನ ಮೂಲ ಹಿಂದೂ ಕುಲನಾಮವಾದ 'ಪೂಂಜಾ' ಎಂಬುದನ್ನು ತೆಗೆದು ಹಾ ತಂದೆಯ ಗುಜರಾತಿ-ಹಿಂದೂ ಹೆಸರನ್ನೂ ಹ್ರಸ್ವಗೊಳಿ 'ಜಿನ್ನಾಭಾಯಿ'ಯಿಂದ ಕೇವಲ 'ಜಿನ್ನಾ' ಎಂದ ಬದಲಾಯಿಸಿಕೊಂಡು ಲಾ ಕಾಲೇಜಿನಲ್ಲಿ ಅದನ್ನ ನೋಂದಾಯಿಸಿಕೊಂಡರು. ಹೀಗೆ ಅವರ ತಂದೆಯ ಹೆಸರಾದ 'ಜಿನ್ನಾಭಾಯಿ' ಎಂಬುದು 'ಜಿನ್ನಾ' ಎಂದ ಗಿಡ್ಡವಾಗಿ ಅವರ ಕುಲನಾಮವಾಗಿ (ಸರ್‌ನೇಮ ಪರಿವರ್ತನೆಗೊಂಡು ಭಾರತ-ಪಾಕಿಸ್ತಾನದ ಇತಿಹಾ


ೀಗುವುದಿಲ್ಲ.
ಇದನ್ನು ನೋಡಿದಾಗ ತುರ್ತು ಪರಿಸ್ಥಿತಿಯ ಕಾಲ
ಾಗುತ್ತದೆ. ಜನ ರೊಚ್ಚಿಗೆದ್ದಿದ್ದರು. ಜನತಾಪಕ್ಷವನ್ನು
ಾರಕ್ಕೆ ತಂದರು. ಆಗಿನ ಮಂತ್ರಿಗಳು ಮಾಡಿದ ಮೊದಲ
- ವಿಶಾಲ ಬಂಗಲೆಗಳಿಗಾಗಿ ಹೋರಾಟ!
ಯಾರು ಅಧಿಕಾರಕ್ಕೆ ಬಂದರೂ ಅಷ್ಟೆ. ಹಿಂದಿನ
ು ಹಾರಿಹೋಗುತ್ತದೆ. ಆರಾಮ ಜೀವನಶೈಲಿಯ
ೀತಕವಾಗಿ 'ವಿಶಾಲ' ಬಂಗಲೆಗಳು ಬೇಕಾಗುತ್ತದೆ.
ಪುಟ್ಟಣ್ಣಯ್ಯ ಮೇಲುಕೋಟೆ ಕ್ಷೇತ್ರದ ಶಾಸಕರು. ಮಿನಿ
ಾನಸೌಧದ ಕಟ್ಟಡದಲ್ಲಿ ಅವರಿಗೆ ಎರಡು ಕೊಠಡಿಗಳು.
ನ್ನದ ಗೋಡೆ ಕುಕ್ಕಿ ಬಾಗಿಲು ಹಾಕಿದರು.
ಯಾರು ಹೀಗೆ ಮಾಡಿದವರು?
ಶಾಸಕರು ತಮ್ಮ ಹೊಣೆಯಲ್ಲ ಎನ್ನುತ್ತಾರೆ.
ಅಧಿಕಾರಿಗಳೇ ಹೀಗೆ ಮಾಡಿರಬಹುದು. ಅಂತೂ
ೀಡೆ ಕುಕ್ಕಿರುವುದು ಸತ್ಯ.
'ಇದು ವಾಸ್ತು ಮೌಢ್ಯ' ಜೆಡಿಎಸ್‌ನವರ ಆಕ್ಷೇಪಣೆ.
'ಅಲ್ಲ, ಸಂದರ್ಶಕರ ಸಂಪರ್ಕದ ಅನುಕೂಲಕ್ಕಾಗಿ'
ತಸಂಘದವರ ಸಮಜಾಯಿಷಿ.
ಯಾವ ಶಾಸಕನೂ ಹೇಳಿದಂತೆ ನಡೆಯುವುದಿಲ್ಲ.
ರು ಏನು ಹೇಳುತ್ತಾರೋ ಅದಕ್ಕೆ ವಿರುದ್ಧವಾಗಿ
ರ್ಥಮಾಡಿಕೊಂಡರೆ ಸತ್ಯಕ್ಕೆ ಹತ್ತಿರ. ಇದು ಜನಸಾಮಾನ್ಯರ
ಿಕೆ. ಇದೂ ಹಾಗೆಯೇ ಎಂಬ ಆರೋಪ.
ಎಲ್ಲ ಶಾಸಕರಂತಲ್ಲ ಪುಟ್ಟಣ್ಣಯ್ಯ ಎಂದು
ೂಪಿಸಬೇಕು ಹೇಗೆ? ಇದು ರೈತಸಂಘದ ಚಿಂತನೆ.
ಏನು ಮಾಡಿತು ರೈತಸಂಘ?
'ವಾಸ್ತುತಜ್ಞ'ನನ್ನು ಕರೆಸಿತು. 'ಹೊಸದಾಗಿ ಹಾಕಿರುವ
ಗಿಲು ವಾಸ್ತು ದೋಷದಿಂದ ಕೂಡಿದೆ' ಎಂದು
ಳಿಸಿತು!
'ವಾಸ್ತು ವ್ಯಸನಿ' ಅಲ್ಲ ಎಂಬುದಕ್ಕೆ 'ವಾಸ್ತು ತಜ್ಞ'ನ
ರ್ಟಿಫಿಕೇಟು!
ಮೌಢ್ಯದ ಪರಾಕಾಷ್ಠೆ!
ಸಂಬಂಧಿಸಿದ ಸರ್ಕಾರಿ ನೌಕರರು ಏನು ಹೇಳುತ್ತಾರೆ?
ವಾಸ್ತು ಗೀಸ್ತು ಏನೂ ಇಲ್ಲ. ಸಂಪರ್ಕ ಸಲೀಸಾಗಲು
ನ್ನು ಮಾಡಲಾಗಿದೆ!
ತಜ್ಞ ಇಂಜಿನಿಯರುಗಳು ರೂಪಿಸಿರುವ ಕಟ್ಟಡ ಇದು.
ರಿಗೆ ಸಂಪರ್ಕಕ್ಕಾಗಿ ಬಾಗಿಲು ಬೇಕು ಎಂಬ ಕನಿಷ್ಠ
ರ ಗೋಡೆ ನಿರ್ಮಿಸುವಾಗ ಇರಲಿಲ್ಲವೇ?
ಹುಚ್ಚು ಮುಂಡೆ ಮದುವೇಲಿ ಉಂಡವನೇ ಜಾಣ.



ಜಗಳ ಜಸ್ಟ್ ಮಾತುಮಾತಲ್ಲಿ...

ಸುದೀಪ್ ಮತ್ತು ರಮ್ಯಾ ನಡುವೆ ಯಾವಾಗಲೂ ಒಂದು ರೀತಿಯ ಕೋಳಿ ಜಗಳ ನಡೆಯುತ್ತಲೇ ಇರುತ್ತದೆ. ಸುಮಾರು ಮೂರು ವರ್ಷಗಳ ಹಿಂದೆ ಇವರಿಬ್ಬರು 'ಜಸ್ಟ್ ಮಾತ್‌ಮಾತಲ್ಲಿ' ಎಂಬ ಚಿತ್ರದಲ್ಲಿ ನಟಿಸುತ್ತಿದ್ದಾಗ ಇವರಿಬ್ಬರ ನಡುವೆ ವೈಮನಸ್ಸು ಹುಟ್ಟಿಕೊಂಡಿತ್ತು. ಅದು ಯಾವ ಮಟ್ಟಕ್ಕೆ ಹೋಯಿತೆಂದರೆ ಕೊನೆಗೆ ಆ ಚಿತ್ರದ ಒಂದು ಹಾಡನ್ನು ಚಿತ್ರೀಕರಿಸಲು ರಮ್ಯಾ ಕೇವಲ ಅರ್ಧ ಗಂಟೆಯೋ, ಒಂದು ಗಂಟೆಯೋ ಕಾಲಾವಕಾಶ ಕೊಟ್ಟಿದ್ದು ಸುದ್ದಿಯೂ ಆಗಿತ್ತು. ಹಾಗಂತ ಅವರಿಬ್ಬರು ಯಾವತ್ತೂ ಬಹಿರಂಗವಾಗಿ ಪರಸ್ಪರ ದೋಷಾರೋಪಣೆಯ ಹೇಳಿಕೆಗಳನ್ನು ನೀಡಿಲ್ಲ.

ಇದೀಗ ಇವರಿಬ್ಬರು ಮತ್ತೆ ಒಂದು ಚಿತ್ರದಲ್ಲಿ ಒಟ್ಟಾಗುತ್ತಿದ್ದಾರೆ. ವಿಶೇಷ ಎಂದರೆ ಸುದೀಪ್ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. "ಸುದೀಪ್ ಜೊತೆ ನಟಿಸುವುದು ನಿಜಕ್ಕೂ ಸಂತೋಷದ ಸುದ್ದಿ" ಎಂದು ರಮ್ಯಾ ಟ್ವೀಟ್ ಮಾಡಿ ಸುದ್ದಿಯನ್ನು ಬಹಿರಂಗಪಡಿಸಿದ್ದಾರೆ. ಅಲ್ಲಿಗೆ ರಮ್ಯಾ ಮತ್ತು ಸುದೀಪ್ ನಡುವಿನ ಕೋಳಿ ಜಗಳಕ್ಕೆ ಅಂತಿಮ ತೆರೆ ಬಿದ್ದಂತಾಯಿತೇ? ಗೊತ್ತಿಲ್ಲ. "ಇವರಿಬ್ಬರು ಜೊತೆಯಾಗಿ ನಟಿಸುತ್ತಲೇ ತಮ್ಮ ಜಗಳವನ್ನು ಮುಂದುವರೆಸುವ ಪೈಕಿ" ಎಂದು ಹಲವು ಗಾಂಧಿನಗರಿಗಳು ಮುಸಿಮುಸಿ ನಗುತ್ತಿದ್ದಾರೆ.



ಭಟ್ಟರ ತಲೆಗೆ ಹಿಂದಿ ಹೆಲ್ಮೆಟ್

'ಮುಂಗಾರು ಮಳೆ' ಚಿತ್ರ ನಿರ್ದೇಶಿಸಿದ ನಂತರ ಯೋಗರಾಜ್ ಭಟ್ ಕನ್ನಡ ಚಿತ್ರರಂಗದಲ್ಲಿ ದಿಢೀರನೆ ಚಾಲ್ತಿಗೆ ಬಂದಿದ್ದು ನಿಮಗೆಲ್ಲ ಗೊತ್ತೆ ಇದೆ. ಆ ಚಿತ್ರ ರಾಜ್ಯಾದ್ಯಂತ ಜಯಭೇರಿ ಬಾರಿಸಿದ್ದನ್ನು ಕಂಡು ಹಲವರು "ಸದ್ಯದಲ್ಲೇ ಭಟ್ಟರು ಹಿಂದಿ ಚಿತ್ರರಂಗದ ಕಡೆಗೆ ಪ್ರಯಾಣ ಹೊರಡುತ್ತಾರೆ" ಎಂದು ಮಾತನಾಡಿಕೊಂಡಿದ್ದರು. ಈ ಬಗ್ಗೆ ಭಟರು ಎಂದೂ ನೇರವಾಗಿ ಮಾತನಾಡಿರದಿದ್ದರೂ ಅವರ ಮನಸ್ಸಿನಾಳದಲ್ಲಿ ಒಂದು ಹಿಂದಿ ಚಿತ್ರವನ್ನು ನಿರ್ದೇಶಿಸುವ ಆಶೆ ಇದ್ದೇಇತ್ತು. ಇದೀಗ ಆ ಸುದ್ದಿಯನ್ನು ಯೋಗರಾಜ್ ಭಟ್ಟರೇ ಕನ್‌ಫರ್ಮ್ ಮಾಡಿದ್ದಾರೆ. ಸದ್ಯದಲ್ಲೆ ಅವರು 'ಹೆಲ್ಮೆಟ್' ಎಂಬ ಹಿಂದಿ ಚಿತ್ರ ಆರಂಭಿಸಲಿದ್ದಾರಂತೆ. ಹೊಸ ನಾಯಕನಾಯಕಿಯನ್ನು ಈ ಚಿತ್ರದ ಮುಖಾಂತರ ಪರಿಚಯಿಸುವ ಇರಾದೆಯನ್ನು ಹೊಂದಿರುವ ಭಟ್ಟರು ಒಂದಿಬ್ಬರು ಹಿಂದಿಯ ದೊಡ್ಡ ತಾರೆಗಳನ್ನೂ ಚಿತ್ರದಲ್ಲಿ ಸೇರಿಸಿಕೊಳ್ಳಲಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ.

ಈ ಹಿಂದೆ ಕನ್ನಡ ಚಿತ್ರಗಳ ನಿರ್ದೇಶಕರಾದ ರಾಜೇಂದ್ರ ಸಿಂಗ್ ಬಾಬು, ಕಾಶೀನಾಥ್, ಎ.ವಿ.ರಾಜು ಮೊದಲಾದವರು ಹಿಂದಿ ಚಿತ್ರರಂಗಕ್ಕೆ ಹೋಗಿ ತಮ್ಮ ಅದೃಷ್ಟವನ್ನು ಪರೀಕ್ಷಿಸಿದ್ದರು. ಅವರೆಲ್ಲರಿಗೆ ಒಲಿಯದ ವಿಜಯಲಕ್ಷ್ಮಿ ಈಗ ಭಟ್ಟರಿಗೆ ಒಲಿಯುತ್ತಾಳೋ ನೋಡಬೇಕು.


ಥಂಡಾ ಹೊಡೆದ ನಿರ್ಮಾಪಕರು

ಸುದೀಪ್ ನಟಿಸಲಿರುವ ಮುಂದಿನ ಚಿತ್ರ ಯಾವುದು ಎಂಬ ಬಗ್ಗೆ ದೊಡ್ಡ ಗೊಂದಲ ಇತ್ತು. ಇಂತಹ ಗೊಂದಲದ ನಡುವೆಯೇ ಸುದೀಪ್ ನಿರ್ಮಿಸಿ-ನಿರ್ದೇಶಿಸಲಿರುವ ಚಿತ್ರವೊಂದು ಸದ್ಯದಲ್ಲಿ ಸೆಟ್ಟೇರಲಿದೆ ಎಂಬ ಸುದ್ದಿ ಕೇಳಿಬಂದಿದೆ.




ನಿರ್ಮಾಪಕರಾದ ಕೆ.ಸಿ.ಎನ್. ಕುಮಾರ್, ಸೂರಪ್ಪ ಬಾಬು ಮತ್ತು ಚಂದ್ರಶೇಖರ್ ಅವರಿಂದ ಸುದೀಪ್ ಮುಂಗಡ ಹಣ ಪಡೆದು ಅನೇಕ ಸಮಯವೇ ಕಳೆದುಹೋಗಿದೆ. ಆದರೂ ಅವರ್‍ಯಾರಿಗೂ ಸುದೀಪ್ ತಮ್ಮ ಕಾಲ್‌ಶೀಟ್ ಅನ್ನು ಇಲ್ಲಿಯವರೆಗೆ ನೀಡಿಲ್ಲ. ನಾಳೆ ಸುದೀಪ್ ಕಾಲ್‌ಶೀಟ್ ಸಿಗುತ್ತದೆ, ನಾಡಿದ್ದು ಸಿಗುತ್ತದೆ ಎಂಬ ಭಾವನೆಯಲ್ಲೇ ಈ ಮೂವರು ಸುದೀಪ್‌ಗಾಗಿ ತಮ್ಮ ತಮ್ಮ ತಂಡದವರಿಂದ ಚಿತ್ರಕತೆಗಳನ್ನು ಬರೆಸುತ್ತಲೇ ಇದ್ದಾರೆ. ಈಗ ನೋಡಿದರೆ ಸುದೀಪ್ ತಾವೇ ತಮ್ಮ ಮುಂದಿನ ಚಿತ್ರ ನಿರ್ಮಿಸಿ-ನಿರ್ದೇಶಿಸಲು ಸಜ್ಜಾಗಿರುವ ಸುದ್ದಿ ಕೇಳಿ ಈ ಮೂವರು ಥಂಡಾ ಹೊಡೆದಿದ್ದಾರೆ. ಆದರೂ ಗೆಲ್ಲುವ ಕುದುರೆಯಾಗಿರುವ ಸುದೀಪ್‌ರನ್ನು "ಯಾಕೆ ಹೀಗೆ ಮಾಡುತ್ತಿದ್ದೀರಿ?" ಎಂದು ಕೇಳುವ ಧೈರ್ಯ ಇಲ್ಲದೆ ತೆಪ್ಪಗಿದ್ದಾರೆ!

ಬಿಗ್‌ಬಾಸ್ ಯಾರು?




ನಾಯಕ ನಟ ಸುದೀಪ್ ನಡೆಸಿಕೊಡುವ 'ಬಿಗ್‌ಬಾಸ್' ಕಾರ್ಯಕ್ರಮ ಬರುವ ಜೂನ್ 28ಕ್ಕೆ ಮುಕ್ತಾಯವಾಗಲಿದೆ. ಈ ಕಾರ್ಯಕ್ರಮದ ವಿಜೇತರಾಗಿ ಯಾರು ಹೊರಹೊಮ್ಮುತ್ತಾರೆ ಎಂಬ ಕುತೂಹಲ ಮತ್ತು ಚರ್ಚೆ ಈಗ ಆರಂಭವಾಗಿದೆ. ನಮಗೆ ದೊರೆತಿರುವ ಮಾಹಿತಿಯ ಪ್ರಕಾರ ಕೊನೆಯಲ್ಲಿ 'ಬ್ರಹ್ಮಾಂಡ' ಕುಖ್ಯಾತಿಯ ನರೇಂದ್ರಶರ್ಮ ಮತ್ತು ಕಲಾನಿರ್ದೇಶಕ ಅರುಣ್ ಸಾಗರ್ ಫೈನಲ್ ಹಂತವನ್ನು ತಲುಪಲಿದ್ದಾರೆ. ಅಷ್ಟೇ ಅಲ್ಲ, ಫೈನಲ್ಸ್‌ನಲ್ಲಿ ಅರುಣ್ ಸಾಗರ್ ಅಂತಿಮ ವಿಜಯಿ ಅಭ್ಯರ್ಥಿಯಾಗಿ ಘೋಷಣೆಯಾಗುವ ಸಾಧ್ಯತೆಯೇ ಹೆಚ್ಚು.



ಖ್ಯಾತ ರಂಗಕರ್ಮಿ ಬಿ.ವಿ.ಕಾರಂತರ ಗರಡಿಯಲ್ಲಿ ಪಳಗಿದ ಅರುಣ್ ಸಾಗರ್ ಹೆಗ್ಗೋಡಿನ ನೀನಾಸಂನಲ್ಲಿ ತರಬೇತಿ ಪಡೆದವರು. ಹೀಗಾಗಿ ಕಲೆ, ನಾಟಕ, ಸಾಹಿತ್ಯದ ಬಗ್ಗೆ ಅಪಾರವಾದ ಅಭಿರುಚಿಯನ್ನು ಅರುಣ್ ಬೆಳೆಸಿಕೊಂಡಿದ್ದಾರೆ.



'ಬಿಗ್‌ಬಾಸ್' ಕಾರ್ಯಕ್ರಮದಲ್ಲಿ ಬೇರೆಲ್ಲ ಸ್ಪರ್ಧಾರ್ಥಿಗಳಿಗಿಂತ ಹೆಚ್ಚು ಪ್ರೇಕ್ಷಕರ ಮನಸ್ಸನ್ನು ಗೆದ್ದಿರುವವರು ಅರುಣ್ ಸಾಗರ್. ಆದ್ದರಿಂದ ಅವರ ಪ್ರತಿಭೆಗೆ ಪ್ರೇಕ್ಷಕರು ಮತ ನೀಡಿ ಅವರನ್ನು ಗೆಲ್ಲಿಸುವ ಮಾತು ಕೇಳಿಬರುತ್ತಿದೆ.



ಾದಿಸಿರುವಂತೆ ಇದಕ್ಕೆ ಯಾವುದೇ ಶುಲ್ಕವನ್ನು ಕಂಪನಿ
ಗ್ರಹ ಮಾಡುವುದಿಲ್ಲ. (ಈ ಹಿಂದೆ ಸದಸ್ಯತ್ವ (ಐಬಿಒ)
ಯಲು 4500 ರೂ.ಗಳನ್ನು ಪಾವತಿಸಬೇಕಿತ್ತಂತೆ.)
ಐಬಿಒಗಳನ್ನು ಮಾಡಿಸಿದವರಿಗೂ ಕಂಪನಿಯಿಂದ
ುವುದೇ ಕಮೀಶನ್ ಇಲ್ಲ. ಈ ರೀತಿ ಸದಸ್ಯರಾದವರು
ಬೇಕಾದ ಕನಿಷ್ಠ ಅಗತ್ಯವೂ ಇಲ್ಲ. ಆದರೆ ಹೊಸದಾಗಿ

ಐಬಿಒಗಳಾದವರು ಒಮ್ಮೆಗೇ ಸುಮಾರು ಏಳು ಸಾವಿರದಷ್ಟು ವಸ್ತುಗಳನ್ನು ಕೊಂಡಲ್ಲಿ ಸುಮಾರು 900 ರೂ. ಬೆಲೆಯ ವಸ್ತು ಉಚಿತವಾಗಿ ಕೊಡಲಾಗುತ್ತದೆ. ಒಂದು ತಿಂಗಳೊಳಗಾಗಿ ಮತ್ತೊಮ್ಮೆ ಇಷ್ಟೇ ಬೆಲೆಯ ವಸ್ತುಗಳನ್ನು ಕೊಂಡರೆ 1000 ರೂ.ಗಳ ರಿಯಾಯತಿ ದೊರಕುತ್ತದೆ. ಇದು ಕಡ್ಡಾಯವಲ್ಲ. ಅವರಿಗಿರುವ ಆಯ್ಕೆಯಷ್ಟೇ.

ಎಷ್ಟು ಸದಸ್ಯತ್ವ ಮಾಡಲಾಯಿತು ಎನ್ನುವುದು ಇಲ್ಲಿ ಮುಖ್ಯವಲ್ಲ. ಒಟ್ಟು ವ್ಯವಹಾರದ ಮೇಲೆ ಇಲ್ಲಿ ಕಮೀಶನ್ ಲೆಕ್ಕಾಚಾರ ನಡೆಯುವುದು. ಪ್ರತಿ ಐಬಿಒ ಕೊಂಡ ವಸ್ತುಗಳಿಗೆ ಶೇ.20ರ ರಿಯಾಯತಿ ದೊರೆಯುತ್ತದೆ. ಆತ ರೆಕಮೆಂಡ್ ಮಾಡಿದ ಐಬಿಒಗಳ ವ್ಯವಹಾರದ ಮೊತ್ತವನ್ನೂ ಇವನ ವ್ಯವಹಾರಕ್ಕೆ ಕೂಡಿಸಿ ಒಟ್ಟು ತಿಂಗಳಿಗೆ ಆದ ವ್ಯವಹಾರದ ಮೇಲೆ ವಿವಿಧ ಸ್ಲಾಬ್‌ಗಳಲ್ಲಿ ಶೇ.6 ರಿಂದ ಶೇ.21ರವರೆಗೆ ಕಮೀಶನ್ ನೀಡಲಾಗುತ್ತದೆ. ಹೀಗೆ ಇದು ವ್ಯವಹಾರದ ಮೇಲೆ ಪಡೆಯುವ ಕಮೀಶನ್ ಹೊರತು ಸದಸ್ಯರನ್ನು ಸೇರಿಸುವುದರಿಂದ ದೊರಕುವುದಲ್ಲ.



ಪ್ರತಿ ಜಿಲ್ಲೆಗೊಬ್ಬ ಏರಿಯಾ ಮೇನೇಜರ್ ವ್ಯವಸ್ಥಿತವಾಗಿ ಕಂಪನಿ ನೇಮಿಸಿದೆಯೆಂಬುದೂ ಸತ್ಯವಲ್ಲ.

ಕಂಪನಿಯ ಉತ್ಪನ್ನಗಳು ಗುಣಮಟ್ಟದಲ್ಲಿ ಅತ್ಯಂತ ಉತ್ತಮವಾಗಿವೆ. ವಸ್ತುಗಳ ಬೆಲೆಯಲ್ಲಿ ಉತ್ಪಾದಕ ಮತ್ತು ಗ್ರಾಹಕನ ನಡುವೆ ಬರುವ ಮಧ್ಯವರ್ತಿಗಳಿಗೆ ಖರ್ಚಾಗುವ ಶೇ.6ರಷ್ಟನ್ನು ನೇರವಾಗಿ ಗ್ರಾಹಕ(ಐಬಿಒ)ರಿಗೇ ಕಮೀಶನ್ ಮೂಲಕ ಹಿಂದಿರುಗಿಸುತ್ತದೆ. ಇಲ್ಲಿ ಸದಸ್ಯತ್ವ ಶುಲ್ಕವಿಲ್ಲದೇ ಇರುವುದರಿಂದ, ಕೊಳ್ಳಬೇಕಾದ ಕಡ್ಡಾಯವೂ ಇಲ್ಲದಿರುವುದರಿಂದ ಸದಸ್ಯರಾಗಿ ವಸ್ತುಗಳನ್ನು ಬಳಸಿ, ಬೇರೆಯವರಿಗೆ ರೆಕಮೆಂಡ್ ಮಾಡಿ ಹಣಗಳಿಸಬಹುದಾಗಿದೆ.

ಕೇರಳದಲ್ಲಿ ನಡೆಯುತ್ತಿರುವುದು ಕಂಪನಿಯ ನಿಯಮಗಳನ್ನು ಉಲ್ಲಂಘಿಸಿರುವುದಾಗಿದೆ. ಇಂತಹರಿಗೆ ಶಿಕ್ಷೆಯಾಗಬೇಕಾದದ್ದು ಸಾಧುವೂ, ಸಹಜವೂ ಆಗಿದೆ.

- ರಾಯಲ್ಪಾಡು ರಘುವೇಂದ್ರ, ಕೋಲಾರ

ಬವಂತಾಯಿತು.
ಅಷ್ಟೇ ಅಲ್ಲ, ದಿನಕ್ಕೆ ಐದು ಸಾರಿ ಬಿಡಿ, ಶುಕ್ರವಾರವೂ
ಾಜ್ ಮಾಡದಿದ್ದ, ಸರಿಯಾಗಿ ಕುರಾನ್ ಓದದಿದ್ದ
ಪರ ಮಾನಸಿಕತೆ ಬೆಳೆಸಿಕೊಂಡಿದ್ದ ವ್ಯಕ್ತಿಯೊಬ್ಬ
ಲಿಮಿಕ್ ರಾಷ್ಟ್ರವೊಂದರ ಜನಕನಾಗಿದ್ದದ್ದು ಇತಿಹಾಸದ
ಬನೆ ಅರ್ಥಾತ್ ಮೀನುಗಾರಿಕೆಯ ಪರೋಕ್ಷ ಕಾಣಿಕೆ!
ಜಿನ್ನಾರಿಗೆ ಸರಿಯಾಗಿ ಉರ್ದು ಭಾಷೆ ಬರುತ್ತಿರಲಿಲ್ಲವಾ
ಅವರು ಹುಟ್ಟಿಸಿದ ಹೊಸ ರಾಷ್ಟ್ರಕ್ಕೆ ಉರ್ದು
ಭಾಷೆಯಾಯಿತು. ಸಿಂಧೀ ಭಾಷೆಯನ್ನು ಹಿಂದೂ



ತಿ ಮುಸ್ಲಿಮ್ ಇಬ್ಬರೂ ಅರೇಬಿಕ್
ರ್ ಉರ್ದು ಲಿಪಿಯಲ್ಲಿ ಮಾತ್ರ
ಯುವುದರಿಂದ ಕರಾಚಿಯಲ್ಲಿ ಹುಟ್ಟಿ
ದ ಜಿನ್ನಾರಿಗೆ ಅರೇಬಿಕ್ (ಉರ್ದು)
ಗೊತ್ತಿತ್ತೇ ಹೊರತು ಉರ್ದು
ಯ ಮೇಲೆ ಪ್ರಭುತ್ವವಿರಲಿಲ್ಲ.
ೂ ಅವರು ತನ್ನ ಹೊಸ ದೇಶಕ್ಕೆ
ಭಾಷೆಯಾಗಿ ಉರ್ದುವನ್ನು
ಕೊಳ್ಳಬೇಕಾಯಿತು.
ಜಿನ್ನಾಗೆ ಇಂಗ್ಲಿಷ್ ಹಾಗು ತನ್ನ
ಭಾಷೆಯಾದ ಗುಜರಾತಿಯ ಮೇಲೆ
ಅಭಿಮಾನವಿತ್ತಂತೆ. ಗಮನಿಸಿ - ಹಿಂದೂ, ಮುಸ್ಲಿಮ್,
- ಈ ಮೂರು ವಿಭಿನ್ನ ಧರ್ಮದ ಗುಜರಾತಿಗಳಾದ
ತ್ಮ ಗಾಂಧೀಜಿ, ಜಿನ್ನಾ, ದಾದಾಭಾಯಿ ನವರೋಜಿ,
ಜಾ ಮೆಹ್ತಾ, ಮೇಡಮ್ ಕಾಮಾ ಇವರೆಲ್ಲ
ಿನಲ್ಲಿ ವಿದ್ಯಾಭ್ಯಾಸ ಮಾಡಿದ್ದರೂ, ಇವರು
ಾಡುವಾಗ ಮಾತನಾಡುತ್ತಿದ್ದದ್ದು ಕೇವಲ ಗುಜರಾತಿ

ಭಾಷೆಯಲ್ಲಿಯಂತೆ. ಇವತ್ತಿಗೂ ಗುಜರಾತಿಗಳು ಎನ್.ಆರ್.ಐ ಆಗಿರಲಿ ಅಥವಾ ವಿದೇಶದಲ್ಲಿ ಕಲಿತು ಬಂದವರೇ ಆಗಿರಲಿ ಅವರು ಗುಜರಾತಿ ಭಾಷೆಯಲ್ಲೇ ಮಾತನಾಡುವುದನ್ನು ಇಷ್ಟಪಡುತ್ತಾರೆ. ಇದು ಅವರ ಮಾತೃಭಾಷಾ ಪ್ರೇಮವೇ ಹೊರತು ಮರಾಠಿಗರಂತೆ ಭಾಷಾ ದುರಾಭಿಮಾನವಲ್ಲ. ಇಂಗ್ಲಿಷ್ ಮೋಹದ ಕನ್ನಡಿಗರಿಗೆ ಇದು ಅನುಕರಣೀಯ).

ಇಸ್ಲಾಂ ಬಗ್ಗೆ ಧರ್ಮಾಂಧತೆಯಿರದ ಅಥವಾ ಉರ್ದು ಭಾಷೆಯ ಬಗ್ಗೆ ಅಭಿಮಾನವಿರದ ಇಂತಹ ಉದಾರವಾದಿ ಜಿನ್ನಾ ಕೊನೆಗೆ ಕಠೋರ ಮುಸ್ಲಿಮ್ ಕೋಮುವಾದಿಯಂತೆ ಆಡಲು ಕಾರಣ ಅವರ ಧರ್ಮಪ್ರೇಮವಲ್ಲ, ಬದಲಾಗಿ ಅವರ ಒಣಸ್ವಪ್ರತಿಷ್ಠೆಯೇ ಕಾರಣ. ಗಾಂಧೀಜಿ ಹಾಗು ಇತರ ಸ್ವಾತಂತ್ರ್ಯ ಯೋಧರೊಂದಿಗೆ ಇದ್ದ ಇಗೋ (EGO) ಸಮಸ್ಯೆಯಿಂದಾಗಿ ಅವರ ಎದುರು ತಾನು ಕುಬ್ಜನಾಗುತ್ತಿದ್ದೇನೆ ಎಂಬ ಭ್ರಮೆಯಿಂದ ಅವರನ್ನು ಹಣಿಯಲು ಮತ್ತು ತನ್ನ ಪ್ರಾಮುಖ್ಯತೆ ಹೆಚ್ಚಿಸಲು ಜಿನ್ನಾ ತನಗೆ ಪ್ರಿಯವಲ್ಲದ ಧರ್ಮವನ್ನೇ ಆಯುಧವನ್ನಾಗಿ ಮಾಡಿಕೊಂಡರು.

ಮೀನುಗಾರಿಕೆಯ ಸಮಸ್ಯೆಯಿಲ್ಲದಿದ್ದರೆ ಜಿನ್ನಾರ ತಂದೆ ಹಿಂದೂವಾಗೇ ಇರುತ್ತಿದ್ದರು ಮತ್ತು ನಮ್ಮ ದೇಶ ವಿಭಜನೆಗೊಳ್ಳುತ್ತಿರಲಿಲ್ಲವೇನೋ!

ಕೊನೆಯದಾಗಿ, ನಮ್ಮ ಕರಾವಳಿಯ ತುಳುವ ಹಿಂದೂ ಬಂಟರಲ್ಲೂ ಪೂಂಜಾ ಎಂಬ ಕುಲನಾಮವಿದೆ!!

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

'ಶಿಖಂಡಿ' ಮೋದಿ!

ಕುರುಕ್ಷೇತ್ರದಲ್ಲಿ ಭೀಷ್ಮನನ್ನು ಓಡಿಸಲು ಕೃಷ್ಣ ಶಿಖಂಡಿಯನ್ನು ಎದುರು ನಿಲ್ಲಿಸುತ್ತಾನೆ. ಬಿಜೆಪಿಯಲ್ಲಿ ಎಲ್.ಕೆ.ಅಧ್ವಾನಿ ಭೀಷ್ಮನಂತೆ. ಹಾಗೆಯೇ ರಾಜನಾಥ್ ಸಿಂಗ್ ಕೃಷ್ಣನಂತೆ. ಹಾಗಿದ್ದರೆ ಶಿಖಂಡಿ ಯಾರೂ ಅಂತೀರಾ? ಇನ್ನಾರು? ಶ್ರೀ ನರೇಂದ್ರ ಮೋದಿ!

- ರವಿಕುಮಾರ್, ಹಾಸನ

ಸಿದ್ದರಾಮಯ್ಯನವರ ಮೇಲೆ ರಾಜ್ಯದ ಜನತೆ ವಿಶ್ವಾಸವನ್ನು ಇಟ್ಟಿದ್ದಾರೆ. ಪತ್ರಿಕೆಯ ಜೂನ್ 12, 2013ರ ಸಂಚಿಕೆಯಲ್ಲಿ ಅಕ್ಕಿ ಮಾಫಿಯಾದ ನಾಗರಾಜುವನ್ನು ಕುರಿತು ಮುಖ್ಯಮಂತ್ರಿಗಳ ಕಣ್ಣು ತೆರೆಸಿದ್ದೀರಿ. ಅಕ್ಕಿ ಕಳ್ಳರಿಂದ ಸಿದ್ದು ದೂರವಿರಲಿ.

- ಬಿ.ಬಿ. ರಾಜ್, ಹಂಪಸಪ್ಪನ, ಎಚ್.ಬಿ.ಹಳ್ಳಿ

ಬಿ.ಚಂದ್ರೇಗೌಡರು ಅದೆಷ್ಟು ಚೆನ್ನಾಗಿ ಬರೆಯುತ್ತಾರೆ. ದಾ. ಸೋಮನಾಥ್ ಕೂಡ ಚೆನ್ನಾಗಿ ಬರೆಯುತ್ತಾರೆ. ಅವರಿಬ್ಬರ ಜೊತೆ ಹರಟೆ ಹೊಡೆಯಬೇಕು - ಅರ್ಥಾತ್ ಎಣ್ಣೆ ಹಾಕಬೇಕು - ಅನ್ನಿಸುತ್ತೆ!

- ನಾಗಾ, ಎಸ್‌ಎಂಎಸ್ ಮೂಲಕ

ಜೂನ್ 19, 2013ರ ಸಂಚಿಕೆಯ ಪೇಜ್ ನಂಬರ್ ಹನ್ನೊಂದರಲ್ಲಿ ಜನಾರ್ದನ ರೆಡ್ಡಿಯ ಬಂಧನದ ದಿನಾಂಕವನ್ನು ನವೆಂಬರ್ 5 ರ ಶಿಕ್ಷಕರ ದಿನಾಚರಣೆ ಎಂದು ನಮೂದಿಸಿದ್ದೀರಿ. ಅದೂ ಎರಡು ಬಾರಿ. ಇಂತಹ ತಪ್ಪು ಮರುಕಳಿಸದಿರಲಿ. 'ಗೌರಿ ಲಂಕೇಶ್ ಪತ್ರಿಕೆ' ತನಗಿರುವ ಗಾಂಭೀರ್ಯತೆಯನ್ನು ಉಳಿಸಿಕೊಳ್ಳಲಿ ಎಂದು ಆಶಿಸುತ್ತೇನೆ.

- ಮಂಜಪ್ಪ ಹುಲ್ತಿಕೊಪ್ಪ, ಈ ಮೇಲ್ ಮೂಲಕ

lankesh70@rediffmail.com
9980331427

ವಾಸ್ತುವಿನೆಡೆಗೆ ರವಿ

ಕ್ರೇಜಿಸ್ಟಾರ್ ರವಿಚಂದ್ರನ್ ತಮ್ಮ ಮನೆಯನ್ನು ರಾಜಾಜಿನಗರದಿಂದ ಹೆಬ್ಬಾಳದ ಜಕ್ಕೂರ್ ವಿಮಾನ ನಿಲ್ದಾಣದ ಪಕ್ಕಕ್ಕೆ ಶಿಫ್ಟ್ ಮಾಡಿದ್ದಾರೆ.

ಕಳೆದ ಹಲವಾರು ವರ್ಷಗಳಿಂದ ಸೋಲಿನ ಸುಳಿಯಲ್ಲೇ ಸಿಲುಕಿರುವ ರವಿಚಂದ್ರನ್ ಅವರೂ ವಾಸ್ತು ಎಂಬ ಮೌಢ್ಯಕ್ಕೆ ಶರಣಾಗಿ ತಮ್ಮ ವಾಸ್ತವ್ಯವನ್ನು ಬದಲಿಸಿದ್ದಾರೆ ಎಂದು ಹಲವರು ತರ್ಕಿಸುತ್ತಿದ್ದಾರೆ. ಇದಕ್ಕೆ ಇಂಬುಕೊಡುವಂತೆ "ರಾಜಾಜಿನಗರದ ಮನೆಯ ವಾಸ್ತು ಸರಿ ಇಲ್ಲ, ಆ ಕಾರಣಕ್ಕೆ ಅವರ ಚಿತ್ರಗಳು ಜಯಭೇರಿ ಬಾರಿಸುತ್ತಿಲ್ಲ ಎಂದು ಜ್ಯೋತಿಷಿಗಳು ಹೇಳಿದ್ದಾರಂತೆ" ಎಂದು ಹೇಳುತ್ತಿರುವ ಹಲವು ಗಾಂಧಿನಗರಿಗಳು "ಇತ್ತೀಚೆಗಷ್ಟೆ ರವಿಚಂದ್ರನ್ ತಮ್ಮ ಹೆಸರಿನ ಸ್ಪೆಲ್ಲಿಂಗ್‌ನ್ನೂ ಬದಲಾಯಿಸಿದ್ದು ನೆನಪಿದೆಯಲ್ಲವೇ?" ಎಂದು ತರ್ಕಿಸುತ್ತಿದ್ದಾರೆ.

ಆದರೆ ಕೆಲವರು "ರವಿಚಂದ್ರನ್ ಅವರ ಹೊಸ ಚಿತ್ರ 'ಅಪೂರ್ವ'ದ ಚಿತ್ರೀಕರಣ ಅವರ ಮನೆಯಲ್ಲೇ ನಡೆಯಲಿದ್ದು ಅದಕ್ಕೊಂದು ಅವರು ಒಂದು ಲಿಫ್ಟ್ ಇರುವ ಸೆಟ್‌ನ್ನು ತಮ್ಮ ಮನೆಯಲ್ಲೇ ಹಾಕಿಸಿದ್ದಾರೆ. ಈ ಕಾರಣಕ್ಕೆ ಅವರು ಮನೆಯನ್ನು ಬದಲಾಯಿಸಿದ್ದಾರಷ್ಟೇ."

ವಾಸ್ತವವೇನೆಂದರೆ 'ಪ್ರೇಮಲೋಕ', 'ರಣಧೀರ', 'ರಾಮಾಚಾರಿ', 'ಅಂಜದ ಗಂಡು' ಸೇರಿದಂತೆ ಅನೇಕಾನೇಕ ಯಶಸ್ವಿ ಸಿನಿಮಾಗಳನ್ನು ರವಿಚಂದ್ರನ್ ರಾಜಾಜಿನಗರದ ಮನೆಯಲ್ಲಿ ಇದ್ದಾಗಲೇ ಮಾಡಿದ್ದರು. ಅಷ್ಟೇ ಯಾಕೆ, ಅವರು ಹುಟ್ಟಿ ಬೆಳೆದದ್ದೂ ಇದೇ ಮನೆಯಲ್ಲಿ, ಅವರ ತಂದೆ ವೀರಾಸ್ವಾಮಿಯವರೂ ಚಿತ್ರರಂಗದಲ್ಲಿ ಅತ್ಯಂತ ಎತ್ತರದ ಸ್ಥಾನವನ್ನು ತಲುಪಿದ್ದು ಕೂಡ ಈ ಮನೆಯಲ್ಲಿ ವಾಸವಿದ್ದಾಗಲೆ.

ಕನ್ನಡ ಚಿತ್ರರಂಗದಲ್ಲಿ ವಜ್ರೇಶ್ವರಿ ಸಂಸ್ಥೆ ಮತ್ತು ಈಶ್ವರಿ ಸಂಸ್ಥೆ ಎರಡೂ ತಮ್ಮದೇ ಆದ ಇತಿಹಾಸವನ್ನು ಹೊಂದಿವೆ. ಈ ಸಂಸ್ಥೆಗಳ ಮಾಲೀಕರ ಮನೆ ಒಂದು ರೀತಿಯಲ್ಲಿ ಚೇಂಬರ್‌ಗೆ ಪರ್ಯಾಯವಾಗಿ ಕಾರ್ಯ ನಿರ್ವಹಿಸಿದ್ದವು. ಯಾಕೆಂದರೆ ಹಲವಾರು ಬಾರಿ ಚೇಂಬರ್‌ನಲ್ಲಿ ಪರಿಹರಿಸಲಾಗದ ಸಮಸ್ಯೆಗಳು ವಜ್ರೇಶ್ವರಿ ಅಥವಾ ಈಶ್ವರಿ ಸಂಸ್ಥೆಗಳ ಮಾಲೀಕರ ಮನೆಯಲ್ಲಿ ಪರಿಹಾರ ಕಾಣುತ್ತಿದ್ದವು. ಈಗ ಕಾಲನ ಮಹಿಮೆಯೋ ಏನೋ ಈ ಎರಡೂ ಸಂಸ್ಥೆಗಳ ಮಾಲೀಕರ ಮೂಲ ಮನೆಗಳು ಶಿಫ್ಟ್ ಆಗಿವೆ.

ಅದೇನೇ ಇರಲಿ, ರವಿಚಂದ್ರನ್ ಬೇರೆ ಕಲಾವಿದರ ತರಹ ಬರೀ ಶಾಸ್ತ್ರವನ್ನೇ ನಂಬಿ ಕುಳಿತುಕೊಂಡವರಲ್ಲ. ದಿನದ 24 ಗಂಟೆಯೂ ಸಿನಿಮಾದ ಬಗ್ಗೆಯೇ ಚಿಂತಿಸುವ ಇವರು ಶ್ರಮಜೀವಿ ಎಂಬುದನ್ನು ಯಾರೂ ಅಲ್ಲಗಳೆಯುವುದಿಲ್ಲ. ಈ ಕಾರಣಕ್ಕಾದರೂ ರವಿಚಂದ್ರನ್ ಅವರಿಗೆ ಸದ್ಯದಲ್ಲೇ ಒಂದು ದೊಡ್ಡ ಯಶಸ್ಸು ಸಿಗಬೇಕಾಗಿದೆ.

ಡಿಂಪಲ್ ಸುಂದರಿ; ಬಂಪರ್ ಲಾಟರಿ

'ಬುಲ್‌ಬುಲ್' ಸಿನಿಮಾದ ನಾಯಕಿ ರಚಿತಾ ರಾಮ್ ಮತ್ತೊಂದು ಬಂಪರ್ ಲಾಟರಿ ಹೊಡೆದಿದ್ದಾಳೆ. ಅದೇನೆಂದರೆ, ಆಕೆಯನ್ನು ತೂಗುದೀಪ ದಿನಕರ್ ತಮ್ಮ ಮುಂದಿನ ಚಿತ್ರಕ್ಕೂ ನಾಯಕಿಯಾಗಿ ಆಯ್ಕೆಮಾಡಿದ್ದಾರೆ. ಅಲ್ಲಿಗೆ ಮೊದಲ ಎರಡೂ ಚಿತ್ರಗಳನ್ನು ಈ ಡಿಂಪಲ್ ಸುಂದರಿ ತೂಗುದೀಪ್ ಪ್ರೊಡಕ್ಷನ್ಸ್‌ನಲ್ಲೇ ಮಾಡಿದಂತಾಯಿತು.

ಈ ಚಿತ್ರಕ್ಕೆ ದಿಗಂತ್ ನಾಯಕ ನಟನಂತೆ. ಅಂದರೆ ಒಂದು ಕಡೆ ಡಿಂಪಲ್ ಸುಂದರ, ಮತ್ತೊಂದು ಕಡೆ ಡಿಂಪಲ್ ಸುಂದರಿ ಈ ಚಿತ್ರದಲ್ಲಿ ನಟಿಸಲಿದ್ದಾರೆ. ಈ ಚಿತ್ರಕ್ಕೆ ದಿನಕರ್ 'ಒಂದೂರಲ್ಲಿ ಒಬ್ಬ ರಾಜ ಇದ್ದ' ಎಂಬ ಹೆಸರನ್ನು ಸದ್ಯಕ್ಕೆ ಇಟ್ಟಿದ್ದಾರಂತೆ.



ಆಗಸ್ಟ್ 16 ರಂದು ವರಮಹಾಲಕ್ಷ್ಮಿ ಹಬ್ಬವಾದ್ದರಿಂದ ಅಂದೇ ಈ ಚಿತ್ರದ ಮುಹೂರ್ತ ನಡೆಯಲಿದೆಯಂತೆ. ಇದರ ಹೊರತಾಗಿ ಚಿತ್ರದ ಕಥೆ ಇನ್ನಿತರ ವಿಷಯಗಳ ಬಗ್ಗೆ ದಿನಕರ್ ತಂಡದಿಂದ ಯಾವುದೇ ಮಾಹಿತಿ ಬಂದಿಲ್ಲ. ಅದೇರೀತಿ ಈ ಚಿತ್ರದಲ್ಲಿ ದರ್ಶನ್ ನಟಿಸುತ್ತಾರೋ ಇಲ್ಲವೋ ಎಂಬ ಬಗ್ಗೆಯೂ ಖಚಿತವಾದ ಮಾಹಿತಿ ಲಭ್ಯವಿಲ್ಲ. ಈ ಚಿತ್ರದಲ್ಲಿ ದಿಗಂತ್ ಮತ್ತು ರಚಿತಾ ನಟಿಸುತ್ತಿರುವುದರಿಂದ ಇದು ಯುವ ಪ್ರೇಮಿಗಳ ಕಥಾವಸ್ತು ಎಂದು ಸುಲಭವಾಗಿ ಊಹಿಸಬಹುದು.



ನಿರ್ದೇಶಕರ ಚಿತ್ರಾನ್ನ?

ಕನ್ನಡ ಚಿತ್ರರಂಗದಲ್ಲಿ ಇತ್ತೀಚೆಗೆ ಒಳ್ಳೆಯ ಚಿತ್ರ ಮಾಡುವ ಬದಲು ಹೇಗೆ ಪ್ರಚಾರ ಪಡೆಯಬೇಕು ಎಂಬುದರ ಬಗ್ಗೆಯೇ ನಿರ್ದೇಶಕರು ಹೆಚ್ಚು ತಲೆಕೆಡಿಸಿಕೊಂಡಂತಿದೆ. ಹೀಗಾಗಿ ಮುಹೂರ್ತದ ಸಂದರ್ಭದಲ್ಲಿ ಭಾರಿ ಪ್ರಚಾರ ಪಡೆಯಲು ಏನಾದರೊಂದು ಗಿಮಿಕ್‌ನ್ನು ಮಾಡುತ್ತಲೇ ಇರುತ್ತಾರೆ. ಅಂತಹ ಸಾಲಿಗೆ ಈಗ ಸಾಧುಕೋಕಿಲ ಸೇರಿದ್ದಾರೆ.


ಸಾಧುಕೋಕಿಲ ಅವರ ಸ್ವಂತ ಬ್ಯಾನರ್‌ಅಡಿ ನಿರ್ಮಾಣವಾಗಲಿರುವ 'ಗೆರಿಲಾ' ಎಂಬ ಚಿತ್ರಕ್ಕೆ ಮೊನ್ನೆ ಮುಹೂರ್ತ ನಡೆಯಿತು. ಈ ಚಿತ್ರವನ್ನು ಅವರೇ ನಿರ್ದೇಶಿಸಲಿದ್ದಾರಲ್ಲದೆ ಅದರಲ್ಲಿ ಅವರು ಒಂದು ಪ್ರಮುಖ ಪಾತ್ರವನ್ನೂ ನಿರ್ವಹಿಸಲಿದ್ದಾರಂತೆ. ಇದರ ಜೊತೆಜೊತೆಗೆ ಈ ಚಿತ್ರದಲ್ಲಿ ಸುಮಾರು 30ಕ್ಕೂ ಹೆಚ್ಚು ನಿರ್ದೇಶಕರುಗಳು ನಟಿಸಲಿದ್ದಾರಂತೆ. "ಇದು ಕನ್ನಡ ಚಿತ್ರಲೋಕದಲ್ಲಿ ಒಂದು ದಾಖಲೆ" ಎಂದು ಸಾಧುಕೋಕಿಲ ಹೇಳಲು ಮರೆಯಲಿಲ್ಲ.

ಈ ಚಿತ್ರದಲ್ಲಿ ನಟಿಸಲಿರುವ ಅದೆಷ್ಟು ಜನ ನಿರ್ದೇಶಕರು ನಿಜವಾಗಿಯೂ ಒಳ್ಳೆಯ ಅಥವಾ ಪ್ರತಿಭಾವಂತ ನಟರು ಎಂಬುದೇ ಒಂದು ದೊಡ್ಡ ಪ್ರಶ್ನೆ. ಹೀಗಾಗಿ 30 ಜನ ನಿರ್ದೇಶಕರು ನಟಿಸುತಿದ್ದಾರೆ ಎಂಬುದು ಕೇವಲ ಒಂದು ಪ್ರಚಾರ ತಂತ್ರವೇ ಹೊರತು ಇದರಿಂದ ಚಿತ್ರಕ್ಕೆ ಕಿಂಚಿತ್ತೂ ಲಾಭ ಆಗಲಾರದು.

ಇಷ್ಟಾಗಿಯೂ ಇತ್ತೀಚೆಗೆ ಸಿನಿಮಾರಂಗದಿಂದ ವಿಮುಖರಾಗಿರುವ ನಿರ್ದೇಶಕರನ್ನೇ ಸಾಧು ಕೋಕಿಲಾ ಬಳಸಲು ಹೊರಟಂತಿದೆ. ಯಾಕೆಂದರೆ ಇವರ ಸಿನಿಮಾದಲ್ಲಿ ನಟಿಸಲಿರುವ ನಿರ್ದೇಶಕರ ಪಟ್ಟಿಯಲ್ಲಿ ಸ್ಟಾರ್ ಡೈರೆಕ್ಟರುಗಳಾದ ಉಪೇಂದ್ರ, ಯೋಗರಾಜ್ ಭಟ್, ಸುದೀಪ್, ರವಿಚಂದ್ರನ್, ಸೂರಿ, ಇಂದ್ರಜಿತ್ ಲಂಕೇಶ್, ಗುರುಪ್ರಸಾದ್ ಮೊದಲಾದವರ ಹೆಸರೇ ಇಲ್ಲ. ಅದರಲ್ಲೂ ಸಾಧುಕೋಕಿಲ ಅವರ 'ಗಾಡ್‌ಫಾದರ್' ಉಪೇಂದ್ರ ಅವರ ಹೆಸರೇ ಇಲ್ಲದಿರುವುದು ಅಚ್ಚರಿ ಮೂಡಿಸುತ್ತದೆ.



ಪ್ರೇಕ್ಷಕನಿಗೆ ನಿರಾಶೆ...



ಕಳೆದ ವಾರ ಭಾರಿ ನಿರೀಕ್ಷೆಯ 'ಡೈರೆಕ್ಟರ್ಸ್ ಸ್ಪೆಷಲ್' ಎಂಬ ಚಿತ್ರ ಬಿಡುಗಡೆಯಾಯಿತು. ಈ ವಾರ ಮತ್ತೊಂದು ದೊಡ್ಡ ನಿರೀಕ್ಷೆಯ 'ಕಡ್ಡಿಪುಡಿ' ಸಿನಿಮಾ ಬಿಡುಗಡೆಯಾಗಿದೆ. ಈ ಎರಡು ಚಿತ್ರಗಳ ವಿಶೇಷತೆ ಎಂದರೆ ಇಲ್ಲಿ ನಾಯಕ ನಾಯಕಿಯರಿಗಿಂತ ಈ ಚಿತ್ರಗಳ ನಿರ್ದೇಶಕರ ಮೇಲೆಯೇ ಗಾಂಧಿನಗರದ ಜನರು ಮತ್ತು ಪ್ರೇಕ್ಷಕರು ಭಾರಿ ಭರವಸೆಯನ್ನು ಇರಿಸಿಕೊಂಡಿದ್ದು.

ಆದರೆ ದುರದೃಷ್ಟವಶಾತ್ ಈ ಇಬ್ಬರು ನಿರ್ದೇಶಕರೂ ಪ್ರೇಕ್ಷಕರ ನಿರೀಕ್ಷೆಯ[...] ತಲುಪಲಾಗದೆ ನಿರಾಶೆಗೊಳಿಸಿದ್ದಾರೆ. 'ಡೈರೆಕ್ಟರ್ಸ್ ಸ್ಪೆಷಲ್' ಚಿತ್ರವನ್ನು ನಿರ್ದೇಶಿ[...] ಗುರುಪ್ರಸಾದ್ ಕಳೆದ ಎರಡು ವರ್ಷಗಳಿಂದ ಈ ಚಿತ್ರವನ್ನು ನಿರ್ಮಿ[...] ನಿರ್ದೇಶಿಸಿದರು. ಅಷ್ಟೆ ಅಲ್ಲ, ಈ ಚಿತ್ರದಲ್ಲಿ ಒಂದು ಪಾತ್ರವನ್ನೂ ಮಾಡಿದ್ದಾ[...] ಚಿತ್ರ ಬಿಡುಗಡೆಯಾಗುವ ಮುನ್ನ ಇವರು ಪತ್ರಕರ್ತರೊಂದಿಗೆ ಮಾತನಾಡು[...] "ನಾಯಕ ನಾಯಕಿಯರಿಗಿಂತ ನಿರ್ದೇಶಕರೇ ಮುಖ್ಯ" ಎಂದು ಸಿಕ್ಕಾಪ[...] ಕೊಚ್ಚಿಕೊಂಡಿದ್ದರು.

ಆದರೆ 'ಡೈರೆಕ್ಟರ್ಸ್ ಸ್ಪೆಷಲ್' ಚಿತ್ರ ಅವರು ಹೇಳಿದಂತೆ ನಿರ್ದೇಶ[...] ಚಾಣಾಕ್ಷತೆಯನ್ನು ತೋರಿಸಿಲ್ಲ. ಹೀಗಾಗಿ ಅತ್ತ ತಾರೆಗಳೂ ಇಲ್ಲದ, [...] ನಿರ್ದೇಶಕರ ಚಾಕಚಕ್ಯತೆಯೂ ಇಲ್ಲದ ಈ ಚಿತ್ರ ಸಂಪೂರ್ಣವಾ[...] ಸೊರಗಿಹೋಗಿದೆ. ಗುರುಪ್ರಸಾದ್ ಈ ಚಿತ್ರದಲ್ಲಿ ಕೇವಲ ಒಂದು ನಿಮಿಷ[...] ಕಾಲ ತೆರೆಯ ಮೇಲೆ ಕಾಣಿಸಿಕೊಳ್ಳುತ್ತಾರೆ. ಆದರೂ ವಾಲ್‌ಪೋಸ್ಟರ್ಸ್‌ಗಳ[...] ಮತ್ತು ಥಿಯೇಟರ್ ಮುಂದೆ ಅವರ ಕಟೌಟ್‌ಗಳು ರಾರಾಜಿಸುತ್ತಿವೆ. ಇ[...] ಒಂದು ರೀತಿಯ ಆತ್ಮರತಿ ಎಂದರೆ ತಪ್ಪಾಗಲಾರದು.

ಖಂಡಿತವಾಗಿಯೂ ಕನ್ನಡದ ಪ್ರತಿಭಾವಂತ ನಿರ್ದೇಶಕರ[...] ಒಬ್ಬರೆನಿಸಿಕೊಂಡವರು. ಅಂತಹ ಗುರುಪ್ರಸಾದ್ ಹೀಗ್ಯಾಕಾದರೋ ಗೊತ್ತಿ[...]

'ದುನಿಯಾ' ಚಿತ್ರದಿಂದ ಕನ್ನಡ ಚಿತ್ರರಂಗದ ದಿಗಂತದಲ್ಲಿ ಕಾಣಿಸಿಕೊಂ[...] ಯುವ ನಿರ್ದೇಶಕ ಸೂರಿ ಬಗ್ಗೆಯೂ ಕೂಡ ಚಿತ್ರೋದ್ಯಮದಲ್ಲಿ ಬಹ[...]



ದೊಡ್ಡ ನಿರೀಕ್ಷೆ ಇದೆ. ಕಳೆದ ವರ್ಷ ಅವರು ನಿರ್ದೇಶಿಸಿದ, ಪುನೀ[...] ರಾಜ್‌ಕುಮಾರ್ ನಟಿಸಿದ 'ಅಣ್ಣಾ ಬಾಂಡ್' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಹಿ[...] ಅದನಂತರ ಸೂರಿಯ ತಾರಾಮೌಲ್ಯ ಏಕ್‌ದಮ್ ಗಗನಕ್ಕೆ ಏರಿತ್ತು. ಹೀಗ[...] ಕಳೆದ ನಾಲ್ಕೈದು ವರ್ಷಗಳಿಂದ ಗೆಲುವಿನ ರುಚಿಯನ್ನೇ ಕಾಣದಿರುವ ನಾಯ[...] ನಟ ಶಿವರಾಜ್‌ಕುಮಾರ್‌ಗೆ 'ಕಡ್ಡಿಪುಡಿ' ಚಿತ್ರದ ಮೂಲಕ ಸೂರಿ ಹ[...] ವರ್ಚಸ್ಸನ್ನು ನೀಡಬಹುದು ಎಂದು ಎಲ್ಲರೂ ಭಾವಿಸಿದ್ದರು.

ಆದರೆ 'ಕಡ್ಡಿಪುಡಿ' ಅತ್ತ ಸೂರಿ ನಿರ್ದೇಶನದ ಚಿತ್ರವೂ ಆಗದೆ, [...] ಶಿವರಾಜ್‌ಕುಮಾರ್ ಅಭಿನಯದ ಚಿತ್ರವೂ ಎನಿಸಿಕೊಳ್ಳದೆ ಪ್ರೇಕ್ಷಕರನ್ನು ಮ[...] ಶಿವಣ್ಣನವರ ಅಭಿಮಾನಿಗಳನ್ನು ನಿರಾಶೆಗೊಳಿಸಿದೆ. ಮಾತ್ರವಲ್ಲ, ಶಿವಣ್ಣ [...] ಚಿತ್ರದಲ್ಲೂ ಲಾಂಗು, ಮಚ್ಚು ಹಿಡಿಯುವ ನಟ ಎನಿಸಿಕೊಂಡಿದ್ದಾರೆ.

ಸೂರಿ ಬತ್ತಳಿಕೆಯಲ್ಲಿನ ಯಾವುದಾದರೂ ಹೊಸತನ್ನು ಅ[...] ನೀಡಿರಬಹುದು ಎಂಬ ನಿರೀಕ್ಷೆಯಲ್ಲಿ ಈ ಚಿತ್ರವ[...] ನೋಡಿದವರಿಗೆ ಇಲ್ಲಿ ಕಾಣಸಿಗುವುದು ಮತ್ತ[...] ರೇಪ್‌ಗಳು, ಕೊಲೆಗಳು, ಮತ್ತೊಂದು ಐಟಂ ಸಾ[...] ಮಾತ್ರ. ಇದೆಲ್ಲದರ ಮಧ್ಯೆಯೂ ಹಾಡು ಮ[...] ನಿರೂಪಣಾ ಶೈಲಿಯಲ್ಲಿ ಹೊಸತನಕ್ಕೆ ಪ[...] ಪ್ರಯತ್ನಿಸಿರುವುದು ಎದ್ದು ಕಾಣಿಸುತ್ತದೆ.

ಒಟ್ಟಾರೆಯಾಗಿ ಕನ್ನಡ ಚಿತ್ರರಂಗದ[...] ಭರವಸೆಯನ್ನು ಮೂಡಿಸಿದ್ದ ಇಬ್ಬರು ನಿರ್ದೇಶ[...] ಎರಡು ವಾರಗಳ ಅಂತರದಲ್ಲಿ ಪ್ರೇಕ್ಷಕರ[...] ನಿರಾಸೆಗೊಳಿಸಿದ್ದಾರೆ.

● ಶೆ[...]

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com